f prajavani.net prajavani | ಮಂಗಳವಾರ, ಜನವರಿ 20, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 20 | ಪುಟ 14 | www.prajavani.net

ಶ್ವಾಂಟೆಕ್ ಮುನ್ನಡೆ
ಪೋಲೆಂಡ್‌ನ ತಾರೆ ಇಗಾ ಶ್ವಾಂಟೆಕ್ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಸ್ಪರ್ಧೆಯಲ್ಲಿ ಚೀನಾದ ಯುವಾನ್ ಯು ಅವರನ್ನು ಮಣಿಸಿ ಎರಡನೇ ಸುತ್ತು ಪ್ರವೇಶಿಸಿದರು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 83,246 | ನಿಫ್ಟಿ 25,585 | $/₹ 90.90 | ಚಿನ್ನ (Std. 10g) ₹1,50,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹3,07,900 (ಬೆಂಗಳೂರು)

ರಾಜ್ಯಕ್ಕೆ ಚಿಕ್ಕಾಸು; ಮಿತ್ರರಿಗೆ ನಿಧಿ

ಆಂಧ್ರ ಪ್ರದೇಶ, ಬಿಹಾರಕ್ಕೆ ಕೇಂದ್ರ ಸರ್ಕಾರದಿಂದ ಭಾರಿ ಅನುದಾನ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕೇಂದ್ರದಲ್ಲಿ ಎನ್‌ಡಿಎ ಮೈತ್ರಿಕೂಟವು ಮೂರನೇ ಅವಧಿಗೆ ಅಧಿಕಾರಕ್ಕೆ ಬಂದ ಬಳಿಕ ಕರ್ನಾಟಕದ ಅಭಿವೃದ್ಧಿ ಯೋಜನೆಗಳಿಗೆ ಸಿಕ್ಕಿದ್ದು ಚಿಕ್ಕಾಸು. ಸರ್ಕಾರಕ್ಕೆ ಊರುಗೋಲು ಆಗಿರುವ ಮಿತ್ರರ ಸರ್ಕಾರ ಇರುವ ಆಂಧ್ರ ಪ್ರದೇಶ ಹಾಗೂ ಬಿಹಾರಕ್ಕೆ ಕೇಂದ್ರ ಸರ್ಕಾರ ಭರಪೂರ ಅನುದಾನ ನೀಡಿದೆ. ಈ ರಾಜ್ಯಗಳ ಅಭಿವೃದ್ಧಿ ಯೋಜನೆಗಳಿಗೆ ತಲಾ ₹1 ಲಕ್ಷ ಕೋಟಿಗೂ ಅಧಿಕ ಹಣ ಕೊಟ್ಟಿದೆ.

ಕಳೆದ 17 ತಿಂಗಳುಗಳಲ್ಲಿ ಕೇಂದ್ರ ಸಚಿವ ಸಂಪುಟವು ರಾಜ್ಯದ ಎರಡು ಯೋಜನೆಗಳಿಗಷ್ಟೇ ಅನುಮೋದನೆ ಕೊಟ್ಟಿದೆ. ₹3,432 ಕೋಟಿ ಮೊತ್ತದ ಬಳ್ಳಾರಿ–ಚಿಕ್ಕಜಾಜೂರು ರೈಲು ಮಾರ್ಗ ಹಾಗೂ ಬೆಂಗಳೂರಿನ ನಮ್ಮ ಮೆಟ್ರೊ ಮೂರನೇ ಹಂತದ ಯೋಜನೆಗೆ ಕೇಂದ್ರದಿಂದ ಹಸಿರು ನಿಶಾನೆ ಸಿಕ್ಕಿದೆ. ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸಿದ 19 ತಿಂಗಳುಗಳು ಕಳೆದ ಬಳಿಕವಷ್ಟೇ ಮೆಟ್ರೊ ಯೋಜನೆಗೆ ಅನುಮತಿ ನೀಡಿತ್ತು. ಇದರಲ್ಲಿ ಕೇಂದ್ರದ ಪಾಲು ಶೇ 20ರಷ್ಟು.

ಮಿತ್ರ ಪಕ್ಷವನ್ನು ಸಂತೃಪ್ತಿಪಡಿಸಲು ಕೇಂದ್ರವು ಆಂಧ್ರ ಪ್ರದೇಶಕ್ಕೆ ಮೊಗೆ ಮೊಗೆದು ಯೋಜನೆಗಳನ್ನು ನೀಡಿದೆ.

▶10

ರಾಜ್ಯಕ್ಕೆ ಕೊಟ್ಟಿದ್ದೇನು?

ಯೋಜನೆ	ಮೊತ್ತ
ಬಳ್ಳಾರಿ–ಚಿಕ್ಕಜಾಜೂರು ರೈಲು ಮಾರ್ಗದ ಸುಮಾರು 186 ಕಿ.ಮೀ ಉದ್ದಕ್ಕೆ ರೈಲು ಜೋಡಿಹಳಿ ಮಾರ್ಗ ಯೋಜನೆಗೆ ಕೇಂದ್ರ ಸಂಪುಟ 2025ರ ಮೇ 31ರಂದು ಅನುಮೋದನೆ	₹3,432 ಕೋಟಿ.
ಬೆಂಗಳೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ 'ನಮ್ಮ ಮೆಟ್ರೊ' ಮೂರನೇ ಹಂತದ ಯೋಜನೆಗೆ ಕೇಂದ್ರ ಸಂಪುಟ 2024ರ ಆಗಸ್ಟ್‌ನಲ್ಲಿ ಒಪ್ಪಿಗೆ	₹15,611 ಕೋಟಿ. ಕೇಂದ್ರದ ಪಾಲು ಶೇ 20
ಆಂಧ್ರಪ್ರದೇಶಕ್ಕೆ ಮಹಾಪೂರ	
ವಿಶಾಖಪಟ್ಟಣದ ರಾಷ್ಟ್ರೀಯ ಉಕ್ಕು ಕಾರ್ಖಾನೆ (ಆರ್‌ಐಎನ್‌ಎಲ್) ಪುನರುಜ್ಜೀವನಕ್ಕೆ ಪ್ಯಾಕೇಜ್	₹11,440 ಕೋಟಿ
ಸೆಮಿಕಂಡಕ್ಟರ್ ತಯಾರಿಕಾ ಘಟಕ ಸ್ಥಾಪನೆ	₹2,300 ಕೋಟಿ.
ಅಮರಾವತಿ ಅಭಿವೃದ್ಧಿ ಯೋಜನೆ	₹4,200 ಕೋಟಿ.
ಅಮರಾವತಿಯಲ್ಲಿ ಕೇಂದ್ರ ಸರ್ಕಾರದ ನೌಕರರ ವಸತಿ ಗೃಹ ನಿರ್ಮಾಣ	₹2700 ಕೋಟಿ.
ನೆಲ್ಲೂರಿನಿಂದ ಬದ್ವೇಲ್‌ವರೆಗೆ ಹೆದ್ದಾರಿ ವಿಸ್ತರಣೆ	₹3,653 ಕೋಟಿ.
ತಿರುಪತಿ–ಕಟ್ಪಾಡಿ ಜೋಡಿ ರೈಲು ಮಾರ್ಗ	₹1,332 ಕೋಟಿ
ಅಮರಾವತಿ–ನಂಬೂರು ರೈಲ್ವೆ ಯೋಜನೆ	₹2,245 ಕೋಟಿ

(*ಪ್ರಮುಖ ಯೋಜನೆಗಳನ್ನಷ್ಟೇ ಉಲ್ಲೇಖಿಸಲಾಗಿದೆ)

'ವಿಐಎಸ್‌ಎಲ್'ಗೊಂದು ನ್ಯಾಯ

ವಿಶಾಖಪಟ್ಟಣದ ರಾಷ್ಟ್ರೀಯ ಉಕ್ಕು ಕಾರ್ಖಾನೆಯ ಪುನರುಜ್ಜೀವನಕ್ಕೆ ಕೇಂದ್ರ ಸರ್ಕಾರವು ಕಳೆದ ವರ್ಷವೇ ಬಹುದೊಡ್ಡ ಪ್ಯಾಕೇಜ್ ಘೋಷಿಸಿದೆ. ಆದರೆ, ಭದ್ರಾವತಿಯ ವಿಶ್ವೇಶ್ವರಾಯ ಉಕ್ಕಿನ ಕಾರ್ಖಾನೆಯ (ವಿಐಎಸ್‌ಎಲ್) ವಿಷಯದಲ್ಲಿ ಧಾರಾಳಿಯಾಗಿಲ್ಲ. ಕಾರ್ಖಾನೆಯ ಪುನಶ್ಚೇತನಕ್ಕೆ ₹4,000 ಕೋಟಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿ ಹಲವು ತಿಂಗಳು ಕಳೆದಿವೆ.

ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ಅವರು ಉಕ್ಕು ಖಾತೆಗೆ ಸಂಪುಟ ದರ್ಜೆ ಸಚಿವರಾಗಿದ್ದರೆ, ಆಂಧ್ರದ ಭೂಪತಿರಾಜು ಶ್ರೀನಿವಾಸ ವರ್ಮ ರಾಜ್ಯ ಸಚಿವರು. ವಿಐಎಸ್‌ಎಲ್ ಪುನರುಜ್ಜೀವನಕ್ಕಾಗಿ ಕುಮಾರಸ್ವಾಮಿ ಶತಪ್ರಯತ್ನ ನಡೆಸಿದರೂ ಇಲ್ಲಿಯವರೆಗೆ ಫಲ ಸಿಕ್ಕಿಲ್ಲ. ಕೇಂದ್ರ ಹಣಕಾಸು ಸಚಿವರು ಕಡತಕ್ಕೆ ಅಂಕಿತ ಹಾಕಿದರೆ ಕೆಲವು ತಿಂಗಳಲ್ಲಿ ಕನಸು ನನಸು ಆಗಬಹುದು.

ರಾಜ್ಯದಿಂದಲೂ ಲೋಪ

ರಾಜ್ಯದ ಬೇಡಿಕೆಗಳಿಗೆ ಕೇಂದ್ರ ಮನ್ನಣೆ ನೀಡದಿರಲು ರಾಜ್ಯದ ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ಲೋಪದ ಪಾಲೂ ಇದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಇಲಾಖಾ ಸಚಿವರು ಮನವಿ ಸಲ್ಲಿಸಿ ಹೋಗುತ್ತಾರೆ. ಆ ಪ್ರಸ್ತಾವಗಳನ್ನು ಬೆನ್ನು ಹತ್ತಬೇಕಾದವರು ದೆಹಲಿ ಕರ್ನಾಟಕ ಭವನದ ಅಧಿಕಾರಿಗಳು. ಅವರು ಕೇಂದ್ರದೊಂದಿಗೆ ಸಮನ್ವಯ ಸಾಧಿಸುತ್ತಿಲ್ಲ. ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರನ್ನು ನಿವಾಸಿ ಆಯುಕ್ತರು ಹಾಗೂ ಸಹಾಯಕ ನಿವಾಸಿ ಆಯುಕ್ತರು ಭೇಟಿ ಮಾಡಿದ್ದು ಅಪರೂಪ. ಜತೆಗೆ, ಸಂಸದರ ಸಭೆ ಹೊರತುಪಡಿಸಿ ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರು, ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಭೇಟಿಯೇ ಆಗಿಲ್ಲ.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ದೃಶ್ಯಾವಳಿ

ಡಿಜಿಪಿ ರಾವ್ ವಿಡಿಯೊ ಬಯಲು?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಡಿಜಿಪಿ ಕೆ.ರಾಮಚಂದ್ರ ರಾವ್ ಅವರು ತಮ್ಮ ಕಚೇರಿಯಲ್ಲಿ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ' ಎನ್ನಲಾದ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಈ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉನ್ನತಾಧಿಕಾರಿಗಳಿಗೆ ಸೂಚಿಸಿದ್ದಾರೆ.

ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವುದು ಗಮನಕ್ಕೆ ಬಂದ ತಕ್ಷಣವೇ ಬೆಳಗಾವಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, 'ರಾಮಚಂದ್ರ ರಾವ್ ಅವರ ವಿಚಾರಣೆ ನಡೆಸಿ ಅವರು ತಪ್ಪು ಎಸಗಿರುವುದು ಸಾಬೀತಾದರೆ ಶಿಸ್ತು ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಹೇಳಿದರು.

▶7

'ಎಐ ವಿಡಿಯೊ ಬಳಸಿ ಷಡ್ಯಂತ್ರ'

'ನನ್ನ ವೃತ್ತಿಜೀವನಕ್ಕೆ ಕಪ್ಪುಚುಕ್ಕೆ ಹಚ್ಚಲು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಈ ರೀತಿಯ ಷಡ್ಯಂತ್ರ ರೂಪಿಸಿವೆ. ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿ ಮಾಡಿದ ವಿಡಿಯೊ ಅಥವಾ ಎಡಿಟ್ ಮಾಡಿರುವ ವಿಡಿಯೊ ಇದಾಗಿದೆ' ಎಂದು ರಾಮಚಂದ್ರರಾವ್ ಹೇಳಿದರು. ಗೃಹ ಸಚಿವರ ನಿವಾಸದ ಎದುರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ನನ್ನ ತೇಜೋವಧೆಗೆ ನಡೆಸಿದ ಷಡ್ಯಂತ್ರ ಇದು. 8 ವರ್ಷಗಳ ಹಿಂದೆ ನಾನು ಬೆಳಗಾವಿಯಲ್ಲಿದ್ದೆ. ಇದರ ಬಗ್ಗೆ ನಾನು ವಕೀಲರ ಜೊತೆಗೆ ಮಾತನಾಡುತ್ತೇನೆ. ತನಿಖೆ ಆಗಬೇಕು' ಎಂದರು.

'ರಾವ್ ವಿರುದ್ಧ ಕಠಿಣ ಕ್ರಮ'

ನಂದಗಡ (ಬೆಳಗಾವಿ ಜಿಲ್ಲೆ): 'ಡಿಜಿಪಿ ರಾಮಚಂದ್ರ ರಾವ್ ಅವರ ರಾಸಲೀಲೆ ಪ್ರಕರಣ ನನಗೆ ಗೊತ್ತಾಗಿದೆ. ವಿಚಾರಣೆ ನಡೆಸಿ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಎಷ್ಟೇ ದೊಡ್ಡ ಅಧಿಕಾರಿ ಆದರೂ ಕಾನೂನಿಗಿಂತ ದೊಡ್ಡವರಲ್ಲ. ಕಾನೂನುಕ್ರಮ ತೆಗೆದುಕೊಳ್ಳುತ್ತೇವೆ' ಎಂದರು.

₹3 ಲಕ್ಷ ದಾಟಿದ ಬೆಳ್ಳಿ ದರ

ಬೆಂಗಳೂರು: ಬೆಂಗಳೂರಿನ ಮಾರುಕಟ್ಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಕೆ.ಜಿ ಬೆಳ್ಳಿ ಧಾರಣೆಯು ₹3 ಲಕ್ಷ ದಾಟಿದೆ. 24 ಕ್ಯಾರಟ್ ಪರಿಶುದ್ಧ ಚಿನ್ನದ ಬೆಲೆ 10 ಗ್ರಾಂ ಗೆ ₹1.50 ಲಕ್ಷಕ್ಕೆ ತಲುಪಿದೆ.

ಇದು ಚಿನ್ನ ಹಾಗೂ ಬೆಳ್ಳಿಯ ಈವರೆಗಿನ ದಾಖಲೆಯ ಬೆಲೆಯಾಗಿದೆ.

2024ರ ಜನವರಿ 19ರಂದು ಬೆಂಗಳೂರಿನಲ್ಲಿ ಕೆ.ಜಿ ಬೆಳ್ಳಿ ಬೆಲೆ ₹73 ಸಾವಿರ ಆಗಿತ್ತು. 2025ರ ಜನವರಿ 20ಕ್ಕೆ ₹96,200ಕ್ಕೆ ತಲುಪಿತು. ಈಗ (2026ರ ಜನವರಿ 19) ಬೆಂಗಳೂರಿನಲ್ಲಿ ಬೆಳ್ಳಿಯ ಬೆಲೆಯು ₹3,07,900ಕ್ಕೆ ಜಿಗಿದಿದೆ.

ಮುಂದಿನ ದಿನಗಳಲ್ಲಿ ಬೆಳ್ಳಿ ಬೆಲೆಯು ಕೆ.ಜಿ.ಗೆ ₹3.5 ಲಕ್ಷಕ್ಕೂ ಏರಿಕೆ ಆಗಬಹುದು ಎಂದು ಬೆಂಗಳೂರು ಜ್ಯುವೆಲರ್ಸ್ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷ ವೆಂಕಟೇಶ್ ಬಾಬು ಹೇಳಿದರು.

▶10

ಚಿನಕುರುಳಿ ಪ್ರಕಾಶ್ ಶೆಟ್ಟಿ

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್

ನವದೆಹಲಿ (ಪಿಟಿಐ): ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಪಕ್ಷದ ರಾಷ್ಟ್ರೀಯ ಕಾರ್ಯಾಧ್ಯಕ್ಷ ನಿತಿನ್ ನಬೀನ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದು, ಈ ಬಗ್ಗೆ ಮಂಗಳವಾರ ಅಧಿಕೃತವಾಗಿ ಘೋಷಣೆಯಾಗಲಿದೆ.

'ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಸೋಮವಾರ ಮಧ್ಯಾಹ್ನ 2ರಿಂದ 4 ಗಂಟೆಯವರೆಗೆ ನಡೆಯಿತು. ನಿತಿನ್ ನಬೀನ್ ಏಕೈಕ ಅಭ್ಯರ್ಥಿಯಾಗಿ ಹೊರಹೊಮ್ಮಿದರು. ನಾಮಪತ್ರ ಹಿಂತೆಗೆದುಕೊಳ್ಳುವಿಕೆಯ ಅವಧಿ ಮುಗಿದ ಬೆನ್ನಲ್ಲೇ ಅಧ್ಯಕ್ಷ ಸ್ಥಾನಕ್ಕೆ ನಿತಿನ್ ಹೆಸರು ಮಾತ್ರ ಸೂಚಿತವಾಗಿದೆ' ಎಂದು ಬಿಜೆಪಿಯ ಹಿರಿಯ ನಾಯಕ ಮತ್ತು ಚುನಾವಣಾಧಿಕಾರಿ ಕೆ. ಲಕ್ಷ್ಮಣ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿತಿನ್ ಪರವಾಗಿ ಸಲ್ಲಿಕೆಯಾದ 37 ಸೆಟ್ ನಾಮಪತ್ರಗಳೂ ಕ್ರಮಬದ್ಧವಾಗಿದ್ದು, ಮಾನ್ಯ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ, ಪಕ್ಷದ ನಿರ್ಗಮಿತ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್ ಮತ್ತು ನಿತಿನ್ ಗಡ್ಕರಿ ಸೇರಿದಂತೆ ಹಲವು ಹಿರಿಯ ಬಿಜೆಪಿ ನಾಯಕರು ನಿತಿನ್ ಅವರ ಉಮೇದುವಾರಿಕೆಯನ್ನು ಸೂಚಿಸಿದವರಲ್ಲಿ ಸೇರಿದ್ದಾರೆ.

36 ರಾಜ್ಯಗಳ ಪೈಕಿ 30 ರಾಜ್ಯಗಳ ಪಕ್ಷದ ಅಧ್ಯಕ್ಷರ ಚುನಾವಣೆ ಬಳಿಕ ರಾಷ್ಟ್ರೀಯ ಅಧ್ಯಕ್ಷರ ಚುನಾವಣಾ ಪ್ರಕ್ರಿಯೆ ಪ್ರಾರಂಭಿಸಲಾಗಿದೆ. ಅಂದರೆ, ಅಗತ್ಯವಿರುವ ಶೇ 50ಕ್ಕಿಂತಲೂ ಹೆಚ್ಚು ರಾಜ್ಯಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಅವರು ತಿಳಿಸಿದ್ದಾರೆ.

ರಾಜ್ಯಗಳಿಂದ ಬಂದಿರುವ 36 ಸೆಟ್‌ಗಳಲ್ಲಿನ ಪ್ರತಿ ಸೆಟ್‌ನಲ್ಲಿ 20 ನಾಯಕರ ಸಹಿಯಿದೆ. ಇನ್ನೊಂದು ಸೆಟ್‌ನ ನಾಮ ನಿರ್ದೇಶನ ಪತ್ರಗಳಿಗೆ ಪ್ರಧಾನಿ ಸೇರಿದಂತೆ ಬಿಜೆಪಿಯ ಸಂಸದೀಯ ಮಂಡಳಿ ಸದಸ್ಯರು ಮತ್ತು 37 ಸಂಸದರು ಸಹಿ ಹಾಕಿದ್ದಾರೆ.

ಜಿಬಿಎ ವ್ಯಾಪ್ತಿಯ ಮತದಾರರ ಕರಡು ಪಟ್ಟಿ ಪ್ರಕಟಿಸಿದ ರಾಜ್ಯ ಚುನಾವಣಾ ಆಯೋಗ

ಪಾಲಿಕೆ: ಇವಿಎಂ ಬದಲು ಮತಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣೆಯಲ್ಲಿ ಮತದಾನಕ್ಕೆ ವಿದ್ಯುನ್ಮಾನ ಮತ ಯಂತ್ರದ (ಇವಿಎಂ) ಬದಲು ಮತಪತ್ರ (ಬ್ಯಾಲೆಟ್ ಪೇಪರ್) ಬಳಸಲು ರಾಜ್ಯ ಚುನಾವಣಾ ಆಯೋಗ ನಿರ್ಧರಿಸಿದೆ.

ಜಿಬಿಎಯ ಐದು ನಗರ ಪಾಲಿಕೆ ಸೇರಿದಂತೆ, ರಾಜ್ಯದ ನಗರ, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇವಿಎಂ ಬದಲು ಮತಪತ್ರ ಬಳಕೆ ಹಾಗೂ ರಾಜ್ಯ ಚುನಾವಣಾ ಆಯೋಗದ ನೇತೃತ್ವದಲ್ಲಿ ಪ್ರತ್ಯೇಕ ಮತದಾರರ ಪಟ್ಟಿ ಸಿದ್ಧಪಡಿಸಲು 2025ರ ಸೆಪ್ಟೆಂಬರ್ 4ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರ ನಿರ್ಣಯ ಕೈಗೊಂಡಿತ್ತು.



ಮತದಾರರ ಕರಡು ಪಟ್ಟಿಯನ್ನು ಸೋಮವಾರ ಬಿಡುಗಡೆ ಮಾಡಿ ಮಾತನಾಡಿದ ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್ ಸಂಗ್ರೇಶಿ ಅವರು, 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಲ್ಲಿ (ಜಿಬಿಜಿಎ) ಇರುವ ನಿಯಮಗಳಂತೆ ಇವಿಎಂ ಅಥವಾ ಮತಪತ್ರದಲ್ಲಿ ಚುನಾವಣೆ ನಡೆಸಬಹುದಾಗಿದೆ. ಆ ಅಧಿಕಾರವನ್ನು ಬಳಸಿ ಮತಪತ್ರದಲ್ಲಿ ಐದೂ ನಗರ ಪಾಲಿಕೆಗಳ ಚುನಾವಣೆಯನ್ನು ಜೂನ್ 30ರೊಳಗೆ ನಡೆಸಲಾಗುವುದು' ಎಂದು ತಿಳಿಸಿದರು.

▶7

ಗ್ರೇಟರ್ ಬೆಂಗಳೂರು ಚುನಾವಣೆ ಮತಪತ್ರದಲ್ಲೇ ನಡೆಯಬೇಕು ಎಂಬ ಉದ್ದೇಶ ನಮ್ಮದೂ ಇದೆ. ಅದರಲ್ಲಿ ನಾವು ರಾಜಕೀಯ ಮಾಡುವುದಿಲ್ಲ. ನಿಜವಾದ ಮತದಾರರನ್ನು ಪಟ್ಟಿಯಿಂದ ಕೈ ಬಿಡಬಾರದು
ಸಿದ್ದರಾಮಯ್ಯ, ಮುಖ್ಯಮಂತ್ರಿ

- 2022ಕ್ಕೆ ಹೋಲಿಸಿದರೆ 9,71,848 ಮತದಾರರು ಹೆಚ್ಚಳ
- 2001ರಲ್ಲಿ ನಡೆದಿದ್ದ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಮತಪತ್ರ ಬಳಕೆ
- 2010 ಹಾಗೂ 2015ರಲ್ಲಿ ನಡೆದಿದ್ದ ಬಿಬಿಎಂಪಿ ಚುನಾವಣೆಯಲ್ಲಿ ಇವಿಎಂ ಬಳಕೆ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ

ಗೃಹಮಂಡಳಿಯಿಂದ ಟೌನ್‌ಶಿಪ್ ಯೋಜನೆ

ರೈತರ ದಿಕ್ಕು ತಪ್ಪಿಸಲು ರಿಯಲ್ ಎಸ್ಟೇಟ್‌ನವರ ಪ್ರಯತ್ನ

ಅಪಪ್ರಚಾರಕ್ಕೆ ಕಿವಿಗೊಡದಂತೆ ಕೆಎಚ್‌ಬಿ ಮನವಿ

ಬೆಂಗಳೂರು: ರಾಜ್ಯ ರಾಜಧಾನಿ ಬೆಂಗಳೂರಿನ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದಿಂದ ಕರ್ನಾಟಕ ಗೃಹ ಮಂಡಳಿ ನಗರದ ಹೊರವಲಯದ ನಾಲ್ಕು ದಿಕ್ಕುಗಳಲ್ಲಿ ಸುಸಜ್ಜಿತ ಟೌನ್‌ಶಿಪ್‌ಗಳನ್ನು ನಿರ್ಮಿಸಲು ಮುಂದಾಗಿದೆ. ಆದರೆ, ಈ ಮಹತ್ವಾಕಾಂಕ್ಷೆಯ ಯೋಜನೆಗೆ ರಿಯಲ್ ಎಸ್ಟೇಟ್‌ನ ಕೆಲ ಏಜೆಂಟ್‌ಗಳು ಅಡ್ಡಗಾಲು ಹಾಕುತ್ತಿರುವುದು ಬೆಳಕಿಗೆ ಬಂದಿದೆ. ರೈತರಿಗೆ ಗೃಹ ಮಂಡಳಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಸುಳ್ಳು ಮಾಹಿತಿಗಳನ್ನು ಹೇಳಿ, ಭೀತಿ ಹುಟ್ಟಿಸಿ, ಅವರಿಂದ ಕಡಿಮೆ ದರಕ್ಕೆ ಜಮೀನು ಖರೀದಿಸಲು ಸಂಚು ರೂಪಿಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ರೈತರಿಂದ ಅಗ್ಗದ ದರಕ್ಕೆ ಭೂಮಿ ಪಡೆದು, ನಂತರ ಅದನ್ನು ಗೃಹ ಮಂಡಳಿಯೊಂದಿಗೆ 50:50 ಅನುಪಾತದ ಒಪ್ಪಂದಕ್ಕೆ ಒಳಪಡಿಸಿ ಲಾಭ ಮಾಡಿಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ. 'ರೈತರು ಯಾವುದೇ ವದಂತಿಗಳಿಗೆ ಕಿವಿಗೊಡಬಾರದು. ಗೃಹ ಮಂಡಳಿಯು ಸರ್ಕಾರಿ ಸಂಸ್ಥೆಯಾಗಿದ್ದು, ರೈತರಿಗೆ ಯಾವುದೇ ಹಂತದಲ್ಲೂ ಅನ್ಯಾಯವಾಗಲು ಬಿಡುವುದಿಲ್ಲ. ರೈತರು ನೇರವಾಗಿ ಮಂಡಳಿಯೊಂದಿಗೆ 50:50 ಅನುಪಾತದಡಿ ಒಪ್ಪಂದ ಮಾಡಿಕೊಳ್ಳುವುದರಿಂದ ಗರಿಷ್ಠ ಲಾಭ ಪಡೆಯಬಹುದು' ಎಂದು ಗೃಹ ಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ.

ದೇವನಹಳ್ಳಿ 'ನವ ಬೆಂಗಳೂರು' : ಮುಂದಿನ 30 ವರ್ಷಗಳ ಅಭಿವೃದ್ಧಿ ಹಾಗೂ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ದೇವನಹಳ್ಳಿಯ ಎಸ್‌ಟಿಆರ್‌ಆರ್ ರಸ್ತೆಗೆ ಹೊಂದಿಕೊಂಡಂತೆ 'ನವ ಬೆಂಗಳೂರು' ನಿರ್ಮಾಣಕ್ಕೆ ಕೆಎಚ್‌ಬಿ ವಿಸ್ತೃತ ಯೋಜನೆ ಸಿದ್ಧಪಡಿಸುತ್ತಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

"'ಗೃಹ ಮಂಡಳಿ ಎಂದಿಗೂ ರೈತರಿಂದ ಬಲವಂತವಾಗಿ ಜಮೀನು ಕಿತ್ತುಕೊಳ್ಳುವುದಿಲ್ಲ. ಭೂಮಾಲೀಕರು ಒಪ್ಪಿದರೆ ಮಾತ್ರ ಯೋಜನೆ ಕೈಗೊಳ್ಳಲಾಗುವುದು. ಒಪ್ಪಂದವಾದ ತಕ್ಷಣ ರೈತರಿಗೆ ಮುಂಗಡ ಹಣ ನೀಡಲಾಗುವುದು.
-ಜಮೀರ್ ಅಹಮದ್ ಖಾನ್, ವಸತಿ ಸಚಿವ

"'ನವ ಬೆಂಗಳೂರನ್ನು ಐಟಿ ಆಧಾರಿತ ಸ್ಮಾರ್ಟ್ ಸಿಟಿಯಾಗಿ ರೂಪಿಸಲಾಗುವುದು. ಈ ಹೈಟೆಕ್ ಟೌನ್‌ಶಿಪ್‌ನಿಂದಾಗಿ ಪಾಲುದಾರಿಕೆ ಹೊಂದಿದ ರೈತರಿಗೆ ಪ್ರತಿ ಎಕರೆಗೆ ಸುಮಾರು 6 ಕೋಟಿ ರೂ.ಗಳಷ್ಟು ಆದಾಯ ಬರುವ ನಿರೀಕ್ಷೆಯಿದೆ.
- ದಯಾನಂದ್, ಆಯುಕ್ತರು, ಗೃಹ ಮಂಡಳಿ

ಗೃಹಮಂಡಳಿಯ ಭರವಸೆ

- ತ್ವರಿತ ಅಭಿವೃದ್ಧಿ: ಭೂಸ್ವಾಧೀನವಾದ ಒಂದು ವರ್ಷದೊಳಗೆ ಬಡಾವಣೆ ಅಭಿವೃದ್ಧಿಪಡಿಸಿ ಭೂಮಾಲೀಕರಿಗೆ ನಿವೇಶನ ಹಂಚಿಕೆ.
- ಮೂಲಸೌಕರ್ಯ: ರಸ್ತೆ, ಚರಂಡಿ, ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ. (ಸೂರ್ಯ ನಗರ ಮಾದರಿಯಲ್ಲಿ ಅಭಿವೃದ್ಧಿ).
- ಸಂಪರ್ಕ: ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಿಗೆ ನೇರ ಸಂಪರ್ಕ ರಸ್ತೆಗಳ ನಿರ್ಮಾಣ.
- ಕಾವೇರಿ ನೀರು: ಬಿಡಬ್ಲ್ಯೂಎಸ್‌ಎಸ್‌ಬಿ ಮೂಲಕ ಕುಡಿಯುವ ನೀರಿನ ಸೌಲಭ್ಯ.

ರೈತರಿಗೆ ಸಿಗುವ ವಿಶೇಷ ಸೌಲಭ್ಯಗಳು

- ಪರಿಹಾರ: ಜಮೀನಿನಲ್ಲಿ ಬೆಳೆ, ಮರ, ಬೋರ್‌ವೆಲ್ ಅಥವಾ ಕಟ್ಟಡಗಳಿದ್ದರೂ ಸೂಕ್ತ ಪರಿಹಾರ ನೀಡಲಾಗುವುದು.
- ನಿವೇಶನ ಆಯ್ಕೆ: 50:50 ಅಥವಾ 60:40 ಅನುಪಾತದಡಿ ಅಭಿವೃದ್ಧಿಪಡಿಸಿದ ನಂತರ ರೈತರಿಗೆ ತಮಗೆ ಇಷ್ಟವಾದ ನಿವೇಶನ ಆರಿಸಿಕೊಳ್ಳುವ ಅವಕಾಶವಿದೆ.
- ನೋಂದಣಿ ಶುಲ್ಕ ವಿನಾಯಿತಿ: ಭೂಮಾಲೀಕರಿಗೆ ನಿವೇಶನ ನೋಂದಣಿ ವೇಳೆ ಶುಲ್ಕ ವಿನಾಯಿತಿ ಇರುತ್ತದೆ. ಒಂದು ವೇಳೆ ರೈತರು ತಮ್ಮ ಪಾಲಿನ ನಿವೇಶನವನ್ನು ಬೇರೆಯವರಿಗೆ ಮಾರಾಟ ಮಾಡಿದರೂ ಈ ವಿನಾಯಿತಿ ಅನ್ವಯವಾಗಲಿದೆ.

ವಾಸ್ತವಾಂಶವೇನು?

- ಭೂಮಾಲೀಕರಿಗೆ/ರೈತರಿಗೆ ಯೋಜನೆ ಪ್ರಾರಂಭದಲ್ಲಿಯೇ ಮುಂಗಡ ಹಣ ನೀಡಲಾಗುವುದು.
- ಶೇ.50ರಷ್ಟು ಅಭಿವೃದ್ಧಿ ಪಡಿಸಿದ ನಿವೇಶನ ನೀಡಲಾಗುವುದು.
- ಅವರಿಗೆ ಇಷ್ಟವಾದ ನಿವೇಶನ ಆಯ್ಕೆ ಮಾಡಿಕೊಳ್ಳಬಹುದು
- ಭೂಮಾಲೀಕರಿಗೆ/ರೈತರಿಗೆ ನಿವೇಶನ ನೋಂದಣಿ ಶುಲ್ಕ ವಿನಾಯಿತಿ ಇದೆ.
- ಸರ್ಕಾರದ ಸಂಸ್ಥೆಯಾದ ಕಾರಣ ತೆರಿಗೆ ವಿನಾಯಿತಿ ಇರುತ್ತದೆ.

ಕೆಎಚ್‌ಬಿ ಸೂರ್ಯನಗರ ಭೂಮಾಲೀಕರ ಸಂತಸ

"ಕಾಡುಜಕ್ಕನಹಳ್ಳಿ ಗ್ರಾಮದ ಸರ್ವೆ ನಂ.48,53,63/3ರಲ್ಲಿ 5 ಎಕರೆ ನನ್ನ ಮತ್ತು ನನ್ನ ಕುಟುಂಬದ ಸ್ವಾಧೀನದಲ್ಲಿರುವ ಜಮೀನು ಕೆ.ಹೆಚ್.ಬಿ ಸೂರ್ಯನಗರ 4 ನೇ ಹಂತ ಯೋಜನೆಗೆ ಭೂಸ್ವಾಧೀನವಾಗಿದೆ. ಆರಂಭದಲ್ಲಿ ಕೆ.ಹೆಚ್.ಬಿಗೆ ಜಮೀನು ಕೊಡಲು ನಮ್ಮ ವಿರೋಧವಿತ್ತು. ಆದರೆ ಮಂಡಳಿ ಅಧಿಕಾರಿಗಳು ನಮ್ಮ ಮನವೊಲಿಸಿ, ನಮ್ಮ ಜಮೀನಿನಲ್ಲಿ ಸುಸಜ್ಜಿತ ಬಡಾವಣೆ ಅಭಿವೃದ್ಧಿಪಡಿಸಿರುತ್ತಾರೆ. ಜತೆಗೆ, ಮುಂಗಡ ಹಣ ಸಹ ಸಕಾಲಕ್ಕೆ ನೀಡಿದ್ದಾರೆ. ಕಳೆದ ವರ್ಷದ ಜನವರಿಯಲ್ಲಿಯೇ ಭೂಮಾಲೀಕರಿಗೆ ಜಮೀನು ಆಯ್ಕೆ ಮಾಡಲು ಅವಕಾಶ ನೀಡಿದ್ದರು. ಕೆಎಚ್‌ಬಿಯಿಂದ ರೈತಸ್ನೇಹಿ ಪ್ರಕ್ರಿಯೆ ವಿಶ್ವಾಸಾರ್ಹವಾಗಿದೆ.
-ಹೆಚ್.ಮಹಾದೇವಪ್ಪ, ರೈತರು/ಭೂಮಾಲೀಕರು, ಕಾಡುಜಕ್ಕನಹಳ್ಳಿ, ಆನೇಕಲ್.

"ಇಂಡ್ಲವಾಡಿ ಗ್ರಾಮದ ಸರ್ವೆ ನಂ.8/2, 8/3, 11/2, 9/1, 9/4, 13/2 & 235 ರಲ್ಲಿ 5 ಎಕರೆ 23 ಗುಂಟೆ ನನ್ನ ಮತ್ತು ನನ್ನ ಕುಟುಂಬದ ಜಮೀನು ಕೆ.ಹೆಚ್.ಬಿ ಸರ್ಯನಗರ 4ನೇ ಹಂತದ ಯೋಜನೆಗೆ ಭೂಸ್ವಾಧೀನವಾಗಿದೆ. ಸುಮಾರು 2000 ಎಕರೆ ವಿಸ್ತರ್ಣದಲ್ಲಿ 100 ಮತ್ತು 80 ಅಡಿ ಅಗಲದ ರಸ್ತೆಗಳು, ಚರಂಡಿ, ಯುಜಿಡಿ, ಕಾವೇರಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ ಸರ್ಯನಗರ 4ನೇ ಹಂತವನ್ನು ನರ್ಮಿಸಲಾಗಿದೆ. ನನ್ನ ಜಮೀನಿಗೆ ಮುಂಗಡ ಹಣವನ್ನು ನೀಡಿದ್ದರಿಂದ ಬೇರೆ ಕಡೆ ಜಮೀನು ಖರೀದಿಸಲು ಅನುಕೂಲವಾಯಿತು. ಜಮೀನಿನ ಮರ, ಮಾಲ್ಕಿ, ಕಟ್ಟಡ, ಬೋರ್‌ವೆಲ್‌ಗಳಿಗೆ ಸಹ ಪರಿಹಾರ ನೀಡಿರುತ್ತಾರೆ.
-ಸಿ.ನಾಗರಾಜು, ರೈತರು/ಭೂಮಾಲೀಕರು, ಇಂಡ್ಲವಾಡಿ, ಆನೇಕಲ್

"ಇಂಡ್ಲವಾಡಿ ಗ್ರಾಮದ ಸರ್ವೆ ನಂ.206/3, 207,193,235,199 ಮತ್ತು ಇನ್ನಿತರ ಕಡೆ ಒಟ್ಟು 11 ಎಕರೆ ನನ್ನ ಮತ್ತು ನನ್ನ ಕುಟುಂಬದ ಜಮೀನು ಯೋಜನೆಗೆ ಭೂಸ್ವಾಧೀನವಾಗಿದೆ. ಕೆಹೆಚ್‌ಬಿಯಿಂದ ಪರಿಹಾರ ಸ್ವರೂಪದಲ್ಲಿ ಸಿಗುವ ನಿವೇಶನದ ದಾಖಲಾತಿಗಳು ಕಾನೂನು ಬದ್ಧವಾಗಿರುತ್ತದೆ. ಇದರಿಂದ ನಮ್ಮ ನಿವೇಶನಗಳಿಗೆ ಹೆಚ್ಚಿನ ಬೇಡಿಕೆ ಹಾಗೂ ದರ ಸಿಗುತ್ತದೆ. ಹೆಚ್ಚಿನ ಅವಧಿಗೆ ನಿವೇಶನಗಳನ್ನು ನಾವೇ ಮಾರಾಟ ಮಾಡದೇ ಇಟ್ಟುಕೊಂಡಲ್ಲಿ ಹೆಚ್ಚಿನ ಲಾಭ ಸಿಗುತ್ತದೆ. ಅಲ್ಲದೇ ನೊಂದಣಿ ಶುಲ್ಕ ವಿನಾಯ್ತಿ ಮತ್ತು ಬ್ಯಾಂಕ್ ಗಳಿಂದ ಸಾಲ ಸೌಲಭ್ಯ ಸಿಗುತ್ತದೆ.ನನ್ನ ಪಾಲಿನ ಎಲ್ಲಾ ನಿವೇಶನಗಳನ್ನು ಈಗಾಗಲೇ ಆಯ್ಕೆ ಮಾಡಿಕೊಂಡಿರುತ್ತೇನೆ.
-ಪಿ.ಎನ್.ಪ್ರಸನ್ನಕುಮಾರ್. ರೈತರು/ಭೂಮಾಲೀಕರು, ಇಂಡ್ಲವಾಡಿ, ಆನೇಕಲ್.

"ಕಾಡುಜಕ್ಕನಹಳ್ಳಿ ಗ್ರಾಮದ ಸರ್ವೆ ನಂ.163/1 & 2 , 84/1 & 2, 81/2 ,81/5 , 94/1, 94/3, 96/1, 96/3 ರಲ್ಲಿ ಸುಮಾರು 17 ಎಕರೆ ನನ್ನ ಮತ್ತು ನನ್ನ ಕುಟುಂಬದ ಜಮೀನಿದ್ದು, ಸೂರ್ಯನಗರ 4 ನೇ ಹಂತ ಯೋಜನೆಗೆ ಭೂಸ್ವಾಧೀನಕ್ಕೆ ಒಳಗಾಗಿದೆ. ಕೆಎಚ್‌ಬಿಯಿಂದ ನಡೆದ ಎಲ್ಲಾ ಸಭೆಗಳಲ್ಲಿ ರೈತರಿಗೆ ಸಮರ್ಪಕ ಮಾಹಿತಿ ನೀಡುವುದರೊಂದಿಗೆ ಉತ್ತಮ ಲಾಭ ಸಿಗುವಂತೆ ಅಧಿಕಾರಿಗಳು ಮಾರ್ಗದರ್ಶನ ನೀಡಿದ್ದಾರೆ. ಜತೆಗೆ, ಕಾಲಕಾಲಕ್ಕೆ ಅಗತ್ಯ ಕಾನೂನು ಸಲಹೆ, ಸೂಚನೆಗಳನ್ನು ಒದಗಿಸುವುದು ಮಾತ್ರವಲ್ಲದೆ ಭೂದಾಖಲೆಗಳನ್ನೆಲ್ಲಾ ಪರಿಶೀಲಿಸಿ ನೀಡುತ್ತಾರೆ.
-ಎಂ.ವೀರಭದ್ರಪ್ಪ, ರೈತರು/ಭೂಮಾಲೀಕರು, ಕಾಡುಜಕ್ಕನಹಳ್ಳಿ, ಆನೇಕಲ್.

ಆಕ್ಷೇಪಣೆ ಸಲ್ಲಿಸಲು ಎಸ್‌ಐಟಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಪ್ರಕರಣದ ಅಪರಾಧಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರು, ವಂಶವಾಹಿ (ಡಿಎನ್‌ಎ) ಮತ್ತು ಡಿಜಿಟಲ್ ಸಾಕ್ಷ್ಯಗಳ ರೆಕಾರ್ಡಿಂಗ್ ಕೋರಿ ಸಲ್ಲಿಸಿರುವ ಮಧ್ಯಂತರ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಹೈಕೋರ್ಟ್ ಎಸ್‌ಐಟಿಗೆ ನಿರ್ದೇಶಿಸಿದೆ.

ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ವಿಧಿಸಿರುವ ಜೀವಿತಾವಧಿ ಜೈಲು ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಿ ಜಾಮೀನು ಮಂಜೂರು ಮಾಡಲು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಜ್ವಲ್ ಪರ ಹಾಜರಾಗಿದ್ದ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಸಿದ್ಧಾರ್ಥ್ ಲೂಥ್ರಾ ಅವರು, 'ಕೆಲವು ಸಾಕ್ಷ್ಯಗಳ ರೆಕಾರ್ಡಿಂಗ್ ಕೋರಿ ಮಧ್ಯಂತರ ಅರ್ಜಿ ಸಲ್ಲಿಸಲಾಗಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಇದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರದ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಒಂದು ವಾರದಲ್ಲಿ ಆಕ್ಷೇಪಣೆ ಸಲ್ಲಿಸಲಾಗುವುದು' ಎಂದು ತಿಳಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಪ್ರಜ್ವಲ್ ರೇವಣ್ಣ, ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 391ರ ಅಡಿ ಕೆಲವು ಸಾಕ್ಷ್ಯಗಳ ರೆಕಾರ್ಡಿಂಗ್ ಕೋರಿ ಮಧ್ಯಂತರ ಅರ್ಜಿ ಸಲ್ಲಿಸಿದ್ದಾರೆ. ಇದಕ್ಕೆ ಆಕ್ಷೇಪಣೆ ಸಲ್ಲಿಸಲು ಪ್ರಾಸಿಕ್ಯೂಷನ್‌ಗೆ ಒಂದು ವಾರ ಕಾಲಾವಕಾಶ ನೀಡಲಾಗಿದೆ' ಎಂದು ತಿಳಿಸಿ ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿತು.

ತಡೆ ಕೋರಿ ಹೈಕೋರ್ಟ್‌ಗೆ ಅರ್ಜಿ

ಬೆಂಗಳೂರು: 'ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಆರೋಪದಡಿ ಜೈಲಿನಲ್ಲಿರುವ ಆರೋಪಿಗಳಾದ ಪವಿತ್ರಾ ಗೌಡ, ನಾಗರಾಜ್ ಮತ್ತು ಲಕ್ಷ್ಮಣ್‌ಗೆ ವಾರಕೊಮ್ಮೆ ಮನೆಯಿಂದ ಊಟ ತರಿಸಿಕೊಳ್ಳಲು ಅನುಮತಿ ನೀಡಿರುವ ನಗರದ ಸೆಷನ್ಸ್ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು' ಎಂದು ಕೋರಿ ರಾಜ್ಯ ಸರ್ಕಾರ, ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಈ ಕುರಿತು ಪ್ರಕರಣದ ತನಿಖೆ ನಡೆಸಿರುವ ಕಾಮಾಕ್ಷಿಪಾಳ್ಯ ಠಾಣಾ ಪೊಲೀಸ್ ಇನ್‌ಸ್ಪೆಕ್ಟರ್ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದ್ದು, ಪವಿತ್ರಾ ಗೌಡ, ನಾಗರಾಜು ಮತ್ತು ಲಕ್ಷ್ಮಣ್ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಮನವಿ ಏನು?: 'ಆರೋಪಿಗಳ ಮೌಖಿಕ ಹೇಳಿಕೆ ಆಧರಿಸಿ ಜೈಲು ಅಧಿಕಾರಿಗಳಿಂದ ಯಾವುದೇ ಪ್ರತಿಕ್ರಿಯೆ ಅಥವಾ ಆಕ್ಷೇಪಣೆ ಸ್ವೀಕರಿಸದೆಯೇ ಮನೆಯಿಂದ ಊಟ ತರಿಸಿಕೊಳ್ಳಲು ವಿಚಾರಣಾ ನ್ಯಾಯಾಲಯ ಅನುಮತಿ ನೀಡಿದೆ. ಇದು ಅಕ್ರಮ ಹಾಗೂ ಏಕಪಕ್ಷೀಯ. ಜೈಲಿನ ಇತರ ಕೈದಿಗಳೂ ಇದೇ ರೀತಿಯ ಮನವಿ ಮಾಡಿದರೆ, ಜೈಲಿನ ಆಡಳಿತದ ಮೇಲೆ ದುಷ್ಪರಿಣಾಮ ಬೀರುತ್ತದೆ. ಹಾಗಾಗಿ, ಈ ಆದೇಶ ರದ್ದುಪಡಿಸಬೇಕು. ಅರ್ಜಿ ಇತ್ಯರ್ಥ ಆಗುವತನಕ ವಿಚಾರಣಾ ನ್ಯಾಯಾಲಯದ ಆದೇಶಕ್ಕೆ ತಡೆ ನೀಡಬೇಕು' ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ಸಚಿವ ತಿಮ್ಮಾಪುರ ವಿರುದ್ಧ ಲೋಕಾಯುಕ್ತಕ್ಕೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ಪರವಾನಗಿ ನೀಡಲು ಲಂಚಕ್ಕೆ ಬೇಡಿಕೆ ಇಟ್ಟ ಆರೋಪ ಪ್ರಕರಣದಲ್ಲಿ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಲಾಗಿದೆ.

ನಗರದ ಹುಳಿಮಾವು ನಿವಾಸಿ ಲಕ್ಷ್ಮೀನಾರಾಯಣ ಎಂಬುವವರು ಸೋಮವಾರ ಲೋಕಾಯುಕ್ತ ಕಚೇರಿಗೆ ಭೇಟಿ ನೀಡಿ ಲೋಕಾಯುಕ್ತ ಎಸ್ಪಿಗೆ ದೂರು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಲಕ್ಷ್ಮೀನಾರಾಯಣ, 'ಜನವರಿ 17ರಂದು ₹25 ಲಕ್ಷ ಲಂಚ ಪಡೆದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಅಬಕಾರಿ ಇಲಾಖೆ ಉಪ ಆಯುಕ್ತ ಜಗದೀಶ್ ನಾಯ್ಕ್, ಅಧೀಕ್ಷಕ ತಮ್ಮಣ್ಣ ಮತ್ತು ಕಾನ್‌ಸ್ಟೆಬಲ್ ಲಕ್ಕಪ್ಪ ಗನಿಯನ್ನು ಬಂಧಿಸಿದ್ದರು. ಈ ಸಂಬಂಧ ಪ್ರಕರಣ ಸಹ ದಾಖಲಾಗಿದೆ. ದಾಳಿಗೂ ಮುನ್ನ ಜಗದೀಶ್ ನಾಯ್ಕ್ ಅವರು ಅಬಕಾರಿ ಸಚಿವರಿಗೆ ಲಂಚ ಕೊಡುವ ಬಗ್ಗೆ ಪ್ರಸ್ತಾಪಿಸಿದ್ದರು. ಹೀಗಾಗಿ, ಅಬಕಾರಿ ಸಚಿವರ ವಿರುದ್ಧವೂ ಪ್ರಕರಣ ದಾಖಲಿಸಿ, ತನಿಖೆ ನಡೆಸುವಂತೆ ದೂರು ನೀಡಿದ್ದೇನೆ. ಆಡಿಯೊ ರೆಕಾರ್ಡ್, ಪೆನ್ ಡ್ರೈವ್ ಸೇರಿ ಕೆಲ ದಾಖಲೆಗಳನ್ನು ನೀಡಿದ್ದೇನೆ' ಎಂದು ತಿಳಿಸಿದರು.

ಲೋಕಾಯುಕ್ತ ಪೊಲೀಸರು ಅಪರಿಚಿತ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಕ್ರಿಮಿನಲ್ ಹಿನ್ನೆಲೆ ಇಲ್ಲ’

ಬೆಂಗಳೂರು: ‘ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ ಐದನೇ ಆರೋಪಿಯಾಗಿರುವ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರನ್ನು ಸುಪರ್ದಿಗೆ ಪಡೆದು ವಿಚಾರಣೆ ನಡೆಸಲೇಬೇಕೆಂದು ಸಿಐಡಿ ಪ್ರತಿಪಾದಿಸುವುದಾದರೆ, ಸೀಮಿತ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲು ಅವಕಾಶವಿದೆ’ ಎಂದು ಬಸವರಾಜ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

ನಿರೀಕ್ಷಣಾ ಜಾಮೀನು ಕೋರಿ ಬೈರತಿ ಬಸವರಾಜ ಅವರು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.ವಾದ ಆಲಿಸಿದ ಪೀಠ ವಿಚಾರಣೆಯನ್ನು ಮಂಗಳವಾರಕ್ಕೆ (ಜ.20) ಮುಂದೂಡಿತು. ಸಿಐಡಿ ಪರ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ಮಂಗಳವಾರ ಪ್ರತಿವಾದ ಮಂಡಿಸಲಿದ್ದಾರೆ.

ಮೂರ್ತಿ ಹೊರಲು ದಲಿತರಿಗೆ ಅಡ್ಡಿ

ಚಿಕ್ಕಬಳ್ಳಾಪುರ: ದೇವರ ಉತ್ಸವ ಮೂರ್ತಿ ಮೆರವಣಿಗೆಗೆ ಸಂಬಂಧಿಸಿದಂತೆ ತಾಲ್ಲೂಕಿನ ಆನೆಮೊಡಗು ಕೊತ್ತೂರು ಗ್ರಾಮದಲ್ಲಿ ಭಾನುವಾರ ರಾತ್ರಿ ದಲಿತರು ಮತ್ತು ಒಕ್ಕಲಿಗರ ನಡುವೆ ವಾಗ್ವಾದ ನಡೆದಿದೆ.

ಗ್ರಾಮದೇವತೆ ಮಾರಮ್ಮ ದೇವಿ ಉತ್ಸವಮೂರ್ತಿಯನ್ನು ಮೆರವಣಿಗೆಗೆ ಗ್ರಾಮಸ್ಥರು ಎಲ್ಲ ಜಾತಿಯವರಿಂದ ಚಂದಾ ವಸೂಲಿ ಮಾಡಿದ್ದರು. ಆದರೆ ಭಾನುವಾರ ಮೆರವಣಿಗೆ ವೇಳೆ ದಲಿತರಿಗೆ ಉತ್ಸವಮೂರ್ತಿ ಹೊತ್ತುಕೊಳ್ಳಲು ಒಕ್ಕಲಿಗರು ಬಿಡದ ಕಾರಣ ವಾಗ್ವಾದ ನಡೆಯಿತು.

‘ನಿವೇಶನ ಹಂಚಿಕೆ ನಿಯಮ ಬದಲಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನ ಮತ್ತು ಮನೆಗಳ ಹಂಚಿಕೆಗೆ ಸಂಬಂಧಿಸಿದಂತೆ ನಿಯಮಗಳನ್ನು ಬದಲಿಸಿಲ್ಲ. ಆದರೆ, ಫ್ಲ್ಯಾಟ್ ಹಂಚಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕ ನಿಯಮಗಳು ಇಲ್ಲದ ಕಾರಣ 2018ರ ಮಾರ್ಚ್ 23ರ ಆದೇಶದಂತೆ ರಾಜ್ಯದಲ್ಲಿ ಎರಡು ವರ್ಷಕ್ಕಿಂತ ಕಡಿಮೆ ಇಲ್ಲದಂತೆ ವಾಸವಿರುವ ದೃಢೀಕರಣ ಪ್ರಮಾಣಪತ್ರ ಹೊಂದಿರುವವರಿಗೆ ಹಂಚಿಕೆ ಮಾಡಲಾಗುತ್ತಿದೆ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸ್ಪಷ್ಟಪಡಿಸಿದೆ.

ಪ್ರಸ್ತುತ ಎರಡು ಸಾವಿರಕ್ಕಿಂತ ಹೆಚ್ಚು ಫ್ಲ್ಯಾಟ್, ವಿಲ್ಲಾಗಳು ಇವೆ. ಆನ್‌ಲೈನ್ ಮೂಲಕ ಅಥವಾ ಭೌತಿಕವಾಗಿ ಅರ್ಜಿ ಸಲ್ಲಿಸಿದವರು ನಿಯಮಾವಳಿ ಪ್ರಕಾರ ಅರ್ಹತೆ ಹೊಂದಿರುವ ಬಗ್ಗೆ ಪರಿಶೀಲಿಸಿ ಫ್ಲ್ಯಾಟ್, ವಿಲ್ಲಾಗಳನ್ನು ಹಂಚಿಕೆ ಮಾಡಿ ಶುದ್ಧಕ್ರಯಪತ್ರ ನೀಡಲಾಗುತ್ತದೆ.

ಬಿಡಿಎ ಕಾಯ್ದೆಯಲ್ಲಿನ ನಿಯಮಗಳಂತೆ ನಿವೇಶನಗಳನ್ನು ಪಡೆಯುವವರು, ಅರ್ಜಿ ಸಲ್ಲಿಸುವವರು ಹತ್ತು ವರ್ಷ ಕರ್ನಾಟಕದ ನಿವಾಸಿಗಳಾಗಿರಬೇಕೆಂಬ ಷರತ್ತನ್ನು ಸಡಿಲಿಸಿಲ್ಲ ಎಂದಿದೆ.

ಪ್ರಾಧಿಕಾರವು ನಿವೇಶನ, ಮನೆಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡುತ್ತಿರುತ್ತದೆ. ನಿವೇಶನಗಳನ್ನು ಹಂಚಿಕೆ ಮಾಡುವ ಸಂಬಂಧ ಪ್ರಾಧಿಕಾರದ ಕಾಯ್ದೆ 1984ರ (ನಿವೇಶನ ಹಂಚಿಕೆ) ನಿಯಮ 10(2) ರಲ್ಲಿ ಇರುವಂತೆ ಪ್ರಸ್ತುತ ನಿಯಮಗಳು ಚಾಲ್ತಿಯಲ್ಲಿರುತ್ತವೆ. ನಿವೇಶನ ಹಂಚಿಕೆ ಸಂಬಂಧ ಕಾಯ್ದೆಗಳಲ್ಲಿ ಯಾವುದೇ ಬದಲಾವಣೆ ಆಗಿಲ್ಲ ಎಂದು ತಿಳಿಸಿದೆ.

25ಕ್ಕೆ ಪ್ರತಿಭಟನೆ

ಬೆಂಗಳೂರು: ‘ಸಚಿವ ಜಮೀರ್ ಅಹ್ಮದ್ ಖಾನ್ ಪ್ರತಿನಿಧಿಸುವ ಚಾಮರಾಜಪೇಟೆ ಕ್ಷೇತ್ರದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯಗಳ ಖಂಡಿಸಿ ಜ. 25ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಹಿಂದೂ ಸಂಘಟನೆಗಳ ಪ್ರತಿಭಟನೆ ನಡೆಯಲಿದೆ’ ಎಂದು ಶ್ರೀರಾಮ ಸೇನಾ ಅಧ್ಯಕ್ಷ ಪ್ರಮೋದ್‌ಮುತಾಲಿಕ್ ತಿಳಿಸಿದರು.

‘ಸಾಹಿತ್ಯದಲ್ಲಿ ಶೋಷಿತರ ಪರ ದನಿ ಹೆಚ್ಚಲಿ’

ಬೆಂಗಳೂರು: ‘ಮುಖ್ಯವಾಹಿನಿಯ ಸಾಹಿತ್ಯ ಚರಿತ್ರೆಯಲ್ಲಿ ಮೂಕ ಸಮುದಾಯಗಳು ಹಾಗೂ ಶೋಷಿತರ ಧ್ವನಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕಾದ ಅಗತ್ಯವಿದೆ’ ಎಂದು ವಿಮರ್ಶಕ ಕೆ.ಜಿ.ನಾಗರಾಜಪ್ಪ ತಿಳಿಸಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಅಭಿನವ ಮತ್ತು ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾನಿಲಯದ ಕನ್ನಡ ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿದ್ದ ‘ಆನು ಒಲಿದಂತೆ ಹಾಡುವೆ’ ಸರಣಿಯ ಕನ್ನಡ ಮನಸ್ಸಿನೊಂದಿಗೆ ಒಂದು ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯದ ಕುಲಪತಿ ರೆವರೆಂಡ್ ವಿಕ್ಟರ್ ಲೋಬೊ ಮಾತನಾಡಿ, ‘ಕನ್ನಡ ಸಂಸ್ಕೃತಿ, ಸಾಹಿತ್ಯವನ್ನು ಬೆಳೆಸುವಲ್ಲಿ ನಮ್ಮ ವಿಶ್ವವಿದ್ಯಾಲಯ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದು, ಅಧ್ಯಯನ ಕೇಂದ್ರ ಸ್ಥಾಪಿಸಿದೆ’ ಎಂದು ಹೇಳಿದರು.

ಕನ್ನಡ ವಿಶ್ವವಿದ್ಯಾಲಯ ಕುಲಪತಿ ಡಿ.ವಿ.ಪರಮಶಿವ-ಮೂರ್ತಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥ ವೆಂಕಟಗಿರಿ ದಳವಾಯಿ, ಅಭಿನವ ಪ್ರಕಾಶನದ ರವಿಕುಮಾರ್ ಮಾತನಾಡಿದರು. ಕೆ.ಜಿ.ನಾಗರಾಜಪ್ಪ ಅವರ ಬದುಕು ಸಾಧನೆಗಳ ಬಗೆಗೆ ಲೇಖಕ ಮಹೇಶ್ ಹರವೆ ಮತ್ತು ಕೃತಿಗಳ ಕುರಿತು ರುಕ್ಮಿಣಮ್ಮ ಮಾತನಾಡಿದರು.

ಕನ್ನಡ ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ಕೇಂದ್ರದ ಸಂಚಾಲಕ ಕುಮಾರಸ್ವಾಮಿ ಬೆಜ್ಜಿಹಳ್ಳಿ, ವಿದ್ವಾಂಸ ಸಿ.ವೀರಣ್ಣ, ಪತ್ರಕರ್ತೆ ಆರ್. ಪೂರ್ಣಿಮಾ, ಇತಿಹಾಸ ಅಕಾಡೆಮಿ ಕಾರ್ಯದರ್ಶಿ ಕೆ.ಎಲ್. ರಾಜಶೇಖರ, ಲೇಖಕಿ ಪಿ.ಚಂದ್ರಿಕಾ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸುಮಿತ್ರಾ ಉಪಸ್ಥಿತರಿದ್ದರು.

ನಿಧನ ವಾರ್ತೆ

ರಾಜಶೇಖರಯ್ಯ

ರಾಜಶೇಖರಯ್ಯ

ದಾಬಸ್‌ಪೇಟೆ: ಅಖಿಲ ಭಾರತ ವೀರಶೈವ ಮಹಾಸಭಾದ ಸೋಂಪುರ ಹೋಬಳಿ ಮಾಜಿ ಅಧ್ಯಕ್ಷ ಹಾಗೂ ತುಮಕೂರು ಸಿದ್ದಗಂಗಾ ಮಹಿಳಾ ಪದವಿ ಕಾಲೇಜಿನ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕರಾದ ಎಸ್.ರಾಜಶೇಖರಯ್ಯ ಅವರು ಸೋಮವಾರ ಬೆಳಿಗ್ಗೆ ನಿಧನರಾದರು.

ಮೃತರಿಗೆ ಪತ್ನಿ, ಇಬ್ಬರು ಮಕ್ಕಳು ಇದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 3.30 ಗಂಟೆಗೆ ಸ್ವಗ್ರಾಮ ಮಾದೇನಹಳ್ಳಿಯಲ್ಲಿ ನೆರವೇರಿತು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಿಐಎನ್: ಯು40109ಕೆಎ1999ಎಸ್‌ಜಿಸಿ025521

ಸಂಖ್ಯೆ: ಕಾನಿಇಂ/ಕಾವಿಹೂ/ಸಕಾನಿಇಂ(ಕ)/ಸಇಂ(ತಾ)/ಟಿಎಲ್‌ಎಸ್‌ಡಿ/25-26/ಎಫ್-130/3489-91 ದಿನಾಂಕ: 03.01.2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ) ಯು ಕರ್ನಾಟಕ ರಾಜ್ಯ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದ್ದು, ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ–2023 (ಸುರಕ್ಷತೆ ಮತ್ತು ವಿದ್ಯುತ್ ಸರಬರಾಜು ನಿಯಮಗಳಿಗೆ ಸಂಬಂಧಿಸಿದ ಕ್ರಮಗಳು), CEA Regulations 2023, ಭಾರತ ಸರ್ಕಾರ ಇವರ ನಿರ್ದೇಶನ ಹಾಗೂ ನಿಯಮಾನುಸಾರ, ಕರ್ನಾಟಕ ರಾಜ್ಯದಲ್ಲಿ ಅಧಿಕ ಒತ್ತಡ (400ಕೆವಿ, 220ಕೆವಿ ಮತ್ತು 66ಕೆವಿ) ವಿದ್ಯುತ್ ಪ್ರಸರಣ ಮಾರ್ಗಗಳಲ್ಲಿ ವಿದ್ಯುತ್ ಪ್ರಸರಿಸುವ ಕಾರ್ಯ ನಿರ್ವಹಿಸುತ್ತಿರುತ್ತದೆ.

ಕಾರ್ಯಾಚರಣೆ ವಿಭಾಗ, ಹೂಡಿ, ಪ್ರಸರಣ ಮಾರ್ಗಗಳ ಉಪವಿಭಾಗದ ನಿಯಂತ್ರಣಕ್ಕೆ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಅಧಿಕ ಒತ್ತಡದ ವಿದ್ಯುತ್ ಪ್ರಸರಣ ಮಾರ್ಗಗಳು ಹಾದುಹೋಗಿರುತ್ತವೆ. ಸದರಿ ವ್ಯಾಪ್ತಿಯಲ್ಲಿ ಹಾದುಹೋಗಿರುವ ಅಧಿಕ ಒತ್ತಡ ವಿದ್ಯುತ್ ಪ್ರಸರಣ ಮಾರ್ಗಗಳ (Over head) ಕೆಳಗೆ ಕಟ್ಟಡಗಳನ್ನು ನಿರ್ಮಿಸುವುದು ಹಾಗೂ ಪ್ರಸರಣ ಮಾರ್ಗವು ಕಟ್ಟಡದ ಪಕ್ಕದಲ್ಲಿ ಹಾದುಹೋಗಿರುವ ಸಂದರ್ಭದಲ್ಲಿ ಸೂಕ್ತ ಸಮಾನಾಂತರ ಅಂತರವನ್ನು ಕಾಪಾಡದೇ ಕಟ್ಟಡ ಕಟ್ಟುವುದು ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ–2023 (ಸುರಕ್ಷತೆ ಮತ್ತು ವಿದ್ಯುತ್ ಸರಬರಾಜು ನಿಯಮಗಳಿಗೆ ಸಂಬಂಧಿಸಿದ ಕ್ರಮಗಳು), CEA Regulations 2023 ಅನುಬಂಧನೆಗಳನ್ವಯ ನಿಷೇದಿಸಲಾಗಿರುತ್ತದೆ. ನಿಬಂಧನೆಗಳನ್ನು ಉಲ್ಲಂಘಿಸಿ ಕಟ್ಟಡಗಳನ್ನು ಸುರಕ್ಷತಾ ಅಂತರ ಕಾಪಾಡದೆ ನಿರ್ಮಿಸುವುದು, ನಿರ್ಮಿಸಿರುವ ಕಟ್ಟಡಗಳಲ್ಲಿ ವಾಸಿಸುತ್ತಿರುವುದು ಹಾಗೂ ನಿಯಮಬಾಹಿರವಾಗಿ ನಿರ್ಮಿಸಿರುವ ಕಟ್ಟಡಗಳ ಛಾವಣಿಗಳ ಮೇಲೆ ಇತರೆ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿರುವುದು, ವಿದ್ಯುತ್ ಗೋಪುರಗಳಿಗೆ ಹೊಂದಿಕೊಂಡಂತೆ ಕಟ್ಟಡಗಳನ್ನು/ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸುವುದು ಮತ್ತು ಗೋಪುರಗಳಿಗೆ ಬ್ಯಾನರ್‌ಗಳು ಮತ್ತು ಬಂಟಿಂಗ್‌ಳನ್ನು ಕಟ್ಟುವುದು, ವಿದ್ಯುತ್ ಮಾರ್ಗಗಳ ಸನಿಹದಲ್ಲಿ ಗಾಳಿಪಟ ಹಾರಿಸುವುದು ಮತ್ತು ಬಟ್ಟೆಗಳನ್ನು ಒಣಗಿಸುವುದು ಅತ್ಯಂತ ಅಪಾಯಕಾರಿಯಾಗಿರುತ್ತದೆ. ಆದ್ದರಿಂದ ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ–2023 ಅಧಿನಿಯಮಗಳನುಸಾರ ಅಧಿಕ ಒತ್ತಡ ವಿದ್ಯುತ್ ಮಾರ್ಗಗಳಿಂದ ಕನಿಷ್ಟ ಸಮಾನಾಂತರವನ್ನು ಕಡ್ಡಾಯವಾಗಿ ಪಾಲಿಸುವುದು ಎಲ್ಲಾ ಸಾರ್ವಜನಿಕರ ಹೊಣೆಯಾಗಿದ್ದು, ಸುರಕ್ಷತಾ ದೃಷ್ಟಿಯಿಂದ ಅಸುರಕ್ಷಿತ ಕಟ್ಟಡದ ಭಾಗಗಳನ್ನು ತೆರವುಗೊಳಿಸಲು ಕೋರಲಾಗಿದೆ ಮತ್ತು ಅಧಿಕ ವಿದ್ಯುತ್ ಮಾರ್ಗಗಳ ಕೆಳಗೆ ಯಾವುದೇ ಕಾರಣಕ್ಕೂ ಕಟ್ಟಡಗಳನ್ನು/ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸುವುದು ಕಾನೂನುಬಾಹಿರವಾಗಿರುತ್ತದೆ ಹಾಗೂ ಅಧಿಕ ವಿದ್ಯುತ್ ಮಾರ್ಗಗಳ ಆಸುಪಾಸಿನಲ್ಲಿ ನಿರ್ಮಿಸಲಾಗುವ ಕಟ್ಟಡಗಳಿಗೆ ಕನಿಷ್ಟ ಸಮಾನಾಂತರವನ್ನು, ಈ ಕೆಳಗೆ ತಿಳಿಸಿರುವಂತೆ ಸುರಕ್ಷತಾ ಅಂತರವನ್ನು ಕಾಪಾಡಲು ಮತ್ತು ಮೇಲೆ ತಿಳಿಸಿರುವ ಅಸುರಕ್ಷತಾ ಚಟುವಟಿಕೆಗಳನ್ನು ಮಾಡದಂತೆ ಕೋರಲಾಗಿದೆ.

ಕ್ರ. ಸಂ.	ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ–2023 (ಸುರಕ್ಷತೆ ಮತ್ತು ವಿದ್ಯುತ್ ಸರಬರಾಜು ನಿಯಮಗಳಿಗೆ ಸಂಬಂಧಿಸಿದ ಕ್ರಮಗಳು), CEA Regulations 2023	ವೋಲ್ಟೇಜ್ ಕೆ.ವಿ ಯಲ್ಲಿ	ಕಟ್ಟಡದ ಯಾವುದೇ ಭಾಗಕ್ಕೂ ಹಾಗೂ ಹತ್ತಿರದ ವಾಹಕಕ್ಕೂ, ಗಾಳಿಯ ಒತ್ತಡದಿಂದಾಗಿ ಗರಿಷ್ಟ ವಿಚಲನದ ಆಧಾರದ ಮೇಲೆ ಕನಿಷ್ಟ ನಿಗದಿಪಡಿಸಿರುವ ಸಮಾನಾಂತರ ಅಂತರವನ್ನು ಕಾಯ್ದುಕೊಳ್ಳುವುದು
1	Clause-63 (1)	66	“ಅಸ್ತಿತ್ವದಲ್ಲಿರುವ ಅಧಿಕ ಒತ್ತಡ ಪ್ರಸರಣ ಮಾರ್ಗದ ಕೆಳಗೆ ಯಾವುದೇ ಕಟ್ಟಡವನ್ನು ನಿರ್ಮಿಸಬಾರದು”
		220	
		400	
2	Clause-63 (3)	66	2.3 ಮೀಟರ್‌ಗಳು
		220	
		400	5.6 ಮೀಟರ್‌ಗಳು

ನಿಯಮಬಾಹಿರವಾಗಿ ನಿರ್ಮಿಸಿರುವ/ನಿರ್ಮಿಸುತ್ತಿರುವ ಕಟ್ಟಡಗಳು ಹಾಗೂ ಅಸುರಕ್ಷಿತ ಚಟುವಟಿಕೆಗಳಿಂದ ಆಗುವ ವಿದ್ಯುತ್ ಅಪಘಾತಗಳಿಂದ ಸಾರ್ವಜನಿಕರಿಗೆ ಪ್ರಾಣಹಾನಿ ಹಾಗೂ ಆಸ್ತಿಪಾಸ್ತಿ ನಷ್ಟವಾದಲ್ಲಿ ಹಾಗೂ ಇನ್ನಿತರೆ ಯಾವುದೇ ಅವಘಡಗಳಿಗೆ ಕವಿಪ್ರನಿನಿಯು ಯಾವುದೇ ರೀತಿಯ ಜವಾಬ್ದಾರಿಯಾಗಿರುವುದಿಲ್ಲ ಹಾಗೂ ಇಂತಹ ಅವಘಡಗಳಿಗೆ ಸಂಬಂಧಪಟ್ಟ ಕಟ್ಟಡಗಳ ಮಾಲೀಕರು/ಕಟ್ಟಡದಲ್ಲಿ ವಾಸಿಸುತ್ತಿರುವವರು ಮತ್ತು ಈ ರೀತಿಯ ಕಟ್ಟಡಗಳಿಗೆ ಅಗತ್ಯ ಸೌಕರ್ಯ ಕಲ್ಪಿಸುವ ಇಲಾಖೆಗಳೆ ನೇರ ಹೊಣೆಯಾಗಿರುತ್ತಾರೆ ಎಂದು ಈ ಮೂಲಕ ತಿಳಿಸಿದೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಈ ಪ್ರಕಟಣೆ ನೀಡಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್),
ಕಾರ್ಯಾಚರಣೆ ವಿಭಾಗ, ಕವಿಪ್ರನಿನಿ, ಹೂಡಿ, ಬೆಂಗಳೂರು–560 048.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬಿಡಿಎ/ಕಾಅ/ಉತ್ತರ/ಟೆಂಡರ್/ಟಿ–2048/2025–26 ದಿನಾಂಕ: 19.01.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ http://kppp.karnataka.gov.in ಮೂಲಕ)

ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಉತ್ತರ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಇವರು **“ಕಾಚರಕನಹಳ್ಳಿ, ವಾರ್ಡ್ ಸಂಖ್ಯೆ 76ರ ಹಂತ–2ರಲ್ಲಿರುವ ಮೈದಾನದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಾಣಕ್ಕಾಗಿ ಡಿಪಿಆರ್ ಸಿದ್ಧಪಡಿಸಲು ಸಲಹಾ ಸೇವೆಗಾಗಿ”** ಅರ್ಹ ಸಲಹಾಸೇವಾದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ಗಿಟ್ಟ ಅಂದಾಜು ಮೊತ್ತ: **ರೂ.28.79 ಲಕ್ಷಗಳು.** ಇಎಂಡಿ:**ರೂ.57,580/–.** ಹೆಚ್ಚಿನ ವಿವರಗಳಿಗೆ, ದಯವಿಟ್ಟು **http://kppp.karnataka.gov.in** ಗೆ ಲಾಗ್‌ಆನ್ ಆಗಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ ಸಂಖ್ಯೆ: 080–46010000/68948777ಗೆ ಕರೆಮಾಡಿ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಉತ್ತರ ವಿಭಾಗ, ಬಿಡಿಎ, ಬೆಂಗಳೂರು.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು–560011.

ಸಂಖ್ಯೆ:ಕಾಅಂ/ಸನೀ/ಸ.ಇಂ–1/ಟೆಂಡರ್ ಪ್ರಕಟಣೆ ಸಂ : 27/2025–26 ದಿನಾಂಕ: 19.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರು ಲೆಕ್ಕ ಶೀರ್ಷಿಕೆ 4702-MOT & 4702-A &B ಕಾಮಗಾರಿಗಳು ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡಂತೆ ಕಾಮಗಾರಿಗೆ ಕೆಟಿಪಿಪಿ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-2, 3, & 4 ರ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ ಕೆಪಿಪಿ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.

ಕಾಮಗಾರಿಯ ಹೆಸರು :– ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಚನ್ನಪಟ್ಟಣ ತಾಲ್ಲೂಕುಗಳಲ್ಲಿ ಕೆರೆಯ ಅಭಿವೃದ್ಧಿ ಕಾಮಗಾರಿ, ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ, ಕೆರೆಯ ಕೋಡಿ ಕಾಲುವೆಗೆ ಅಡ್ಡಲಾಗಿ ಕಲ್ವರ್ಟ್ ನಿರ್ಮಾಣ ಕಾಮಗಾರಿಗಳು ಒಳಗೊಂಡಂತೆ **ಒಟ್ಟು 03 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**

ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.40.32 (ಕನಿಷ್ಠ) & ರೂ.749.46 (ಗರಿಷ್ಠ)** ಇಎಂಡಿ: **ರೂ.80,700 (ಕನಿಷ್ಠ) & ರೂ.11,24,200/– (ಗರಿಷ್ಠ).**

ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 04 ರಿಂದ 11 ತಿಂಗಳು ಮಳೆಗಾಲ ಸೇರಿದಂತೆ.

(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವಧಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)

(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **19.01.2026 ಸಂಜೆ 16.30** ಗಂಟೆಯ ನಂತರ, (2) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **03.02.2026 ಮಧ್ಯಾಹ್ನ 15.00** ಗಂಟೆಯವರೆಗೆ. (3) ಪ್ರಿ ಬಿಡ್ ಸಭೆಯ ದಿನಾಂಕ ಮತ್ತು ಸ್ಥಳ (ವಿಳಾಸ : ಅಧೀಕ್ಷಕ ಅಭಿಯಂತರರ ಕಛೇರಿ, ಜಯನಗರ 4ನೇ ಬ್ಲಾಕ್, ಶಾಪಿಂಗ್ ಕಾಂಪ್ಲೆಕ್ಸ್, 3ನೇ ಮಹಡಿ, ಬೆಂಗಳೂರು.) : **28.01.2026 ಬೆಳಿಗ್ಗೆ 11.30 ಗಂಟೆಗೆ** (4) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **03.02.2026 ಸಂಜೆ 16.30** ಗಂಟೆಯವರೆಗೆ, (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **05.02.2026 ಬೆಳಗ್ಗೆ 11.30** ಗಂಟೆಗೆ, (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**

ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಟ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ– 3 & 4 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ವಾಸಾಸಂಇ/ವಾ.ಪ್ರ/5116/ಎಸ್‌ಎಸ್‌ಸಿ/2025–26

ಸಹಿ/– ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕು.ಕ.ಸಂಘ. ಬೆಂಗಳೂರು ನಗರ ಜಿಲ್ಲೆ
ಹಳೇ ಟಿ.ಬಿ ಆಸ್ಪತ್ರೆ ಆವರಣ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು – 38.
NATIONAL HEALTH MISSION
राष्ट्रीय स्वास्थ्य मिशन

ಸಂಖ್ಯೆ: ಡಿಹೆಚ್‌ಎಸ್/ಬೆಂ.ನ.ಜಿ/ಎನ್‌ಹೆಚ್‌ಎಂ/ಸಿ.ಸಿ.ಬಿ/ನೇಮಕಾತಿ/01/2025–26 ದಿನಾಂಕ: 16.01.2026

ನೇಮಕಾತಿ ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆಯ ಸಿ ವಿ ರಾಮನ್ ಆಸ್ಪತ್ರೆಯಲ್ಲಿನ ಕ್ರಿಟಿಕಲ್ ಕೇರ್ ಘಟಕಕ್ಕೆ ಎನ್‌ಹೆಚ್‌ಎಂ ಯೋಜನೆಯಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ತಜ್ಞ ವೈದ್ಯರ ಮತ್ತು ಶುಶ್ರೂಷಣಾಧಿಕಾರಿಗಳ ಹುದ್ದೆಗಳನ್ನು ಮಾರ್ಗಸೂಚಿಗಳಂತೆ ನಿಯಾಮಾನುಸಾರ ಮೇರಿಟ್ ಕಮ್ ರೋಸ್ಟರ್ ಅನ್ವಯ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ವಿವರಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಕ್ರ ಸ	ಹುದ್ದೆಗಳ ವಿವರ	ವಿದ್ಯಾರ್ಹತೆ	ಮಾಸಿಕ ಸಂಚಿತ ವೇತನ	ಒಟ್ಟು ಹುದ್ದೆಗಳ ಸಂಖ್ಯೆ	ಅಭ್ಯರ್ಥಿ ವೈಯೋಮಿತಿ	ಕಾರ್ಯನಿರ್ವಹಿಸ – ಬೇಕಾದ ಸ್ಥಳ
1	ಜನರಲ್ ಸರ್ಜನ್ ತಜ್ಞ ವೈದ್ಯರು	ಎಂ.ಎಸ್ ಜನರಲ್ ಸರ್ಜರಿ ಮತ್ತು ಕಡ್ಡಾಯವಾಗಿ ಕೆ.ಎಂ.ಸಿ ನೋಂದಣಿ ಹೊಂದಿರಬೇಕು.	1,10,000	01	60 ವರ್ಷ ಒಳಗಿರತಕ್ಕದ್ದು	ಕ್ರಿಟಿಕಲ್ ಕೇರ್ ಘಟಕ, ಸಿ.ವಿ ರಾಮನ್ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು
2	ಜನರಲ್ ಫಿಜಿಷಿಯನ್ ತಜ್ಞ ವೈದ್ಯರು	ಎಂ.ಡಿ ಜನರಲ್ ಮೆಡಿಸಿನ್ ಮತ್ತು ಕಡ್ಡಾಯವಾಗಿ ಕೆ.ಎಂ.ಸಿ ನೋಂದಣಿ ಹೊಂದಿರಬೇಕು.	1,10,000	02	60 ವರ್ಷ ಒಳಗಿರತಕ್ಕದ್ದು	
3	ಅರವಳಿಕೆ ತಜ್ಞ ವೈದ್ಯರು	ಅರವಳಿಕೆಯಲ್ಲಿ ಎಂ.ಡಿ/ಡಿ.ಎನ್.ಬಿ/ ಡಿಪ್ಲೋಮ ಪಧವಿಯೊಂದಿಗೆ ಕೆ.ಎಂ.ಸಿ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರಬೇಕು.	1,10,000	02	60 ವರ್ಷ ಒಳಗಿರತಕ್ಕದ್ದು	
4	ರೇಡಿಯಾಲಜಿ ತಜ್ಞ ವೈದ್ಯರು	ಎಂ.ಡಿ ರೇಡಿಯಾಲಜಿ ಪಧವಿಯೊಂದಿಗೆ ಕೆ.ಎಂ.ಸಿ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರಬೇಕು.	1,10,000	01	60 ವರ್ಷ ಒಳಗಿರತಕ್ಕದ್ದು	
5	ಶುಶ್ರೂಷಣಾಧಿ –ಕಾರಿಗಳು	ಮಾನ್ಯತೆ ಪಡೆದ ನರ್ಸಿಂಗ್ ಶಾಲೆಯಲ್ಲಿ ಜಿಎನ್‌ಎಂ / ಬಿಎಸ್‌ಸಿ ವಿದ್ಯಾರ್ಹತೆ ಹಾಗೂ ಕೆಎನ್‌ಸಿ ನೋಂದಣಿ ಹೊಂದಿ ಕಂಪ್ಯೂಟರ್ ಸಾಕ್ಷರತೆ ಹೊಂದಿರಬೇಕು.	18,714/–	24	45 ವರ್ಷ ಒಳಗಿರತಕ್ಕದ್ದು	

- ಈ ಆಯ್ಕೆಯು / ನೇಮಕಾತಿಯು ಎನ್‌ಹೆಚ್‌ಎಂ ಮಾರ್ಗಸೂಚಿಗಳಂತೆ ರೋಸ್ಟರ್ ಕಮ್ ಮೇರಿಟ್ ಅನ್ವಯ ನೇಮಕಾತಿ ಮಾಡಿಕೊಳ್ಳಲಾಗುವುದು, ಈ ಗುತ್ತಿಗೆ ನೇಮಕಾತಿ ಪ್ರಕ್ರಿಯೆಯಲ್ಲಿ ಅರ್ಹ ಮೀಸಲಾತಿ ಅಭ್ಯರ್ಥಿಗಳು ದೊರೆಯದೇ ಇರುವ ಸಂದರ್ಭದಲ್ಲಿ ಮಾತ್ರ ಸಾಮಾನ್ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು (ಸುತ್ತೋಲೆ ಸಂಖ್ಯೆ: ಆಕುಕ 25 ಎಂಎಸ್‌ಎನ್ 2016 ದಿ:14–03–2016), ಈ ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಯಾದರೂ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.
- ಈ ಮೇಲ್ಕಂಡ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ದಿನಾಂಕ:28–01–2026 ಬೆಳ್ಳಿಗೆ 11:00 ಗಂಟೆಗೆ ನೇರ ಸಂದರ್ಶನಕ್ಕೆ ತಮ್ಮ ಮೂಲ ದಾಖಲೆಗಳೊಂದಿಗೆ ಹಾಗೂ ನಕಲು ಪ್ರತಿಗಳೊಂದಿಗೆ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಛೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಆವರಣ, ಹಳೇ ಟಿ.ಬಿ ಆಸ್ಪತ್ರೆ, ಹಳೇ ಮದ್ರಾಸ್ ರಸ್ತೆ, ಸ್ವಾಮಿ ವಿವೇಕನಂದ ಮೆಟ್ರೋ ನಿಲ್ದಾಣದ ಹತ್ತಿರ, ಇಂದಿರಾನಗರ, ಬೆಂಗಳೂರು–38 ಇಲ್ಲಿಗೆ ಹಾಜರಾಗುವುದು ಹಾಗೂ ಈ ನೇಮಕಾತಿ ಪ್ರಕಟಣೆಯು ರೋಲಿಂಗ್ ಪ್ರಕಟಣೆ ಆಗಿರುವುದರಿಂದ ನಿಗದಿಪಡಿಸಿರುವ ನೇರ ಸಂದರ್ಶನದ ದಿನಾಂಕದಂದು ಭರ್ತಿ ಹಾಗದೆ ಇರುವ ಹುದ್ದೆಗಳನ್ನು ನಂತರ ಅರ್ಜಿ ಸಲ್ಲಿಸಿ ಸಂದರ್ಶನದ ಮುಖಾಂತರ ಹುದ್ದೆಗಳನ್ನು ಆಯ್ಕೆ ಮಾಡಲಾಗುವುದು, ಇದರ ಅವಧಿಯು ದಿ:31–03–2026ರ ವರೆಗೆ ಇರುತ್ತದೆ.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕು ಕ ಅಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ

ಡಿಐಪಿಆರ್/ಸಿಪಿ/5112/ಸಿಸಿಎಲ್/2025–26

CBC 35101/13/0066/2526
125 ದಿನಗಳ
ವೇತನ ಖಾತರಿ ಉದ್ಯೋಗ
ವಿಕಸಿತ ಭಾರತ – ಉದ್ಯೋಗ ಖಾತರಿ ಮತ್ತು ಆಜೀವಿಕ ಮಿಷನ್ (ಗ್ರಾಮೀಣ): ವಿಬಿ – ಜಿ ರಾಮ್ ಜಿ
(ವಿಕಸಿತ ಭಾರತ್ – ಜಿ ರಾಮ್ ಜಿ) ಕಾಯ್ದೆ, 2025
ಆಯಾ ಗ್ರಾಮದ ಗ್ರಾಮಸ್ಥರೇ ವಿಕಸಿತ ಗ್ರಾಮ ಪಂಚಾಯಿತಿ ಯೋಜನೆಯನ್ನು ಸಾಕಾರಗೊಳಿಸುತ್ತಾರೆ
ಗ್ರಾಮ ಪಂಚಾಯತಿಗಳ ಅಭಿವೃದ್ಧಿಯಿಂದಲೇ 'ವಿಕಸಿತ ಭಾರತ' ನಿರ್ಮಾಣ ಸಾಧ್ಯ

ಹೆಬ್ಬಾಳ: ತಾಳ ತಪ್ಪಿದ ಸಂಚಾರ

ಬೆಳಿಗ್ಗೆ, ಸಂಜೆ ದಟ್ಟಣೆ: ತಾಸುಗಟ್ಟಲೆ ರಸ್ತೆಯಲ್ಲೇ ಕಳೆಯಬೇಕಾದ ದುಃಸ್ಥಿತಿ

• ಬಾಲಕೃಷ್ಣ ಪಿ.ಎಚ್.

ಸಂಚಾರ ಸಂಕಟ

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆಯ ಲೂಪ್ ರ್‍ಯಾಂಪ್‌ನಲ್ಲಿ ಸಂಚಾರ ಆರಂಭವಾದ ಬಳಿಕ ಅಲ್ಲಿ ದಟ್ಟಣೆ ಕಡಿಮೆಯಾಗಿ ಮೇಖ್ರಿ ಸರ್ಕಲ್ ಕಡೆಗೆ ವಿಸ್ತರಣೆಗೊಂಡಿದೆ. ಮೇಲ್ಸೇತುವೆಯಲ್ಲಿ ವಾಹನಗಳು ಸುಗಮವಾಗಿ ಸಾಗಿದರೂ ಇಳಿಯುವ ಪ್ರದೇಶದಲ್ಲಿ ವಿಪರೀತ ದಟ್ಟಣೆ ಉಂಟಾಗುತ್ತಿದೆ. ಬ್ಯಾಪ್ಟಿಸ್ಟ್ ಆಸ್ಪತ್ರೆ ಬಳಿ ಬಸ್ ನಿಲ್ಲಿಸಲೂ ಅವಕಾಶ ಸಿಗದಷ್ಟು ದಟ್ಟಣೆ ಇದೆ.

ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ಬಳ್ಳಾರಿ ರಸ್ತೆಯ ಹೆಬ್ಬಾಳ ಮೇಲ್ಸೇತುವೆ ಮೇಲೆ ನಿತ್ಯ 4 ಲಕ್ಷಕ್ಕೂ ಅಧಿಕ ವಾಹನಗಳು ಸಂಚರಿಸುತ್ತವೆ. ಸರ್ವಿಸ್ ರಸ್ತೆ ಮಾತ್ರವಲ್ಲ, ಮೇಲ್ಸೇತುವೆಯಲ್ಲೂ ವಾಹನಗಳು ಸಾಗುವುದು ಕಷ್ಟವಾಗಿತ್ತು. ತಿಂಗಳ ಹಿಂದೆ ಎರಡನೇ ಲೂಪ್ ರ್‍ಯಾಂಪ್ ಸಂಚಾರಕ್ಕೆ ತೆರೆದುಕೊಂಡ ಬಳಿಕ ಇಲ್ಲಿ ದಟ್ಟಣೆಯ ಪ್ರಮಾಣವು ಶೇ 25ರಷ್ಟು ಕಡಿಮೆಯಾಗಿತ್ತು.

ಯಲಹಂಕ, ಸಹಕಾರನಗರ, ಜಕ್ಕೂರು, ತುಮಕೂರು ರಸ್ತೆಯ ವಾಹನಗಳು ನಗರ ಪ್ರವೇಶಿಸಲು ಇದರಿಂದ ಅನುಕೂಲ ಆಗಿದೆ. ಅಲ್ಲದೇ ಎಸ್ಟೀಮ್ ಮಾಲ್ ಮತ್ತು ತುಮಕೂರು ರಸ್ತೆಯಿಂದ ಬರುವ ವಾಹನ ಸವಾರರಿಗೆ ಮೇಖ್ರಿ ವೃತ್ತ ಪ್ರವೇಶಕ್ಕೂ ಸಹಕಾರಿಯಾಗಿದೆ. ಆದರೆ, ಮೇಲ್ಸೇತುವೆ ಮುಕ್ತಾಯಗೊಂಡು, ಸರ್ವಿಸ್ ರಸ್ತೆ ಸಂಪರ್ಕಿಸುವ ಸಿಬಿಐ ವೃತ್ತದ ಜಂಕ್ಷನ್ ಬಳಿ ವಾಹನಗಳು ಸರಾಗವಾಗಿ ಸಂಚರಿಸಲಾಗದೇ ದಟ್ಟಣೆಯಲ್ಲಿ ಸಿಲುಕುತ್ತಿವೆ.

ಸೋಮವಾರ, ಶುಕ್ರವಾರ ವಾಹನಗಳ ಸಂಚಾರ ತುಂಬಾ ಇರುತ್ತದೆ. ಮಂಗಳವಾರ ಮತ್ತು ಶನಿವಾರ ನಂತರದ ಸ್ಥಾನದಲ್ಲಿವೆ. ಬುಧವಾರ, ಗುರುವಾರ, ಭಾನುವಾರ ಮಾತ್ರ ದಟ್ಟಣೆ ಕಡಿಮೆ ಇರುತ್ತದೆ. ಲೂಪ್ ರ್‍ಯಾಂಪ್ ಒಳಗೊಂಡಂತೆ ಮೇಲ್ಸೇತುವೆಯಲ್ಲಿ ಬರುವ ವಾಹನಗಳು ಸಿಬಿಐ ವೃತ್ತದ ಜಂಕ್ಷನ್ ಬಳಿ ಇಳಿದ ಮೇಲೆ ಸಮಸ್ಯೆ ಮುಂದುವರಿಯುತ್ತಿದೆ. ಹರಸಾಹಸಪಟ್ಟರೂ ಪಾದಚಾರಿಗಳು ರಸ್ತೆ ದಾಟಲು ಸಾಧ್ಯವಾಗುತ್ತಿಲ್ಲ. ಕಿಲೋಮೀಟರ್‌ನಷ್ಟು ನಡೆದುಕೊಂಡು ಪಾದಚಾರಿ ಮೇಲ್ಸೇತುವೆಯತ್ತ ತಲುಪಿ ದಾಟುವಂತಾಗಿದೆ.

ಬ್ಯಾಪ್ಟಿಸ್ಟ್ ಆಸ್ಪತ್ರೆ ದಾಟಿ, ಗಂಗಾನಗರ, ಮೇಖ್ರಿ ಸರ್ಕಲ್ ಕಡೆಗೆ ಬರುವಾಗ ರಸ್ತೆಯಲ್ಲಿ ವಾಹನಗಳು ಜಲಾವೃತಗೊಂಡಂತೆ ತುಂಬಿರುತ್ತವೆ. ಮೇಖ್ರಿ ವೃತ್ತದಲ್ಲಿ ಎಡ, ಬಲಕ್ಕೆ ತಿರುಗುವ ವಾಹನಗಳು ಹೆಚ್ಚಾಗಿದ್ದು, ಇಲ್ಲಿ ವಾಹನಗಳು ಸಾಲುಗಟ್ಟಿ ನಿಂತು ಸಾಗುತ್ತವೆ.

'ಈ ರಸ್ತೆಯಲ್ಲಿ ದಟ್ಟಣೆ ಅವಧಿಯಲ್ಲಿ ಪ್ರತಿ ಗಂಟೆಗೆ 50 ಸಾವಿರಕ್ಕೂ ಅಧಿಕ ವಾಹನಗಳು ಸಂಚರಿಸುತ್ತವೆ. ಎರಡು ಕಿ.ಮೀ. ದಾಟಲು ಅರ್ಧ ತಾಸಿಗೂ ಹೆಚ್ಚು ಸಮಯ ಹಿಡಿಯುತ್ತಿತ್ತು. ಈಗ ಎರಡೂ ಕಡೆಗೆ ಲೂಪ್ ರ್‍ಯಾಂಪ್‌ಗಳು ತೆರೆದ ಬಳಿಕ ಸಂಚಾರದಲ್ಲಿ ಹಿಂದಿನಷ್ಟು ತೊಡಕು ಇಲ್ಲ. ಸಂಚಾರದ ವೇಗ ಎರಡು ಪಟ್ಟು ಹೆಚ್ಚಾಗಿದೆ. ಆದರೆ, ಯಾವುದಾದರೂ ಒಂದು ವಾಹನ ಕೆಟ್ಟು ನಿಂತರೆ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಗೆ ಬ್ಯಾಟರಾಯನಪುರ ದಾಟಿ ಮುಂದಿನವರೆಗೆ ಬ್ಲಾಕ್ ಆಗಿ ಬಿಡುತ್ತದೆ. ನಗರದ ಕಡೆಗೆ ಮೇಖ್ರಿ ಸರ್ಕಲ್, ಪ್ಯಾಲೆಸ್ ಗುಟ್ಟಹಳ್ಳಿವರೆಗೂ ವಾಹನಗಳು ನಿಂತು ಬಿಡುತ್ತವೆ. ಜಿಕೆವಿಕೆ ಕ್ರಾಸ್ ಮೂಲಕ ಜಕ್ಕೂರು ಕಡೆಗೆ ಹಾದುಹೋಗುವ ರಸ್ತೆಯಲ್ಲೂ ಇದರ ಪರಿಣಾಮ ಉಂಟಾಗುತ್ತದೆ. ಸಾಲದೆಂಬಂತೆ ಕೆ.ವಿ.ಜಯರಾಂ ರಸ್ತೆಯ ಪಕ್ಕದಲ್ಲಿ ಶನೈಶ್ಚರಸ್ವಾಮಿ ದೇವಾಲಯದ ಸಮೀಪ ಕೋಳಿ ಸಾಗಾಣಿಕೆ ವಾಹನಗಳನ್ನು ರಸ್ತೆ ಬದಿಯಲ್ಲೇ ನಿಲ್ಲಿಸುತ್ತಿರುವುದರಿಂದ ಜಕ್ಕೂರು ರಸ್ತೆಯಲ್ಲಿಯೂ ದಟ್ಟಣೆ ಹೆಚ್ಚಾಗಿದೆ' ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಸೇರಿದಂತೆ ಹಲವು ಭಾಗಗಳಿಂದ ನಗರಕ್ಕೆ ಬರುವ ನೂರಾರು ಬಸ್‌ಗಳು, ಸಾವಿರಾರು ಕಾರುಗಳು ಆಮೆಗತಿಯಲ್ಲಿ ಸಾಗುತ್ತವೆ ಎಂದು ವಿವರಿಸಿದರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಪರ್ಕಿಸುವ ಬಳ್ಳಾರಿ ರಸ್ತೆಯ ಹೆಬ್ಬಾಳದಲ್ಲಿ ಮೇಲ್ಸೇತುವೆ ಪ್ರವೇಶಿಸುವ ಜಾಗದಲ್ಲಿ ಇರುವೆಗಳಂತೆ ನಿಂತಿದ್ದ ವಾಹನಗಳು ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬಹುಮಾದರಿ ಸಾರಿಗೆ ಹಬ್ ಯಾವಾಗ?

ರೈಲು, ಮೆಟ್ರೊ ರೈಲು, ಉಪನಗರ ರೈಲು, ಬಿಎಂಟಿಸಿ ಬಸ್‌ಗಳು ಹಾದು ಹೋಗುವ ಹೆಬ್ಬಾಳದಲ್ಲಿ ಬಹುಮಾದರಿ ಸಾರಿಗೆ 'ಹಬ್' ನಿರ್ಮಿಸಲು ಬಿಎಂಆರ್‌ಸಿಎಲ್ ಪ್ರಸ್ತಾವ ಸಲ್ಲಿಸಿ ವರ್ಷಗಳೇ ಕಳೆದಿವೆ. ಬಿಎಂಆರ್‌ಸಿಎಲ್ 45 ಎಕರೆ ಜಮೀನು ಕೇಳಿದ್ದರೆ, 10 ಎಕರೆ ನೀಡುವ ಬಗ್ಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಲ್ಲಿ ಚರ್ಚೆಯಾಗಿತ್ತು. ಬಳಿಕ ಈ ಪ್ರಸ್ತಾವ ಅಲ್ಲಿಗೆ ನಿಂತಿದೆ.

ಹೆಬ್ಬಾಳ ಮತ್ತು ಹೆಬ್ಬಾಳ ಅಮಾನಿಕೆರೆಯಲ್ಲಿ ಬಹುಮಾದರಿ ಸಾರಿಗೆ ಸಂಪರ್ಕ ಕೇಂದ್ರ (ಹಬ್) ನಿರ್ಮಿಸಿದರೆ ವಾಹನ ದಟ್ಟಣೆ ಕಡಿಮೆಯಾಗಲಿದೆ. ಜಮೀನು ಒದಗಿಸಿಕೊಟ್ಟರೆ ಬಹು ಹಂತದ ಕಾರು ಪಾರ್ಕಿಂಗ್, ಆಧುನಿಕ ಡಿಪೊ ಮತ್ತು ಇತರ ಸಂಬಂಧಿತ ಮೂಲಸೌಕರ್ಯಗಳನ್ನು ಕಲ್ಪಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಪ್ರಸ್ತಾವದಲ್ಲಿ ತಿಳಿಸಿತ್ತು. ಆದರೆ, ಈ ನಿಟ್ಟಿನಲ್ಲಿ ಯಾವುದೇ ಪ್ರಗತಿಯಾಗಿಲ್ಲ. ಸಂಚಾರ ದಟ್ಟಣೆಯ ಸಮಸ್ಯೆ ಮುಂದುವರಿದಿದೆ ಎಂದು ಸ್ಥಳೀಯರು ದೂರಿದರು.

'ಮೇಲ್ಸೇತುವೆ ನಿರ್ಮಿಸಲಿ'

ಸಮಸ್ಯೆ ಬಗೆಹರಿಸುವುದು ಹೇಗೆ ಎಂದು ರಾಜಕಾರಣಿಗಳು ಯೋಚಿಸುತ್ತಿಲ್ಲ. ದುಡ್ಡು ಹೇಗೆ ದೋಚಬಹುದು ಎಂದು ಯೋಚಿಸುತ್ತಾರೆ. ಹೆಬ್ಬಾಳದಿಂದ ಮೇಖ್ರಿ ಸರ್ಕಲ್‌ವರೆಗೆ ಮೇಲ್ಸೇತುವೆ ನಿರ್ಮಿಸಿದರೆ ಸಮಸ್ಯೆ ಕಡಿಮೆಯಾಗಲಿದೆ. ಆದರೆ, ಅಧಿಕಾರಿಗಳಿಗಾಗಲಿ, ಜನಪ್ರತಿನಿಧಿಗಳಿಗಾಗಲಿ ಇದು ಬೇಕಾಗಿಲ್ಲ. ಅವರು ಸುರಂಗ ಮಾರ್ಗ ಎಂದು ಜನರಿಗೆ ಉಪಯೋಗವಾಗದ ಯೋಜನೆಗಳ ಬಗ್ಗೆ ಯೋಚಿಸುತ್ತಾರೆ. ರಿಂಗ್ ರೋಡ್‌ನಿಂದಲೂ ವಾಹನಗಳು ಬರುತ್ತವೆ. ಬಸ್ ನಿಲ್ಲಲೂ ಜಾಗವಿಲ್ಲದಂತಾಗಿದೆ. ಹಿರಿಯ ನಾಗರಿಕರು ರಸ್ತೆ ದಾಟಲು ಪಾದಚಾರಿ ಮೇಲ್ಸೇತುವೆ ಎಲ್ಲಿದೆ ಎಂದು ಹುಡುಕಿಕೊಂಡು ಬರಬೇಕಿದೆ. ರಸ್ತೆ ದಾಟುವುದಕ್ಕಾಗಿ ನಾನು ಒಂದು ಕೀ.ಮೀ. ದೂರದಿಂದ ನಡೆದುಕೊಂಡು ಬಂದೆ. ಈಗಿನ ಸ್ಥಿತಿ ನೋಡಿದರೆ ದಶಕ ಕಳೆದರೂ ಸಮಸ್ಯೆಗಳು ಬಗೆಹರಿಯುವುದಿಲ್ಲ.

ಸಿದ್ದಲಿಂಗಯ್ಯ, ಶಿವಶಂಕರ ಬ್ಲಾಕ್, ಹೆಬ್ಬಾಳ

'ಪರ್ಯಾಯ ರಸ್ತೆ ಮಾಡಿದರಷ್ಟೆ ಪರಿಹಾರ'

ಬೆಳಿಗ್ಗೆ 8ರಿಂದ ಮಧ್ಯಾಹ್ನ 12ರವರೆಗೆ ನಿತ್ಯ ದಟ್ಟಣೆ ಇರುತ್ತದೆ. ಸಂಜೆ 4ರಿಂದ ರಾತ್ರಿ 9ರವರೆಗೂ ಇದೇ ರೀತಿ ಇರುತ್ತದೆ. ಇಲ್ಲಿಂದ ಮುಂದಕ್ಕೆ ಇರುವುದು ಸರ್ಕಾರಿ ಜಾಗ. ಆದರೆ, ಹಿಂದೆ ಎಂಜಿನಿಯರ್‌ಗಳು ಮೇಲ್ಸೇತುವೆ ನಿರ್ಮಿಸುವ ಯೋಜನೆಯನ್ನು ರೂಪಿಸದೇ ಇದ್ದಿದ್ದರಿಂದ ಸಮಸ್ಯೆಯಾಗಿದೆ. ಮಳೆಗಾಲದಲ್ಲಿ ಇಲ್ಲಿ ನೀರು ನಿಂತು ವಾಹನಗಳು ಸಂಚರಿಸುವುದೇ ಕಷ್ಟವಾಗಿ ಬಿಡುತ್ತದೆ. ವಿಮಾನ ನಿಲ್ದಾಣಕ್ಕೆ ಪರ್ಯಾಯ ರಸ್ತೆ ಮಾಡಿದರೆ ಮಾತ್ರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.



ಜಿ.ಎಂ. ಮಹಾದೇವಪ್ಪ, ಹಿರಿಯ ಕಮಾಂಡರ್, ಗೃಹರಕ್ಷಕದಳ

'ವೇಮನ ಸಾಹಿತ್ಯ ಬದುಕಿಗೆ ಹತ್ತಿರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾಯೋಗಿ ವೇಮನ ಅವರ ಸಾಹಿತ್ಯ ಬದುಕಿಗೆ ಹತ್ತಿರವಾಗಿದ್ದು, ಇದರಲ್ಲಿ ಸ್ವರ್ಗ ಮತ್ತು ನರಕದ ಬಗ್ಗೆ ಪ್ರಸ್ತಾಪ ಮಾಡಿಲ್ಲ' ಎಂದು ಎರೆಹೊಸಹಳ್ಳಿ ರೆಡ್ಡಿ ಗುರು ಪೀಠದ ವೇಮನಾನಂದ ಸ್ವಾಮೀಜಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೋಮವಾರ ಆಯೋಜಿಸಿದ್ದ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.

ಆಂಧ್ರಪ್ರದೇಶದಲ್ಲಿ ಜನಿಸಿದ ವೇಮನ ಅವರು ತೆಲುಗು ಭಾಷೆಯಲ್ಲಿ ಅಂದಾಜು 15 ಸಾವಿರ ಪದ್ಯಗಳನ್ನು ರಚಿಸಿದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಮುಖ್ಯ ಅಧೀಕ್ಷಕರಾಗಿದ್ದ ಎಸ್.ಆರ್. ಪಾಟೀಲ ಅವರು ತೆಲುಗು ಕಲಿತು, ಅವರ ಐದು ಸಾವಿರಕ್ಕೂ ಹೆಚ್ಚು ಪದ್ಯಗಳನ್ನು ಕನ್ನಡಕ್ಕೆ ಅನುವಾದ ಮಾಡಿದರು ಎಂದು ತಿಳಿಸಿದರು.

ಮಹಾಯೋಗಿಯ ಬಗ್ಗೆ ಸಾಕಷ್ಟು ಸಂಶೋಧನೆಗಳು ನಡೆದಿವೆ. ಆದರೆ, ಪಾಶ್ಚಿಮಾತ್ಯರು ಹೆಚ್ಚು ಸಂಶೋಧನೆ ಮಾಡಿದ್ದಾರೆ. ಶರಣ ಸಾಹಿತ್ಯ, ದಾಸ ಸಾಹಿತ್ಯದಂತೆ ವೇಮನ ಸಾಹಿತ್ಯವೂ ಹೆಚ್ಚು ಹೆಸರುವಾಸಿಯಾಗಲಿ. ಇತಿಹಾಸ ತಿಳಿದುಕೊಳ್ಳದೇ, ಭವಿಷ್ಯ ನಿರ್ಮಿಸಿ ಕೊಳ್ಳಲು ಆಗುವುದಿಲ್ಲ. ಇದನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು ಎಂದರು.

ಉಪನ್ಯಾಸ ನೀಡಿದ ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಉಪ ಆಯುಕ್ತ ಗೋವಿಂದ ಬ.ಗೌಡಪ್ಪಗೋಳ, '1412ರಲ್ಲಿ ಜನಿಸಿದ ವೇಮನರು ತತ್ವಜ್ಞಾನಿ ಮತ್ತು ಸಮಾಜ ಸುಧಾರಕರಾಗಿದ್ದರು. ಅವರ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಸುಂದರ ಸಮಾಜ ನಿರ್ಮಾಣ ಸಾಧ್ಯ. ಜೀವನದಲ್ಲಿ ಎಲ್ಲವನ್ನೂ ತ್ಯಾಗ ಮಾಡಿ, ದಿಗಂಬರರಾಗಿ ದೇಶ ಸಂಚಾರ ಮಾಡಿದರು' ಎಂದು ನುಡಿದರು.

ಇದಕ್ಕೂ ಮುನ್ನ ಬಸವರಾಜು ಮತ್ತು ತಂಡದವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಹಡ್ಸನ್ ವೃತ್ತದಿಂದ ರವೀಂದ್ರ ಕಲಾಕ್ಷೇತ್ರದವರೆಗೆ ವೇಮನರ ಭಾವಚಿತ್ರದ ಮೆರವಣಿಗೆ ಮಾಡಲಾಯಿತು. ಜಾನಪದ ಕಲಾತಂಡಗಳು ಪಾಲ್ಗೊಂಡಿದ್ದವು.

ಕರ್ನಾಟಕ ರೆಡ್ಡಿ ಜನಸಂಘದ ಅಧ್ಯಕ್ಷ ಎಸ್.ಜಯರಾಮ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಎನ್.ಶೇಖರ್ ರೆಡ್ಡಿ ಮಾತನಾಡಿದರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕರಾದ ಬಲವಂತರಾವ್ ಪಾಟೀಲ, ಬನಶಂಕರಿ ಅಂಗಡಿ ಇದ್ದರು.

ನಗರದಲ್ಲಿ ನಡೆದ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮದಲ್ಲಿ (ಎಡದಿಂದ) ಎನ್. ಶೇಖರ್ ರೆಡ್ಡಿ, ವೇಮನಾನಂದ ಸ್ವಾಮೀಜಿ, ಎಸ್. ಜಯರಾಮರೆಡ್ಡಿ, ಬನಶಂಕರಿ ಅಂಗಡಿ, ರಾಮಲಿಂಗಾರೆಡ್ಡಿ ಅವರು ವೇಮನ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

'ಆತ್ಮಜ್ಞಾನದ ತತ್ವ ಸಾರಿದ ಮಹಾಯೋಗಿ'

ಯಲಹಂಕ: 'ಜಾತಿ ಪದ್ಧತಿ ಮತ್ತು ಮೂಢನಂಬಿಕೆಗಳನ್ನು ಖಂಡಿಸಿ, ಸಾಮಾಜಿಕ ಸಮಾನತೆ ಮತ್ತು ಆತ್ಮಜ್ಞಾನದ ಕುರಿತು ಸಮಾಜ ಸುಧಾರಣಾ ತತ್ವ, ಸಂದೇಶಗಳನ್ನು ನೀಡಿದ ಮಹಾಪುರುಷ ಮಹಾಯೋಗಿ ವೇಮನರು ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಬಣ್ಣಿಸಿದರು.

ತಾಲ್ಲೂಕು ಆಡಳಿತದ ಆಶ್ರಯದಲ್ಲಿ ಮಿನಿ ವಿಧಾನಸೌಧದಲ್ಲಿ ಆಯೋಜಿಸಿದ್ದ ಮಹಾಯೋಗಿ ವೇಮನರ 614ನೇ ಜಯಂತ್ಯುತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಶ್ರೀಮಂತ ಕುಟುಂಬದಲ್ಲಿ ಜನಿಸಿದ ವೇಮನರು, ಯೌವನದಲ್ಲಿ ಭೋಗಾಸಕ್ತರಾಗಿ ನಂತರ ವೈರಾಗ್ಯ ಹೊಂದಿ, ಗುರುವಿನ ಮಾರ್ಗದರ್ಶನದಿಂದ ಜ್ಞಾನೋದಯ ಪಡೆದು ಯೋಗಮಾರ್ಗದಲ್ಲಿ ಸಾಗಿ ಮಹಾಯೋಗಿಯಾದರು. ಜಾತಿ ವ್ಯವಸ್ಥೆಯನ್ನು ಖಂಡಿಸಿ ಎಲ್ಲರೂ ಸಮಾನರು ಎಂದರು' ಎಂದರು.

ತಹಶೀಲ್ದಾರ್ ಶ್ರೇಯಸ್.ಜಿ.ಎಸ್, ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಟಿ.ಮುನಿರೆಡ್ಡಿ, ನಿರ್ದೇಶಕರಾದ ಎಂ.ಮೋಹನ್‌ಕುಮಾರ್, ಎಸ್.ಜಿ.ನರಸಿಂಹಮೂರ್ತಿ, ಜಯಪ್ಪರೆಡ್ಡಿ, ರಾಜಣ್ಣ, ಅರುಣಾ ಪ್ರಕಾಶ್, ಮುಖಂಡರಾದ ಅದ್ದೆ ವಿಶ್ವನಾಥಪುರ ಮಂಜುನಾಥ್, ಎಸ್.ಜಿ.ಪ್ರಶಾಂತರೆಡ್ಡಿ, ಶಿವಾನಂದ್, ಟಿ.ವೆಂಕಟರಾಮರೆಡ್ಡಿ ಉಪಸ್ಥಿತರಿದ್ದರು.

ಜನವರಿ 25ಕ್ಕೆ ಮಾಹೆಥಾನ್

ಬೆಂಗಳೂರು: ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ವಿಶ್ವವಿದ್ಯಾಲಯ 'ಮಾಹೆಥಾನ್ 2026' ಅನ್ನು ಜ. 25ರಂದು ಹಮ್ಮಿಕೊಂಡಿದೆ.

'ಹಸಿರಿಗಾಗಿ ಓಡಿ, ಮುಕ್ತವಾಗಿ ಉಸಿರಾಡಿ' ಎಂಬ ಧ್ಯೇಯವಾಕ್ಯದೊಂದಿಗೆ ಯಲಹಂಕದ ಮಾಹೆ ಕ್ಯಾಂಪಸ್‌ನಲ್ಲಿ 21.1 ಕಿಲೋ ಮೀಟರ್ ಹಾಫ್ ಮ್ಯಾರಥಾನ್ ಆರಂಭವಾಗಿ, ಅಲ್ಲಿಯೇ ಮುಕ್ತಾಯಗೊಳ್ಳಲಿದೆ. ನುರಿತ ಓಟಗಾರರು, ಹವ್ಯಾಸಿ ಓಟಗಾರರನ್ನು ಪ್ರೋತ್ಸಾಹಿಸಲಾಗುವುದು.

ಸಮ ಕುಲಾಧಿಪತಿ ಡಾ. ಮಧು ವೀರರಾಘವನ್, 'ಮಾಹೆಥಾನ್ 2026 ಕೇವಲ ಓಟವಷ್ಟೇ ಅಲ್ಲ, ಇದೊಂದು ಆಂದೋಲನ. ಆರೋಗ್ಯ, ಸುಸ್ಥಿರತೆ ಮತ್ತು ಪರಿಸರ ಕಾಳಜಿಯ ಅಡಿ ಸಾವಿರಾರು ಓಟಗಾರರನ್ನು ಒಗ್ಗೂಡಿಸುವ ಮೂಲಕ ಪ್ರಜ್ಞಾವಂತ ಸಮಾಜ ನಿರ್ಮಿಸುವತ್ತ ಅರ್ಥಪೂರ್ಣ ಹೆಜ್ಜೆ ಇಡುತ್ತಿದ್ದೇವೆ' ಎಂದು ಹೇಳಿದರು.

ವಿದ್ಯಾರ್ಥಿಗಳು, ಕಾರ್ಪೊರೇಟ್ ಉದ್ಯೋಗಿಗಳು ಸೇರಿ ಆಸಕ್ತರು ನೋಂದಾಯಿಸಿಕೊಳ್ಳಬಹುದು. ವಿವರಗಳು ಮತ್ತು ನೋಂದಣಿಗೆ ವೆಬ್‌ಸೈಟ್ https://www.mahethon.in/ ಭೇಟಿ ನೀಡಬಹುದು.

ಪ್ರಜಾವಾಣಿ
ಬೇಕಾಗಿದ್ದಾರೆ
ಆರ್ಟಿಸ್ಟ್/ಗ್ರಾಫಿಕ್ ಡಿಸೈನರ್
■ ಅರ್ಹತೆಗಳು ■
- ಚಿತ್ರಕಲೆಯಲ್ಲಿ ಪದವಿಯನ್ನು ಪಡೆದಿರಬೇಕು
- ಗ್ರಾಫಿಕ್ ಡಿಸೈನ್‌ನಲ್ಲಿ ಕೌಶಲ ಹೊಂದಿರಬೇಕು
- ಇಲಸ್ಟ್ರೇಷನ್ ಮಾಡಿಕೊಡುವ ಸಾಮರ್ಥ್ಯ ಇರಬೇಕು
- ಇನ್‌ಡಿಸೈನ್, ಇಲಸ್ಟ್ರೇಟರ್, ಫೋಟೊಶಾಪ್‌ನಲ್ಲಿ ಕೆಲಸ ಮಾಡಲು ಬಲ್ಲವರಾಗಿರಬೇಕು
- ಪತ್ರಿಕೋದ್ಯಮದಲ್ಲಿ ಕನಿಷ್ಠ ಐದು ವರ್ಷ ಕೆಲಸ ಮಾಡಿದ ಅನುಭವ ಇರಬೇಕು
- 40 ವರ್ಷದೊಳಗಿನವರು ಆಗಿರಬೇಕು

ಈ ಮೇಲಿನ ಅರ್ಹತೆಗಳು ನಿಮಗೆ ಇದ್ದಲ್ಲಿ, ಹೆಸರು, ವಿಳಾಸ, ವಿದ್ಯಾರ್ಹತೆ ಹಾಗೂ ಅನುಭವದ ವಿವರ ಒಳಗೊಂಡ ಅರ್ಜಿಯನ್ನು ಜ. 30ರೊಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಕಳಿಸಬೇಕು.

ಇ-ಮೇಲ್ ವಿಳಾಸ: careers@prajavani.co.in
ಅಂಚೆ ವಿಳಾಸ: ಮ್ಯಾನೇಜರ್ (ನೇಮಕಾತಿ)
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ನಂ 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು - 560001

ಶಾಸಕನ ರಕ್ಷಣೆಗೆ ನಿಂತ ಸಿ.ಎಂ: ಜನಾರ್ದನ ರೆಡ್ಡಿ

ಬೆಂಗಳೂರು: 'ತಮ್ಮ ಶಾಸಕನನ್ನು ರಕ್ಷಣೆ ಮಾಡಬೇಕು ಎಂಬ ಒಂದೇ ಉದ್ದೇಶದಿಂದ ಬಳ್ಳಾರಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತನ ಹತ್ಯೆ ಪ್ರಕರಣವನ್ನು ಸಿಬಿಐಗೆ ಒಪ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ತಯಾರಿಲ್ಲ' ಎಂದು ಗಂಗಾವತಿ ಶಾಸಕ ಜಿ. ಜನಾರ್ದನ ರೆಡ್ಡಿ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಏಳು ಪ್ರಕರಣಗಳ ತನಿಖೆಯನ್ನು ಸಿಬಿಐಗೆ ಒಪ್ಪಿಸಿದ್ದಾಗಿ ಸಿದ್ದರಾಮಯ್ಯ ಹೇಳಿಕೊಂಡಿದ್ದಾರೆ. ಆದರೆ, ಈ ಪ್ರಕರಣವನ್ನು ಸಿಬಿಐಗೆ ವಹಿಸಲು ಏಕೆ ಹಿಂದೇಟು ಹಾಕುತ್ತಿದ್ದೀರಿ ಎಂಬುದನ್ನು ರಾಜ್ಯದ ಜನತೆಗೆ ತಿಳಿಸಬೇಕು' ಎಂದು ಆಗ್ರಹಿಸಿದರು.

'ನಿಮ್ಮ ಶಾಸಕನೇ ಕೊಲೆ ಮಾಡಿದ್ದೆಂದು ನಿಮಗೆ ಈಗಾಗಲೇ ಗೊತ್ತಾಗಿದೆ. ಇದರಿಂದ ಕಾಂಗ್ರೆಸ್ ಪಕ್ಷಕ್ಕೆ ಮುಜುಗರವೂ ಆಗಿದೆ. ಮೂವರು ಖಾಸಗಿ ಗನ್‌ಮನ್‌ಗಳನ್ನು ಬಂಧಿಸಿ, ಸಿಐಡಿಗೆ ಕೊಡುವ ಮೂಲಕ ಇದನ್ನು ಜನರು ಮರೆಯುವಂತೆ ಮಾಡಿ, ತಮ್ಮ ಶಾಸಕನನ್ನು ಬಂಧಿಸಬಾರದು ಎಂಬುದೇ ನಿಮ್ಮ ಯೋಚನೆ' ಎಂದರು.

ಹೆಲ್ಮೆಟ್ ಉಚಿತ ವಿತರಣೆ

ದಾಬಸ್ ಪೇಟೆ: ದ್ವಿಚಕ್ರ ವಾಹನ ಚಲಾವಣೆ ಮಾಡುವಾಗ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಹೆಲ್ಮೆಟ್ ಧರಿಸದೆ ಅಪಘಾತವಾದರೆ ಅಥವಾ ಕೆಳಗೆ ಬಿದ್ದು ತಲೆಗೆ ಪೆಟ್ಟಾದರೆ ಕೋಮಾಕ್ಕೆ ಹೋಗುವ ಹಾಗೂ ಸಾವಾಗುವ ಸಂಭವವಿದೆ ಎಂದು ನೆಲಮಂಗಲ ಪ್ರಾದೇಶಿಕ ಸಾರಿಗೆ ಕಚೇರಿಯ ಮೋಟರ್ ವಾಹನ ನಿರೀಕ್ಷಕ ದಿನೇಶ್ ಕುಮಾರ್ ಎಚ್ಚರಿಸಿದರು.

ದಾಬಸ್ ಪೇಟೆ ಪಟ್ಟಣದ ಶಿವಗಂಗೆ ರಸ್ತೆಯಲ್ಲಿ ಬುಧವಾರ ಪ್ರಾದೇಶಿಕ ಸಾರಿಗೆ ಇಲಾಖೆ ನೆಲಮಂಗಲ ಹಾಗೂ ವಂಡರ್ ಲಾ ಸಹಯೋಗದೊಂದಿಗೆ ಏರ್ಪಡಿಸಿದ್ದ 3ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಪ್ರಯುಕ್ತ ದ್ವಿಚಕ್ರ ವಾಹನ ವಾಹನ ಸವಾರರಿಗೆ ಉಚಿತವಾಗಿ ಹೆಲ್ಮೆಟ್ ವಿತರಣೆ ಮಾಡಿ ಅವರು ಮಾತನಾಡಿದರು.

ಆರ್‌ಟಿಒ ಹಾಗೂ ಪೊಲೀಸ್ ಇಲಾಖೆಯವರು ದಂಡ ಹಾಕುವುದಕ್ಕೆ ಅವಕಾಶ ಕೊಡಬಾರದು. ತಮ್ಮ ಪ್ರಾಣವನ್ನು ಉಳಿಸಿಕೊಳ್ಳಬೇಕು ಎಂದರು.

ಹೊಸ ಜವಳಿ ನೀತಿಗೆ ಇನ್ನಷ್ಟು ಅಂಶಗಳ ಸೇರ್ಪಡೆ: ಶಿವಾನಂದ ಪಾಟೀಲ

ಕೈಮಗ್ಗ ಉತ್ಪನ್ನ ಮಾರಾಟಕ್ಕೆ 'ಸಂತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತ ಸಂತೆ' ಮಾದರಿಯಲ್ಲಿ ಕೈಮಗ್ಗ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಮತ್ತು ನೇಕಾರಿಕೆಯಿಂದ ವಿಮುಖರಾಗುತ್ತಿರುವ ಯುವ ಜನರನ್ನು ಮತ್ತೆ ಆಕರ್ಷಿಸಲು ಸ್ಟೈಫಂಡ್ ಸೌಲಭ್ಯ ನೀಡುವ ಅಂಶವನ್ನು ನೂತನ ಜವಳಿ ನೀತಿಗೆ ಸೇರಿಸಲು ಚಿಂತನೆ ನಡೆಸಲಾಗಿದೆ ಎಂದು ಜವಳಿ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಕೈಮಗ್ಗ ಕ್ಷೇತ್ರದ ಉತ್ತೇಜನಕ್ಕೆ ನೂತನ ಜವಳಿ ನೀತಿಯಲ್ಲಿ ಸೇರಿಸಬೇಕಾದ ಅಂಶಗಳ ಬಗ್ಗೆ ಸಲಹೆ ಪಡೆಯಲು ಕರೆದಿದ್ದ ಶಾಸಕರ ಸಭೆಯಲ್ಲಿ ಅವರು ಮಾತನಾಡಿದರು.

ಕೈಮಗ್ಗ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವುದೇ ಉದ್ದಿಮೆಯ ಅವನತಿಗೆ ಪ್ರಮುಖ ಕಾರಣ. ಇಳಕಲ್, ರಬಕವಿ-ಬನಹಟ್ಟಿ, ದೊಡ್ಡಬಳ್ಳಾಪುರ ಸೇರಿದಂತೆ ಅತಿ ಹೆಚ್ಚು ಕೈಮಗ್ಗ ಉತ್ಪನ್ನಗಳ ತಯಾರಿಕೆ ಪ್ರದೇಶಗಳಲ್ಲಿ ನೇಕಾರರೇ ನೇರವಾಗಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ರೈತರ ಸಂತೆ ಮಾದರಿಯಲ್ಲಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಹೇಳಿದರು.

ಕೃಷಿ ಉತ್ಪನ್ನಗಳ ಖರೀದಿಗೆ ಆವರ್ತ ನಿಧಿ ಸ್ಥಾಪನೆ ಮಾದರಿಯಲ್ಲಿ ಜವಳಿ ಇಲಾಖೆಯಿಂದಲೂ ಆವರ್ತ ನಿಧಿ ಸ್ಥಾಪನೆ ಮಾಡಬೇಕು ಎಂಬ ಸಲಹೆ ಸೂಕ್ತವಾಗಿದೆ. ಈ ಬಗ್ಗೆ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಲಾಗುವುದು ಎಂದರು.

> **ಕೈಮಗ್ಗ ನೇಕಾರರ ಹಿತರಕ್ಷಣೆಗೆ ಕಾಯ್ದೆ ತಿದ್ದುಪಡಿ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಕೇಂದ್ರ ಸರ್ಕಾರದ ಬಳಿ ಶಾಸಕರೊಂದಿಗೆ ನಿಯೋಗ ಒಯ್ಯಲು ನಿರ್ಧರಿಸಲಾಗಿದೆ**
> **ಶಿವಾನಂದ ಪಾಟೀಲ,** ಜವಳಿ ಸಚಿವರು

'ರಾಜ್ಯದಲ್ಲಿ ಉತ್ಪಾದನೆಯಾಗುವ ರೇಷ್ಮೆ ಸೀರೆಗಳನ್ನು ಹೊರ ರಾಜ್ಯದವರು ಕಡಿಮೆ ಬೆಲೆಗೆ ಖರೀದಿಸಿ ಅವರದ್ದೇ ಬ್ರ್ಯಾಂಡ್ ಸೃಷ್ಟಿಸಿ ಮತ್ತೆ ನಮ್ಮ ರಾಜ್ಯದಲ್ಲೇ ಅಧಿಕ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಮಧ್ಯವರ್ತಿಗಳ ವ್ಯವಸ್ಥೆ ತಪ್ಪಿಸಿ ನಮ್ಮ ನೇಕಾರರೇ ಬ್ರ್ಯಾಂಡ್ ಸೃಷ್ಟಿಸುವ ವ್ಯವಸ್ಥೆ ಆಗಬೇಕಿದೆ. ಇದಕ್ಕೆ ಸರ್ಕಾರ ಅಗತ್ಯ ಸಹಕಾರ ನೀಡಲಿದೆ' ಎಂದು ಅವರು ತಿಳಿಸಿದರು.

ಸಭೆಯಲ್ಲಿ ಶಾಸಕ ಎಂ.ವೈ.ಪಾಟೀಲ, ವಿಧಾನಪರಿಷತ್ ಸದಸ್ಯ ಕೇಶವ ಪ್ರಸಾದ್, ಮಾಜಿ ಶಾಸಕರಾದ ಎಂ.ಡಿ. ಲಕ್ಷ್ಮೀನಾರಾಯಣ, ವೆಂಕಟರಮಣಪ್ಪ ಅವರು ಸಲಹೆ ನೀಡಿದರು.

ದೊಡ್ಡಬಳ್ಳಾಪುರ ನೇಕಾರ ಸಂಘಟನೆಯ ಮುಖಂಡರು ಮಾತನಾಡಿ, ಸೂರತ್ ಸೀರೆಗಳ ಪ್ರಭಾವದಿಂದ ದೊಡ್ಡಬಳ್ಳಾಪುರದ ಕೈಮಗ್ಗ ನೇಕಾರರು ಸಂಕಷ್ಟಕ್ಕೀಡಾಗಿದ್ದಾರೆ. ಆದ್ದರಿಂದ, ಪವರ್‌ಲೂಮ್ ಕಾಯ್ದೆಗೆ ತಿದ್ದುಪಡಿ ತರಬೇಕು ಎಂದು ಮನವಿ ಮಾಡಿದರು.

ನಗರದಲ್ಲಿ ಇಂದು

ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗ-2026: ಉಪಸ್ಥಿತಿ: ಶಾಲಿನಿ ರಜನೀಶ್, ಆಯೋಜನೆ: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಇ-ಆಡಳಿತ ಕೇಂದ್ರ ಮತ್ತು ಭಾರತೀಯ ವಿಜ್ಞಾನ ಸಂಸ್ಥೆ, ಸ್ಥಳ: ಎ.ವಿ.ರಾಮರಾವ್ ಆಡಿಟೋರಿಯಂ, ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಬೆಳಿಗ್ಗೆ 9.30

ಶಾಲಿನಿ ರಜನೀಶ್

ದಕ್ಷಿಣ ಭಾರತದ ಸಮಾಜವಾದಿಗಳ ಸಮ್ಮೇಳನ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ನ್ಯಾ. ಸುದರ್ಶನ್ ರೆಡ್ಡಿ, ಪ್ರಾಸ್ತಾವಿಕ ಮಾತು: ಬಿ.ಆರ್. ಪಾಟೀಲ, ಆಯೋಜನೆ: ಸಮಾಜವಾದಿ ಅಧ್ಯಯನ ಕೇಂದ್ರ, ಸಮಾಜವಾದಿ ಸಮಾಗಮ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಕ್ಯಾಂಪಸ್, ಅರಮನೆ ರಸ್ತೆ, ಬೆಳಿಗ್ಗೆ 10.30

ಉಚಿತ ಕಾನೂನು ಸೇವೆ: ಸ್ಥಾನಮಾನ, ಸವಾಲು ಮತ್ತು ಮಹಿಳೆಯರಿಗೆ ನ್ಯಾಯ ಕುರಿತ ವಿಚಾರಗೋಷ್ಠಿ: ಉದ್ಘಾಟನೆ: ಎಚ್. ಶಶಿಧರ ಶೆಟ್ಟಿ, ಅತಿಥಿಗಳು: ವಿನಯ್ ಶ್ರೀನಿವಾಸ್, ಸುಮಿತ್ರಾ ಆಚಾರ್ಯ, ಮರ್ಲಿನ್ ಮಾರ್ಟಿಸ್, ಆಯೋಜನೆ: ಅಭಿವೃದ್ಧಿ ಶಿಕ್ಷಣ ಸೇವೆ (ಡೀಡ್ಸ್), ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಪ್ಯಾರಾ ಲೀಗಲ್ ಫೆಸಿಲಿಟರ್ಸ್ ಕಲೆಕ್ಟಿವ್: ಸ್ಥಳ: ವಿಶ್ರಾಂತಿ ನಿಲಯ, 18, ಇನ್‌ಫೆಂಟ್ರಿ ರಸ್ತೆ, ಬೆಳಿಗ್ಗೆ 10.30

ಜಲಶಕ್ತಿ ಹ್ಯಾಕಥಾನ್: ಉದ್ಘಾಟನೆ: ಸುಭಾಶೀಷ್ ತ್ರಿಪಾಠಿ, ಅತಿಥಿಗಳು: ಬಿ. ವೆಂಕಟೇಶ್, ಯು.ಎನ್. ಕೆಂಪಯ್ಯ, ಎ.ವಿ. ಶ್ರೀರಾಮ್, ಎಂ. ಕೇಶವಮೂರ್ತಿ, ಆಯೋಜನೆ: ಕೇಂದ್ರ ಜಲಶಕ್ತಿ ಸಚಿವಾಲಯ. ಸ್ಥಳ: ಸಿವಿಲ್ ಎಂಜಿನಿಯರಿಂಗ್ ವಿಭಾಗದ ಆಡಿಟೋರಿಯಂ, ಯುವಿಸಿಇ, ಜ್ಞಾನಭಾರತಿ, ಬೆಳಿಗ್ಗೆ 11

ಬಿ2ಬಿ ತಂತ್ರಜ್ಞಾನ, ಆಹಾರ ಉತ್ಪನ್ನಗಳ ಪ್ರದರ್ಶನ: ಆಯೋಜನೆ: ಸಿನರ್ಜಿ ಎಕ್ಸ್‌ಪೋಶರ್ಸ್ ಹಾಗೂ ಈವೆಂಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 11

ಪ್ರಕಾಶಕರ ಸಂಘದ ನೂತನ ಸಾಮಾಜಿಕ ಜಾಲತಾಣಗಳ ಉದ್ಘಾಟನೆ: ಅತಿಥಿಗಳು: ಎಚ್.ಎನ್. ಆರತಿ, ಸಿದ್ದನಗೌಡ ಪಾಟೀಲ, ವಸುಂಧರಾ ಭೂಪತಿ, ಆಯೋಜನೆ: ಕರ್ನಾಟಕ ಪ್ರಕಾಶಕರ ಸಂಘ, ಸ್ಥಳ: 'ಹೊಸತು' ಸಭಾಂಗಣ, ನವಕರ್ನಾಟಕ ಪಬ್ಲಿಕೇಷನ್ಸ್, ಎಂಬೆಸಿ ಸೆಂಟರ್, ಬೆಳಿಗ್ಗೆ 11.30

ತೇಜಸ್ವಿ ನಾಟಕೋತ್ಸವ- ಕೃಷ್ಣೇಗೌಡನ ಆನೆ: ಪ್ರಸ್ತುತಿ: ರಂಗದರ್ಶನ ಕಲಾ ಕೇಂದ್ರ, ಆಯೋಜನೆ: ತೋಟಗಾರಿಕಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ, ಸ್ಥಳ: ಲಾಲ್‌ಬಾಗ್, ಸಂಜೆ 5

ಕವಿ ಲಕ್ಷ್ಮೀಶರ ಜೈಮಿನಿ ಭಾರತ: ಉಪನ್ಯಾಸ: ಪಾವಗಡ ಪ್ರಕಾಶರಾವ್, ಆಯೋಜನೆ: ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಶ್ರೀರಾಮಮಂದಿರಂ ಪತ್ತಿ ಸಭಾಂಗಣ, ಎನ್. ಆರ್. ಕಾಲೊನಿ, ಸಂಜೆ 5.45

ಅಮೀರ್‌ಬಾಯಿ ಕರ್ನಾಟಕಿ-ನಾಟಕ: ನಿರ್ದೇಶನ: ಬೇಲೂರು ರಘುನಂದನ್, ಪ್ರಸ್ತುತಿ: ರಂಗ ಬದುಕು ಟ್ರಸ್ಟ್, ಆಯೋಜನೆ: ಭಾಗವತರು ಸಾಂಸ್ಕೃತಿಕ ಸಂಘಟನೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ರಾತ್ರಿ 7.15

ಬೆಂಗಳೂರು ಹಬ್ಬ: ಸಂಜೆ 4ಕ್ಕೆ ಆಫ್‌ಬೀಟ್: ವಾಕ್ ದಿ ವೆಸ್ಟ್ ಎಂಡ್, ಸ್ಥಳ: ತಾಜ್ ವೆಸ್ಟ್ ಎಂಡ್, ದಿ ಸೋಫಿಯಾ ವಾಕ್, ಸ್ಥಳ: ನ್ಯಾಷನಲ್ ಕಾಲೇಜು ಮೆಟ್ರೊ ನಿಲ್ದಾಣ, ಸಂಜೆ 5.30ಕ್ಕೆ ಸಂಗೀತ: ರೂಟ್ಸ್ ಇನ್ ಮೋಶನ್, ಸ್ಥಳ: ಬಿಐಸಿ ಲೈಬ್ರರಿ, ಸಂಜೆ 7ಕ್ಕೆ ಸಂಗೀತ: ಹಮ್ ಲೋಗೊ, ಸ್ಥಳ: ಪಂಚವಟಿ, ಆ್ಯಂಫಿಥಿಯೇಟರ್, ಸಂಗೀತ: ಕಬೀರ್ ಸುಮನ್-ಲೈವ್ ಇನ್ ಕಾನ್ಸರ್ಟ್, ಸ್ಥಳ: ಬಿಐಸಿ ಆಡಿಟೋರಿಯಂ, ಸಂಗೀತ: ಈಸ್ಟ್ ಮ್ಯಾರೀಸ್ ವೆಸ್ಟ್, ಸ್ಥಳ: ಎನ್‌ಜಿಎಂಎ ಆಡಿಟೋರಿಯಂ, ರಾತ್ರಿ 7.30ಕ್ಕೆ ಸಂಗೀತ: ವಿಸ್ಪರ್ಸ್ ಆಫ್ ದ ಅರ್ತ್, ಸ್ಥಳ: ಬಿಐಸಿ ಲೈಬ್ರರಿ, ರಂಗ ಪ್ರದರ್ಶನ: ಅಯ್ಯೋ ರಾಮ, ಸ್ಥಳ: ಬಿಐಸಿ ಹಾಲ್-1, ರಾತ್ರಿ 8.30ಕ್ಕೆ ಸಂಗೀತ: ಮಂಡ್ಯಾನ್ ಶಾಮ್ ಬೈ ಗ್ರೀಕ್ ರಿಪಬ್ಲಿಕ್, ಸ್ಥಳ: ಬಿಐಸಿ ಆಡಿಟೋರಿಯಂ, ಸಂಜೆ 5.30ಕ್ಕೆ ಗಮಕ-ಕರ್ಣ ಮೋಕ್ಷ, ಸ್ಥಳ: ಐಐಡಬ್ಲ್ಯುಸಿ, ಫ್ಯಾಷನ್ ಶೋಕೇಶ್, ಸ್ಥಳ: ಬಿಐಸಿ ರೂಫ್‌ಟಾಪ್, ರಾತ್ರಿ 7 ರಂಗ ಪ್ರಯೋಗ: ಕ್ರಾಂತಿ ಬಂತು ಕ್ರಾಂತಿ, ಸ್ಥಳ: ಯುವಪಥ ಆಡಿಟೋರಿಯಂ, ಸಂಜೆ 6.30ಕ್ಕೆ ರಂಗ ಪ್ರಯೋಗ: ಕಾನೂರು ಹೆಗ್ಗಡಿತಿಯ ಸುಬ್ಬಮ್ಮ, ಸ್ಥಳ: ಇಂಡಿಯನ್ ಹೆರಿಟೇಜ್ ಅಕಾಡೆಮಿ ಆಡಿಟೋರಿಯಂ, ರಾತ್ರಿ 7.30ಕ್ಕೆ ರಂಗ ಪ್ರದರ್ಶನ, ಸೀಜ್ ಹರ್! ದಿ ಕ್ಲೋನ್, ಸ್ಥಳ: ಸಭಾ, ಫ್ಲೇಟ್, ರಂಗ ಪ್ರದರ್ಶನ: ಅವಳಂಚೆ, ಸ್ಥಳ: ಪ್ರೆಸ್ಟೀಜ್ ಸೆಂಟರ್ ಆಫ್ ಪರ್ಫಾರ್ಮೆನ್ಸ್ ಆರ್ಟ್ಸ್, ಆಡಿ, ರಾತ್ರಿ 7.30ಕ್ಕೆ ನೃತ್ಯ: ಗಬ್ಬುಕಥೆ, ಸ್ಥಳ: ಸಭಾ, ಸ್ಲೋಪ್, ರಂಗ ಪ್ರದರ್ಶನ: ಜಿಒಎಟಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ರಾತ್ರಿ 8ಕ್ಕೆ ನೃತ್ಯ ಕಾರ್ಯಕ್ರಮ: ಅಲೈಕ್ಕಾದಲ್, ಸ್ಥಳ: ಎಡಿಎ ರಂಗಮಂದಿರ ಆಡಿಟೋರಿಯಂ, ನೃತ್ಯ: ಧ್ವನಿರೂಪ, ಸ್ಥಳ: ಎನ್‌ಜಿಎಂಎ, ಮಿರರ್ ಪೂಲ್, ನೃತ್ಯ-ಅನುರಾಗ, ಸ್ಥಳ: ಅಲೈನ್ಸ್ ಫ್ರಾನ್ಸಿಸ್ ಆಡಿಟೋರಿಯಂ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಆ್ಯಂಟಿಮೈಕ್ರೋಬಿಯಲ್ ಪ್ರತಿರೋಧ ಕಾಣದ ಶತ್ರು

• ಡಾ. ಶ್ವೇತಾ ಟಿ.ಎಂ.

ಸರಳಾ, ಒಬ್ಬ ಗೃಹಿಣಿ; ಎರಡು ಮಕ್ಕಳ ತಾಯಿ. ಪದೇ ಪದೇ ಮೂತ್ರ ಸೋಂಕಿಗೆ ಒಳಗಾಗುವ ಸರಳಾ, ಮೂತ್ರಸೋಂಕಿನ ಲಕ್ಷಣ ಕಂಡ ತಕ್ಷಣವೇ ವೈದ್ಯರು ಕೊಟ್ಟ ಎರಡು ಗುಳಿಗೆಗಳನ್ನು ನುಂಗಿ, ಸೋಂಕು ಕಡಿಮೆಯಾದ ತಕ್ಷಣವೇ ಮಾತ್ರೆಯನ್ನು ನಿಲ್ಲಿಸಿಬಿಡುತ್ತಿದ್ದಳು. ಆದರೆ ಈ ಬಾರಿ ಮಾತ್ರೆ ತೆಗೆದುಕೊಂಡರೂ ಸೋಂಕು ಕಡಿಮೆಯಾಗಲಿಲ್ಲ. ಹತ್ತಿರದ ವೈದ್ಯರಲ್ಲಿ ಮೂತ್ರ ಪರೀಕ್ಷೆ ಮಾಡಿಸಿದಾಗ 'ಇ-ಕೊಲಿ' ಎಂಬ ಬ್ಯಾಕ್ಟೀರಿಯಾದಿಂದ ಉಂಟಾಗಿರುವ ಸೋಂಕು ಎಂದು ತಿಳಿಯಿತು. ಯಾವ ಮಾತ್ರೆಗಳಿಗೂ ತಗ್ಗದ ಸೋಂಕಿಗೆ ಕೊನೆಗೂ ಇಂಜೆಕ್ಷನ್ನಿನ ಮೊರೆ ಹೋಗಬೇಕಾಯಿತು.

ಪ್ರತಿ ವರ್ಷ ನವೆಂಬರ್ ತಿಂಗಳ ಮೂರನೇ ವಾರವನ್ನು 'ವಿಶ್ವ ಆ್ಯಂಟಿಮೈಕ್ರೋಬಿಯಲ್ ಪ್ರತಿರೋಧ'ದ ವಾರವಾಗಿ ಆಚರಿಸಲಾಗುತ್ತದೆ.

ಆ್ಯಂಟಿಮೈಕ್ರೋಬಿಯಲ್ ಪ್ರತಿರೋಧವೆಂದರೇನು?

'ಆ್ಯಂಟಿಮೈಕ್ರೋಬಿಯಲ್' ಎಂದರೆ ರೋಗಾಣುಗಳಾದ ಬ್ಯಾಕ್ಟೀರಿಯಾ, ವೈರಸ್, ಫಂಗಸ್, ಪ್ಯಾರಾಸೈಟ್‌ಗಳ ವಿರುದ್ಧ ಹೋರಾಡುವ ಅಥವಾ ಕೊಲ್ಲುವ ಔಷಧಗಳು. ಎಂದರೆ ನಾವು ಬಳಸುವ ಆ್ಯಂಟಿಬಯಾಟಿಕ್ಸ್, ಆ್ಯಂಟಿಫಂಗಲ್, ಆ್ಯಂಟಿವೈರಲ್ ಔಷಧಗಳು. ಆ್ಯಂಟಿಮೈಕ್ರೋಬಿಯಲ್ ಪ್ರತಿರೋಧವೆಂದರೆ –ರೋಗಾಣುಜೀವಿಗಳು ಔಷಧಗಳಿಗೆ ಪ್ರತಿರೋಧವನ್ನು ತೋರುವುದು. ಎಂದರೆ- ಔಷಧಗಳು ಕೆಲಸ ಮಾಡದೇ ಹೋಗುವುದು, ರೋಗಾಣುಗಳು ಸಾಯದೇ ಹೋಗುವುದು ಅಥವಾ ನಿಯಂತ್ರಣಕ್ಕೆ ಬಾರದೇ ಇರುವುದು.

ಉದಾಹರಣೆಗೆ ಹೇಳುವುದಾದರೆ, ಸುಲಭವಾಗಿ ಗುಣವಾಗುತ್ತಿದ್ದ ಸಾಮಾನ್ಯ ಸೋಂಕುಗಳು ಗುಣವಾಗದೇ ಇರುವುದು. ಕ್ಷಯರೋಗವು ಮೊದಲೆಲ್ಲಾ ಆರು ತಿಂಗಳ ಅವಧಿಯ ಚಿಕಿತ್ಸೆ ನೀಡಿದರೆ ಗುಣವಾಗುತ್ತಿತ್ತು. ಈಗ ಕ್ಷಯ ರೋಗಕ್ಕೆ ಡ್ರಗ್ ರೆಸಿಸ್ಟೆಂಟ್, ಎಕ್ಸ್‌ಟೆನ್ಸಿವ್ ಡ್ರಗ್ ರೆಸಿಸ್ಟೆಂಟ್ ಚಿಕಿತ್ಸೆಯನ್ನು ನೀಡಬೇಕಾಗುತ್ತದೆ. ಸರಳಾರ ಮೂತ್ರನಾಳದ ಸೋಂಕು 'ಇ-ಕೊಲಿ' ಎಂಬ ರೋಗಾಣುವಿನಿಂದ ಉಂಟಾಗಿರಬಹುದು. ಈ ರೋಗಾಣುವೂ ಹಲವಾರು ಔಷಧಗಳಿಗೆ ಪ್ರತಿರೋಧವನ್ನು ತೋರುತ್ತದೆ.

ಯಾಕೆ ಈ ಪ್ರತಿರೋಧ?

ಔಷಧಗಳ ತಪ್ಪು ಅಥವಾ ಅತಿಯಾದ ಬಳಕೆಯಿಂದ ಈ ರೀತಿಯ ಪ್ರತಿರೋಧದ ಪರಿಸ್ಥಿತಿ ಉಂಟಾಗಬಲ್ಲದು. ನಾವು ಮಾಡುವ ತಪ್ಪುಗಳ ಪಟ್ಟಿ ಹೀಗಿದೆ:

- ವೈದ್ಯರ ಸಲಹೆಯಿಲ್ಲದೇ ಆ್ಯಂಟಿಬಯಾಟಿಕ್‌ಗಳನ್ನು ತೆಗೆದುಕೊಳ್ಳುವುದು. ಸ್ವಲ್ಪ ಗುಣವಾದಂತೆ ಅನ್ನಿಸಿದ ತಕ್ಷಣವೇ, ಈ ಆ್ಯಂಟಿಬಯಾಟಿಕ್ ಬಳಕೆಯನ್ನು ನಿಲ್ಲಿಸುವುದು.
- ಸಣ್ಣ ಜ್ವರ, ಕೆಮ್ಮುಗಳಿಗೂ ಆ್ಯಂಟಿಬಯಾಟಿಕ್‌ಗಳನ್ನು ತೆಗೆದುಕೊಳ್ಳುವುದು.
- ಸ್ವಚ್ಛತೆಯ ಕೊರತೆ. ಆಸ್ಪತ್ರೆಯಲ್ಲಿ ಸೋಂಕು ಉಂಟಾಗುವ ಅಪಾಯ.

ಆರೋಗ್ಯ ಸಂಸ್ಥೆಗಳ ಪಾತ್ರ

ಸರ್ಕಾರ ಪಶುವೈದ್ಯಕೀಯ, ಜಿಲ್ಲಾ ಆಸ್ಪತ್ರೆಗಳಲ್ಲಿ ಆ್ಯಂಟಿ ಬಯಾಟಿಕ್ ಸ್ಟೀವರ್ಡ್ ಷಿಪ್ ಕಾರ್ಯಕ್ರಮ ಹಮ್ಮಿಕೊಂಡಿದೆ. ಔಷಧಗಳ ಬಳಕೆ ಯಾವ ಸಂದರ್ಭಕ್ಕೆ ಹೇಗಿರಬೇಕು, ಯಾವಾಗ ಬಳಸಬಾರದೆಂಬ ಸ್ಪಷ್ಟ ಮಾರ್ಗಸೂಚಿಯನ್ನು ಹೊರಡಿಸಿದೆ.

ರೈತರ ಮತ್ತು ಪಶುಪಾಲಕರ ಪಾತ್ರ

ಪ್ರಾಣಿಗಳಿಗೆ ಹೆಚ್ಚು ಆ್ಯಂಟಿಬಯಾಟಿಕ್‌ಗಳನ್ನು ಕೊಟ್ಟರೆ, ಈ ಅಂಶ ಅವುಗಳ ಹಾಲು, ಮಾಂಸ ಹಾಗೂ ಪರಿಸರದಲ್ಲಿಯೂ ಉಳಿದುಬಿಡುತ್ತದೆ. ಇದರಿಂದ ಪ್ರತಿರೋಧದ ಪ್ರಮಾಣ ಹೆಚ್ಚುತ್ತದೆ. ಆಹಾರ ಸರಪಳಿ, ನೀರಿನ ಮೂಲಕ ಈ ಸಮಸ್ಯೆ ಉಲ್ಬಣಿಸಬಹುದು. ಹಾಗಾಗಿ ಕೃಷಿಕರು ಕೆಲವು ಮಾರ್ಗಸೂಚಿಯನ್ನು ಅನುಸರಿಸಬೇಕಾಗುತ್ತದೆ.

ಕೀಟನಾಶಕ/ರಾಸಾಯನಿಕಗಳ ಬಳಕೆಯಲ್ಲಿ ನಿಯಂತ್ರಣ, ಸಹಜ ಕೃಷಿ ಪದ್ಧತಿ ಅನುಸರಿಸುವುದು, ಪಶುಗಳಿಗೆ ಸರಿಯಾದ ಲಸಿಕೆ ಹಾಕುವುದು ಮತ್ತು ಆ್ಯಂಟಿಬಯಾಟಿಕ್‌ಗಳನ್ನು ಸೇವಿಸುವ ಪ್ರಾಣಿಗಳ ಹಾಲು ಅಥವಾ ಮಾಂಸವನ್ನು ತಕ್ಷಣಕ್ಕೆ ಬಳಸಬಾರದು.

ಪರಿಣಾಮಗಳು

- ಸಾಮಾನ್ಯ ಸೋಂಕುಗಳು, ರೋಗಗಳು ಗುಣವಾಗದೇ ಉಳಿಯುತ್ತವೆ. ಇದರಿಂದ ಚಿಕಿತ್ಸೆಯ ಸಮಯ ದೀರ್ಘಗೊಳ್ಳುತ್ತದೆ. ಚಿಕಿತ್ಸೆಯ ವೆಚ್ಚ ಹೆಚ್ಚುತ್ತದೆ.
- ಹೊಸ ಔಷಧಗಳನ್ನು ಅಭಿವೃದ್ಧಿ ಪಡಿಸಬೇಕಾಗಬಹುದು. ಆಸ್ಪತ್ರೆಯಲ್ಲಿ ಹೆಚ್ಚು ದಿನಗಳ ಕಾಲ ಇರಬೇಕಾಗುತ್ತದೆ. ಶಸ್ತ್ರ ಚಿಕಿತ್ಸೆ ಮತ್ತು ಹೆರಿಗೆಯ ಸಮಯದಲ್ಲಿ ಸೋಂಕು ಉಂಟಾಗುವ ಅಪಾಯ ಹೆಚ್ಚಾಗುತ್ತದೆ. ಸಾವಿನ ಪ್ರಮಾಣವೂ ಹೆಚ್ಚಾಗಬಹುದು.

ಹೀಗೆ ಮಾಡಿ

- ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ ಅನೇಕ ಭಾರತೀಯರು ವೈದ್ಯರ ಸಲಹೆಯಿಲ್ಲದೆ ಔಷಧಗಳನ್ನು ಖರೀದಿಸಿ, ಸೇವಿಸುತ್ತಾರೆ. ಔಷಧಗಳ ವಿಚಾರದಲ್ಲಿ ಕಟ್ಟುನಿಟ್ಟಿನ ಸಲಹೆಯನ್ನು ಪಾಲಿಸಿ.
- ಉಳಿಕೆ ಔಷಧಗಳನ್ನು ಬಳಸುವುದು ಅಥವಾ ಬೇರೆಯವರ ಔಷಧಗಳನ್ನು ಬಳಸುವುದನ್ನು ಮಾಡಬಾರದು.
- ಕೊಟ್ಟಿರುವ ಅವಧಿಗೆ ಮಾತ್ರ ಆ್ಯಂಟಿಬಯಾಟಿಕ್‌ಗಳನ್ನು ಬಳಸಬೇಕು. ಐದು ಅಥವಾ ಏಳು ದಿನಗಳಿಗೆ ಔಷಧವನ್ನು ನೀಡಿದರೆ, ಅದನ್ನು ಸಂಪೂರ್ಣವಾಗಿ ತೆಗೆದುಕೊಳ್ಳಬೇಕು.
- ಪ್ರಾಣಿಗಳಲ್ಲಿ ಆ್ಯಂಟಿಬಯಾಟಿಕ್ ಬಳಕೆಯನ್ನು ನಿಯಂತ್ರಿಸಬೇಕು. ಸ್ವಚ್ಛತೆಯನ್ನು ಪಾಲಿಸಬೇಕು. ಶುದ್ಧ ಆಹಾರ ಮತ್ತು ನೀರನ್ನು ಬಳಸಬೇಕು. ರೋಗನಿರೋಧಕ ಚುಚ್ಚುಮದ್ದುಗಳನ್ನು ತೆಗೆದುಕೊಳ್ಳುವುದು ಅಗತ್ಯ.

ಚಳಿಗಾಲದಲ್ಲಿ ಚರ್ಮದ ಆರೋಗ್ಯ

• ಡಾ. ವಿಜಯಲಕ್ಷ್ಮಿ ಪಿ.

ಚಳಿಗಾಲ ಎಂದರೆ ಚರ್ಮ ಒಡೆಯುವ ಕಾಲ ಎಂಬುದು ಸರ್ವರಿಗೂ ತಿಳಿದಿರುವ ವಿಷಯ. ಆದರೆ ಋತುವಿನ ಅತಿಯೋಗವೆಂಬಂತೆ ಈ ವರ್ಷ ಕೊರೆಯುವ ಚಳಿ ಇದೆ. ಎಲ್ಲರ ಮನೆಯಲ್ಲಿ ಒಳಗೆ ಸೇರಿದ್ದ ಸ್ವೆಟರ್‌ಗಳು, ಶಾಲು, ಕಾಲು ಚೀಲ, ಕೈ ಗವಸುಗಳು ಹೊರಗೆ ಬಂದಿವೆ. ಚಳಿಗಾಲದ ಅತಿ ಶೀತದಿಂದಾಗಿ ಚರ್ಮಕ್ಕೆ ರಕ್ತಪರಿಚಲನೆಯು ಕಡಿಮೆಯಾಗುತ್ತದೆ. ಚರ್ಮವು ಒಣಗುತ್ತದೆ. ಹಾಗೆಯೇ ಗಂಟುಗಳಲ್ಲಿರುವ ಜಿಡ್ಡಿನ ಅಂಶವೂ ಒಣಗುವುದರಿಂದ ಗಂಟುನೋವುಗಳೂ ಹೆಚ್ಚಾಗುತ್ತವೆ. ಹಾಗಾಗಿ ಚಳಿಗಾಲದಲ್ಲಿ ಚರ್ಮದ ರಕ್ತಪರಿಚಲನೆಯನ್ನು ಹೆಚ್ಚಿಸುವ ಬಗ್ಗೆ ಗಮನವನ್ನು ಹರಿಸಬೇಕು.

ಇತ್ತೀಚಿನ ದಿನಗಳಲ್ಲಿ ಚರ್ಮದ ರಕ್ಷಣೆಗಾಗಿ ಅನೇಕ ವಿಧದ ಸೌಂದರ್ಯಸಾಧನಗಳನ್ನು ಬಳಸುವುದು ಹೆಚ್ಚಾಗುತ್ತಿದೆ. ಇವುಗಳಲ್ಲಿ ಕೆಲವು ಚರ್ಮಕ್ಕೆ ಹಾನಿಕಾರಕವಾದ ವಸ್ತುಗಳೂ ಇರುತ್ತವೆ. ವಿವಿಧ ರೀತಿಯ ಸೌಂದರ್ಯಸಾಧನಗಳನ್ನು ನಿರಂತರವಾಗಿ ಬಳಸುವುದರಿಂದ ಆ ಸಮಯಕ್ಕೆ ಸೌಂದರ್ಯವನ್ನು ಹೆಚ್ಚಿಸಿದರೂ, ಮುಂದೆ ಅನೇಕ ರೀತಿಯ ಚರ್ಮರೋಗಗಳಿಗೂ ಕಾರಣವಾಗುತ್ತವೆ. ಆದ್ದರಿಂದ ಹೆಚ್ಚು ರಾಸಾಯನಿಕಗಳಿಂದ ಕೂಡಿರುವ ಸೌಂದರ್ಯಸಾಧನಗಳ ನಿರಂತರ ಬಳಕೆ ಒಳ್ಳೆಯದಲ್ಲ. ಚರ್ಮದ ಸೌಂದರ್ಯವನ್ನು ಕಾಪಾಡಲು, ನಮ್ಮ ಆಹಾರ, ವಿಹಾರ ಅಥವಾ ನಮ್ಮ ದಿನಚರಿಗಳು ಮಹತ್ತರ ಪಾತ್ರವನ್ನು ವಹಿಸುತ್ತವೆ. ನಿತ್ಯ ವ್ಯಾಯಾಮ, ಅಭ್ಯಂಜನ, ಬಿಸಿನೀರಿನ ಸ್ನಾನ ಮುಂತಾದವು ಚರ್ಮದ ಆರೋಗ್ಯವನ್ನು ಕಾಪಾಡಲು ಸಹಾಯ ಮಾಡುತ್ತವೆ.

ಚಳಿಗಾಲದಲ್ಲಿ ಜಿಡ್ಡು ಹೆಚ್ಚಿರುವ ಪದಾರ್ಥಗಳಾದ ಎಳ್ಳು, ಎಳ್ಳಿನಿಂದ ತಯಾರಿಸಿದ ಪದಾರ್ಥಗಳು, ಎಣ್ಣೆಕಾಳುಗಳಾದ ಕಡಲೇಕಾಯಿ, ಬಾದಾಮಿ, ಮುಂತಾದವುಗಳು, ಅವುಗಳಿಂದ ತಯಾರಿಸಿದ ಪದಾರ್ಥಗಳು, ಡೀಡಾಡು, ಪ್ರೋಟೀನು, ಮತ್ತು ಶರ್ಕರ–ಪಿಷ್ಟಗಳನ್ನು ಹದವಾಗಿ ಬೆರೆಸಿ ತಯಾರಿಸಿದ ಹುಗ್ಗಿ ಅಥವಾ ಪೊಂಗಲ್ ಮತ್ತು ದೇಹದ ಉಷ್ಣತೆಯನ್ನು ಕಾಪಾಡಲು ಮೆಣಸಿನ ಖಾರವನ್ನು ಬೆರೆಸಿದ ಖಾರ ಹುಗ್ಗಿ ಅಥವಾ ಪೊಂಗಲ್, ಅಲ್ಲದೆ ಕ್ಷೀರ ಮುಂತಾದ ಸಿಹಿಪದಾರ್ಥಗಳ ಸೇವನೆ ದೇಹವನ್ನು ಬೆಚ್ಚಗಿಡುವುದರ ಜೊತೆಗೆ ಚರ್ಮದ ಕಾಂತಿಯನ್ನು ಕಾಪಾಡಲು ಸಹಾಯವಾಗುತ್ತದೆ. ಹಾಲು, ಹಾಲಿನಿಂದ ತಯಾರಿಸಿದ ಪದಾರ್ಥದ ಸೇವನೆಯು ಚರ್ಮದ ಕಾಂತಿಯನ್ನು ಹೆಚ್ಚಿಸಲು ಸಹಾಯವಾಗುತ್ತದೆ. ಆದರೆ ಅತಿ ತಂಪಾದ ಪದಾರ್ಥ, ಐಸ್ ಕ್ರೀಂ, ಮಂಜುಗಡ್ಡೆ ಬೆರೆಸಿರುವ ಹಣ್ಣಿನ ರಸ, ತಂಪಾದ ಮೊಸರು, ಮಜ್ಜಿಗೆಗಳು ಮುಂತಾದ ಪದಾರ್ಥಗಳ ಸೇವನೆ ದೇಹದಲ್ಲಿನ ರೂಕ್ಷತೆಯನ್ನು ಹೆಚ್ಚಿಸುತ್ತದೆ; ಚರ್ಮದ ಕಾಂತಿಯನ್ನು ಹಾಳುಮಾಡುತ್ತದೆ.

ಬಿಸಿಪದಾರ್ಥಗಳು, ಬಿಸಿನೀರಿನ ಸೇವನೆ ಚರ್ಮಕ್ಕೆ ನೀರಿನಂಶವನ್ನು ಪೂರೈಸಿ ಚರ್ಮದ ಸ್ನಿಗ್ಧತೆ ಮತ್ತು ಕಾಂತಿಯನ್ನು ಹೆಚ್ಚಿಸುತ್ತದೆ. ಶುಂಠಿ ಮತ್ತು ಏಲಕ್ಕಿಗಳನ್ನು ಬೆರೆಸಿ ಕುದಿಸಿದ ನೀರು ಇನ್ನೂ ಶ್ರೇಯಸ್ಕರ. ವಿರುದ್ಧಾಹಾರಗಳಾದ ಹಾಲು ಮತ್ತು ಹಣ್ಣಿನ ಮಿಶ್ರಣ ಸೇವಿಸುವುದು (ಮಿಲ್ಕ್ ಶೇಕ್‌ಗಳು, ಹಾಲು ಬೆರೆಸಿದ ಹಣ್ಣಿನ ಸಲಾಡ್‌ಗಳು) ಹಾಲು ಉಪ್ಪು ಬೆರೆಸಿ ಸೇವಿಸುವುದು, ಹಾಲನ್ನಕ್ಕೆ ಸಾರು, ಪಲ್ಯಗಳನ್ನು ಬೆರೆಸಿ ಸೇವಿಸುವುದು, ಹಾಲನ್ನು ಬೆರೆಸಿ ಮಾಡಿದ ಪದಾರ್ಥಗಳು –ಇವೆಲ್ಲವೂ ಸಾಮಾನ್ಯವಾಗಿ ಆರೋಗ್ಯಕ್ಕೆ ಹಾನಿಕಾರಕಗಳೇ.

ಅದರಲ್ಲೂ ಮುಖ್ಯವಾಗಿ ಚರ್ಮದ ಕಾಂತಿಯನ್ನು ಹಾಳು ಮಾಡಿ, ಅನೇಕ ರೀತಿಯ ಚರ್ಮ ರೋಗಗಳನ್ನು ಉತ್ಪತ್ತಿ ಮಾಡುವುದರಲ್ಲಿ ಮೊದಲನೆಯ ಸ್ಥಾನದಲ್ಲಿ ನಿಲ್ಲುತ್ತದೆ. ಚಳಿಗಾಲದಲ್ಲಿ ಸಹಜವಾಗಿ ಹಸಿವೆ ಹೆಚ್ಚಾಗುತ್ತದೆ. ಆದ್ದರಿಂದಲೇ ನಿಧಾನವಾಗಿ ಜೀರ್ಣವಾಗುವ ಆಹಾರಪದಾರ್ಥಗಳ ಸೇವನೆ ಈ ಕಾಲದಲ್ಲಿ ಹಿತಕರ.

ಚಳಿಗಾಲದಲ್ಲಿ ಕರಾಟೆ, ಟೈಕ್ವೋಂಡೋ ಇತ್ಯಾದಿ ದೈಹಿಕ ಕ್ರೀಡೆಗಳಲ್ಲಿ ತೊಡಗುವಂತೆ ಆಯುರ್ವೇದವು ಹೇಳುತ್ತದೆ. ಹೀಗೆ ಮಾಡುವುದರಿಂದ ಚರ್ಮ ಮತ್ತು ಮಾಂಸಖಂಡಗಳಿಗೆ ರಕ್ತಪರಿಚಲನೆ ಹೆಚ್ಚಾಗಿ, ಚರ್ಮದ ಆರೋಗ್ಯ ಸುಧಾರಿಸುತ್ತದೆ. ಚಳಿಗಾಲದಲ್ಲಿ ಅತಿಯಾಗಿ ನಡೆದಾಡುವುದಕ್ಕಿಂತ ಮೈ ಬೆವರುವಷ್ಟು ವ್ಯಾಯಾಮ ಮಾಡುವುದು ಆರೋಗ್ಯಕರ. ವ್ಯಾಯಾಮದಿಂದ ನಮ್ಮ ಚರ್ಮದ ರಕ್ಷಣೆಯೂ ಆಗುತ್ತದೆ. ಆದರೆ, ಅತಿಯಾದ ವ್ಯಾಯಾಮವು ದೇಹದ ರೂಕ್ಷತೆಯನ್ನು ಹೆಚ್ಚಿಸಬಹುದು. ಬಲಾತೈಲ, ಮಹಾನಾರಾಯಣ ತೈಲ ಮುಂತಾದ ವಾತಶಾಮಕ ತೈಲಗಳಿಂದ ಮೈಗೆ ಎಣ್ಣೆ ಹಚ್ಚಿ ಸ್ನಾನ ಮಾಡುವುದರಿಂದ ಚರ್ಮದ ರೂಕ್ಷತೆ ಕಡಿಮೆಯಾಗಿ, ಕಾಂತಿ ಹೆಚ್ಚುತ್ತದೆ.

ಚರ್ಮದ ರೂಕ್ಷತೆಯನ್ನು ಕಡಿಮೆಮಾಡಿ, ಕಾಂತಿಯನ್ನು ಹೆಚ್ಚಿಸಲು ಅಮೃತಬಳ್ಳಿ ಆಡುಸೋಗೆ, ಕಕ್ಕೆ ಎಂಬಂತಹ ಹಣ್ಣುಗಳನ್ನು ಬೆರೆಸಿ ಕುದಿಸಿ ಕಷಾಯ ಮಾಡಿ ಕುಡಿಯಬಹುದು. ಹೊಂಗೆ ಎಲೆಯನ್ನು ಹಾಕಿ ಕುದಿಸಿದ ನೀರಿನಿಂದ ಸ್ನಾನ ಮಾಡುವುದರಿಂದ ಚಳಿಗಾಲದಲ್ಲಿ ಮಾತ್ರವಲ್ಲದೆ ಇತರೇ ಕಾಲಗಳಲ್ಲೂ ಚರ್ಮಕ್ಕೆ ಸಂಬಂಧಿಸಿದ ರೋಗಗಳನ್ನು ತಡೆಗಟ್ಟಬಹುದು.

ಸ್ನಾನ ಮಾಡುವಾಗ ಸೋಪಿನ ಬದಲು, ಕಡಲೆ ಹಿಟ್ಟು, ಅಂಟುವಾಳದ ಕಾಯಿಯ ಪುಡಿಯನ್ನು ಬಳಸುವುದರಿಂದ ಚಳಿಗಾಲದಲ್ಲಿ ಮೈ ಒಡೆದು ತುರಿಕೆ ಬರುವುದರಿಂದ ದೂರವಿರಬಹುದು.

ಕಾಲಿನ ಹಿಂಬದಿ ಒಡೆದು ರಕ್ತಬರುವುದು ಚಳಿಗಾಲದಲ್ಲಿ ಸಾಮಾನ್ಯವಾಗಿದೆ. ಅದಕ್ಕೆ ಕೊಬ್ಬರಿ ಎಣ್ಣೆ ಮತ್ತು ಎಳ್ಳೆಣ್ಣೆ ಮಿಶ್ರಣಕ್ಕೆ ಸಮಪ್ರಮಾಣ ಜೇನುಮೇಣವನ್ನು ಸೇರಿಸಿ ಕಾಯಿಸಿ, ಮುಲಾಮನ್ನು ತಯಾರಿಸಿಕೊಂಡು ನಿತ್ಯವೂ ಹಚ್ಚುವುದು ಒಳ್ಳೆಯದು. ಕೇವಲ ಅಂಗಾಲು ಮತ್ತು ಹಿಮ್ಮಡಿಗೆ ಕೊಬ್ಬರಿ ಎಣ್ಣೆ ಮತ್ತು ಎಳ್ಳೆಣ್ಣೆಯ ಮಿಶ್ರಣವನ್ನು ಬೆರೆಸಿ ಬಿಸಿಮಾಡಿ ಹಚ್ಚಿ, ಹದವಾದ ಬಿಸಿನೀರಿನಲ್ಲಿ ಪಾದವನ್ನು ಮುಳುಗಿಸಿ ಹತ್ತು ನಿಮಿಷದ ನಂತರ ಮೃದುವಾದ ಬಟ್ಟೆಯಿಂದ ಕಾಲನ್ನು ಒರೆಸುವುದರಿಂದಲೂ ಕಾಲು ಒಡೆಯುವುದು ತಪ್ಪುತ್ತದೆ.

ಚರ್ಮದ ತುರಿಕೆಗೆ ಬೇವು ಮತ್ತು ಅರಿಶಿನವನ್ನು ಬೆರೆಸಿ, ಇಡೀ ದೇಹಕ್ಕೆ ಲೇಪಿಸಿ, ಹತ್ತು ನಿಮಿಷದ ನಂತರ ಸ್ನಾನ ಮಾಡುವುದರಿಂದ ಕಡಿಮೆಯಾಗುತ್ತದೆ. ಅಲ್ಲದೆ ಕಮಲದ ಹೂವನ್ನು ಅರೆದು ಮುಖಕ್ಕೆ ಲೇಪಿಸಿ, ಸುಮಾರು 30 ರಿಂದ 40 ನಿಮಿಷಗಳ ನಂತರ ಮುಖವನ್ನು ತೊಳೆಯುವುದರಿಂದ ಮುಖದ ಕಾಂತಿ ಹೆಚ್ಚಾಗುತ್ತದೆ.

ಹೊಂಗೆ ಎಣ್ಣೆಯನ್ನು ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ ಚಳಿಗಾಲದಲ್ಲಿ ಮೈ ತುರಿಕೆ ಕಡಿಮೆಯಾಗುತ್ತದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

12) ಯೂಕ್ಲಿಡ್‌ನ ಭಾಗಾಕಾರ ಸಿದ್ಧಾಂತ ಪ್ರತಿಜ್ಞೆಯನ್ನು ಉಪಯೋಗಿಸಿ, ಯಾವುದೇ ಧನಸಂಖ್ಯೆಯ ವರ್ಗವು 3m ಅಥವಾ 3m +1 ರೂಪದಲ್ಲಿರುತ್ತದೆಂದು ಮತ್ತು 3m+2 ರೂಪದಲ್ಲಿರುವುದಿಲ್ಲ ಎಂದು ತೋರಿಸಿ. ಇಲ್ಲಿ m ಒಂದು ಪೂರ್ಣಾಂಕ.

ಪರಿಹಾರ:– 'a'ಯು ಒಂದು ಧನಪೂರ್ಣಾಂಕವಾಗಿರಲಿ. ಆಗ ಅದು

3q (or) 3q+1 (or) 3q+2 ರೂಪದಲ್ಲಿರುತ್ತದೆ.

ಆಗ ಈ ಪ್ರಕಾರದಲ್ಲಿರಬಹುದು

ಪ್ರಕಾರ 1: $a = 3q$ ಆದಾಗ,

$a^2 = (3q)^2 = 9q^2 = 3q\,(3q) = 3m$ ಇಲ್ಲಿ $m = 3q^2$

ಪ್ರಕಾರ 2 : $a = 3q + 1$ ಆದಾಗ

$\Rightarrow a^2 = (3q+1)^2 = (3q)^2 + 2\,(3q)(1) + (1)^2 = 3q\,(3q+2) + 1$

$= 3m + 1$ ಇಲ್ಲಿ $m = q\,(3q+2)$

ಪ್ರಕಾರ 3: $a = 3q + 2$ ಆದಾಗ

$\Rightarrow a^2 = (3q+2)^2 = (3q)^2 + 2\,(3q)(2) + (2)^2$

$= 9q^2 + 12q + 4 = 9q^2 + 12q + 3 + 1$

$= 3(3q^2 + 4q + 1) + 1$

$= 3m + 1$ ಇಲ್ಲಿ $m = 3q^2 + 4q + 1$

ಆದ್ದರಿಂದ 'a' ಯು 3m ಅಥವಾ 3m+1 ಆಗಿದೆ.

13) ಒಂದು ನಾಣ್ಯವನ್ನು ಎರಡು ಬಾರಿ ಚಿಮ್ಮಿದಾಗ, ಕೆಳಗಿನ ಘಟನೆಗಳನ್ನು ಪಡೆಯುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

(i) ಎರಡು ಶಿರಗಳು (ii) ಕನಿಷ್ಠ ಒಂದು ಶಿರ

(iii) ಶಿರ ಇಲ್ಲದಂತೆ (iv) ನಿರ್ದಿಷ್ಟವಾಗಿ ಒಂದು ಪುಚ್ಛ

ಪರಿಹಾರ: ಒಂದು ನಾಣ್ಯವನ್ನು ಎರಡು ಬಾರಿ ಚಿಮ್ಮಿದಾಗ ಉಂಟಾಗುವ ಫಲಿತ ಗಣವು

$S = \{HH, TT, HT, TH\} \quad \therefore n(S) = 4$

(i) 'A' ಎಂಬುದು ಎರಡು ಶಿರಗಳನ್ನು ಪಡೆಯುವ ಘಟನೆಯಾಗಿರಲಿ.

$A = \{HH\} \quad \therefore n(A) = 1$

$$\therefore P(A) = \frac{n(A)}{n(S)} = \frac{1}{4}$$

(ii) 'B' ಎಂಬುದು ಕನಿಷ್ಠ ಒಂದು ಶಿರವನ್ನು ಪಡೆಯುವ ಘಟನೆಯಾಗಿರಲಿ.

$B = \{HH, HT, TH\} \quad \therefore n(B) = 3$

$$\therefore P(B) = \frac{n(B)}{n(S)} = \frac{3}{4}$$

(iii) Cಂಬುದು ಒಂದೂ ಶಿರವನ್ನು ಪಡೆಯದ ಘಟನೆಯಾಗಿರಲಿ.

$C = \{TT\} \quad \therefore n(C) = 1$

$$\therefore P(C) = \frac{n(C)}{n(S)} = \frac{1}{4}$$

(iv) D ಎಂಬುದು ನಿರ್ದಿಷ್ಟವಾಗಿ ಒಂದು ಪುಚ್ಛವನ್ನು ಪಡೆಯುವ ಘಟನೆಯಾಗಿರಲಿ.

$D = \{HT, TH\} \quad \therefore n(D) = 2$

$$\therefore P(D) = \frac{n(D)}{n(S)} = \frac{2}{4}$$

14) ಎರಡು ಏಕಕೇಂದ್ರಿಯ ವೃತ್ತಗಳ ತ್ರಿಜ್ಯಗಳು 5cm ಮತ್ತು 3cm ಆಗಿವೆ. ಚಿಕ್ಕ ವೃತ್ತಕ್ಕೆ ಸ್ಪರ್ಶಿಸುವಂತೆ ದೊಡ್ಡ ವೃತ್ತದ ಜ್ಯಾದ ಉದ್ದವನ್ನು ಕಂಡುಹಿಡಿಯಿರಿ.

ಪರಿಹಾರ:– ಸಮಸ್ಯೆಯನ್ನು ಆಧರಿಸಿ ಕೆಳಗಿನಂತೆ ರೇಖಾ ನಕ್ಷೆಯನ್ನು ಬರೆಯೋಣ. ಎರಡು ಏಕಕೇಂದ್ರಿಯ ವೃತ್ತಗಳ ತ್ರಿಜ್ಯಗಳು 5cm ಮತ್ತು 3cm ಆಗಿವೆ. ಇದರ ಕೇಂದ್ರ ಆಗಿರಲಿ, AB ರೇಖಾಖಂಡವನ್ನು ರಚಿಸಿ ಅದೂ ಒಳಗಿರುವ ಸಣ್ಣ ವೃತ್ತಕ್ಕೆ P ಬಿಂದುವಿನಲ್ಲಿ ಸ್ಪರ್ಶಿಸುವಂತೆ ಇರಲಿ.



ಎರಡು ಏಕಕೇಂದ್ರಿಯ ವೃತ್ತಗಳ ತ್ರಿಜ್ಯಗಳು 5cm ಮತ್ತು 3cm ಆಗಿವೆ. ಇದರ ಕೇಂದ್ರ ಆಗಿರಲಿ, AB ರೇಖಾಖಂಡವನ್ನು ರಚಿಸಿ ಅದೂ ಒಳಗಿರುವ ಸಣ್ಣ ವೃತ್ತಕ್ಕೆ P ಬಿಂದುವಿನಲ್ಲಿ ಸ್ಪರ್ಶಿಸುವಂತೆ ಇರಲಿ.

ಅಂದರೆ AB ಯು ಸಣ್ಣವೃತ್ತಕ್ಕೆ ಸ್ಪರ್ಶಕವಾಗಿದೆ ಹೀಗಾಗಿಯೇ

$\therefore OP \perp AB$

OPA ತ್ರಿಭುಜದಲ್ಲಿ

$OA^2 = AP^2 + OP^2$

$5^2 = AP^2 + 3^2$

$AP^2 = 25 - 9$

$AP = 4$

APಯು PBಗೆ ಸಮವಾಗಿದೆ

ಹೀಗಾಗಿ $AB = 2AP = 2 \times 4 = 8$ cm

ದೊಡ್ಡ ವೃತ್ತದ ಜ್ಯಾದ ಉದ್ದ= 8 cm

15) ಒಬ್ಬ ವ್ಯಕ್ತಿಯು 3 ಬ್ಯಾಟ್‌ಗಳು ಮತ್ತು 2 ಚೆಂಡುಗಳನ್ನು ರೂ 960 ಪಾವತಿಸಿ ಕೊಂಡುಕೊಳ್ಳುತ್ತಾನೆ ಒಂದು ಬ್ಯಾಟ್‌ನ ಬೆಲೆಯನ್ನು ಕಂಡುಹಿಡಿಯಿರಿ

ಉತ್ತರ:–

$3x + 2y = 960$

$3 \times 300 + 2y = 960$

$900 + 2y = 960$

$2y = 960 - 900$

$2y = 60$

$y = \frac{60}{2}$

$\boxed{y = 30}$

16) (ಮಾದರಿ–2024 ಆಗಸ್ಟ್)

cosec (90° – θ) × cos θ ದ ಬೆಲೆಯನ್ನು ಕಂಡುಹಿಡಿಯಿರಿ.

ಉತ್ತರ:

$\text{cosec}\,(90 - \theta) \times \cos\theta$

$\sec\theta \times \cos\theta$

$\frac{1}{\cos\theta} \times \cos\theta$

$= 1$

17) ಒಬ್ಬ ಜೀವ ವಿಮಾ ಏಜೆಂಟರು ಪಡೆದ 100 ಪಾಲಿಸಿದಾರರ ವಯಸ್ಸುಗಳ ವಿವರಣೆಯ ದತ್ತಾಂಶಗಳು ಕೆಳಗಿನಂತೆ ಇವೆ. ಪಾಲಿಸಿಗಳನ್ನು 18 ವರ್ಷ ದಾಟಿದ ಮತ್ತು 60 ವರ್ಷಕ್ಕಿಂತ ಕಡಿಮೆ ವಯಸ್ಸಿರುವ ಜನರಿಗೆ ಮಾತ್ರ ನೀಡಿದ್ದರೆ ವಯಸ್ಸುಗಳ ಮಧ್ಯಾಂಕವನ್ನು ಲೆಕ್ಕಾಚಾರ ಮಾಡಿ

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS

REVISION: MODEL QUESTIONS

2. Write the SI unit of charge.

Ans:- Coulomb (or) C

3. 'The charges are additive in nature'. Explain.

Ans:- The additive nature of charge is one of the property of electric charge. The entire electric charge of a system is equal to the algebraic sum of electric charges located in the system. This is the law of superimposition of electric charge.

4. What are intrinsic and extrinsic semiconductors?

Ans:- Intrinsic semiconductors are pure materials (like pure Si or Ge) with equal electrons and holes, having low conductivity, while extrinsic semiconductors are created by "doping" impurities (like P or B) into them, drastically increasing conductivity and creating majority carriers (electrons in n-type, holes in p-type) for electronic devices

5. State Faraday's law and Lenz's law of electromagnetic induction.

Ans:- Faraday's law considers how the changing magnetic fields can cause current to flow in wires. Lenz's law in electromagnetic induction states that the direction of the induced current will be such that the magnetic field generated by the induced current will oppose the initial changing magnetic field which created it.

6. Name the scientist who confirmed the existences of electromagnetic wave.

Ans:- Maxwell

7. Draw the pattern of magnetic field lines for a bar magnet.

Ans:-



8. Name the charge carriers in metallic conductors.

Ans:- Free electrons

9. Give the expression foe energy stored in an inductance coil carrying current.

Ans:- $U = \frac{1}{2} L I^2$

9. North Pole of a bar magnet is moved towards a metal ring. What is the direction of induced current in the ring when viewed from magnet side?

Ans:- Anticlock wise.

10. How is r.m.s voltage of a.c related to peak value of a.c voltage?

Ans:-

$$V_{rms} = \frac{V_o}{\sqrt{2}} \quad (\text{or}) \quad V_{rms} = \frac{V_m}{\sqrt{2}}$$

11. What is wavefront of light waves?

Ans:- Wavefront is the locus of points which oscillate in phase. It is the surface of constant phase.

12. What is interference of light? Give an example.

Ans;- Interference of light is the phenomenon of redistribution of light energy due to the superposition of light waves from two coherent sources. Eg:- The Soap bubbles appear coloured in sunlight due to the interference of light reflected from the soap bubble.

13. Give two differences between Fresnel diffraction and Fraunhofer diffraction.

Ans:- Two key differences between Fresnel and Fraunhofer diffraction are : the distance to the source/screen (finite vs. infinite), **leading to** spherical vs. plane wavefronts**, and the** nature of the pattern (changing vs. constant), with Fraunhofer often requiring lenses for analysis while Fresnel doesn't.

Fresnel is near-field (spherical waves, changing patterns), while Fraunhofer is far-field (plane waves, constant patterns).

14. What are meant by 'electric dipole' and 'electric dipole moment'?

Ans:- A pair of two equal and opposite charges separated by certain distance is called an electric dipole. Electric dipole moment of an electric dipole is defined as the product of the magnitude of either charge of the electric dipole and the dipole length.

15. Two capacitors of capacitance 3 μF and 6μF are connected in series. Calculate their effective capacitance.

Ans:- To calculate the effective capacitance of two capacitors of capacitance 3 μF and 6μF are connected in series.

We know that the two capacitors C_1 and C_2 are connected in series then effective capacitance is given by –

$$\frac{1}{C} = \frac{1}{C_1} + \frac{1}{C_2} \Rightarrow C = \frac{C_1 C_2}{C_1 + C_2}$$

Given, $C_1 = 3\ \mu F$ and $C_2 = 6\ \mu F$

$$\therefore C = \frac{C_1 C_2}{C_1 + C_2} = \frac{3 \times 2}{3 + 2} = \frac{6}{5} = 1.2\mu\ F$$

16. State Kirchoffs laws of electrical network.

Ans:- Kirchoffs laws of electrical network

Kirchoffs First law (The junction Law or Kirchoffs Current Law) states that – the sum of all the currents entering any point (or junction) must be equal to the sum of all currents leaving that point (junction).

Kirchoffs Second law (The Loop Law or Kirchoffs Voltage Law) states that – the algebraic sum of all voltages ie., the potential differences across all elements and e.m.fs of all sources in any closed electrical circuit is zero.

17. Define the terms 'Declination' and 'Inclination' at a place.

Ans:- 'Declination':- The magnetic declination at a place is defined as the angle between geographic Meridian and magnetic meridian at that place. *(Contd.)*

ಮೇ 25ರ ನಂತರ ಚುನಾವಣೆ

ಜಿಬಿಎ: 369 ವಾರ್ಡ್‌ಗಳ ಮತದಾರರ ಕರಡು ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಿಗೆ ಮೇ 25ರ ನಂತರ ಜೂನ್ 30ರೊಳಗೆ ಚುನಾವಣೆ ನಡೆಸಲಾಗುವುದು ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್.ಸಂಗ್ರೇಶಿ ತಿಳಿಸಿದರು.

ಐದು ನಗರ ಪಾಲಿಕೆಗಳ 369 ವಾರ್ಡ್‌ಗಳ ಮತದಾರರ ಕರಡು ಪಟ್ಟಿಯನ್ನು ಮಂಗಳವಾರ ಪ್ರಕಟಿಸಿ ಮಾತನಾಡಿದ ಅವರು, 'ಸುಪ್ರೀಂ ಕೋರ್ಟ್ ಆದೇಶದಂತೆ ಚುನಾವಣೆ ನಡೆಯಲಿದೆ' ಎಂದರು.

'ಮತದಾರರ ಕರಡು ಪಟ್ಟಿಯಲ್ಲಿ ಹೆಸರಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು. ಹೆಸರಿಲ್ಲದಿದ್ದರೆ ಕೂಡಲೇ ಅರ್ಜಿ ಸಲ್ಲಿಸಿ ಮತದಾರರ ಪಟ್ಟಿಗೆ ಸೇರ್ಪಡೆ ಮಾಡಿಕೊಳ್ಳುವ ಅವಕಾಶವಿದೆ. 18 ವರ್ಷ ತುಂಬಿದ ಎಲ್ಲರೂ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಬಹುದು' ಎಂದು ತಿಳಿಸಿದರು.

2025ರ ಅಕ್ಟೋಬರ್ 1ರ ಮಾಹಿತಿಯಂತೆ ಮತದಾರರ ಕರಡು ಪಟ್ಟಿ ತಯಾರಿಸಲಾಗಿದೆ. ಜ.20 ರಿಂದ ಫೆಬ್ರುವರಿ 3ರವರೆಗೆ ಮತಗಟ್ಟೆ ಅಧಿಕಾರಿಗಳು (ಬಿಎಲ್‌ಒ) ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದು, ಈ ಅವಧಿಯಲ್ಲಿ ಹಕ್ಕು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಹಕ್ಕು ಹಾಗೂ ಆಕ್ಷೇಪಣೆಗಳ ವಿಲೇವಾರಿಯು ಫೆ.4ರಿಂದ 18ರವರೆಗೆ ನಡೆಯಲಿದ್ದು, ಮಾರ್ಚ್ 16ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಿಸಲಾಗುತ್ತದೆ' ಎಂದು ಮಾಹಿತಿ ನೀಡಿದರು.

ವೆಬ್‌ಸೈಟ್‌ನಲ್ಲಿ ಮತದಾರರ ಪಟ್ಟಿ: ವಾರ್ಡ್‌ವಾರು ಮತದಾರರ ಕರಡು ಪಟ್ಟಿಯನ್ನು ಜಿಬಿಎ ಅಧಿಕೃತ ಜಾಲತಾಣದಲ್ಲಿ (https://gba.karnataka.gov.in/home) ಪಿಡಿಎಫ್‌ನಲ್ಲಿ ಪ್ರಕಟಿಸಲಾಗಿದೆ. ಅದನ್ನು ಪರಿಶೀಲಿಸಿಕೊಳ್ಳಬೇಕು. ಗೊಂದಲವಿದ್ದರೆ ನಗರ ಪಾಲಿಕೆವಾರು ಸಹಾಯವಾಣಿ ಸ್ಥಾಪಿಸಿದ್ದು, ಕರೆ ಮಾಡಿ ಪರಿಹರಿಸಿಕೊಳ್ಳಬಹುದು ಎಂದರು.

ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025ರಂತೆ ವಾರ್ಡ್‌ವಾರು ಮತದಾರರ ಪಟ್ಟಿ ಸಿದ್ಧತೆಗೆ, ಆಯೋಗದಿಂದ ನೇಮಕಗೊಂಡ ಮತದಾರರ ನೋಂದಣಾಧಿಕಾರಿ / ಸಹಾಯಕ ಮತದಾರರ ನೋಂದಣಾಧಿಕಾರಿ / ಬಿಎಲ್‌ಒ ಅವರ ಬಳಿ , ನಮೂನೆ 4 –ಮತದಾರರ ಹೆಸರು ಸೇರ್ಪಡೆಗೆ, ನಮೂನೆ 5– ಹೆಸರು ಸೇರ್ಪಡೆಗೆ ಆಕ್ಷೇಪಣೆ, ನಮೂನೆ 6– ಹೆಸರು ತಿದ್ದುಪಡಿಗೆ, ನಮೂನೆ 7– ಸ್ಥಳ ಬದಲಾವಣೆಗೆ, ನಮೂನೆ 8– ಹೆಸರು ತೆಗೆದುಹಾಕಲು ಅಗತ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು ಸಲ್ಲಿಸಬಹುದು ಎಂದು ಮಾಹಿತಿ ನೀಡಿದರು.

25 ವರ್ಷಗಳ ನಂತರ ಮತಪತ್ರ

ಬೆಂಗಳೂರು ಮಹಾನಗರ ಪಾಲಿಕೆಯ 100 ವಾರ್ಡ್‌ಗಳಿಗೆ 2001ರಲ್ಲಿ ನಡೆದಿದ್ದ ಚುನಾವಣೆಯಲ್ಲಿ ಮತ ಪತ್ರ ಬಳಸಲಾಯಿತು.

2010ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳಿಗೆ ಚುನಾವಣೆ ನಡೆದಾಗ ಇವಿಎಂ ಬಳಸಲಾಗಿತ್ತು. 2015ರಲ್ಲಿಯೂ ಇವಿಎಂ ಉಪಯೋಗಿಸಲಾಗಿತ್ತು. 2025ರಲ್ಲಿ ಜಿಬಿಎ, ಐದು ನಗರ ಪಾಲಿಕೆಗಳು ರಚನೆಯಾಗಿದ್ದು, ಈ ನಗರ ಪಾಲಿಕೆಗಳ ಚುನಾವಣೆಗೆ ಮತ ಪತ್ರವನ್ನು ಬಳಸಲು ರಾಜ್ಯ ಚುನಾವಣಾ ಆಯೋಗ ನಿರ್ಧರಿಸಿದೆ. 25 ವರ್ಷಗಳ ನಂತರ, ಬೆಂಗಳೂರಿನಲ್ಲಿ ನಡೆಯುವ ಚುನಾವಣೆಗೆ ಮತ ಪತ್ರ ಬಳಕೆಯಾಗಲಿದೆ.

ಮತಪಟ್ಟಿ ಸಹಾಯವಾಣಿ

ಬೆಂಗಳೂರು ಕೇಂದ್ರ	080-22975803
ಬೆಂಗಳೂರು ಉತ್ತರ	080-22975936
ಬೆಂಗಳೂರು ದಕ್ಷಿಣ	9480685704
ಬೆಂಗಳೂರು ಪೂರ್ವ	9480685706
ಬೆಂಗಳೂರು ಪಶ್ಚಿಮ	9480685703

'ಮತ ಪತ್ರ ಬಳಕೆಗೆ ಕಾನೂನಿನಲ್ಲಿ ಅವಕಾಶ'

'ಜಿಬಿಎ ವ್ಯಾಪ್ತಿಯ ನಗರ ಪಾಲಿಕೆ ಚುನಾವಣೆಗಳಲ್ಲಿ ಮತ ಪತ್ರ ಬಳಸುವ ವಿಚಾರ ರಾಜ್ಯ ಚುನಾವಣಾ ಆಯೋಗಕ್ಕೆ ಬಿಟ್ಟದ್ದು. ಆಯೋಗವು ಸ್ವತಂತ್ರ ಸಂಸ್ಥೆಯಾಗಿದ್ದು, ಅದನ್ನು ತೀರ್ಮಾನಿಸುವ ಅಧಿಕಾರ ಅವರಿಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.



'ಬಿಜೆಪಿ ಅಧಿಕಾರದಲ್ಲಿದ್ದಾಗಲೇ 2020ರಲ್ಲಿ ತಂದ ಕಾನೂನಿನಲ್ಲಿ ಮತ ಪತ್ರ ಬಳಸಲು ಅವಕಾಶ ನೀಡಲಾಗಿದೆ. ನಾವು ಅದನ್ನು ಮುಂದುವರಿಸುತ್ತಿದ್ದೇವೆ. ಮತ ಪತ್ರ ಬಳಸುವುದರಲ್ಲಿ ತಪ್ಪೇನೂ ಇಲ್ಲ. ಯಾವ ರೂಪದಲ್ಲಿ ಚುನಾವಣೆ ನಡೆಸಲಾಗುವುದು ಎಂಬುದಕ್ಕಿಂತ ಮತದಾನ ನಡೆಯುವುದು ಬಹಳ ಮುಖ್ಯ' ಎಂದು ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದರು.

14,25,483	ಕೇಂದ್ರ ನಗರ ಪಾಲಿಕೆಯಲ್ಲಿರುವ ಒಟ್ಟು ಮತದಾರರು
ಪುರುಷರು: 7,26,352 | ಮಹಿಳೆಯರು: 6,98,828 | ಇತರೆ: 303	
1,305	ಮತಗಟ್ಟೆಗಳು
32,898	ವಾರ್ಡ್– 52 ಪಾದರಾಯನಪುರದಲ್ಲಿ ಅತಿ ಹೆಚ್ಚು ಮತದಾರರು
15,407	ವಾರ್ಡ್–15 ಇಂದಿರಾನಗರದಲ್ಲಿ ಅತಿ ಕಡಿಮೆ ಮತದಾರರು
19,54,206	ಉತ್ತರ ನಗರ ಪಾಲಿಕೆಯಲ್ಲಿರುವ ಒಟ್ಟು ಮತದಾರರು
ಪುರುಷರು: 9,94,310 | ಮಹಿಳೆಯರು: 9,59,515 | ಇತರೆ: 381	
1,716	ಮತಗಟ್ಟೆಗಳು
45,892	ವಾರ್ಡ್– 20 ಸಂಪಿಗೆಹಳ್ಳಿಯಲ್ಲಿ ಅತಿ ಹೆಚ್ಚು ಮತದಾರರು
16,968	ವಾರ್ಡ್–60 ಜಾಲಹಳ್ಳಿಯಲ್ಲಿ ಅತಿ ಕಡಿಮೆ ಮತದಾರರು
17,44,270	ದಕ್ಷಿಣ ನಗರ ಪಾಲಿಕೆಯಲ್ಲಿರುವ ಒಟ್ಟು ಮತದಾರರು
ಪುರುಷರು: 9,03,182 | ಮಹಿಳೆಯರು: 8,40,863 | ಇತರೆ: 225	
1,614	ಮತಗಟ್ಟೆಗಳು
49,518	ವಾರ್ಡ್– 51 ಸುಬ್ರಹ್ಮಣ್ಯಪುರದಲ್ಲಿ ಅತಿ ಹೆಚ್ಚು ಮತದಾರರು
14,454	ವಾರ್ಡ್–11 ಜಯನಗರ ಪೂರ್ವದಲ್ಲಿ ಅತಿ ಕಡಿಮೆ ಮತದಾರರು
10,41,738	ಪೂರ್ವ ನಗರ ಪಾಲಿಕೆಯಲ್ಲಿರುವ ಒಟ್ಟು ಮತದಾರರು
ಪುರುಷರು: 5,49,313 | ಮಹಿಳೆಯರು: 4,92,167 | ಇತರೆ: 258	
916	ಮತಗಟ್ಟೆಗಳು
35.678	ವಾರ್ಡ್– 6 ಕಲ್ಕೆರೆಯಲ್ಲಿ ಅತಿ ಹೆಚ್ಚು ಮತದಾರರು
10,926	ವಾರ್ಡ್–16 ಕೊತ್ತೂರಿನಲ್ಲಿ ಅತಿ ಕಡಿಮೆ ಮತದಾರರು
27,25,714	ಪಶ್ಚಿಮ ನಗರ ಪಾಲಿಕೆಯಲ್ಲಿರುವ ಒಟ್ಟು ಮತದಾರರು
ಪುರುಷರು: 13,96,036 | ಮಹಿಳೆಯರು: 13,29,210 | ಇತರೆ: 468	
2493	ಮತಗಟ್ಟೆಗಳು
49,530	ವಾರ್ಡ್– 23 ರಾಜರಾಜೇಶ್ವರಿನಗರದಲ್ಲಿ ಅತಿ ಹೆಚ್ಚು ಮತದಾರರು
15,059	ವಾರ್ಡ್–3 ನೆಲಗದರನಹಳ್ಳಿಯಲ್ಲಿ ಅತಿ ಕಡಿಮೆ ಮತದಾರರು

ಮದುವೆ ನೆಪದಲ್ಲಿ ವಂಚನೆ: ಬಂಧನ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆ ಆಗುವುದಾಗಿ ನಂಬಿಸಿ, ₹1.53 ಕೋಟಿ ಪಡೆದು ಮಹಿಳಾ ಟೆಕಿಗೆ ವಂಚಿಸಿದ್ದ ಪ್ರಕರಣದ ಸಂಬಂಧ ವಿಜಯ್‌ರಾಜ್ ಗೌಡ ಎಂಬುವರನ್ನು ಕೆಂಗೇರಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ವಿಜಯ್‌ರಾಜ್ ಗೌಡ ಅವರ ಪತ್ನಿ ಸೌಮ್ಯಾ ಹಾಗೂ ಅವರ ತಂದೆ ಯು.ಜೆ. ಬೋರೇಗೌಡ ಅವರನ್ನು ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ವೈಟ್‌ಫೀಲ್ಡ್ ನಿವಾಸಿ, 29 ವರ್ಷದ ಯುವತಿ ನೀಡಿದ ದೂರು ಆಧರಿಸಿ, ಕೆಂಗೇರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ. ವಿಜಯ್ ಅವರು ಬಿ.ಇ ಪದವೀಧರರಾಗಿದ್ದು, ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

'2024ರ ಮಾರ್ಚ್‌ನಲ್ಲಿ ಮ್ಯಾಟ್ರಿಮೋನಿ ವೆಬ್‌ಸೈಟ್ ಮೂಲಕ ವಿಜಯ್ ರಾಜ್ ಪರಿಚಯವಾಯಿತು. ವಿ.ಆರ್.ಜಿ ಎಂಟರ್‌ಪ್ರೈಸಸ್ ಎಂಬ ಕಂಪನಿ ಇದ್ದು, ರಾಜಾಜಿನಗರ ಮತ್ತು ಸದಾಶಿವನಗರದಲ್ಲಿ ಮನೆಗಳಿವೆ ಎಂದು ಹೇಳಿಕೊಂಡಿದ್ದರು. ಬೆಂಗಳೂರಿನಲ್ಲಿ ₹715 ಕೋಟಿ ಆಸ್ತಿ ಇದೆ ಎಂದು ನಂಬಿಸಿದ್ದರು. ಒಟ್ಟಿಗೆ ಸೇರಿ ಬ್ಯುಸಿನೆಸ್ ಮಾಡುವ ನೆಪ ಹೇಳಿ ಹಂತ ಹಂತವಾಗಿ ₹1.75 ಕೋಟಿ ಪಡೆದುಕೊಂಡಿದ್ದರು' ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಕೆಂಗೇರಿ ಬಳಿ ನನ್ನನ್ನು ಕರೆಯಿಸಿಕೊಂಡು ತನ್ನ ಕುಟುಂಬದವರಿಗೆ ಪರಿಚಯಿಸಿದ್ದರು. ಪರಿಚಯ ಗಟ್ಟಿಯಾದ ನಂತರ ವಿಜಯ್, ತನ್ನ ಆಸ್ತಿಯ ಸಂಬಂಧ ಇ.ಡಿ ದಾಳಿಯಲ್ಲಿ ಪ್ರಕರಣ ದಾಖಲಾಗಿದೆ, ಬ್ಯಾಂಕ್ ಖಾತೆಗಳು ಫ್ರೀಜ್ ಆಗಿವೆ ಎಂದು ವಿವಿಧ ಕೋರ್ಟ್‌ಗಳಲ್ಲಿ ಪ್ರಕರಣ ನಡೆಯುತ್ತಿರುವ ನಕಲಿ ದಾಖಲೆ ತೋರಿಸಿ, ಹಣ ಪಡೆದುಕೊಂಡಿದ್ದರು. ಮದುವೆಗೆ ಹೆಣ್ಣು ನೋಡಲು ನನ್ನ ಮನೆಗೆ ಬರುವುದಾಗಿ ಸುಳ್ಳು ಹೇಳಿ ಮತ್ತೆ ನನ್ನ ಬ್ಯಾಂಕ್ ಖಾತೆಯಿಂದ ಆತನ ಬ್ಯಾಂಕ್ ಖಾತೆಗೆ ಹಣ ಹಾಕಿಸಿಕೊಂಡಿದ್ದರು. ಅಲ್ಲದೇ ಸ್ನೇಹಿತರಿಗೆ ವ್ಯವಹಾರ ಮಾಡಲು ಪ್ರೇರೇಪಿಸಿ ಲಕ್ಷಾಂತರ ರೂಪಾಯಿ ಪಡೆದಿದ್ದಾರೆ' ಎಂದು ಆರೋಪಿಸಿದ್ದಾರೆ.

ಮುಖ್ಯಾಂಶಗಳು

- ನಕಲಿ ದಾಖಲೆ ತೋರಿಸಿ ಹಣ ಪಡೆದ ಆರೋಪಿ
- ವ್ಯವಹಾರದ ನೆಪದಲ್ಲಿ ಲಕ್ಷಾಂತರ ವಂಚನೆ

ಪೊಲೀಸ್ ಇಲಾಖೆಗೆ ಕಳಂಕ: ಶಾಸಕ

ಬೆಂಗಳೂರು: 'ಹಿರಿಯ ಪೊಲೀಸ್ ಅಧಿಕಾರಿ ರಾಮಚಂದ್ರರಾವ್ ಅವರ ಘನಕಾರ್ಯದ ದೃಶ್ಯಾವಳಿಗಳು ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಇಡೀ ಪೊಲೀಸ್ ಇಲಾಖೆಗೆ ಕಳಂಕ ಮೆತ್ತುವ ಕೆಲಸ ಮಾಡಿರುವ ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು' ಎಂದು ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್ ಒತ್ತಾಯಿಸಿದ್ದಾರೆ.

'ರಾಮಚಂದ್ರರಾವ್ ಕಚೇರಿಯಲ್ಲಿ ಈ ಕೃತ್ಯ ನಡೆದಾಗ ಅವರ ಹಿಂದೆ ರಾಷ್ಟ್ರಧ್ವಜವೂ ಕಾಣುತ್ತಿದೆ. ಅಧಿಕಾರಿಯ ಈ ಕೃತ್ಯ ರಾಷ್ಟ್ರಧ್ವಜಕ್ಕೂ ಸಂದಿರುವ ಅಗೌರವ ಮತ್ತು ಅಪಚಾರ' ಎಂದು ಅವರು ತಿಳಿಸಿದ್ದಾರೆ.

'ಈ ಹಿಂದೆ ಚಿನ್ನದ ಕಳ್ಳಸಾಗಣೆ ನಡೆದಿದ್ದಾಗ ಈ ಅಧಿಕಾರಿಯನ್ನು ಕಡ್ಡಾಯ ರಜೆಯ ಮೇಲೆ ಕಳುಹಿಸಿ ಕೈ ತೊಳೆದುಕೊಂಡಿತ್ತು. ಈಗಲೂ ಅದನ್ನೇ ಮಾಡಿ ಕೈತೊಳೆದುಕೊಳ್ಳುವುದು ಸರ್ಕಾರಕ್ಕೆ ಭೂಷಣವಲ್ಲ' ಎಂದಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business Offers

Finance

MSME LOAN
Available For Any Start-UpsCompanies And Existing Running Companies,Hotels,Shops Establishments Etc
Contact-7204995189

JOB OPPORTUNITIES

Hospital & Medical Jobs

WANTED
PHARMACIST D-Pharma / B-Pharma
Contact:Chaitanya Hospital No 80/117 P&T Colony, R.T.Nagar Bangalore-32
Call:9900520357

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PERSONAL

Change of Name

CHANGE OF NAME
I, **Mohan Kumar** S/o Sunder Raj, residing at 63/3, Pillanna Layout, SRK Nagar Post, Thanisandra Main Road, Ashwath Nagar, Bangalore-560077, have changed my name to **S MOHAN KUMAR** vide affidavit dated 16-01-2026 before notary B Seshagiri, Bangalore. Henceforth I shall be called **S MOHAN KUMAR** only

I, MOHANAKUMARA G.G residing at TUMAKURU-572130 have changed my name as MOHAN KUMAR G.G, vide affidavit dated 17/01/2026 before Notary K.S. Bammappanavar, Bengaluru

Lost

ಕಳೆದಿದೆ
ಎನ್.ಎಚ್.ಜಾನಕಮ್ಮ ಆದ ನಾನು ಬೆಂಗಳೂರು – 560096, ನಂದಿನಿ ಬಡಾವಣೆ, 4ನೇ ಬ್ಲಾಕ್, 9ನೇ ಮುಖ್ಯರಸ್ತೆ, ನಂ.143(35)ರಲ್ಲಿ ವಾಸವಾಗಿದ್ದು, ಸೀನಪ್ಪ ಬಡಾವಣೆ, ಅರಿಶಿನಕುಂಟೆಯ ಸರ್ವೆ ನಂ. 30/1 ಕ್ಕೆ ಸೇರಿದ ಸೈಟ್ ನಂ12 ರ ಕ್ರಯ ಪತ್ರ ನಂ.1606/1992–93 ದಿ:20–11–1992 ಕಳೆದುಕೊಂಡಿರುತ್ತೇನೆ. ಯಾರಿಗಾದರು ಸಿಕ್ಕಲ್ಲಿ ನನ್ನನ್ನು ಅಥವಾ ಹತ್ತಿರದ ಪೊಲೀಸ್ ಠಾಣೆ ಸಂಪರ್ಕಿಸಲು ಕೋರುತ್ತಿದ್ದೇನೆ. ಮೊ:9980450475

ಅಪಘಾತ: ತಾಯಿ, ಮಗ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶೋಕನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ವಿವೇಕನಗರದ ಮುಖ್ಯರಸ್ತೆ ದಾಟುತ್ತಿದ್ದ ಸಂದರ್ಭದಲ್ಲಿ ವೇಗವಾಗಿ ಬಂದ ಶಾಲಾ ಬಸ್ ಡಿಕ್ಕಿಯಾಗಿ ತಾಯಿ ಹಾಗೂ ಮಗ ಮೃತಪಟ್ಟಿದ್ದಾರೆ.

ಆಂಧ್ರಪ್ರದೇಶದ ಸಂಗೀತಾ (37) ಹಾಗೂ ಅವರ ಮಗ ಪಾರ್ಥ (8) ಮೃತಪಟ್ಟವರು.

ವಿವೇಕನಗರದಲ್ಲಿ ವಾಸವಾಗಿದ್ದ ಸಂಗೀತಾ, ಆರ್ಮಿ ಪಬ್ಲಿಕ್ ಶಾಲೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು. ಶಾಲೆಗೆ ಹೊರಟಿದ್ದ ಸಂಗೀತಾ ಮತ್ತು ಪಾರ್ಥ ರಸ್ತೆ ದಾಟುತ್ತಿದ್ದರು. ಆಗ ವೇಗವಾಗಿ ಬಂದ ಕಾಲೇಜು ಬಸ್ ಡಿಕ್ಕಿ ಹೊಡೆದಿದೆ. ಕೆಳಕ್ಕೆ ಬಿದ್ದ ಅವರ ಮೇಲೆಯೇ ಬಸ್‌ನ ಚಕ್ರಗಳು ಹರಿದಿದ್ದರಿಂದ ತೀವ್ರವಾಗಿ ಗಾಯಗೊಂಡಿದ್ದರು. ತಾಯಿ ಮತ್ತು ಮಗನನ್ನು ಸ್ಥಳೀಯರು ಹಾಗೂ ಸಂಚಾರ ಪೊಲೀಸರು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದರು. ಮಾರ್ಗ ಮಧ್ಯೆ ಇಬ್ಬರೂ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಸಂಗೀತಾ ಅವರ ಪತಿ ಪ್ರಸಾದ್, ಆಂಧ್ರಪ್ರದೇಶದಲ್ಲಿ ನೆಲಸಿದ್ದಾರೆ. ಕೃಷಿಕರಾದ ಅವರು ಆಗಾಗ್ಗೆ ಬೆಂಗಳೂರಿಗೆ ಬಂದು ಹೋಗುತ್ತಿದ್ದರು. ಸಂಗೀತಾ ದಂಪತಿಗೆ ಇಬ್ಬರು ಮಕ್ಕಳು ಎಂದು ಪೊಲೀಸರು ಹೇಳಿದರು.

ರಸ್ತೆ ದಾಟುವ ವೇಳೆ ಡಿಕ್ಕಿ ಹೊಡೆದ ಬಸ್

ಘಟನೆ ನಡೆದ ಬಳಿಕ ಬಸ್ ಅನ್ನು ಚಾಲಕ ಸ್ಥಳದಲ್ಲೇ ಬಿಟ್ಟು ಪರಾರಿ ಆಗಿದ್ದ. ಚಾಲಕನನ್ನು ಪತ್ತೆ ಮಾಡಿ ಬಂಧಿಸಲಾಗಿದೆ. ಬಸ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಬಸ್ ಚಾಲಕನ ಅಜಾಗರೂಕತೆ ಹಾಗೂ ಅತಿಯಾದ ವೇಗವೇ ಅಪಘಾತಕ್ಕೆ ಕಾರಣ ಎಂದು ಸಂಚಾರ ಪೊಲೀಸರು ಹೇಳಿದರು. ಅಶೋಕನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹1.73 ಕೋಟಿ ಮೌಲ್ಯದ ಹೈಡ್ರೋಪೋನಿಕ್ ಗಾಂಜಾ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆ ನಡೆಸಿದ ಕಸ್ಟಮ್ಸ್ ಅಧಿಕಾರಿಗಳು, ₹1.73 ಕೋಟಿ ಮೌಲ್ಯದ ಹೈಡ್ರೋಪೋನಿಕ್ ಗಾಂಜಾ ಜಪ್ತಿ ಮಾಡಿದ್ದಾರೆ.

ಕೌಲಾಲಂಪುರದಿಂದ ಬಂದ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದ್ದಾರೆ.

ವಿದೇಶದಿಂದ ಬಂದ ವ್ಯಕ್ತಿ ವಿಮಾನ ನಿಲ್ದಾಣದಿಂದ ಹೊರಹೋಗುತ್ತಿದ್ದರು. ಆಗ ಆರೋಪಿಯನ್ನು ತಪಾಸಣೆಗೆ ಒಳಪಡಿಸಲಾಯಿತು. ಅವರ ಬ್ಯಾಗ್‌ನಲ್ಲಿ 4.96 ಕೆ.ಜಿ. ಗಾಂಜಾ ಇತ್ತು. ತಕ್ಷಣವೇ ಅವರನ್ನು ವಶಕ್ಕೆ ಪಡೆದು ಬಂಧಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಹೈಡ್ರೋಪೋನಿಕ್ ಗಾಂಜಾವನ್ನು ಎಲ್ಲಿಗೆ ಪೂರೈಸುತ್ತಿದ್ದರು, ಗ್ರಾಹಕರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಮಾಹಿತಿ ನೀಡಿದ್ದಾರೆ.

ಡ್ರಗ್ಸ್ ಪೆಡ್ಲರ್ ಬಂಧನ: ರಸ್ತೆಬದಿಯಲ್ಲಿ ಬೈಕ್ ನಿಲುಗಡೆ ಮಾಡಿಕೊಂಡು ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಡ್ರಗ್ಸ್ ಪೆಡ್ಲರ್ ಒಬ್ಬರನ್ನು ಜ್ಞಾನಭಾರತಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಗುಜರಾತ್‌ನ ಅಂಬಾ ರಾಮ್ (30) ಬಂಧಿತ ಡ್ರಗ್ಸ್ ಪೆಡ್ಲರ್. ಆರೋಪಿಯಿಂದ 13 ಗ್ರಾಂ ಮಾದಕ ವಸ್ತು ಹಾಗೂ ಒಂದು ದ್ವಿಚಕ್ರ ವಾಹನ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಉಲ್ಲಾಳ ಕೆರೆಯ ಪಕ್ಕದ ರಸ್ತೆಯಲ್ಲಿ ಬೈಕ್ ನಿಲ್ಲಿಸಿಕೊಂಡು ಅಂಬಾ ರಾಮ್ ಅವರು ಡ್ರಗ್ಸ್ ಮಾರಾಟ ಮಾಡುತ್ತಿದ್ದರು. ಖಚಿತ ಮಾಹಿತಿ ಆಧರಿಸಿ, ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಕಾಳ್ಗಿಚ್ಚು: 30 ಎಕರೆ ಕಾಡು ಭಸ್ಮ

ಮೂರು ಕಡೆ ಕಾಣಿಸಿಕೊಂಡಿದ್ದ ಬೆಂಕಿ: ಬೆಂಕಿ ನಂದಿಸುವ ಕಾರ್ಯಾಚರಣೆ ಯಶಸ್ವಿ

ಚನ್ನಪಟ್ಟಣ ತಾಲ್ಲೂಕಿನ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಪಕ್ಕದ ಅಬ್ಬೂರು ಸೆಕ್ಷನ್ ಅರಣ್ಯದಲ್ಲಿ ಕಾಣಿಸಿಕೊಂಡಿದ್ದ ಬೆಂಕಿ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಪ್ರಾದೇಶಿಕ ಅರಣ್ಯ ವಲಯದ ಅಬ್ಬೂರು ಸೆಕ್ಷನ್ ಅರಣ್ಯ, ಅಬ್ಬೂರು ಗುಡ್ಡೆಯ ಪಟ್ಲು ಹಾಗೂ ಕೋಮನಹಳ್ಳಿ ಭಾಗದಲ್ಲಿ ಭಾನುವಾರ ಕಾಣಿಸಿಕೊಂಡಿದ್ದ ಬೆಂಕಿಯಿಂದಾಗಿ ಸುಮಾರು 30 ಎಕರೆ ಪ್ರದೇಶವು ಸುಟ್ಟು ಭಸ್ಮವಾಗಿದೆ.

ವರ್ಷಾರಂಭದಲ್ಲಿ ಸಂಭವಿಸಿರುವ ಈ ಕಾಳ್ಗಿಚ್ಚು ಜಿಲ್ಲೆಯಲ್ಲಿ ಇತ್ತೀಚೆಗೆ ಸಂಭವಿಸಿದ ಕಾಳ್ಗಿಚ್ಚಿನಲ್ಲೇ ಅತಿ ದೊಡ್ಡದು ಎನ್ನಲಾಗಿದೆ.

ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ–275ಗೆ ಹೊಂದಿ ಕೊಂಡಂತಿರುವ ಕಾಡಿನಲ್ಲಿ ಮಧ್ಯಾಹ್ನದಿಂದಲೇ ಬೆಂಕಿಯ ಹೊಗೆ ಕಾಣಿಸಿಕೊಂಡಿತ್ತು.

ಸಂಜೆಯಾಗುತ್ತಿದ್ದಂತೆ ಕಾಳ್ಗಿಚ್ಚಿನ ತೀವ್ರತೆ ಹೆಚ್ಚಾಗಿತ್ತು. ರಾತ್ರಿ ಹೆದ್ದಾರಿಯಲ್ಲಿ ಸಾಗುತ್ತಿದ್ದ ವಾಹನ ಸವಾರರು ತಮ್ಮ ಮೊಬೈಲ್‌ಗಳಲ್ಲಿ ಬೆಂಕಿಯ ಚಿತ್ರ ಮತ್ತು ವಿಡಿಯೊ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು.

ಮಧ್ಯರಾತ್ರಿವರೆಗೆ ಕಾರ್ಯಾಚರಣೆ: 'ಕುರುಚಲು ಕಾಡಿನ ಅರಣ್ಯ ಪ್ರದೇಶದಲ್ಲಿದ್ದ ಸಣ್ಣಪುಟ್ಟ ಗಿಡ–ಮರಗಳು ಹಾಗೂ ಹುಲ್ಲು ಸುಟ್ಟು ಹೋಗಿವೆ. ಸಂಜೆಯಿಂದ ಮಧ್ಯರಾತ್ರಿವರೆಗೆ ಅರಣ್ಯ ಇಲಾಖೆ ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸತತ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದೇವೆ' ಎಂದು ಚನ್ನಪಟ್ಟಣದ ವಲಯ ಅರಣ್ಯಾಧಿಕಾರಿ ಮಲ್ಲೇಶ್ ತಿಳಿಸಿದ್ದಾರೆ.

ಮೊದಲಿಗೆ ಅಬ್ಬೂರು ಸೆಕ್ಷನ್ ಅರಣ್ಯದಲ್ಲಿ ಮಧ್ಯಾಹ್ನ ಕಾಣಿಸಿಕೊಂಡ ಬೆಂಕಿ, ಆನಂತರ ಪಟ್ಲು ಹಾಗೂ ಕೋಮನಹಳ್ಳಿ ಭಾಗಕ್ಕೆ ವ್ಯಾಪಿಸಿದೆ. ಎರಡೂ ಇಲಾಖೆಯ ಮೂರು ತಂಡಗಳು ರಾತ್ರಿ 12ರವರೆಗೆ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದವು ಎಂದು ಹೇಳಿದ್ದಾರೆ.

ಬೆಂಕಿ ಹಚ್ಚಿರುವ ಸಾಧ್ಯತೆ: ಬೆಂಕಿ ಆಕಸ್ಮಿಕವಾಗಿ ಹೊತ್ತಿಕೊಂಡಿರುವ ಸಾಧ್ಯತೆ ಕಡಿಮೆ. ಬೆಟ್ಟದಲ್ಲಿರುವ ಒಣಹುಲ್ಲು ಸುಟ್ಟುಹೋದರೆ ಹೊಸ ಹುಲ್ಲು ಬರುತ್ತದೆ ಎನ್ನುವ ಕಾರಣಕ್ಕೆ ಕೆಲವರು ಬೆಂಕಿ ಹಚ್ಚಿರುವ ಸಾಧ್ಯತೆ ಹೆಚ್ಚಾಗಿದೆ ಎಂದು ಮಲ್ಲೇಶ್ ಅನುಮಾನ ವ್ಯಕ್ತಪಡಿಸಿದ್ದಾರೆ.

ಬೆಟ್ಟಗಳಿಗೆ ಬೆಂಕಿ ಹಚ್ಚುವುದರಿಂದ ಅಲ್ಲಿರುವ ಅರಣ್ಯ ಸಂಪತ್ತು, ಪ್ರಾಣಿ ಸಂಕುಲಕ್ಕೆ ಹಾನಿಯಾಗುತ್ತದೆ ಎಂಬುದನ್ನು ಬೆಂಕಿ ಹಚ್ಚುವವರು ಅರಿತುಕೊಳ್ಳಬೇಕು. ಬೆಟ್ಟಗಳಿಗೆ ಬೆಂಕಿ ಬಿದ್ದಿರುವುದು ತಿಳಿದುಬಂದರೆ ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳು ಅಥವಾ ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಬೇಕು. ಆ ಮೂಲಕ ಅರಣ್ಯ ಸಂಪತ್ತು ರಕ್ಷಿಸಲು ಕೈ ಜೋಡಿಸಬೇಕು ಎಂದು ಮನವಿ ಮಾಡಿದ್ದಾರೆ.

'ಶಿಕ್ಷಕರ ಸೇವೆ ಶ್ಲಾಘನೀಯ'

ಪ್ರಜಾವಾಣಿ ವಾರ್ತೆ

ಗುರುವಂದನೆ ಸಮಾರಂಭದಲ್ಲಿ ಶಿಕ್ಷಕರನ್ನು ಶಾಸಕ ಎಸ್. ಮುನಿರಾಜು ಅಭಿನಂದಿಸಿದರು. ಲಕ್ಷ್ಯ ಕಾಲೇಜಿನ ಅಧ್ಯಕ್ಷರಾದ ಧರ್ಮರಾಜ್, ಶ್ರೀಧರ್, ಕುವೆಂಪು ಕಾಲೇಜಿನ ಟಿ.ಎಸ್. ಗಂಗರಾಜು, ಭರತ್ ಗುಂಡಪ್ಪ, ಗಂಡಸಿ ಸದಾಶಿವ, ಕೃಷ್ಣಮೂರ್ತಿ, ಕುಮಾರ್ ಉಪಸ್ಥಿತರಿದ್ದರು.

ಪೀಣ್ಯ ದಾಸರಹಳ್ಳಿ: 'ಮಕ್ಕಳಿಗೆ ಶಿಸ್ತು, ಜ್ಞಾನ, ಸಂಸ್ಕಾರ, ಸಂಸ್ಕೃತಿ ಮತ್ತು ವಿದ್ಯೆ ಕಲಿಸಿ ಒಳ್ಳೆಯ ಪ್ರಜೆಗಳನ್ನಾಗಿ ಮಾಡುವ ಶಿಕ್ಷಕರ ಕಾರ್ಯ ಶ್ಲಾಘನೀಯ' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಮಲ್ಲಸಂದ್ರದ ಕುವೆಂಪು ಪದವಿ ಪೂರ್ವ ಕಾಲೇಜಿನಲ್ಲಿ ಲಕ್ಷ್ಯ ಕಾಲೇಜಿನ ಸಹಯೋಗದೊಂದಿಗೆ ನಡೆದ ಗುರು ವಂದನೆ ಸಮಾರಂಭದಲ್ಲಿ ಶಿಕ್ಷಕರನ್ನು ಅಭಿನಂದಿಸಿ ಅವರು ಮಾತನಾಡಿದರು.

'ಶಾಲೆಗಳಲ್ಲಿ ಬಡ ಮಕ್ಕಳು ತಮ್ಮ ಪ್ರತಿಭೆ ಮತ್ತು ಶಿಕ್ಷಕರ ಪ್ರೋತ್ಸಾಹದಿಂದ ಹೆಚ್ಚು ಅಂಕ ಪಡೆದು ರಾಜ್ಯಕ್ಕೆ ಮಾದರಿಯಾಗುತ್ತಿದ್ದಾರೆ. ಅಂತಹವರನ್ನು ತಿದ್ದಿ ವಿದ್ಯೆ ಕಲಿಸಿದ ಗುರುಗಳನ್ನು ಮರೆಯಬಾರದು. ಮಕ್ಕಳಲ್ಲಿನ ಅಂಧಕಾರ ಹೋಗಲಾಡಿಸಿ ಬದುಕಿಗೆ ಬೆಳಕು ನೀಡುವ ಗುರುಗಳು ದೇವರಿಗೆ ಸಮಾನ' ಎಂದು ತಿಳಿಸಿದರು.

ಲಕ್ಷ್ಯ ಕಾಲೇಜಿನ ಅಧ್ಯಕ್ಷ ಧರ್ಮರಾಜ್, ಶ್ರೀಧರ್, ಕುವೆಂಪು ಕಾಲೇಜಿನ ಟಿ.ಎಸ್. ಗಂಗರಾಜು, ಭರತ್ ಗುಂಡಪ್ಪ, ಗಂಡಸಿ ಸದಾಶಿವ, ಪ್ರಾಂಶುಪಾಲ ಕೃಷ್ಣಮೂರ್ತಿ, ಕುಮಾರ್ ಉಪಸ್ಥಿತರಿದ್ದರು.

'ಒಂಟಿ ಮನೆ ಯೋಜನೆ ರದ್ದುಪಡಿಸಿ'

ಬೆಂಗಳೂರು: 'ಮರಣ ಶಾಸನದಂತಿರುವ ಒಂಟಿ ಮನೆ ಯೋಜನೆ ರದ್ದು ಮಾಡಿ, ಬಡವರ ಪ್ರಾಣ ಉಳಿಸಿ' ಎಂದು ರಾಜ್ಯ ಅಹಿಂದ ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಕೆ.ಜಿ. ಶ್ರೀನಿವಾಸ್ ಆಗ್ರಹಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '2010ರಿಂದ ಇಲ್ಲಿಯವರೆಗೆ ಮೂರು ಸಾವಿರ ಫಲಾನುಭವಿಗಳು ಮೃತಪಟ್ಟಿದ್ದಾರೆ. ಜಿಬಿಎ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಜಿಬಿಎ ಅಸಹಕಾರದಿಂದಾಗಿ, ಸೂರು ನಿರ್ಮಿಸಿಕೊಳ್ಳಬೇಕು ಎಂಬ ಬಡವರ ಕನಸು ಸಮಾಧಿ ಸೇರಿದೆ. ಇದಕ್ಕೆ ಅಧಿಕಾರಿಗಳ ಬೇಜವಾಬ್ದಾರಿತನವೇ ಕಾರಣ' ಎಂದರು.

ಆಸ್ಪತ್ರೆಗೆ ಗಾಯಾಳು ದಾಖಲಿಸಲು ನೆರವಾದ ಸಚಿವ ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಘಾತದಲ್ಲಿ ಗಾಯಗೊಂಡು ರಸ್ತೆಬದಿಯಲ್ಲಿ ನರಳಾಡುತ್ತಿದ್ದ ವ್ಯಕ್ತಿಯನ್ನು ಸಚಿವ ಪ್ರಿಯಾಂಕ್ ಖರ್ಗೆ ಅವರು ಆಸ್ಪತ್ರೆಗೆ ದಾಖಲಿಸಲು ನೆರವಾದರು.

ಬೈಕ್ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿ, ಸದಾಶಿವನಗರದ ರಸ್ತೆ ಬದಿಯಲ್ಲಿ ನರಳಾಡುತ್ತಿದ್ದರು. ಅದೇ ಮಾರ್ಗವಾಗಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಕಾರಿನಲ್ಲಿ ತೆರಳುತ್ತಿದ್ದರು. ರಸ್ತೆಬದಿಯಲ್ಲಿ ಒದ್ದಾಡುತ್ತಿದ್ದ ಗಾಯಾಳುವನ್ನು ಕಂಡು ತಕ್ಷಣ ಚಾಲಕನಿಗೆ ಕಾರು ನಿಲ್ಲಿಸುವಂತೆ ಸಚಿವರು ಸೂಚಿಸಿದರು. ಬಳಿಕ ಆಂಬುಲೆನ್ಸ್‌ಗೆ ಕಾಯದೇ ತಮ್ಮ ಕಾರಿನಲ್ಲಿಯೇ ಗಾಯಾಳುವನ್ನು ಕೂರಿಸಿಕೊಂಡು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಿಸಿದ್ದಾರೆ.

'ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಯೊಂದಿಗೆ ಚರ್ಚಿಸಿ, ಗಾಯಗೊಂಡ ವ್ಯಕ್ತಿಗೆ ತುರ್ತು ಚಿಕಿತ್ಸೆ ನೀಡುವಂತೆ ಸಚಿವರು ಮನವಿ ಮಾಡಿಕೊಂಡಿದರು. ತಕ್ಷಣವೇ ಗಾಯಾಳುವಿಗೆ ಚಿಕಿತ್ಸೆ ನೀಡಲಾಯಿತು. ಅವರು ಚೇತರಿಸಿಕೊಂಡಿದ್ದಾರೆ' ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

'ವ್ಯರ್ಥ ಯೋಜನೆಗಳಿಗೆ ಕಡಿವಾಣ'

ಬೆಂಗಳೂರು: 'ಆಯೋಗದ ಸಲಹೆ, ಸೂಚನೆ ನಿರ್ಲಕ್ಷಿಸಿ ಬೇಕಾಬಿಟ್ಟಿ ಯೋಜನೆಗಳನ್ನು ರೂಪಿಸುತ್ತಿದ್ದು, ಹಣ ವ್ಯರ್ಥವಾಗಿ ಖರ್ಚಾಗುತ್ತಿದೆ. ಹಲವು ಯೋಜನೆಗಳು ಜನರನ್ನು ತಲುಪದೆ ವಿಫಲವಾಗುತ್ತಿವೆ' ಎಂದು ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ ಹೇಳಿದರು.

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸೋಮವಾರ ಆಯೋಜಿಸಿದ್ದ 'ಅಗತ್ಯ ಪುರಾವೆ ಮತ್ತು ಫಲಿತಾಂಶ ಆಧಾರಿತ ನೀತಿ ಮತ್ತು ಯೋಜನೆ'ಯ ವಿಚಾರಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಆಯೋಗ ನೀಡುವ ವರದಿಯನ್ನು ಬಜೆಟ್‌ನಲ್ಲಿ ಅನುಷ್ಠಾನಗೊಳಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಶಿಕ್ಷಣ, ಕೌಶಲ, ಆರೋಗ್ಯ, ಪೋಷಣೆ, ನೈರ್ಮಲ್ಯ, ನೀರು ಸರಬರಾಜು, ಪರಿಸರ, ಕೃಷಿ, ಮಹಿಳಾ ಮತ್ತು ಮಕ್ಕಳ, ಕಾರ್ಮಿಕ, ಸಮಾಜ ಕಲ್ಯಾಣ ಇಲಾಖೆಗಳಿಗೆ ಒಳ್ಳೆಯ ಯೋಜನೆಗಳನ್ನು ಸೇರಿಸಲು ಪ್ರಯತ್ನ ಮಾಡಲಾಗುತ್ತಿದೆ ಎಂದರು.

ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್.ಪಾಟೀಲ ಮಾತನಾಡಿ, 'ಈ ಬಾರಿಯ ಬಜೆಟ್‌ನಲ್ಲಿ ಕೆಲ ಇಲಾಖೆಗಳಿಗೆ ಆದ್ಯತೆಯನ್ನು ನೀಡಲಾಗಿದೆ. 2027-28ನೇ ಸಾಲಿನ ಯೋಜನೆಗಳು ಜನರ ಯೋಜನೆಗಳಾಗಬೇಕಿವೆ' ಎಂದರು.

ಜನಪದ ಗಾಯಕ ಅಪ್ಪಗೆರೆ ತಿಮ್ಮರಾಜು ಅಭಿಪ್ರಾಯ

'ಜಾನಪದ ಬದುಕಿನ ಮಜಲು ಮಾಯವಾಗುತ್ತಿದೆ'

ಪ್ರಜಾವಾಣಿ ವಾರ್ತೆ

ದೊಡ್ಡಬ್ಯಾಲಕೆರೆಯ ಯೂರೋಕಿಡ್ಸ್ ಪ್ರೀ ಸ್ಕೂಲ್‌ನಲ್ಲಿ ಈಚೆಗೆ ಸಂಕ್ರಾಂತಿ ಹಬ್ಬ ಆಚರಿಸಲಾಯಿತು

ಬೆಂಗಳೂರು: 'ಲಗೋರಿ, ಗಾಳಿಪಟ ಹಾರಿಸುವಂತಹ ಗ್ರಾಮೀಣ ಆಟಗಳು ಆಧುನಿಕ ನಗರ ಜೀವನದ ಮಕ್ಕಳಿಗೆ ಅಪರೂಪ. ಸುಗ್ಗಿ ಹಬ್ಬದ ಈ ಸುಸಂದರ್ಭದಲ್ಲಿ ಅವರಿಗೆ ನಾಡಿನ ಶ್ರೀಮಂತ ಗ್ರಾಮೀಣ ಸಂಸ್ಕೃತಿ ಹಾಗೂ ಕೃಷಿ ಪರಂಪರೆಯ ನೈಜ ಪರಿಚಯ ವಿಶೇಷ ಅನುಭವ ನೀಡಿದೆ' ಎಂದು ಜನಪದ ಗಾಯಕ ಅಪ್ಪಗೆರೆ ತಿಮ್ಮರಾಜು ಅಭಿಪ್ರಾಯಪಟ್ಟರು.

ದೊಡ್ಡಬ್ಯಾಲಕೆರೆಯ ಯೂರೋಕಿಡ್ಸ್ ಪ್ರೀ ಸ್ಕೂಲ್‌ನಲ್ಲಿ ಈಚೆಗೆ ಆಯೋಜಿಸಿದ್ದ ಸಂಕ್ರಾಂತಿ ಹಬ್ಬ ಆಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಶಾಲೆಯ ಆವರಣದಲ್ಲಿ ಗ್ರಾಮೀಣ ವಾತಾವರಣ ನಿರ್ಮಿಸಿರುವುದು ಬಾಲ್ಯದ ಹಳ್ಳಿ ಬದುಕು ನೆನಪಿಸಿತು' ಎಂದರು.

'ಕಾಲಾನುಸಾರ ಜಾನಪದ ಬದುಕಿನ ಮಜಲು ಮತ್ತು ಗ್ರಾಮೀಣ ಆಚರಣೆಗಳು ಮಾಯವಾಗುತ್ತಿವೆ' ಎಂದು ಬೇಸರ ವ್ಯಕ್ತಪಡಿಸಿದರು.

ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಮಾತನಾಡಿ, 'ಇಂತಹ ಕಾರ್ಯಕ್ರಮಗಳು ಮಕ್ಕಳಿಗೆ ನಮ್ಮ ನೆಲಮೂಲ ಆಚರಣೆಗಳ ಅರಿವು ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ' ಎಂದರು.

ಇದೇ ವೇಳೆ ಶಾಲೆಯ ಮಕ್ಕಳು ಜನಪದ ನೃತ್ಯ ಪ್ರದರ್ಶಿಸಿದರು. ಜನಪದ ಗೀತೆಗಳ ಮೂಲಕ ಅಪ್ಪಗೆರೆ ತಿಮ್ಮರಾಜು ರಂಜಿಸಿದರು.

ಚಿತ್ರಾವಳಿ

ಕಲಾದರ್ಪಣ ಆರ್ಟ್ ರಿಫ್ಲೆಕ್ಸ್ ವತಿಯಿಂದ ನಡೆದ ಕಲಾದರ್ಪಣ ಕಿತ್ತೂರು ರಾಣಿ ಚನ್ನಮ್ಮ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಶಾಸಕ ಸಿ.ಕೆ. ರಾಮಮೂರ್ತಿ ಅವರನ್ನು ಗೌರವಿಸಲಾಯಿತು. ಶಾಲಾ ಶಿಕ್ಷಣ ಇಲಾಖೆಯ ಸಮಗ್ರ ಶಿಕ್ಷಣ ನಿರ್ದೇಶಕ ಸತೀಶ್ ಕುಮಾರ್ ಎಸ್. ಹೊಸಮನಿ, ನಿವೃತ್ತ ಪ್ರಾದೇಶಿಕ ಸಾರಿಗೆ ಅಧಿಕಾರಿ ಎಚ್. ರಾಜಣ್ಣ, ಜನಪದ ಗಾಯಕ ಗೋ.ನಾ.ಸ್ವಾಮಿ, ಚಿತ್ರಕಲಾವಿದೆ ಹೇಮಾ ವಿ. ಪಾಟೀಲ್, ಸಂಸ್ಥೆಯ ಕಾರ್ಯದರ್ಶಿ ವಿನಾಯಕ ಪಾಟೀಲ್ ಇದ್ದರು

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಳವಡಿಸಿದ್ದ ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳನ್ನು ಜಿಬಿಎ ಸಿಬ್ಬಂದಿ ಭಾನುವಾರ ತೆರವುಗೊಳಿಸಿದರು

ಅನುಕಂಪದ ಆಧಾರದಲ್ಲಿ ಕೆಎಸ್‌ಆರ್‌ಟಿಸಿಗೆ ನೇಮಕವಾಗಿರುವ 30 ಮಂದಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಆದೇಶ ಪತ್ರ ನೀಡಿದರು. ಕೆಎಸ್‌ಆರ್‌ಟಿಸಿ ಉಪಾಧ್ಯಕ್ಷ ರಿಜ್ವಾನ್ ನವಾಬ್, ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ನಿರ್ದೇಶಕಿ ನಂದಿನಿದೇವಿ ಕೆ. ಉಪಸ್ಥಿತರಿದ್ದರು

ಚುಟುಕು ಸುದ್ದಿ

ಮೀಸಲಾತಿ ನಿಗದಿ: ಮುನ್ನೆಚ್ಚರಿಕೆ ವಹಿಸಿ

ಬೆಂಗಳೂರು: 'ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ನಿಗದಿಪಡಿಸುವ ಮೀಸಲಾತಿಯನ್ನು ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರುವ ಸಾಧ್ಯತೆಗಳಿರುತ್ತವೆ. ಆದ್ದರಿಂದ, ಮೀಸಲಾತಿ ನಿಗದಿ ಪಡಿಸುವಾಗ ಮುನ್ನೆಚ್ಚರಿಕೆ ವಹಿಸಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಸೂಕ್ಷ್ಮವಾಗಿ ಎಚ್ಚರಿಸಿದೆ.

ಕೋಲಾರ ನಗರಸಭೆಯ ಚುನಾಯಿತ ಸದಸ್ಯರ ಅಧಿಕಾರದ ಅವಧಿ ಮುಕ್ತಾಯ ಗೊಂಡಿರುವ ಕಾರಣದಿಂದ ನಗರಾಭಿವೃದ್ಧಿ ಇಲಾಖೆ ಹೊರಡಿಸಿರುವ ಅಧಿಸೂಚನೆಯನ್ನು ಪ್ರಶ್ನಿಸಿ ಎಸ್.ಆರ್. ಮುರಳೀಗೌಡ ಸೇರಿದಂತೆ ಒಟ್ಟು 15 ಜನರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು, '23 ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್‌ವಾರು ಮೀಸಲಾತಿ ಸಿದ್ಧವಾಗಿದ್ದು, ಅನುಮೋದನೆಗಾಗಿ ಸಂಬಂಧಪಟ್ಟ ಖಾತೆಯ ಸಚಿವರಿಗೆ ಕಳುಹಿಸಿಕೊಡಲಾಗಿದೆ' ಎಂದರು.

'ನಮ್ಮಿಬ್ಬರ ತೀರ್ಮಾನ ನಿಮಗೆ ಗೊತ್ತೇ?'

ಶಾಸಕರ ಕಿವಿಯಲ್ಲಿ ಏನೋ ಹೇಳಿದ್ದಕ್ಕೆ ಕಾಯುತ್ತಿದ್ದಾರೆ- ಡಿಕೆಶಿ

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: 'ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಏನು ಮಾತನಾಡಿಕೊಂಡಿದ್ದೇವೆ ಎಂದು ನಿಮಗೆ ಗೊತ್ತಿದೆಯೇ? ರಾಹುಲ್ ಗಾಂಧಿ ಮತ್ತು ಹೈಕಮಾಂಡ್ ಸಮ್ಮುಖದಲ್ಲಿ ಏನು ತೀರ್ಮಾನ ತೆಗೆದುಕೊಂಡಿದ್ದೇವೆ ಎಂದು ನಮಗೆ ಗೊತ್ತಿದೆ. ಅದನ್ನು ಬಹಿರಂಗವಾಗಿ ಚರ್ಚೆ ಮಾಡುವುದಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ದೆಹಲಿ ಪ್ರವಾಸದಿಂದ ಸೋಮವಾರ ವಾಪಸ್ ಆದ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಸಿದ್ದರಾಮಯ್ಯ ಕೂಡ ನನಗೆ ಬೆಂಬಲವಾಗಿದ್ದಾರೆ. ಕಾಂಗ್ರೆಸ್ ಪಕ್ಷದ 140 ಶಾಸಕರೂ ನನ್ನ ಬೆಂಬಲಕ್ಕೆ ಇದ್ದಾರೆ. ನನ್ನ ವಿಚಾರದಲ್ಲಿ ಪಕ್ಷ ಏನು ಹೇಳುತ್ತದೆಯೊ ಅದನ್ನು ಕೇಳುತ್ತೇವೆ ಎಂದು ನಾನು ಮತ್ತು ಮುಖ್ಯಮಂತ್ರಿ ಒಮ್ಮತದ ತೀರ್ಮಾನಕ್ಕೆ ಬಂದಿದ್ದೇವೆ' ಎಂದರು.

'ನಾಯಕತ್ವದ ವಿಚಾರದಲ್ಲಿ ನಿಮ್ಮ ಶಾಸಕರೇ ಚರ್ಚೆ ಮಾಡುತ್ತಿದ್ದಾರೆ' ಎಂದು ಸುದ್ದಿಗಾರರು ಪ್ರಶ್ನಿಸಿದಾಗ, 'ಶಾಸಕರಿಗೆ ಆಸೆ ಇರುತ್ತದೆ. ಅದರಲ್ಲಿ ತಪ್ಪೇನಿದೆ? ನಾವು ಅವರ ಕಿವಿಯಲ್ಲಿ ಏನೋ ಹೇಳಿದ್ದೇವೆ. ಅವರು ಖುಷಿಯಿಂದ ಕಾಯುತ್ತಿದ್ದಾರೆ. ನೋಡೋಣ, ಈಗ ಆ ಮಾತು ಬೇಡ' ಎಂದರು.

'ನಾವು ದೆಹಲಿಗೆ ಹೋಗುವುದೇ ರಾಜಕೀಯ, ಪಕ್ಷ ಹಾಗೂ ಸರ್ಕಾರದ ಕೆಲಸಗಳಿಗೆ. ರಾಹುಲ್ ಗಾಂಧಿ ಅವರನ್ನು ನಾನು ಭೇಟಿಯಾಗಿಲ್ಲ ಎಂದು ಮಾಧ್ಯಮಗಳು ಬರೆದಿವೆ. ಒಂದು ದಿನ ಜೊತೆಯಲ್ಲಿ ಕುಳಿತು ಚರ್ಚೆ ಮಾಡಿರುವ ಛಾಯಾಚಿತ್ರದ ಸಹಿತ ನೀವು (ಮಾಧ್ಯಮಗಳು) ವರದಿ ಮಾಡಿದ್ದೀರಿ. ಮರುದಿನ ಭೇಟಿಯೇ ಆಗಿಲ್ಲ ಎನ್ನುತ್ತೀರಿ. ಈ ವಿಚಾರದಲ್ಲಿ ಕಾಲವೇ ಎಲ್ಲದಕ್ಕೂ ಉತ್ತರ ನೀಡಲಿದೆ' ಎಂದರು.

'ನಾಯಕತ್ವದ ವಿಚಾರದಲ್ಲಿ ನಮ್ಮಲ್ಲಿ ಯಾವುದೇ ಗೊಂದಲಗಳಿಲ್ಲ. ಹೈಕಮಾಂಡ್ ಸೂಕ್ತ ಸಂದರ್ಭದಲ್ಲಿ ನಿರ್ಧಾರ ತೆಗೆದುಕೊಳ್ಳಲಿದೆ. ಆ ತೀರ್ಮಾನಕ್ಕೆ ಬದ್ಧರಾಗಿದ್ದೇವೆ ಎಂದು ನಾನು ಮತ್ತು ಮುಖ್ಯಮಂತ್ರಿ ಹಲವು ಬಾರಿ ಸ್ಪಷ್ಟಪಡಿಸಿದ್ದೇವೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ನಮ್ಮ ರಾಜ್ಯದವರೇ ಆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ನಿರ್ದೇಶನದಂತೆ ನಾವು ಸಾಗುತ್ತೇವೆ. ಈ ವಿಚಾರದಲ್ಲಿ ಗೊಂದಲ ಸೃಷ್ಟಿಸುವುದು ಬೇಡ' ಎಂದರು.

ರಾಹುಲ್ ಜತೆ ಡಿಕೆಶಿ ಎರಡು ಗಂಟೆ ಚರ್ಚೆ: ಸಚಿವ ಪ್ರಿಯಾಂಕ್ ಖರ್ಗೆ

'ದೆಹಲಿಯಲ್ಲಿರುವ ನಮ್ಮ ನಿವಾಸದಲ್ಲಿ ರಾಹುಲ್ ಗಾಂಧಿಯವರನ್ನು ಡಿ.ಕೆ. ಶಿವಕುಮಾರ್ ಭೇಟಿ ಮಾಡಿ ಎರಡು ಗಂಟೆ ಚರ್ಚೆ ನಡೆಸಿದ್ದಾರೆ. ಆಗ ಸಂಸದೆ ಪ್ರಿಯಾಂಕಾ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಕೂಡಾ ಇದ್ದರು' ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ಅಧಿಕಾರ ಹಂಚಿಕೆ ಮತ್ತು ನಾಯಕತ್ವ ಗೊಂದಲದ ಬಗ್ಗೆ ಹರಿದಾಡುತ್ತಿರುವ ಚರ್ಚೆಗಳು ಅಪ್ರಸ್ತುತ' ಎಂದರು.

'ಇಬ್ಬರನ್ನೂ ಕರೆದು ಮಾತನಾಡುತ್ತೇನೆ ಎಂದು ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಅಲ್ಲಿಯವರೆಗೂ ಏನೇ ಮಾತನಾಡಿದರೂ ಉಪಯೋಗವಿಲ್ಲ' ಎಂದರು.

ದಲಿತ ಸಮುದಾಯಕ್ಕೆ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂಬ ಬೇಡಿಕೆಯ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಎಲ್ಲ ಸಮುದಾಯಗಳಿಗೂ ನಾಯಕತ್ವ ಬೆಳೆಸಿಕೊಳ್ಳಬೇಕು ಆಸೆ ಇರುತ್ತದೆ. ಇದು ಸ್ವಾಭಾವಿಕ. ಎಲ್ಲವನ್ನೂ ಗುರುತಿಸಿಯೇ ಪಕ್ಷದ ಮಲ್ಲಿಕಾರ್ಜುನ ಖರ್ಗೆಯವರನ್ನು ಎಐಸಿಸಿ ಅಧ್ಯಕ್ಷರನ್ನಾಗಿ ಮಾಡಿದೆ. ಹೈಕಮಾಂಡ್ ಸಕಾಲದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ' ಎಂದರು.

'ದಾವೋಸ್‌ಗೆ ಇಂದು ಪ್ರಯಾಣ'

'ಸ್ವಿಟ್ಜರ್ಲೆಂಡ್‌ನ ದಾವೋಸ್‌ನಲ್ಲಿ ನಡೆಯುವ ವಿಶ್ವ ಆರ್ಥಿಕ ಶೃಂಗಸಭೆಗೆ ತೆರಳಲು ದೆಹಲಿಯಿಂದ ನನಗೆ ಅನುಮತಿ ಸಿಕ್ಕಿದೆ. ಸಿದ್ದರಾಮಯ್ಯನವರಿಗೂ ದಾವೋಸ್‌ಗೆ ತೆರಳುವಂತೆ ತಿಳಿಸಿದ್ದೇನೆ. ನಾನು ಮಂಗಳವಾರ (ಜ.20) ಹೊರಡುತ್ತಿದ್ದೇನೆ' ಎಂದು ಶಿವಕುಮಾರ್ ತಿಳಿಸಿದರು.

'ದಾವೋಸ್ ಸಭೆಯಲ್ಲಿ ಭಾಗವಹಿಸಬೇಕೆಂದು ನನಗೆ ಕರೆಗಳು ಬರುತ್ತಿವೆ. ವಿರೋಧ ಪಕ್ಷಗಳ ನಾಯಕರು ಸಹ ಇದೇ ಸಲಹೆ ನೀಡುತ್ತಿದ್ದಾರೆ. ಹೀಗಾಗಿ ತೆರಳುತ್ತಿದ್ದೇನೆ. ರಾಜ್ಯದ ಹಿತದ ವಿಚಾರದಲ್ಲಿ ಕೆಲವೊಮ್ಮೆ ಅವರ ಸಲಹೆ ಸ್ವೀಕರಿಸಬೇಕಾಗಲಿದೆ' ಎಂದರು.

ಮುಖ್ಯಮಂತ್ರಿ ಚರ್ಚೆಯೇ ಗಿನ್ನಿಸ್ ದಾಖಲೆ: ಸಚಿವ ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ



ಕೃಷ್ಣ ಬೈರೇಗೌಡ

ಹಾವೇರಿ: 'ಮುಖ್ಯಮಂತ್ರಿ ಬದಲಾವಣೆ ವಿಷಯಕ್ಕೆ ನಾನು ಏಕೆ ಪ್ರತಿಕ್ರಿಯಿಸಬೇಕು? ಯಾವುದನ್ನೂ ಹೇಳಲಾಗದು. ಇದು, ಇಷ್ಟು ದಿನಗಳಿಂದ ಚರ್ಚೆ ಆಗುತ್ತಿರುವುದು ನೋಡಿದರೆ, ಇದು ಗಿನ್ನಿಸ್ ದಾಖಲೆ ಆಗುವಂತಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಜಿಲ್ಲೆಯ ರಟ್ಟೀಹಳ್ಳಿಯಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು 'ಸಿ.ಎಂ ಬದಲಾವಣೆ ಚರ್ಚೆಯಿಂದ ಜನರ ಜೀವನ ನಡೆಯುವುದಿಲ್ಲ. ಹೊಟ್ಟೆ ತುಂಬುವುದಿಲ್ಲ' ಎಂದರು.

ಸಚಿವ ಸಂಪುಟದ ಹಿರಿಯ ಸಚಿವರನ್ನು ಕೈ ಬಿಡುವ ಬಗ್ಗೆ ನಡೆದಿರುವ ಚರ್ಚೆ ಕುರಿತ ಪ್ರಶ್ನೆಗೆ, 'ಅರ್ಹತೆಯ ನಿರೀಕ್ಷೆ ಮೀರಿ ನನಗೆ ಅವಕಾಶ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಏನೇ ಅವಕಾಶ ಕೊಟ್ಟರೂ ಸಮಚಿತ್ತದಿಂದ ಸ್ವೀಕರಿಸಿ ಮುಂದುವರಿಯುವೆ' ಎಂದರು.

'ಕಾಂಗ್ರೆಸ್ ಸರ್ಕಾರದಿಂದ ಹೈಕಮಾಂಡ್‌ಗೆ ಹಣ ಹೋಗುತ್ತಿದೆ' ಎಂಬ ಬಿಜೆಪಿ ಆರೋಪಕ್ಕೆ ಅವರು, 'ಬಿಜೆಪಿಯವರು ಎಲ್ಲ ಮರೆತಂತಿದೆ. ಬಿಜೆಪಿಯವರು ದೆಹಲಿಗೆ ಎಷ್ಟು ಸಾವಿರ ಕೋಟಿ ಕೊಟ್ಟಿದ್ದಾರೆ ಎಂದು ವೇದಿಕೆ ಮೇಲೇ ಮಾತನಾಡಿದ್ದರು. ಅನಂತ್‌ಕುಮಾರ್-ಯಡಿಯೂರಪ್ಪ ಮಾತನಾಡಿದ್ದು ಎಲ್ಲರಿಗೂ ಗೊತ್ತಿದೆ. ಅದು ಅವರ ಸಂಸ್ಕೃತಿ' ಎಂದರು.

ಮೈಸೂರಿನ ಚಾಮುಂಡಿಬೆಟ್ಟ ಗ್ರಾಮ ಪಂಚಾಯಿತಿ ಮುಂಭಾಗ ಶ್ರೀರಂಗಪಟ್ಟಣ ಹನುಮ ಮಾಲಾಧಾರಿಗಳ ಸಮಿತಿ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಬೆಟ್ಟದಲ್ಲಿ ನಡೆಯುತ್ತಿರುವ ಕಾಮಗಾರಿ ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿ ಸೋಮವಾರ ಪ್ರತಿಭಟಿಸಿದರು

ಚಾಮುಂಡಿ ಬೆಟ್ಟ: 'ಪ್ರಸಾದ' ಯೋಜನೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಮೈಸೂರು: ಚಾಮುಂಡಿಬೆಟ್ಟದಲ್ಲಿ ಸೋಮವಾರ ಬೆಟ್ಟದ ನಿವಾಸಿಗಳು, ಶ್ರೀರಂಗಪಟ್ಟಣ ಹನುಮ ಮಾಲಾಧಾರಿಗಳ ಸಮಿತಿ ಸದಸ್ಯರ ಪ್ರತಿಭಟನೆ ನಡುವೆಯೇ 'ಪ್ರಸಾದ ಯೋಜನೆ'ಯಡಿ ವಿವಿಧ ಅಭಿವೃದ್ಧಿ ಕಾರ್ಯಗಳು ಪೊಲೀಸ್ ಭದ್ರತೆಯಲ್ಲಿ ಪುನರಾರಂಭಗೊಂಡವು.

ಬೆಟ್ಟದಲ್ಲಿ ₹36 ಕೋಟಿ ವೆಚ್ಚದಲ್ಲಿ ಜ.8ರಂದೇ ಅಭಿವೃದ್ಧಿ ಕಾಮಗಾರಿ ಶುರುವಾಗಿದ್ದು, ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳಿಗೆ ಸುಸಜ್ಜಿತ ವೇದಿಕೆ ನಿರ್ಮಿಸಲಾಗುತ್ತಿದೆ.

'ದೇವಾಲಯಕ್ಕೆ ತೊಂದರೆ ಯಾಗುವುದರಿಂದ ಯೋಜನೆ ಜಾರಿಗೊಳಿಸಬಾರದು' ಎಂಬ ವಿರೋಧ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ಸೂಚನೆಯಂತೆ ಬಿಗಿ ಭದ್ರತೆ ಕೈಗೊಳ್ಳಲಾಗಿತ್ತು. ಪ್ರತಿಭಟನೆ ವೇಳೆ ಪೊಲೀಸರೊಂದಿಗೆ ಮಾತಿನ ಚಕಮಕಿಯೂ ನಡೆಯಿತು.

ಪ್ರತಿಭಟನಕಾರರು ಗ್ರಾಮ ಪಂಚಾಯಿತಿ ಕಚೇರಿ ಬಳಿ ಸೇರಿ ಜಿಲ್ಲಾಡಳಿತ ಮತ್ತು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ದೇವಸ್ಥಾನದ 20 ಮೀಟರ್ ದೂರದಲ್ಲೇ ಭೂಮಿ ಅಗೆಯುತ್ತಿರುವುದರಿಂದ ರಾಜ ಗೋಪುರಕ್ಕೆ ಹಾನಿಯಾಗುತ್ತದೆ. 200 ವರ್ಷ ಪುರಾತನ ಕಲ್ಲು, ಮಣ್ಣು ತೆಗೆದಿದ್ದಾರೆ. ಗ್ರಾಮಸ್ಥರ ಆತಂಕ ಕಡೆಗಣಿಸಲಾಗಿದೆ' ಎಂದು ಸಮಿತಿಯ ಸಂಚಾಲಕ ಲೋಹಿತ್ ಅರಸ್ ದೂರಿದರು. 'ಪಾರಂಪರಿಕ ಸ್ವರೂಪ ರಕ್ಷಿಸಲು ಯೋಜನೆಯಲ್ಲಿ ಸ್ಪಷ್ಟಪಡಿಸಿದ್ದರೂ ನಿರ್ಲಕ್ಷಿಸಲಾಗಿದೆ. ಕಾಮಗಾರಿ ಕೈಬಿಡುವರೆಗೂ ಹೋರಾಟ ಮುಂದುವರಿಯುತ್ತದೆ' ಎಂದರು.

ಸಮಿತಿ ವರದಿ: ಚರ್ಚಿಸಲು ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ದಿನೇಶ್ ಗೂಳಿಗೌಡ

ಬೆಂಗಳೂರು: ವಾರ್ತಾ ಇಲಾಖೆಯಲ್ಲಿ ಸಮಗ್ರ ಬದಲಾವಣೆ ತರುವ ಸಂಬಂಧ ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್. ಶ್ರೀನಿವಾಸಮೂರ್ತಿ ನೇತೃತ್ವದ ಸಮಿತಿ ಸಲ್ಲಿಸಿದ ವರದಿ ಜಾರಿ ಕುರಿತಂತೆ ಚರ್ಚಿಸಲು ವಾರ್ತಾ ಇಲಾಖೆಯ ಆಯುಕ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನ ನೀಡಿದ್ದಾರೆ.

ಸಮಿತಿಯ ವರದಿಯನ್ನು ಜಾರಿ ಮಾಡಬೇಕು ಎಂದು ಆಗ್ರಹಿಸಿ ಮುಖ್ಯಮಂತ್ರಿಯವರಿಗೆ ರಾಜ್ಯ ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ದಿನೇಶ ಗೂಳಿಗೌಡ ಮನವಿ ಸಲ್ಲಿಸಿದ್ದರು.

ಮನವಿಯಲ್ಲಿ ಏನಿದೆ: 'ವಾರ್ತಾ ಇಲಾಖೆಗೆ 1978ರಲ್ಲಿ ಅಳವಡಿಸಿಕೊಂಡಿದ್ದ ವೃಂದ ಮತ್ತು ನೇಮಕಾತಿ ನಿಯಮವು ಅವೈಜ್ಞಾನಿಕ ವಾಗಿದ್ದು, ಅದನ್ನು ಇಲಾಖೆ ಸರಿಪಡಿಸಿಲ್ಲ. ಇದರಿಂದಾಗಿ ಇಲಾಖೆಯ ಸಿಬ್ಬಂದಿ 15-20 ವರ್ಷಗಳಿಂದ ಬಡ್ತಿ ಇಲ್ಲದೆ ಕಾರ್ಯನಿರ್ವಹಿಸುತ್ತಿದ್ದಾರೆ. ಎಲ್ಲ ವೃಂದದ ನೌಕರರಿಗೆ ಸೇವಾ ಅವಧಿಯಲ್ಲಿ ಕನಿಷ್ಠ 3 ಬಡ್ತಿಗಳಾದರೂ ಸಿಗುವಂತೆ ವೈಜ್ಞಾನಿಕವಾಗಿ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಯಾರಿಸಲು ಸಂಬಂಧಪಟ್ಟವರಿಗೆ ಸೂಚಿಸಬೇಕು. ಹಳೆಯ ವೃಂದ ಮತ್ತು ನೇಮಕಾತಿ ನಿಯಮದಿಂದ ತೊಂದರೆಗೊಳಗಾದ ನೌಕರರು ಹೊಸ ವೃಂದ ಮತ್ತು ನೇಮಕಾತಿ ನಿಯಮಗಳ ಅಳವಡಿಕೆಯ ನಂತರವೂ ಮತ್ತೆ ಸರಿಯಾದ ಬಡ್ತಿ ಇಲ್ಲದೆ ಅನ್ಯಾಯಕ್ಕೆ ಒಳಗಾಗದಂತೆ ಎಚ್ಚರ ವಹಿಸಲು ಸಂಬಂಧಪಟ್ಟವರಿಗೆ ಸೂಚಿಸಬೇಕು' ಎಂದು ಮನವಿ ಮಾಡಿದ್ದಾರೆ.

'ಈಗಾಗಲೇ ತಿದ್ದುಪಡಿ ಮಾಡಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಕರಡು ಕೂಡಾ ಅವೈಜ್ಞಾನಿಕವಾಗಿದ್ದು, ಅದರಲ್ಲಿ ಪತ್ರಿಕೋದ್ಯಮದ ಅನುಭವ ಹಾಗೂ ಪ್ರಚಾರ ಕೆಲಸವನ್ನು ಎಂದೂ ನಿರ್ವಹಿಸದ ಆಡಳಿತಾಧಿಕಾರಿ ಹುದ್ದೆಯಿಂದ ಉಪ ನಿರ್ದೇಶಕ ಹುದ್ದೆಗೆ ಬಡ್ತಿ ನೀಡುವ ಪ್ರಸ್ತಾವವಿದೆ ಎಂಬ ಆಕ್ಷೇಪಗಳಿವೆ' ಎಂದೂ ಮನವಿಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮ
(ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಕರ್ನಾಟಕ ಸರ್ಕಾರದಿಂದ ರಚಿತವಾದ ಎಸ್.ಪಿ.ವಿ)
ನಂ. 49, ಖನಿಜ ಭವನ, ಪಶ್ಚಿಮ ಭಾಗ, 2 ನೇ ಮಹಡಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001.
ದೂರವಾಣಿ: 080-22354737/22354738 ಇ-ಮೇಲ್:kmerc2014@gmail.com
ಸಂಖ್ಯೆ: ಕೆಎಂಇಆರ್‌ಸಿ/ತಾಂತ್ರಿಕ/173715/2025-26/1511 ದಿನಾಂಕ: 19.01.2026
ಇ-ಟೆಂಡರ್ ಮರು-ಪ್ರಕಟಣೆ
ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮವು ಬಳ್ಳಾರಿ ಜಿಲ್ಲೆಯಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಯಶವಂತನಗರ (YTG) ರೈಲ್ವೆ ಸೈಡಿಂಗ್‌ನಿಂದ ಪ್ರಸ್ತಾವಿತ ದರ್ಮಾಪುರ ರೈಲ್ವೆ ಸೈಡಿಂಗ್‌ಗೆ, ರೈಲ್ವೆ ಸುರಂಗದ ಮೂಲಕ ಹೊಸ ಬ್ರಾಡ್‌ಗೇಜ್ ಮಾರ್ಗದ ಕಾರ್ಯಸಾಧ್ಯತಾ ಅಧ್ಯಯನಕ್ಕಾಗಿ RITES ಸಂಸ್ಥೆಯವರು ಕಾಲ ಕಾಲಕ್ಕೆ ನೀಡುವ ವರದಿಗಳ ಪರಿಶೀಲನೆಗಾಗಿ "Consultancy Service" ಒದಗಿಸಲು ಇ-ಟೆಂಡರ್‌ಗಳನ್ನು ಆಹ್ವಾನಿಸಿದೆ.
ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ವೆಬ್‌ಸೈಟ್ https://kppp.karnataka.gov.in) ನಿಂದ ಪಡೆಯಬಹುದು. ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ 31.01.2026. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಮೂಲಕ ಸಂಪರ್ಕಿಸಬಹುದು. (ಕೆ.ಎಂ.ಇ.ಆರ್.ಸಿ: 080-22354737/22354738 and KPPP Mobile: 8046010000/8068948777)
ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕೆ.ಎಂ.ಇ.ಆರ್.ಸಿ
ಡಿಐಪಿಆರ್/ಸಿಪಿ/5113/ಸಿಸಿಎಲ್/2025-26

ಕರ್ನಾಟಕ ಸರಕಾರ
ತಾಲೂಕು ಪಂಚಾಯಿತಿ, ತಿಕೋಟಾ
ದೂರವಾಣಿ ಸಂಖ್ಯೆ: 08352-295417
ಇ-ಮೇಲ್:tikotatp@gmail.com.
ಸಂಖ್ಯೆ:ತಾ.ಪಂ.ತಿ/ಅ.ವಾ/ಟೆಂಡರ್-1/2025-26 ದಿನಾಂಕ:14.01.2026
ಇ-ಟೆಂಡರ ಪ್ರಕಟಣೆ
2025-26ನೇ ಸಾಲಿನ ತಾಲೂಕ ಪಂಚಾಯತಿ ಅನಿರ್ಬಂಧಿತ ಯೋಜನೆಯಡಿಯಲ್ಲಿ ಅರ್ಹ ವಿಕಲಚೇತನರಿಗೆ ರಿಟ್ರೋಫಿಟ್ಟಿಂಗ್ ಒಳಗೊಂಡಂತೆ ಯಂತ್ರಚಾಲಿತ ದ್ವಿಚಕ್ರ ವಾಹನಗಳ ಹಾಗೂ ಹೆಲ್ಮೆಟ್ ಸರಬರಾಜುಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪ್ರೊಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಸಂಪರ್ಕಿಸಬಹುದಾಗಿರುತ್ತದೆ. RDPR/2025-26/IND13233
ಸಹಿ/- ಕಾರ್ಯನಿರ್ವಾಹಕ ಅಧಿಕಾರಿಗಳು, ತಾ.ಪಂ. ತಿಕೋಟಾ
ವಾಸಾಸಂಇ/ವಿಜಯಪುರ/623/ಕೆಎಸ್‌ಎಂಸಿಎ/2025-26

ಸಣ್ಣ ನೀರಾವರಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗಕಛೇರಿ, ಶಿವಮೊಗ್ಗ
ಐ.ಎಫ್.ಟಿ. ಸಂ:38/2025-26 ದಿನಾಂಕ: 17.01.2026
ಸೆಕ್ಷನ್ 1: ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್)-ಕೆ.ಡಬ್ಲೂ-4
ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆಡಬ್ಲೂ-4ರ ಅನ್ವಯ ಶಿವಮೊಗ್ಗ ಉಪವಿಭಾಗದ ವ್ಯಾಪ್ತಿಯಲ್ಲಿನ ಒಂದು ಕಾಮಗಾರಿ "ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲುಕು ಹುಂಚ ಮುತ್ತಿನಕೆರೆ ಅಭಿವೃದ್ಧಿ ಕಾಮಗಾರಿ"ಯ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಮೊತ್ತ ರೂ.161.26 ಲಕ್ಷಗಳು. ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನ ವೆಬ್ ಸೈಟ್ ವಿಳಾಸ: http:/kppp.karnataka.gov.in ದಿನಾಂಕ:17.01.2026 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ:31.01.2026 17:00 ಘಂಟೆ.ಇನ್ನುಳಿದಂತೆ ವೈಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/25-26/148/01/1662

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಆಯುಕ್ತಾಲಯ
ಎಸ್.ನಿಜಲಿಂಗಪ್ಪ ರಸ್ತೆ, ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು-560 010.
ಟೆಲಿಫ್ಯಾಕ್ಸ್: (080) 23324216 Website: www.esisms.karnataka.gov.in
E.S.I.S (M) SERVICES KARNATAKA
Re-ಟೆಂಡರ್ ವಿಚಾರಣೆ ಸಂ: ಇಎಸ್‌ಐಎಸ್/ಇಜಿಎಸ್/05/2025-26 ದಿನಾಂಕ: 16.01.2026
ಇಎಸ್‌ಐಎಸ್‌ಎಂಎಸ್/2025-26
ಮರು-ಟೆಂಡರ್ ಪ್ರಕಟಣೆ
Re-Tender for the Supply of various departmental equipments to ESI Hospitals and Diagnostic Centre ಗಳನ್ನು ಸರಬರಾಜು ಮಾಡಲು ತಯಾರಕರು/ಅಧಿಕೃತ ಮಾರಾಟಗಾರರಿಂದ ಮೊಹರಾದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.
1) Re-ಟೆಂಡರ್ ಪ್ರಕಟಣೆ ಸಂಖ್ಯೆ: ಮತ್ತು ದಿನಾಂಕ: ಇಎಸ್‌ಐಎಸ್/ಇಜಿಎಸ್/05/2025-26 ದಿ: 16.01.2026. ESISMS/2025/IND0018. 2) ಟೆಂಡರ್ ನಮೂನೆ ವಿವರಗಳಿಗೆ ಹಾಗೂ ದಾಖಲಿಸಲು ಸಂಪರ್ಕಿಸಬೇಕಾದ ವೆಬ್‌ಸೈಟ್: https://kppp.karnataka.gov.in 3) ಮುಂಗಡ ಠೇವಣಿ: 1.5% EMD divided into each Department wise, hence mandatory to Bid all the items in the particular Group. 4) ಪೂರ್ವಭಾವಿ ಸಭೆ: 29.01.2026 at 12.30 Noon at the Office of the Commissionerate, ESIS M Services, Rajajinagar, Bengaluru. 5) ಟೆಂಡರುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮುಖಾಂತರ ಸಲ್ಲಿಸಲು ಅಂತಿಮ ದಿನಾಂಕ: 19.02.2026 ಸಂಜೆ 5.30 ಗಂಟೆಯೊಳಗೆ. 6) ಟೆಂಡರ್‌ಗಳ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 21.02.2026 ಬೆಳಿಗ್ಗೆ 11.30 ಗಂಟೆಗೆ. 7) Demonstration ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸ್ಥಳ: ಕವರ್-1 ತೆರೆದ ನಂತರ ತಿಳಿಸಲಾಗುವುದು.
ಸಹಿ/-
ಆಯುಕ್ತರು, ಕಾ.ರಾ.ವಿ.ಯೋ.ವೈ. ಸೇವೆ.
ವಾಸಾಸಂಇ/ವಾ.ಪ್ರ/5110/ಎಂಎಎ/25-26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821-2420810
ಈ ಕಛೇರಿ ಅಲ್ಪಾವಧಿ ಸೇವಾ ಟೆಂಡರ್ ಪ್ರಕಟಣೆ ಸಂ:26/2025-26/ 2ನೇ ಕರೆ ದಿನಾಂಕ: 16.01.2026
ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗದ ವ್ಯಾಪ್ತಿಯಲ್ಲಿನ ಉಪವಿಭಾಗಗಳಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ರಸ್ತೆ ನಿರ್ವಾಹಕರನ್ನು ನೇಮಿಸುವ ಸಲುವಾಗಿ ಸ್ಟ್ಯಾಂಡರ್ಡ್ ಸೇವಾ ಡಾಕ್ಯುಮೆಂಟ್ ಕೆ.ಸಿ-8ರ ಷರತ್ತು ಮತ್ತು ನಿಯಮಗಳನ್ವಯ ದ್ವಿ-ಲಕೋಟೆಯಲ್ಲಿ ಅಲ್ಪಾವಧಿ ಸೇವಾ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಲೋಕೋಪಯೋಗಿ ಗುತ್ತಿಗೆದಾರರು/ಸಂಸ್ಥೆಗಳು (viz https://kppp.karnataka.gov.in/) 16.01.2026 ರಿಂದ 23.01.2026ರ ಸಂಜೆ 17:00ರ ವರೆಗೆ ಸಲ್ಲಿಸಬಹುದಾಗಿರುತ್ತದೆ. ಗರಿಷ್ಠ ಮೊತ್ತ ರೂ.2335160.88 ಹಾಗೂ ಇ.ಎಂ.ಡಿ ಮೊತ್ತ ರೂ.25947.00/- ಹಾಗೂ ಕನಿಷ್ಠ ರೂ.1037849.28 ಹಾಗೂ ಇ.ಎಂ.ಡಿ. ಮೊತ್ತ ರೂ.46705.00/-ಗಳಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.
DIPR/DDMYS/1525/KSMCA/860/2025-26

AUCTION NOTICE
This is to inform public in general that Kotak Mahindra Bank Ltd has organized an auction in below mention respect of vehicles.
1) CB_TIPPER_SIGNA_4830_TATA_MOTORS
YOM – -
Reg No – KA01AP8773
2) CB_AMBULANCE
YOM – 2022
Reg No – KA11C2300
3) CB_TIPPER_SIGNA_4830_TATA_MOTORS
YOM – -
Reg No – KA01AP8772
4) CB_Ashok Leyland Dost GOODS
YOM – 2024
Reg No – KA38A6548
5) CB_MARUTI SUPER CARRY
YOM – 2022
Reg No – KA16AA3190
6) CB_ TATA INTRA V30_ COMMERCIAL VEHICLE
YOM – 2024
Reg No – KA38A6715
7) CB_Escorts JCB 3DX Excavator Loader
YOM – -
Reg No – KA06MB2021
8) CB_Ashok Leyland Dost GOODS
YOM – 2022
Reg No – KA11C3242
9) CB_50_KVA_GENSET_AL_50KVA_ASHOK_LEYLAND
YOM – 2024
Engine No RMHM108623
10) AL_DOST_GOODS
YOM – 2023
Reg No – KA17AA8452
UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"
INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 20.01.2026
(Please note that closing Auction date would not be a Weekly off / Holiday)
BRANCH ADDRESS:
KOTAK MAHINDRA BANK LTD., 22, MG ROAD, BANGALORE KARNATAKA – 560001
OR
Contact: Arunlaxman Kokare
Kotak Mahindra Bank Ltd.
Contact / 080 - 61564249

ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ
ಮಿನಿ ವಿಧಾನ ಸೌಧ ಪಕ್ಕದಲ್ಲಿ, ಸ್ಟೇಷನ್ ಮುಖ್ಯ ರಸ್ತೆ, ಕಲಬುರಗಿ-585102 Email: commissionergda@gmail.com
ಸಂಖ್ಯೆ: ನಪ್ರಾಕ/ತಾಂತ್ರಿಕ/ವೃತ್ತ/ /2025-26/2434 ದಿನಾಂಕ: 17.01.2026
-: ಇ-ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ :-
ಕೆ.ಟಿ.ಪಿ.ಪಿ ಕಾಯ್ದೆಯ ಪ್ರಕಾರ, ಕಲಬುರಗಿ ನಗರದ ಸ್ಥಳೀಯ ಯೋಜನಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಗರದ ಪ್ರಮುಖ 04 ವೃತ್ತಗಳ ಅಭಿವೃದ್ಧಿ ಪಡಿಸುವ ಕಾಮಗಾರಿಗಳಿಗಾಗಿ ಇ-ಪ್ರೋಕ್ಯೂರಮೆಂಟ ಟೆಂಡರ (2ನೇ ಕರೆ) ಕರೆಯಲಾಗಿದೆ. (Indent no. KLBUDA/2025-26/OW/WORK_INDENT13/CALL-2, Indent no. KLBUDA/2025-26/OW/WORK_INDENT14/CALL-2, Indent no. KLBUDA/2025-26/OW/WORK_INDENT15/CALL-2, & Indent no. KLBUDA/2025-26/OW/WORK_ INDENT16/CALL-2), ಟೆಂಡರಗಿಟ್ಟ ಗರಿಷ್ಠ ಮೊತ್ತ ರೂ. 1,52,13,516/- ಕನಿಷ್ಠ ಮೊತ್ತ ರೂ. 71,24,333/- ಇ.ಎಮ್.ಡಿ ಮೊತ್ತ ಇ-ಪೋರ್ಟಲ್‌ನಂತೆ ಅನ್ವಯಿಸುತ್ತದೆ. ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ದ್ವಿಲಕೋಟೆ ಮಾದರಿಯಲ್ಲಿ (KW-4) ರಂತೆ, ದಿನಾಂಕ ಹಾಗೂ ಸಮಯ ವಿವರಗಳಿಗಾಗಿ ಇ-ಪ್ರೋಕ್ಯೂರಮೆಂಟ ಪೋರ್ಟಲ್ www.kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಾಭಿವೃದ್ಧಿ ಪ್ರಾಧಿಕಾರ ಕಲಬುರಗಿ ಇವರನ್ನು ಸಂಪರ್ಕಿಸಬಹುದಾಗಿದೆ.
ಸಹಿ/- ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/983/ಕೆ.ಎಸ್.ಎಂ.ಸಿ.&ಎ/2025-26

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ಸಂ.ದಾಮಪಾ:ಕಾಅ1:25-26ಟೆ44/2025-26 ದಿನಾಂಕ: 14-01-2026
ಟೆಂಡರ್ ಪ್ರಕಟಣೆ ತಿದ್ದುಪಡಿ
ಈ ಕಛೇರಿಯ ಟೆಂಡರ್ ಪ್ರಕಟಣೆ ನಂ:ದಾಮಪಾ:ಕಾಅ1.ಇ.ಟೆಂಡರ್:44:2025-26 ದಿನಾಂಕ:02-01-2026 ರಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಕರೆಯಲಾದ 2025-26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ (ಸಿ.ಎಂ.ಐ.ಡಿ.ಪಿ) ಅನುದಾನಡಿ-13 ಕಾಮಗಾರಿಗಳು, 2025-26 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ. -02 ಕಾಮಗಾರಿಗಳು, 2025-26 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (ಮಳಿಗೆ ನಿಧಿ) -06 ಕಾಮಗಾರಿಗಳು, : ಒಟ್ಟು 21 ಕಾಮಗಾರಿಗಳಿಗೆ ದಿನಾಂಕವನ್ನು ತಿದ್ದುಪಡಿ ಮಾಡಿಕೊಳ್ಳುವುದು.
ಕ್ರಮ ಸಂ.02, 03, 04, 18, 22, 24, 26, 27, 29, 30, 31ರ ಕಾಮಗಾರಿಗಳಿಗೆ : ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 23-01-2026 ಸಮಯ :16.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 23-01-2026 ಸಮಯ : 17.00
ಕ್ರಮ ಸಂ.07, 09, 12ರ ಕಾಮಗಾರಿಗಳಿಗೆ: ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 22-01-2026 ಸಮಯ : 16.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 22-01-2026 ಸಮಯ : 17.00
ಕ್ರಮ ಸಂ.10, 19, 21ರ ಕಾಮಗಾರಿಗಳಿಗೆ : ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 27-01-2026 ಸಮಯ : 16.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 27-01-2026 ಸಮಯ : 17.00
ಕ್ರಮ ಸಂ.14, 20, 25, 28ರ ಕಾಮಗಾರಿಗಳಿಗೆ : ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 28-01-2026 ಸಮಯ : 16.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 28-01-2026 ಸಮಯ : 17.00
ವಾಸಾಇ/ದಾವಣಗೆರೆ/661/ಕೆಎಸ್‌ಎಂಸಿಎ/2025-26
ಸಹಿ/-ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ

ಬೆಂಗಳೂರು ಪೂರ್ವ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆ.ಆರ್.ಪುರ ವಿಭಾಗ,
ಹಳೆ ಮದ್ರಾಸ್ ರಸ್ತೆ, ಕೆ.ಆರ್.ಪುರ, ಬೆಂಗಳೂರು-560 036.
ಸಂಖ್ಯೆ: ಬೆಂಪೂನಪಾ/ಕಾಪಾಅ/ಕೆಆರ್‌ಪು/ಟೆಂಡರ್/03/2025-26 ದಿನಾಂಕ: 19-01-2026
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) ದ್ವಿ ಲಕೋಟೆ ಪದ್ಧತಿ
ವೆಬ್‌ಸೈಟ್ https://kppp.karnataka.gov.in
ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಪುರ ವಿಭಾಗ, ಬೆಂಗಳೂರು ಪೂರ್ವ ನಗರ ಪಾಲಿಕೆ ಬೆಂಗಳೂರು (ಬೆಂಪೂನಪಾ) ರವರು ಈ ಕೆಳಗಿನ ಕಾಮಗಾರಿಗಳಿಗಾಗಿ **ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನಾ ನಿರ್ವಹಣಾ ಸಲಹಾ ಸೇವೆಗಳಿಗೆ** ಇದೇ ರೀತಿಯ ಕಾಮಗಾರಿಯನ್ನು ಮಾಡಿರುವ ಆಸಕ್ತ ವ್ಯಕ್ತಿಗಳು/ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	2025-26ನೇ ಸಾಲಿಗೆ GOK ಅನುದಾನದಡಿಯಲ್ಲಿ ಕೆಆರ್ ಪುರ ವಿಧಾನಸಭಾ ಕ್ಷೇತ್ರದ ಕೆಆರ್ ಪುರ ಮತ್ತು ಬಸವನಪುರದಲ್ಲಿ ರಸ್ತೆಗಳು, ಒಳಚರಂಡಿಗಳು ಮತ್ತು ಇತರ ಸಂಬಂಧಿತ ಕಾಮಗಾರಿಗಳ ಸಮಗ್ರ ಅಭಿವೃದ್ಧಿ. GO ಅನುಬಂಧ ಕ್ರಮ ಸಂಖ್ಯೆ: 27, 28, 29, 30, 31 ಮತ್ತು 32. ಯೋಜನಾ ಮೊತ್ತ (ಲಕ್ಷರೂ. ಗಳಲ್ಲಿ).: 600.00. ಇಎಂಡಿ ಮೊತ್ತ (ರೂ. ಗಳಲ್ಲಿ): ರೂ.12,600/-.
2.	GOK ಅನುದಾನ ಪ್ಯಾಕೇಜ್-1 ಅಡಿಯಲ್ಲಿ ಕೆಆರ್‌ಪುರ ವಿಭಾಗದಲ್ಲಿ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳ ಸಮಗ್ರ ಅಭಿವೃದ್ಧಿ ಮತ್ತು ಇತರ ಸಂಬಂಧಿತ ಕಾಮಗಾರಿಗಳು. ಯೋಜನಾ ಮೊತ್ತ (ಲಕ್ಷರೂ. ಗಳಲ್ಲಿ).: 1050.00. ಇಎಂಡಿ ಮೊತ್ತ (ರೂ. ಗಳಲ್ಲಿ): ರೂ.22,000/-.
3.	GOK ಅನುದಾನ ಪ್ಯಾಕೇಜ್-2 ಅಡಿಯಲ್ಲಿ ಕೆಆರ್ ಪುರ ವಿಭಾಗದಲ್ಲಿ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳ ಸಮಗ್ರ ಅಭಿವೃದ್ಧಿ ಮತ್ತು ಇತರ ಸಂಬಂಧಿತ ಕಾಮಗಾರಿಗಳು. ಯೋಜನಾ ಮೊತ್ತ (ಲಕ್ಷರೂ. ಗಳಲ್ಲಿ).: 1000.00. ಇಎಂಡಿ ಮೊತ್ತ (ರೂ. ಗಳಲ್ಲಿ): ರೂ.21,000/-.

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ದಾಖಲೆಯನ್ನು ಕೆಪಿಪಿ ಪೋರ್ಟಲ್ ಮೂಲಕ ದಿನಾಂಕ: 21-01-2026 ರಿಂದ ಡೌನ್‌ಲೋಡ್ ಮಾಡಬಹುದು. 2) ಪೂರ್ವ ಬಿಡ್ ಸಭೆ ದಿನಾಂಕ: 23-01-2026ರ ಬೆಳಗ್ಗೆ 11:30 ಗಂಟೆಗೆ. 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 31-01-2026ರ ಸಂಜೆ 4:00 ಗಂಟೆಯವರೆಗೆ. 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 02-02-2026ರ ಸಂಜೆ 4:30 ಗಂಟೆಗೆ.
ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಪುರ ವಿಭಾಗ, ಬೆಂಪೂನಪಾ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ - ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯು ಅರ್ಹ ಏಜೆನ್ಸಿಗಳಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ಕಾವೇರಿ-ಕಾ&ನಿ), 8ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560009						
1	ಕಾವೇರಿ-(ಕಾ&ನಿ)-1	ಬೆಂಜಮಂ/ಕಾನಿಅ(ಕಾ-ಕಾ&ನಿ)-1/ಸಅ/2025/2782/ 2025-26 ದಿನಾಂಕ: 13.01.2026 (ಪ್ರವರ್ಗ-2ಎ ಗೆ ಮೀಸಲು)	₹ 26,57,600/-	₹ 26,600/-	28.01.2026 ರ ಸಂಜೆ 4:00 ಗಂಟೆಯವರೆಗೆ	29.01.2026 ರ ಸಂಜೆ 5:00 ಗಂಟೆಯ ನಂತರ
2	ಕಾವೇರಿ-(ಕಾ&ನಿ)-1	ಬೆಂಜಮಂ/ಕಾನಿಅ(ಕಾ-ಕಾ&ನಿ)-1/ಉಗ್ರಾಣ/2780/ 2025-26 ದಿನಾಂಕ: 13.01.2026	₹ 26,76,000/-	₹ 54,000/-	28.01.2026 ರ ಸಂಜೆ 4:00 ಗಂಟೆಯವರೆಗೆ	29.01.2026 ರ ಸಂಜೆ 4:00 ಗಂಟೆಗೆ.
3	ಕಾವೇರಿ-(ಕಾ&ನಿ)-1	ಬೆಂಜಮಂ/ಕಾನಿಅ(ಕಾ-ಕಾ&ನಿ)-1/ಸಅ/2025/2778/ 2025-26 ದಿನಾಂಕ: 13.01.2026	₹ 14,45,000/-	₹ 37,000/-	28.01.2026 ರ ಸಂಜೆ 4:00 ಗಂಟೆಯವರೆಗೆ	29.01.2026 ರ ಸಂಜೆ 4:00 ಗಂಟೆಗೆ.
4	ಕಾವೇರಿ-(ಕಾ&ನಿ)-1	ಬೆಂಜಮಂ/ಕಾನಿಅ(ಕಾ-ಕಾ&ನಿ)-1/ಉಗ್ರಾಣ/2776/ 2025-26 ದಿನಾಂಕ: 13.01.2026	₹ 13,55,932.20	₹ 34,000/-	28.01.2026 ರ ಸಂಜೆ 4:00 ಗಂಟೆಯವರೆಗೆ	29.01.2026 ರ ಸಂಜೆ 4:00 ಗಂಟೆಗೆ.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಕಾವೇರಿ-ಕಾ&ನಿ-1)						
5	ಕಾವೇರಿ-(ಕಾ&ನಿ)-4	ಬೆಂಜಮಂ/ಕಾನಿಅ(ಕಾ-ಕಾ&ನಿ)-4/ಪಿಬಿ/294/ 2025-26 ದಿನಾಂಕ: 19.01.2026 (ಪರಿಶಿಷ್ಟ ಜಾತಿಗೆ ಮೀಸಲು) (2ನೇ ಕರೆ)	₹ 47.18 ಲಕ್ಷಗಳು	₹ 47,200/-	04.02.2026 ರ ಬೆಳಿಗ್ಗೆ 11:00 ಗಂಟೆಯವರೆಗೆ	05.02.2026 ರ ಬೆಳಿಗ್ಗೆ 11:30 ಗಂಟೆಗೆ.
6	ಕಾವೇರಿ-(ಕಾ&ನಿ)-4	ಬೆಂಜಮಂ/ಕಾನಿಅ(ಕಾ-ಕಾ&ನಿ)-4/ಪಿಬಿ/294/ 2025-26 ದಿನಾಂಕ: 19.01.2026 (2ನೇ ಕರೆ)	₹ 97.58 ಲಕ್ಷಗಳು	₹ 1,95,000/-	04.02.2026 ರ ಬೆಳಿಗ್ಗೆ 11:00 ಗಂಟೆಯವರೆಗೆ	05.02.2026 ರ ಬೆಳಿಗ್ಗೆ 11:30 ಗಂಟೆಗೆ.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಕಾವೇರಿ-ಕಾ&ನಿ-4)						
ಮುಖ್ಯ ಅಭಿಯಂತರರ ಕಛೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560009						
7	ಪೂರ್ವ-1	ಬೆಂಜಮಂ/ಕಾನಿಅ(ಪೂರ್ವ)-1/ಯೋ.ವಿ/4231/ 2025-26 ದಿನಾಂಕ: 16.01.2026 (4ನೇ ಕರೆ)	₹ 67,90,099/-	₹ 1,35,802/-	29.01.2026 ರ ಸಂಜೆ 4:00 ಗಂಟೆಯವರೆಗೆ	30.01.2026 ರ ಸಂಜೆ 5:00 ಗಂಟೆಯ ನಂತರ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ-1)						

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/MIA/5118/2025-26

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ,
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080-22255210
ಸಂ: ಕಾಅ/ಕವಿ.1/ಎಇ-4/2025-26/71 ದಿನಾಂಕ: 17.01.2026
ಟೆಂಡರ್‌ಗಾಗಿ ಆಹ್ವಾನ
ಮೇಲ್ಕಂಡ ಇಲಾಖೆಯು ಬೆಂಗಳೂರಿನ ಜಿಕೆವಿಕೆ ಕ್ಯಾಂಪಸ್‌ನ ಐಸಿಎಆರ್-ಎನ್‌ಐಎಸ್‌ಎಸ್‌ಟಿ ಪ್ರಾದೇಶಿಕ ಕೇಂದ್ರದ ಮೊದಲನೇ ಮಹಡಿಯಲ್ಲಿ ರಾಜ್ಯ ಕಲಾ ಸೌಲಭ್ಯದ ನಿರ್ಮಾಣ ಕಾಮಗಾರಿಗೆ (ಪಿಡಬ್ಲ್ಯುಡಿ/2025-26/ಬಿಡಿ/ವರ್ಕ್-ಇಂಡೆಂಟ್31604) ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ರೂ.164.85 ಲಕ್ಷಗಳು.** ಇಎಂಡಿ: **ರೂ.2,46,900/-** (ರೂ.1,00,000/- ಹಣವನ್ನು ಇ-ಪ್ರೋಕ್ ಮೂಲಕ, ಉಳಿದ ಹಣವನ್ನು ಬ್ಯಾಂಕ್ ಗ್ಯಾರಂಟಿ ಮೂಲಕ). ಕಾಮಗಾರಿಯ ದಸ್ತಾವೇಜು ಬೆಲೆ: ಇ-ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಲಾವಧಿ: **6 ತಿಂಗಳು (ಮಳೆಗಾಲ ಸೇರಿದಂತೆ).** ಮೀಸಲಾತಿ: **ಇತರೆ.** ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **27.01.2026, ಸಂಜೆ 4.30 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉನಿ-ಸಿ.ಪಿ/5101/ಕೆಎಸ್‌ಎಂಸಿಎ/2025-26

‘ನಂದಗಡ: ಎಲ್ಲ ವೀರರ ಸಮಾಧಿ ಅಭಿವೃದ್ಧಿ’

ಸಂಗೊಳ್ಳಿ ರಾಯಣ್ಣನ ಜೀವನಾಧಾರಿತ ಸಂಗ್ರಹಾಲಯ ‘ವೀರಭೂಮಿ’ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ನಂದಗಡ (ಬೆಳಗಾವಿ ಜಿಲ್ಲೆ): ‘ಸಂಗೊಳ್ಳಿ ರಾಯಣ್ಣನ ಜೊತೆಗೆ ಯಾರೆಲ್ಲರೂ ಗಲ್ಲಿಗೇರಿದ್ದರೊ, ಆ ಎಲ್ಲ ವೀರರ ಸಮಾಧಿಗಳನ್ನು ಗುರುತಿಸಿ, ಅಭಿವೃದ್ಧಿ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಭರವಸೆ ನೀಡಿದರು.

ಖಾನಾಪುರ ತಾಲ್ಲೂಕಿನ ನಂದಗಡದಲ್ಲಿ ರಾಯಣ್ಣನ ಜೀವನಾಧಾರಿತ ವಸ್ತು ಸಂಗ್ರಹಾಲಯ ‘ವೀರಭೂಮಿ’ ಹಾಗೂ ಕೆರೆಯ ಮಧ್ಯೆ ರಾಯಣ್ಣ ಪ್ರತಿಮೆಯನ್ನು ಉದ್ಘಾಟಿಸಿ ಮಾತನಾಡಿದರು.

‘ಕಿತ್ತೂರು ರಾಣಿ ಚನ್ನಮ್ಮ ಸೆರೆಯಾದ ಬಳಿಕ ಸ್ವಾತಂತ್ರ್ಯ ಹೋರಾಟವನ್ನು ರಾಯಣ್ಣ ಮತ್ತು ಸಂಗಡಿಗರು ಮುಂದುವರಿಸಿದರು. ಅವರೆಲ್ಲರೂ ಸ್ವಾತಂತ್ರ್ಯ ಹೋರಾಟಗಾರರೇ. ಎಲ್ಲರ ವಂಶಸ್ಥರನ್ನು ಪತ್ತೆ ಮಾಡಿ, ಮಾಹಿತಿ ಸಂಗ್ರಹಿಸಲಾಗುವುದು’ ಎಂದರು.

‘ರಾಯಣ್ಣನ ಕಾರ್ಯಸ್ಥಾನಗಳಾದ ಸಂಗೊಳ್ಳಿ ಮತ್ತು ನಂದಗಡ ಗ್ರಾಮಗಳನ್ನು ಅಂತರರಾಷ್ಟ್ರೀಯ ಪ್ರವಾಸಿ ತಾಣಗಳನ್ನಾಗಿಸುವ ಉದ್ದೇಶ ಇದೆ. ಅದಕ್ಕೆ ಪೂರಕ ಕೆಲಸಗಳು ನಡೆದಿವೆ. ಮುಂದೆ ಇಲ್ಲಿಗೆ ಬಂದು ಉಳಿದು, ಇನ್ನಷ್ಟು ಕೆಲಸ ಮಾಡುವೆ’ ಎಂದರು.

ಮುಖ್ಯಾಂಶಗಳು

- ಗಲ್ಲಿಗೇರಿದವರ ವಂಶಸ್ಥರ ಪತ್ತೆ ಮಾಡಿ ಮಾಹಿತಿ ಸಂಗ್ರಹ
- ಪ್ರವಾಸಿ ತಾಣಗಳಾಗಿ ನಂದಗಡ, ಸಂಗೊಳ್ಳಿ ಪ್ರಗತಿ
- ಮುಂದೆ ಇಲ್ಲಿಯೇ ಉಳಿದು, ಅಭಿವೃದ್ಧಿ ಪಡಿಸುವೆ –ಸಿ.ಎಂ

ಸಂಗೊಳ್ಳಿ ರಾಯಣ್ಣನ ಕಾಲದಲ್ಲಿದ್ದ ವಿಶ್ವಾಸದ್ರೋಹಿಗಳು ಈಗಲೂ ಇದ್ದಾರೆ. ಗುಲಾಮಗಿರಿ ರೂಢಿಸಿಕೊಳ್ಳದೇ, ಶಿಕ್ಷಣ, ಜ್ಞಾನ, ಸ್ವಾಭಿಮಾನ ಬೆಳೆಸಿಕೊಳ್ಳಬೇಕು. ರಾಯಣ್ಣನ ಆದರ್ಶ ದಾರಿದೀಪವಾಗಲಿ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಚಿವರಾದ ಸತೀಶ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳಕರ, ಶಿವರಾಜ ತಂಗಡಗಿ, ಬೈರತಿ ಸುರೇಶ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ, ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಇದ್ದರು.

ರಾಯಣ್ಣನ ಜೀವನಾಧಾರಿತ ವಸ್ತು ಸಂಗ್ರಹಾಲಯ ‘ವೀರಭೂಮಿ’ಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಉದ್ಘಾಟಿಸಿ, ವೀಕ್ಷಿಸಿದರು. ಶಿವರಾಜ ತಂಗಡಗಿ, ಎಚ್.ಎಂ.ರೇವಣ್ಣ, ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಮತ್ತಿತರರು ಇದ್ದರು –ಪ್ರಜಾವಾಣಿ ಚಿತ್ರ

‘ವೀರಭೂಮಿ’ ವಸ್ತು ಸಂಗ್ರಹಾಲಯದ ಬಳಿ ರಾಯಣ್ಣನ ವೀಕ್ಷಣಾ ಗೋಪುರ

ಕನ್ನಡ ವಿರೋಧಿಗಳಿಗೆ ಮುಖ್ಯಮಂತ್ರಿ ಎಚ್ಚರಿಕೆ

ಮರಾಠಿಯಲ್ಲಿ ಭಾಷಣ ಮಾಡಿದ ಖಾನಾಪುರ ಶಾಸಕ ವಿಠ್ಠಲ ಹಲಗೇಕರ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವೇದಿಕೆಯಲ್ಲೇ ಕನ್ನಡ ಪಾಠ ಮಾಡಿದರು. ‘ಕರ್ನಾಟಕದಲ್ಲಿ ಇರುವ ಎಲ್ಲರೂ ಕನ್ನಡ ಕಲಿಯಬೇಕು’ ಎಂದು ಕನ್ನಡ ವಿರೋಧಿ ಎಂಇಎಸ್ ನಾಯಕರಿಗೆ ನೇರ ಎಚ್ಚರಿಕೆ ನೀಡಿದರು.

‘ಯಾರು ಎಲ್ಲಿಂದಲೇ ಬಂದಿರಲಿ, ಎಲ್ಲೇ ಹೋಗಲಿ; ಕನ್ನಡ ನೆಲದ ಹೆಸರು ಹೇಳುವ ಮುನ್ನ ಕನ್ನಡ ಕಲಿಯಬೇಕು. ಅದನ್ನು ಅನಿವಾರ್ಯ ಮಾಡಬೇಕು. ಆಗ ಮಾತ್ರ ಕರ್ನಾಟಕ ಏಕೀಕರಣದ ಕಾರ್ಯ ಸಾರ್ಥಕ ಆಗುತ್ತದೆ’ ಎಂದರು.

ಇದಕ್ಕೂ ಮುನ್ನ ಅಧ್ಯಕ್ಷೀಯ ಭಾಷಣಕ್ಕೆ ನಿಂತ ಶಾಸಕ ವಿಠ್ಠಲ ಹಲಗೇಕರ ಮರಾಠಿಯಲ್ಲಿ ಮಾತು ಆರಂಭಿಸಿದರು. ಆಗ ಜನಸ್ತೋಮದಿಂದ ಕೂಗಾಟ, ಚೀರಾಟ ಆರಂಭವಾಯಿತು.

‘ನನಗೆ ಕನ್ನಡ ಬರುವುದಿಲ್ಲ ಎಂಬುದು ನಿಮಗೆ ಗೊತ್ತು. ಸಿದ್ದರಾಮಯ್ಯ ಅವರಿಗೆ ಮರಾಠಿ ಅರ್ಥವಾಗುವುದಿಲ್ಲ ಎಂಬುದು ನನಗೂ ಗೊತ್ತು. ಖಾನಾಪುರದಲ್ಲಿ ಕನ್ನಡ–ಮರಾಠಿ ಎಂಬ ಭೇದವಿಲ್ಲ’ ಎಂದು ಶಾಸಕ ಮರಾಠಿಯಲ್ಲೇ ಟಾಂಗ್ ನೀಡಿದರು. ಗಲಾಟೆ ಜೋರಾದಾಗ ಅವರು ಕನ್ನಡದಲ್ಲಿ ಮನವಿ ಓದಿದರು.

ಬಳಿಕ ಉದ್ಘಾಟನಾ ಭಾಷಣ ಮಾಡಿದ ಸಿದ್ದರಾಮಯ್ಯ, ‘ಏನಯ್ಯ ವಿಠ್ಠಲ ಕನ್ನಡ ಅರ್ಥವಾಗುತ್ತದೆಯೇ?’ ಎಂದು ಕೇಳಿದರು. ‘ಅರ್ಥವಾಗುತ್ತದೆ ಸರ್’ ಎಂದು ಶಾಸಕ ಪ್ರತಿಕ್ರಿಯಿಸಿದರು.

‘ಇಲ್ಲಿರುವವರು ಮಾತ್ರವಲ್ಲ ನೀವು ಯಾರು ಎಲ್ಲೇ ಇರಿ; ಕನ್ನಡದ ಅನ್ನ ಉಂಡ ಮೇಲೆ ಕನ್ನಡ ಕಲಿಯಿರಿ’ ಎಂದು ಮರಾಠಿಗರಿಗೆ ತಾಕೀತು ಮಾಡಿದರು.

ಸುದ್ದಿ 2 ನಿಮಿಷ

ಶ್ರೀರಾಮುಲು ವಿರುದ್ಧ ಎಫ್‌ಐಆರ್

ಬಳ್ಳಾರಿ: ಪೋಕ್ಸೊ ಪ್ರಕರಣದ ಸಂತ್ರಸ್ತೆ ಹೆಸರು ಬಹಿರಂಗಪಡಿಸಿದ್ದ ಮಾಜಿ ಸಚಿವ ಬಿ.ಶ್ರೀರಾಮುಲು ಅವರ ವಿರುದ್ಧ ನಗರದ ಮಹಿಳಾ ಠಾಣೆಯಲ್ಲಿ ಪೋಕ್ಸೊ ಮತ್ತು ಬಾಲ ನ್ಯಾಯ ಕಾಯ್ದೆಯಡಿ ಭಾನುವಾರ ಎಫ್‌ಐಆರ್ ದಾಖಲಾಗಿದೆ.

ನಗರದಲ್ಲಿ ನಡೆದಿದ್ದ ಘರ್ಷಣೆ, ಕೊಲೆ ಕೃತ್ಯ ಬಿಜೆಪಿ ಜನವರಿ 17ರಂದು ಏರ್ಪಡಿಸಿದ್ದ ಪ್ರತಿಭಟನಾ ಸಮಾವೇಶದಲ್ಲಿ ಭಾಷಣ ಮಾಡುವಾಗ ಶ್ರೀರಾಮುಲು ಅವರು ಪೋಕ್ಸೊ ಪ್ರಕರಣದ ಸಂತ್ರಸ್ತೆಯೊಬ್ಬರ ಗುರುತು ಬಹಿರಂಗಪಡಿಸಿದ್ದರು. ‘ಶಾಸಕ ಭರತ್ ರೆಡ್ಡಿ ಯುವಕರನ್ನು ಯಾವ ಹಂತಕ್ಕೆ ಮಾದಕ ವ್ಯಸನಿಗಳನ್ನಾಗಿ ಮಾಡಿದ್ದಾರೆ ಎಂದರೆ, ನಾಲ್ಕೈದು ವಿದ್ಯಾರ್ಥಿಗಳು ಡ್ರಗ್ಸ್ ತೆಗೆದುಕೊಂಡು ನಗರದ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಮಾಡಿದ್ದಾರೆ’ ಎಂದಿದ್ದರು. ಮುಂದುವರಿದು, ವಿದ್ಯಾರ್ಥಿನಿಯ ಹೆಸರು, ಶಾಲೆ, ತರಗತಿ ಮತ್ತು ಜಾತಿಯನ್ನೂ ಬಹಿರಂಗಪಡಿಸಿದ್ದರು. ಎಪಿಎಂಸಿ ಠಾಣೆ ಇನ್‌ಸ್ಪೆಕ್ಟರ್ ಈ ಬಗ್ಗೆ ದೂರು ನೀಡಿದ್ದಾರೆ.

‘ಶ್ರೀರಾಮುಲು ಅವರಿಗೆ ನೋಟಿಸ್ ನೀಡಿ, ವಿಚಾರಣೆಗೆ ಕರೆಯುತ್ತೇವೆ’ ಎಂದು ಎಸ್‌ಪಿ ಸುಮನ್ ಪೆನ್ನೇಕರ್ ತಿಳಿಸಿದರು.

‘ಪ್ರಜಾವಾಣಿ’ ಜ.18ರ ಸಂಚಿಕೆಯಲ್ಲಿ ‘ಸಂತ್ರಸ್ತೆ ವಿವರ ಬಹಿರಂಗಪಡಿಸಿದ ಶ್ರೀರಾಮುಲು’ ಶೀರ್ಷಿಕೆಯಲ್ಲಿ ಸುದ್ದಿ ಪ್ರಕಟವಾಗಿತ್ತು.

ಭ್ರಷ್ಟಾಚಾರದ ದಾಖಲೆಗಳಿದ್ದರೆ ಸಲ್ಲಿಸಿ: ಪ್ರಿಯಾಂಕ್ ಸವಾಲು

ಬೆಂಗಳೂರು: ‘ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸುತ್ತಿರುವ ಬಿಜೆಪಿ, ಆ ಬಗ್ಗೆ ದಾಖಲೆಗಳಿದ್ದರೆ ವಿಧಾನಮಂಡಲದ ಅಧಿವೇಶನದಲ್ಲಿ ಸಲ್ಲಿಸಿ, ಚರ್ಚೆಗೆ ಮುಂದಾಗಲಿ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿರುವ ಬಿಜೆಪಿ ನಾಯಕರು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ವಿರೋಧ ಪಕ್ಷಗಳು ಕೇವಲ ಆರೋಪಗಳಿಂದ ರಾಜಕೀಯ ಮಾಡುತ್ತಿವೆಯೇ ಹೊರತು, ಸಾಕ್ಷ್ಯಗಳನ್ನು ಒದಗಿಸುವುದಿಲ್ಲ’ ಎಂದು ಟೀಕಿಸಿದರು.

‘ಸಾವಿರಾರು ಕೋಟಿ ರೂಪಾಯಿ ಮೊತ್ತದ ಹಗರಣ ಆಗಿದೆ ಎಂದು ಯಾವುದೇ ದಾಖಲೆಗಳಿಲ್ಲದೆ ಆರೋಪಿಸುತ್ತಿರುವ ಬಿಜೆಪಿಯವರಿಂದ, ಈ ಹಿಂದೆ ಮಾಡಿದ್ದ ಆರೋಪಗಳನ್ನು ಸಾಬೀತುಪಡಿಸಲು ಸಾಧ್ಯವಾಗಿಲ್ಲ’ ಎಂದು ಕಿಡಿಕಾರಿದರು.

ಬಳ್ಳಾರಿ ಗಲಾಟೆ ಪ್ರಕರಣದ ತನಿಖೆಯನ್ನು ಸಿಬಿಐಗೆ ನೀಡಬೇಕೆಂದು ಬಿಜೆಪಿ ಆಗ್ರಹಿಸಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಸಿಬಿಐಗೆ ಕೊಡಿ ಎಂದು ಹೇಳುವ ಮೊದಲು ರಾಜ್ಯದಲ್ಲಿ ನಡೆದ ಪ್ರಕರಣಗಳ ತನಿಖೆಯನ್ನು ಸಿಬಿಐಗೆ ನೀಡಿದರೆ ಅಗತ್ಯವಿರುವ ಸಿಬ್ಬಂದಿ ಸೇರಿದಂತೆ ಸಂಪನ್ಮೂಲಗಳನ್ನೂ ಕೊಡಬೇಕೆಂದು ಮುಖ್ಯ ಕಾರ್ಯದರ್ಶಿಗೆ ಈ ಹಿಂದೆ ಸಿಬಿಐ ಬರೆದಿದ್ದ ಪತ್ರವನ್ನು ಬಿಜೆಪಿಯವರು ನೋಡಲಿ’ ಎಂದರು.

ಚಿಟಿಕೆ ಸುದ್ದಿ

ಎಸ್ಎಸ್ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷೆ: ಸಮಯ ಬದಲಾವಣೆ

ಬೆಂಗಳೂರು: ಪ್ರಶ್ನೆ ಪತ್ರಿಕೆ ಸೋರಿಕೆ ತಡೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವ ಶಾಲಾ ಶಿಕ್ಷಣ ಇಲಾಖೆ, ಎಸ್‌ಎಸ್‌ಎಲ್‌ಸಿ ಎರಡನೇ ಪೂರ್ವಸಿದ್ಧತಾ ಪರೀಕ್ಷೆಯ ಸಮಯವನ್ನು ಬದಲಾವಣೆ ಮಾಡಿದೆ.

ಇದೇ ಜ.27ರಿಂದ ಫೆ.2ರವರೆಗೆ ಎರಡನೇ ಪೂರ್ವ ಸಿದ್ಧತಾ ಪರೀಕ್ಷೆಗಳು ನಡೆಯಲಿವೆ. ಪರೀಕ್ಷೆಗಳು ಬೆಳಿಗ್ಗೆ 10ರ ಬದಲಿಗೆ 11ರಿಂದ ಆರಂಭವಾಗಲಿವೆ. ಎಲ್ಲ ವಿದ್ಯಾರ್ಥಿಗಳು ಅಂದು ಬೆಳಿಗ್ಗೆ 9ಕ್ಕೆ ತರಗತಿಗಳಿಗೆ ಹಾಜರಾಗುವುದನ್ನು ಕಡ್ಡಾಯ ಮಾಡಲಾಗಿದೆ. 9ರಿಂದ 10.30ರವರೆಗೆ ತರಗತಿ ನಡೆಸಲಾಗುತ್ತದೆ. ಆಯಾ ವಿಷಯಗಳ ಪ್ರಶ್ನೆ ಪತ್ರಿಕೆಗಳನ್ನು ಆಯಾ ದಿನ ಬೆಳಿಗ್ಗೆ 9.30ಕ್ಕೆ ಶಾಲಾ ಲಾಗಿನ್‌ನಿಂದ ಡೌನ್‌ಲೋಡ್ ಮಾಡಬೇಕು. 10 ಗಂಟೆಯ ಒಳಗೆ ಮುದ್ರಣ ಮಾಡಿಕೊಳ್ಳಬೇಕು. 10.30ರ ಒಳಗೆ ಸಿದ್ಧವಾಗಬೇಕು. 10.50ಕ್ಕೆ ಪರೀಕ್ಷಾ ಕೊಠಡಿಗಳಿಗೆ ಕಳುಹಿಸಬೇಕು ಎಂದು ಇಲಾಖೆ ಸೂಚನೆ ನೀಡಿದೆ.

ಪ್ರಶ್ನೆ ಪತ್ರಿಕೆ ಸೋರಿಕೆಯಾದರೆ ಆಯಾ ಶಾಲೆಯ ಮುಖ್ಯ ಶಿಕ್ಷಕರು, ನೋಡಲ್ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿ, ಜಿಲ್ಲಾ ಉಪ ನಿರ್ದೇಶಕರನ್ನು ಹೊಣೆ ಮಾಡಲಾಗುವುದು. ಪ್ರತಿ ಪ್ರಕರಣಕ್ಕೂ ಪ್ರತ್ಯೇಕ ಎಫ್‌ಐಆರ್ ದಾಖಲಿಸಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಲಾಗಿದೆ.

ಕೈಕೊಡಲಿ, ಕಂಬದ ಬೋಧಿಗೆ ಪತ್ತೆ

ಗದಗ: ತಾಲ್ಲೂಕಿನ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಉತ್ಖನನ ಮುಂದುವರೆದಿದ್ದು, ನವಶಿಲಾಯುಗದ ಕೈಕೊಡಲಿ ಮತ್ತು ಕಂಬದ ಬೋಧಿಗೆ ಪ್ರಾಚ್ಯ ಅವಶೇಷ ಸೋಮವಾರ ಸಿಕ್ಕಿದೆ.

‘ಕೈ ಕೊಡಲಿ ಆಕಾರದ ಕಲ್ಲು ಮತ್ತು ಕಂಬದ ಮೇಲೆ ಆಸರೆಯಾಗುವ ಬೋಧಿಗೆ ಕುರಿತು ತಜ್ಞರು ಅಧ್ಯಯನ ನಡೆಸಿದ ಬಳಿಕ ಹೆಚ್ಚಿನ ವಿವರಗಳು ಸಿಗಲಿವೆ’ ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.

‘ಉತ್ಖನನದಲ್ಲಿ 24 ಮಹಿಳೆಯರು ಮತ್ತು 10 ಪುರುಷರು ತೊಡಗಿದ್ದಾರೆ. ಈಗಿನ ₹ 374 ದಿನಗೂಲಿ ಸಾಕಾಗುವುದಿಲ್ಲ. ಅದನ್ನು ಕನಿಷ್ಠ ₹500ಕ್ಕೆ ಏರಿಕೆ ಮಾಡಬೇಕು’ ಎಂದು ಉತ್ಖನನ ಕಾರ್ಮಿಕರು ಕೋರಿದ್ದಾರೆ.

ಉಡುಪಿ ಮಠದಲ್ಲಿ ವಸ್ತ್ರಸಂಹಿತೆ ಜಾರಿ

ಉಡುಪಿ: ಶೀರೂರು ಪರ್ಯಾಯದ ಮೊದಲ ದಿನದಿಂದಲೇ, ದೇವರ ದರ್ಶನಕ್ಕೆ ಕೃಷ್ಣಮಠಕ್ಕೆ ಪ್ರವೇಶಿಸಲು ಭಕ್ತರಿಗೆ ವಸ್ತ್ರಸಂಹಿತೆ ಜಾರಿಗೊಳಿಸಲಾಗಿದೆ.

‘ಪುರುಷರು ಅಂಗಿ, ಬರ್ಮುಡಾ ಹಾಗೂ ಮಹಿಳೆಯರು ಹಾಫ್ ಸ್ಕರ್ಟ್, ಬರ್ಮುಡಾ ಧರಿಸಿ ಬರಬಾರದು’ ಎಂದು ಶೀರೂರು ಮಠದ ದಿವಾನ ಉದಯಕುಮಾರ್ ಸರಳತ್ತಾಯ ತಿಳಿಸಿದ್ದಾರೆ. ಸರೋವರದ ಮೂಲಕ ಪೂರ್ವ ಮಹಾದ್ವಾರದಿಂದ ಪ್ರವೇಶಿಸುವಾಗ ಪುರುಷರು ಅಂಗಿ ತೆಗೆದು ಶಾಲು ಹಾಕಿಕೊಂಡು ಪ್ರವೇಶಿಸಬಹುದು ಎಂದು ಅವರು ಹೇಳಿಕೆ ನೀಡಿದ್ದಾರೆ.

ದೃಷ್ಟಿವಂಚಿತರಿಗೆ ಸ್ಕ್ಯಾನ್ ಮೂಲಕ ಮಾಹಿತಿ: ಕೇಂದ್ರಕ್ಕೆ ಶೀಘ್ರ ಪ್ರಸ್ತಾವ– ಸಚಿವ

‘ಔಷಧಗಳ ಮೇಲೆ ಕ್ಯುಆರ್‌ಕೋಡ್’

ಪ್ರಜಾವಾಣಿ ವಾರ್ತೆ

ಮೈಸೂರು: ‘ದೃಷ್ಟಿದೋಷವುಳ್ಳವರಿಗೆ ಅನುಕೂಲವಾಗುವಂತೆ ಔಷಧಗಳ ಮೇಲೆ ಕ್ಯುಆರ್ ಕೋಡ್ ಆಧಾರಿತ ಮಾಹಿತಿ ವ್ಯವಸ್ಥೆ ಜಾರಿಗೊಳಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಇಲ್ಲಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಸೋಮವಾರ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಹಾಗೂ ಜಪಾನ್‌ನ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆ (ಜಿಕಾ) ಸಹಯೋಗದಲ್ಲಿ ನಡೆದ ದುಂಡುಮೇಜಿನ ಸಭೆಯಲ್ಲಿ ಅವರು ಮಾತನಾಡಿದರು.

‘ಜಪಾನ್‌ನಲ್ಲಿ ದೃಷ್ಟಿವಂಚಿತರಿಗೆ ಇಂತಹ ವ್ಯವಸ್ಥೆ ಬಳಕೆಯಲ್ಲಿದೆ. ಔಷಧದ ವಿವರ ಧ್ವನಿ ಮೂಲಕ ಸಿಗುತ್ತದೆ. ಭಾರತದಲ್ಲೂ ಜಪಾನ್ ಹಾಗೂ ಜೆಎಸ್‌ಎಸ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಈ ಬಗ್ಗೆ ಅಧ್ಯಯನ ನಡೆದಿರುವುದು ಉತ್ತಮ ಬೆಳವಣಿಗೆ. ಈ ಕ್ರಮದಿಂದ ಔಷಧ, ಅದರ ಬಳಕೆ, ಬೆಲೆ, ಅವಧಿ ಎಲ್ಲವೂ ದೃಷ್ಟಿವಂಚಿತರಿಗೂ ತಿಳಿಯಲಿದೆ. ಅನ್ಯರನ್ನು ಅವಲಂಬಿಸುವುದು ತಪ್ಪಲಿದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಲಿದೆ’ ಎಂದರು.

‘ಔಷಧಗಳ ಮೇಲೆ ಕ್ಯುಆರ್ ಕೋಡ್ ಕಡ್ಡಾಯಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದು. ಫಾರ್ಮಾ ಕಂಪನಿಗಳೊಂದಿಗೆ ಚರ್ಚಿಸಲಾಗುವುದು. ಇದರಿಂದ ಕಂಪನಿಗಳಿಗೆ ಹೆಚ್ಚುವರಿ ವೆಚ್ಚ ಬೀಳುವುದಿಲ್ಲ. ಕಂಪನಿಗಳು ಮುಂದೆ ಬಂದರೆ ನೆರವು ಒದಗಿಸಲಾಗುವುದು’ ಎಂದರು.

ಕಾಲೇಜಿನ ಸಿಬ್ಬಂದಿ ಹರ್ಷ ಚಲಸಾನಿ, ‘ಜಪಾನ್‌ನ ಮಾದರಿ ಅನುಸರಿಸಿ ದಕ್ಷಿಣ ಭಾರತದ ನಾಲ್ಕು ರಾಜ್ಯಗಳ 513 ಮಂದಿ ದೃಷ್ಟಿವಂಚಿತರ ಸಮೀಕ್ಷೆ ನಡೆಸಿದ್ದು, ಅವರಲ್ಲಿ 485 ಮಂದಿ ಮೊಬೈಲ್ ಬಳಸುತ್ತಿದ್ದು, ಕ್ಯುಆರ್ ಕೋಡ್ ಮೂಲಕ ಮಾಹಿತಿ ಪಡೆಯುತ್ತಿದ್ದಾರೆ’ ಎಂದರು.

ಜಪಾನ್ ಪ್ರತಿನಿಧಿ ಬ್ರಿಟ್ನಿ ಪಾರ್ಟಿನ್, ‘ಜಪಾನ್‌ನ ಕೆಲವು ಪ್ರಸಿದ್ಧ ಕಂಪನಿಗಳು ಉತ್ಪನ್ನಗಳ ಮೇಲೆ ಕ್ಯುಆರ್ ಕೋಡ್ ಮುದ್ರಿಸುತ್ತಿದ್ದು, ಔಷಧಗಳ ಸಮಗ್ರ ಮಾಹಿತಿ ನೀಡುತ್ತಿವೆ. ಆದರೆ ಸರ್ಕಾರ ಕಡ್ಡಾಯಗೊಳಿಸಿಲ್ಲ. ತಂತ್ರಜ್ಞಾನ ಬಳಸಿ ಉತ್ತಮ ವೈದ್ಯಕೀಯ ಸೇವೆ ಒದಗಿಸುವುದೇ ಉದ್ದೇಶ’ ಎಂದು ವಿವರಿಸಿದರು.

ಯೋಜನೆಯ ಸಾಧ್ಯತೆಗಳ ಕುರಿತು ಜಪಾನ್ ಪ್ರತಿನಿಧಿಗಳಾದ ಟೊಕುಹಿರೊ ಅರಕಾವ, ಜೊಟಾರೊ ಸುನಹಾರಾ, ಕೆಂಟ ಮಿಯೊಮೊಟೊ ವಿವರಿಸಿದರು.

ಸಭೆಯಲ್ಲಿ ಜಪಾನ್ ಪ್ರತಿನಿಧಿಗಳಾದ ಬ್ರಿಟ್ನಿ ಪಾರ್ಟಿನ್, ಟೊಕುಹಿರೊ ಅರಕಾವ, ಜೊಟಾರೊ ಸುನಹಾರಾ ಹಾಗೂ ಕೆಂಟ ಮಿಯೊಮೊಟೊ ಅವರನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಭಿನಂದಿಸಿದರು. ಡಾ. ಎಚ್. ಬಸನಗೌಡಪ್ಪ, ಡಾ. ಬಿ. ಮಂಜುನಾಥ, ಡಾ. ಪ್ರಮೋದ್‌ಕುಮಾರ್ ಜೊತೆಗಿದ್ದರು ಪ್ರಜಾವಾಣಿ ಚಿತ್ರ

ದೃಷ್ಟಿವಂಚಿತರು ಜೀವನ ನಡೆಸಲು ಹಲವು ಸವಾಲು ಎದುರಿಸುತ್ತಿದ್ದಾರೆ. ಅವರು ಇತರರ ಮೇಲೆ ಅವಲಂಬಿಸುವುದನ್ನು ತಪ್ಪಿಸಲು ಈ ತಂತ್ರಜ್ಞಾನವು ಸಹಕಾರಿ ಆಗಲಿದೆ

ಡಾ. ಎಚ್. ಬಸನಗೌಡಪ್ಪ

ಕುಲಪತಿ, ಜೆಎಸ್‌ಎಸ್ ಎಎಚ್‌ಇಆರ್

‘ತೇಜೋವಧೆ ವಿರುದ್ಧ ಕಾನೂನು ಕ್ರಮ’

ಬಾಗಲಕೋಟೆ: ‘ನನ್ನ ತೇಜೋವಧೆ ಮಾಡುವವರ ವಿರುದ್ಧ ಕಾನೂನು ಕ್ರಮಕೈಗೊಳ್ಳುವೆ’ ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಸೋಮವಾರ ಇಲ್ಲಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಚಿವ ಆದಂದಿನಿಂದ ನನ್ನ ವಿರುದ್ಧ ಆರೋಪ ಮಾಡಲಾಗುತ್ತಿದೆ. ಇದರಲ್ಲಿ ಏನೋ ಕುತಂತ್ರವಿದೆ. ಈ ಬಗ್ಗೆ ಮುಖ್ಯಮಂತ್ರಿ ಅವರು ನನ್ನನ್ನು ಏನೂ ಕೇಳಿಲ್ಲ’ ಎಂದು ತಿಳಿಸಿದರು.

ದರ್ಗಾಕ್ಕೆ ‘ಬಾಣ’: 7 ಮಂದಿ ವಿರುದ್ಧ ಪ್ರಕರಣ

ಬೆಳಗಾವಿ: ಅಖಂಡ ಹಿಂದೂ ಸಮ್ಮೇಳನದ ಪ್ರಯುಕ್ತ ಮಚ್ಛೆ ಗ್ರಾಮದಲ್ಲಿ ಭಾನುವಾರ ನಡೆದ ಶೋಭಾಯಾತ್ರೆ ವೇಳೆ ಧಾರ್ಮಿಕ ಭಾವನೆಗೆ ಧಕ್ಕೆ ತಂದ ಆರೋಪದಡಿ ಮಹಾರಾಷ್ಟ್ರದ ಹಿಂದುತ್ವ ಪರ ನಾಯಕಿ ಹರ್ಷಿತಾ ಠಾಕೂರ ಸೇರಿ 7 ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

ಶೋಭಾಯಾತ್ರೆ ವೇಳೆ ವಾಹನದ ಮೇಲೆ ನಿಂತ ಹರ್ಷಿತಾ, ಅನ್ಸಾರಿ ದರ್ಗಾದ ಬಳಿ ದರ್ಗಾ ಗುರಿಯಾಗಿಸಿ ಬಾಣ ಬಿಟ್ಟಂತೆ ಕೈ ಮಾಡಿ ತೋರಿಸಿದರು. ಆಗ ಸುತ್ತ ಸೇರಿದ ಕಾರ್ಯಕರ್ತರು ಹೋಯ್... ಎಂದು ಕೂಗಿದ್ದರು.

‘ಇದರಿಂದ ಮುಸ್ಲಿಂಮರ ಧಾರ್ಮಿಕ ಭಾವನೆಗೆ ಧಕ್ಕೆ ತಂದಂತಾಗಿದೆ. ಸಮಾವೇಶದಲ್ಲೂ ಧಾರ್ಮಿಕ ಭಾವನೆ ಕೆರಳಿಸುವ ಪ್ರಚೋದನಕಾರಿ ಭಾಷಣ ಮಾಡಿದ್ದಾರೆ’ ಎಂದು ಅಬ್ದುಲ್ ಖಾದರ್ ಮುಜಾವರ ಎಂಬವರು ದೂರು ದಾಖಲಿಸಿದ್ದಾರೆ.

ಸಮ್ಮೇಳನದ ಆಯೋಜಕರಾದ ಬೆಳಗಾವಿಯ ಸುಪ್ರೀತ್ ಸಿಂಪಿ, ಶ್ರೀಕಾಂತ ಕಾಂಬಳೆ, ಬೆಟ್ಟಪ್ಪ ತಾರಿಹಾಳ, ಶಿವಾಜಿ ಶಹಾಪೂರಕರ, ಗಂಗಾರಾಮ ತಾರಿಹಾಳ ಮತ್ತು ಕಲ್ಲಪ್ಪ ವಿರುದ್ಧವೂ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹರ್ಷಿತಾ ಠಾಕೂರ ಅವರು ಅನ್ಸಾರಿ ಮಸೀದಿಯತ್ತ ಬಾಣ ಬಿಟ್ಟಂತೆ ಅಣಕು ಮಾಡಿದರು

ಜೀವ ಬೆದರಿಕೆ: ಶಾಸಕಿ ಕರೆಮ್ಮ ದೂರು

ಪ್ರಜಾವಾಣಿ ವಾರ್ತೆ

ದೇವದುರ್ಗ: ‘ಮರಳು ದಂಧೆಕೋರರಿಂದ ನನಗೆ ಮತ್ತು ನಮ್ಮ ಪಕ್ಷದ ಕಾರ್ಯಕರ್ತರಿಗೆ ಜೀವ ಬೆದರಿಕೆಯಿದೆ’ ಎಂದು ಜೆಡಿಎಸ್ ಶಾಸಕಿ ಕರೆಮ್ಮ ಜಿ.ನಾಯಕ ಆರೋಪಿಸಿದರು.

‘ಭಾನುವಾರ ಬೆಳಿಗ್ಗೆ 8 ಗಂಟೆಗೆ ಮರಳು ದಂಧೆಕೋರರ ನೂರಾರು ಜನರ ತಂಡ ನಮ್ಮ ಮನೆಗೆ ದಿಢೀರ್ ಬಂದು ಬೆದರಿಕೆ ಹಾಕಿದೆ. ಮರಳು ದಂಧೆಕೋರರ ಜತೆ ಪೊಲೀಸರು ಶಾಮೀಲಾಗಿ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿದ್ದಾರೆ’ ಎಂದು ಆರೋಪ ಮಾಡಿದರು.

‘ಗುಪ್ತಚರ ಇಲಾಖೆ ಸಿಬ್ಬಂದಿ ನಿಷ್ಕ್ರಿಯವಾಗಿದ್ದಾರೆ. ಮರಳು ಅಕ್ರಮ ಸಾಗಾಟ, ಮಟ್ಕಾ, ಮದ್ಯ ಮಾರಾಟ ಹಾಗೂ ಗಾಂಜಾ ಮಾರಾಟಗಾರರಿಗೆ ಪೊಲೀಸರು ರಕ್ಷಕರಾಗಿ ಕಾಯುತ್ತಿದ್ದಾರೆ. ತಾಲ್ಲೂಕಿನಲ್ಲಿ 7–8 ಪೊಲೀಸರು ಹಗಲು ರಾತ್ರಿ ಕಾರು–ಜೀಪ್ ಮೂಲಕ ದಂಧೆಕೋರರಿಂದ ಹಣ ವಸೂಲಿ ಮಾಡುತ್ತಿದ್ದಾರೆ’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

ಕರೆಮ್ಮ ಜಿ. ನಾಯಕ

‘ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಗೃಹ ಸಚಿವರಿಗೆ ದೂರು ನೀಡಿ ರಕ್ಷಣೆ ಕೇಳುತ್ತೇನೆ. ಕಾಂಗ್ರೆಸ್ ಪರಾಜಿತ ಅಭ್ಯರ್ಥಿ ಶ್ರೀದೇವಿ ನಾಯಕ ಸಹೋದರ ಶ್ರೀನಿವಾಸ ನಾಯಕ ನೇತೃತ್ವದ ತಂಡ ಮನೆಗೆ ಭೇಟಿ ನೀಡಿ ಕೊಲೆ ಬೆದರಿಕೆ ಹಾಕಿದೆ’ ಎಂದು ಕರೆಮ್ಮ ಆರೋಪಿಸಿದ್ದಾರೆ.

60 ಜನರ ವಿರುದ್ಧ ಎಫ್‌ಐಆರ್

ದೂರಿನ ಆಧಾರದಲ್ಲಿ ಶ್ರೀನಿವಾಸ ನಾಯಕ, ರವಿ ಪ್ರಕಾಶ ಅಕ್ಕರಕಿ, ಸುರೇಶ ನಾಯಕ ಚಿಂತಲಕುಂಟ, ವೀರೇಶಗೌಡ ಯಾಟಗಲ್, ಹನುಮಂತ್ರಾಯ ಕರಿಗುಡ್ಡ, ಅಮರೇಶ ಅಂಜಳ ಸೇರಿ 60 ಜನರ ವಿರುದ್ಧ ದೇವದುರ್ಗ ಪೊಲೀಸ್ ಠಾಣೆಯಲ್ಲಿ ಕೊಲೆ ಬೆದರಿಕೆ ಪ್ರಕರಣ ದಾಖಲಾಗಿದೆ.

ಶಾಸಕಿ ಕರೆಮ್ಮ ಹಾಗೂ ಪಕ್ಷದ ಕಾರ್ಯಕರ್ತರಿಗೆ ಜೀವಬೆದರಿಕೆ ಕುರಿತು ಜೆಡಿಎಸ್ ಮುಖಂಡ, ವಕೀಲ ಹನುಮಂತರಾಯ ದೂರು ನೀಡಿದ್ದಾರೆ.

ಆರ್‌ಎಫ್‌ಒ ಶಂಕಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಗ್ರಾಮೀಣ ಬಸ್ ನಿಲ್ದಾಣದ ಸಮೀಪದ ಯುವರಾಜ ಗ್ಯಾಲಕ್ಸಿ ಲಾಡ್ಜ್ ಹಿಂಬದಿಯ ಕಾರಿಡಾರ್‌ನಲ್ಲಿ ಆರ್‌ಎಫ್‌ಒ ಕಾಂತರಾಜ್ ಚೌಹಾಣ್ (32) ಅವರ ಮೃತದೇಹ ಸೋಮವಾರ ಬೆಳಿಗ್ಗೆ ಅನುಮಾನಾಸ್ಪದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಕಾಂತರಾಜ್ ಚೌಹಾಣ್

ತಿ.ನರಸೀಪುರ ಸಾಮಾಜಿಕ ಅರಣ್ಯ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವರು ವಿಜಯಪುರದ ಇಂಡಿಯವರು. 15 ದಿನದ ಹಿಂದೆ ಚಾಮರಾಜನಗರ ಜಿಲ್ಲೆಯ ಕೌದಳ್ಳಿ ವಲಯದಿಂದ ವರ್ಗಾವಣೆ ಆಗಿತ್ತು. ಅವರಿಗೆ ಪತ್ನಿ ಹಾಗೂ 3 ತಿಂಗಳ ಅವಳಿ ಮಕ್ಕಳಿದ್ದಾರೆ. ‘ಗಂಗಾವತಿಯ ಮಲ್ಲನಗೌಡ ಪಾಟೀಲ್ ಎಂಬವರು ಲಾಡ್ಜ್‌ನಲ್ಲಿ ಭಾನುವಾರ ಕೊಠಡಿ ಬಾಡಿಗೆಗೆ ಪಡೆದಿದ್ದರು. ಅಲ್ಲಿಗೆ ಅಧಿಕಾರಿಯೂ ಬಂದಿದ್ದರು. ಪಾನಮತ್ತರಾಗಿ ಕೊಠಡಿ ಗಲೀಜು ಮಾಡಿದ್ದಾರೆಂಬ ಕಾರಣಕ್ಕೆ ಲಾಡ್ಜ್‌ನ ಸಿಬ್ಬಂದಿಯು ತಡರಾತ್ರಿ 2.30ಕ್ಕೆ ಕೊಠಡಿಯಲ್ಲಿದ್ದ ಎಲ್ಲರನ್ನೂ ಹೊರಕ್ಕೆ ಕಳಿಸಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮೃತದೇಹದ ಮೂಗಿನಿಂದ ರಕ್ತ ಬಂದಿದೆ. ಗಾಯಗಳಿಲ್ಲ. ಮರಣೋತ್ತರ ಪರೀಕ್ಷೆ ಬಳಿಕ ಸಾವಿಗೆ ಕಾರಣ ತಿಳಿಯಲಿದೆ’ ಎಂದಿದ್ದಾರೆ. ಲಷ್ಕರ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ. ಎಸಿಪಿ ರಾಜೇಂದ್ರ, ಇನ್‌ಸ್ಪೆಕ್ಟರ್ ಲೋಲಾಕ್ಷಿ ಸ್ಥಳಕ್ಕೆ ಭೇಟಿ ನೀಡಿದ್ದರು.

ಸೇವಾಸಿಂಧು ಮೂಲಕ ಪ್ರಮಾಣಪತ್ರ: ಕೆಇಎ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕನ್ನಡ ಮಾಧ್ಯಮ, ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರಗಳನ್ನು ಸೇವಾ ಸಿಂಧು ಪೋರ್ಟಲ್ (ಆನ್‌ಲೈನ್) ಮೂಲಕ ವಿತರಿಸಲು ಕ್ರಮಕೈಗೊಳ್ಳುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಶಾಲಾ ಶಿಕ್ಷಣ ಇಲಾಖೆಗೆ ಮನವಿ ಮಾಡಿದೆ.

2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ದಾಖಲೆಗಳ ತ್ವರಿತ ಪರಿಶೀಲನೆಗೆ ಆದ್ಯತೆ ನೀಡಲಾಗಿದೆ. ಸೀಟು ಹಂಚಿಕೆ ಪ್ರಕ್ರಿಯೆ ಕೆಲ ದಾಖಲೆಗಳ ಪರಿಶೀಲನೆ ಕಾರಣಕ್ಕೆ ವಿಳಂಬವಾಗುತ್ತದೆ. ಗ್ರಾಮೀಣ ಹಾಗೂ ಕನ್ನಡ ಮಾಧ್ಯಮ ಪ್ರಮಾಣಪತ್ರಗಳ ಭೌತಿಕ ಪರಿಶೀಲನೆಗಾಗಿ ಬಿಇಒ, ಪದವಿಪೂರ್ವ ಕಾಲೇಜುಗಳಿಗೆ ವಿದ್ಯಾರ್ಥಿಗಳು ತೆರಳಬೇಕಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಅವರು ಶಾಲಾ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ವಿವರಿಸಿದ್ದಾರೆ.

ಸಿಇಟಿ: 15 ಸಾವಿರ ಅರ್ಜಿ ಸಲ್ಲಿಕೆ

ಸಿಇಟಿ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಜ.17ರಿಂದ ಆರಂಭಿಸಿದ್ದು, 15,143 ಅರ್ಜಿಗಳು ಸಲ್ಲಿಕೆಯಾಗಿವೆ. 18,507 ಅಭ್ಯರ್ಥಿಗಳು ಆಧಾರ್ ನೋಂದಣಿ ಪೂರ್ಣಗೊಳಿಸಿದ್ದು, 4,691 ಅಭ್ಯರ್ಥಿಗಳು ನೋಂದಣಿ ಶುಲ್ಕ ಪಾವತಿಸಿದ್ದಾರೆ. ಅರ್ಜಿ ಸಲ್ಲಿಕೆಗೆ ಫೆ.16 ಹಾಗೂ ಶುಲ್ಕ ಪಾವತಿಸಲು ಫೆ.18 ಕೊನೆ ದಿನವಾಗಿದೆ.

ಸರ್ಕಾರ ಈ ಪ್ರಮಾಣಪತ್ರಗಳನ್ನು ಶಾಶ್ವತ ಆದಾಯ ದಾಖಲೆ (ಆರ್‌ಡಿ) ಸಂಖ್ಯೆಯೊಂದಿಗೆ ವಿತರಿಸಿದರೆ ಸಿಇಟಿ ಮಾತ್ರವಲ್ಲದೇ ಎಲ್ಲ ನೇಮಕಾತಿ ಪ್ರಕ್ರಿಯೆಗಳಿಗೂ ಬಳಸಬಹುದು ಎಂದು ಮಾಹಿತಿ ನೀಡಿದ್ದಾರೆ. ಇದೇ ರೀತಿ ತೆಲುಗು, ತುಳು, ತಮಿಳು ಮತ್ತು ಕೊಡವ ಸೇರಿದಂತೆ ಇತರೆ ಮಾತೃಭಾಷಾ ಪ್ರಮಾಣಪತ್ರಗಳನ್ನೂ ಸೇವಾ ಸಿಂಧು ಮೂಲಕ ನೀಡಲು ಕೆಇಎ ಕೋರಿದೆ.

ಕೆರೆಯಲ್ಲಿ ಶೌಚಾಲಯ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ತಾಲ್ಲೂಕು ಸಾತನೂರು ಹೋಬಳಿಯ ಕಬ್ಬಾಳು ಗ್ರಾಮದ ಸರ್ಕಾರಿ ಕೆರೆ ಜಾಗದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡುತ್ತಿರುವುದನ್ನು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಕಬ್ಬಾಳು ಗ್ರಾಮದ ಸಾಮಾಜಿಕ ಕಾರ್ಯಕರ್ತ ರವಿಕುಮಾರ್ ಕಂಚನಹಳ್ಳಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ಮಾನಸಿ ಶರ್ಮ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಬೆಂಗಳೂರು ದಕ್ಷಿಣ ಜಿಲ್ಲಾಧಿಕಾರಿ, ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿ, ಕನಕಪುರ ತಹಶೀಲ್ದಾರ್, ಬಿಡದಿ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಮಾರ್ಚ್ 11ಕ್ಕೆ ಮುಂದೂಡಲಾಗಿದೆ.

ಅರ್ಜಿಯಲ್ಲಿ ಏನಿದೆ?: ‘ಬೆಂಗಳೂರು ದಕ್ಷಿಣ ಜಿಲ್ಲೆಗೆ ಸೇರಿದ ಕಬ್ಬಾಳು ಗ್ರಾಮದ ಸರ್ಕಾರಿ ಕೆರೆಯಲ್ಲಿ ಶೌಚಾಲಯ ನಿರ್ಮಾಣದಿಂದ ಕೆರೆ, ನೀರಿನ ಮೂಲ ಹಾಗೂ ಪರಿಸರಕ್ಕೆ ದೊಡ್ಡ ಹಾನಿ ಉಂಟಾಗಲಿದೆ’ ಎಂದು ದೂರಲಾಗಿದೆ.

ಹಿರಿ ಜೀವಗಳ ಜೀವನೋತ್ಸಾಹ ಹೆಚ್ಚಿಸುತ್ತಿರುವ ಗ್ರಾಮ ಹಿರಿಯರ ಕಾಳಜಿ ಕೇಂದ್ರಗಳು

ಇಳಿ ಮನಸುಗಳಿಗೆ ಚೇತೋಹಾರಿ ‘ಸ್ಪಂದನ’

• ಬಷೀರಅಹ್ಮದ್ ನಗಾರಿ

ಕಲಬುರಗಿ: ಖಾಸಗಿ ಸಹಭಾಗಿತ್ವದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯು ವಿವಿಧ ಗ್ರಾಮಗಳಲ್ಲಿ ಸ್ಥಾಪಿಸಿರುವ ಸ್ಪಂದನಾ ಕೇಂದ್ರವು, ಜೀವನ ಸಂಜೆಯಲ್ಲಿರುವ ಹಿರಿಯ ನಾಗರಿಕರಲ್ಲಿ ಜೀವನೋತ್ಸಾಹ ಮೂಡಿಸುವಲ್ಲಿ ಯಶಸ್ವಿಯಾಗಿದೆ.

ಕಲ್ಯಾಣ ಕರ್ನಾಟಕ ಭಾಗದ ಮೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಸುಮಾರು 60 ಗ್ರಾಮ ಪಂಚಾಯಿತಿಗಳ ಸ್ಥಾಪಿಸಿರುವ ‘ಅರಿವು ಕೇಂದ್ರ’ಗಳ ಉತ್ಸಾಹದ ಚಿತ್ರಣ ಕಾಣಬರುತ್ತಿದೆ.

ಚಿತ್ರಗಳಿಗೆ ಬಣ್ಣ ತುಂಬಿದ ಹಿರಿ ಜೀವಗಳು. ದಿನಪತ್ರಿಕೆಗಳ ಟೊಪ್ಪಿಗೆ ತಲೆಗೆ ಧರಿಸಿ ಮುಗುಳ್ನಕ್ಕ ಇಳಿವಯಸ್ಕರು. ತಾಳ ಬಾರಿಸುತ್ತ ಭಜನೆಯಲ್ಲಿ ತೊಡಗಿದ್ದ ವೃದ್ಧರು. ‘ಯಾರ ಹೊಲ ಯಾರ ಮನೆ, ಮೆಚ್ಚಿ ಕುಂತೆ ಸುಳ್ಳೆಯಲ್ಲಾ’ ಎಂದು ಭಜಿಸುತ್ತಿದ್ದ ಮಹಿಳೆಯರು.

ವಲಸೆ ಸಮಸ್ಯೆ, ಕುಗ್ಗುತ್ತಿರುವ ವಿಭಕ್ತ ಕುಟುಂಬಗಳ ವ್ಯವಸ್ಥೆಯಿಂದಾಗಿ ಹಳ್ಳಿಗಳಲ್ಲಿ ಹಿರಿಯ ನಾಗರಿಕರು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾರೆ. ಪೀಳಿಗೆ ಅಂತರದಿಂದಲೂ ಹಿರಿಯರಲ್ಲಿ ಪ್ರತ್ಯೇಕತಾ ಭಾವ, ಖಿನ್ನತೆ ಕಾಡುತ್ತಿದೆ. ಇಂತವರಿಗೆ ‘ಸ್ಪಂದನ’ ಹೊಸ ಉತ್ಸಾಹ ತಂದಿದೆ.

ಅಕ್ಷರ ಕಲಿಕೆಯಲ್ಲಿ ಮಗ್ನರಾದ ಮಹಿಳೆ

ಏನಿದು ಸ್ಪಂದನ?: ‘ಅರಿವು ಕೇಂದ್ರ’ಗಳಲ್ಲಿ ಪ್ರಾಯೋಗಿಕವಾಗಿ ಸ್ಥಾಪಿಸಿದ ‘ಗ್ರಾಮ ಹಿರಿಯರ ಕೇಂದ್ರ’ವೇ ‘ಸ್ಪಂದನ’. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸಹಯೋಗದಲ್ಲಿ ಟಾಟಾ ಟ್ರಸ್ಟ್‌ನ ಭಾಗವಾದ ‘ಕಲಿಕೆ’ ಸಂಸ್ಥೆ ನಿರ್ವಹಿಸುತ್ತಿದೆ.

ಹಿರಿಯ ನಾಗರಿಕರನ್ನು ಕ್ರಿಯಾಶೀಲರಾಗಿಸಲು ಪ್ರಾಯೋಗಿಕವಾಗಿ ‘ಸ್ಪಂದನ’ ಶುರು ಮಾಡಿದ್ದೇವೆ. ಗ್ರಾಮೀಣಾಭಿವೃದ್ಧಿ ಇಲಾಖೆ ಮೂಲಸೌಲಭ್ಯ ಒದಗಿಸಿದೆ. ಕಲಿಕೆ ಸಂಸ್ಥೆಯೂ ನೆರವಾಗುತ್ತಿದೆ

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

ಸ್ಪಂದನ ಕೇಂದ್ರದಲ್ಲಿ ವಿವಿಧ ಚಟುವಟಿಕೆಗಳಿಗೆ ಬೇಕಾದ ಪರಿಕರಗಳ ವೆಚ್ಚ, ಪ್ರೇರಕರ ಗೌರವಧನಕ್ಕೆ ಟಾಟಾ ಟ್ರಸ್ಟ್ ಪ್ರತಿ ಕೇಂದ್ರಕ್ಕೆ ವಾರ್ಷಿಕ ₹90 ಸಾವಿರ ವಿನಿಯೋಗಿಸುತ್ತಿದೆ

ಸಾಯಿಬಾಬು, ‘ಕಲಿಕೆ’ ಕಾರ್ಯಕ್ರಮ ಅಧಿಕಾರಿ

ಇದಕ್ಕಾಗಿ 2025ರಲ್ಲಿ ಆರ್‌ಡಿಪಿಆರ್ ಇಲಾಖೆಯೊಂದಿಗೆ ಒಪ್ಪಂದ ಏರ್ಪಟ್ಟಿದೆ. ಕಳೆದ ಜೂನ್‌ನಿಂದ ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ ಹಾಗೂ ಕೊಪ್ಪಳ ಜಿಲ್ಲೆಗಳ ತಲಾ 20 ಗ್ರಾಮ ಪಂಚಾಯಿತಿಗಳಲ್ಲಿ ‘ಸ್ಪಂದನ’ದ ಮೂಲಕ ‘ಹಿರಿಯರ’ ಸಾಮಾಜಿಕ ಆರೈಕೆಯಲ್ಲಿ ತೊಡಗಿದೆ. ವಾರಕ್ಕೆ ನಾಲ್ಕು ದಿನಗಳಂತೆ ಅವರಿಗೆ ವೈವಿಧ್ಯಮಯ ಚಟುವಟಿಕೆಗಳ ಮೂಲಕ ಅವರ ಮನದ ಭಾರ ಹಗುರಾಗಿಸುತ್ತಿದೆ.

ಸ್ಪಂದನೆ ಹೇಗೆ?: ಗ್ರಾಮದಲ್ಲಿನ 60 ವರ್ಷ ಮೀರಿದ, ತುಸು ಓಡಾಡಬಲ್ಲ ಹಿರಿಯರನ್ನು ಕಲಿಕೆ ಸಂಸ್ಥೆ ಗುರುತಿಸುತ್ತದೆ. ಕಟ್ಟೆ, ಜಗುಲಿಗಳಿಂದ ಎದ್ದು ಅರಿವು ಕೇಂದ್ರಗಳತ್ತ ಹೆಜ್ಜೆ ಹಾಕುವಂತೆ ಮನವೊಲಿಸುತ್ತದೆ. ಆ ಹಿರಿಯರಿಗೆ ಲಘು ವ್ಯಾಯಾಮ, ಸಂಗೀತ, ಯೋಗ, ಕ್ರಾಫ್ಟ್‌ಗಳನ್ನು ಮಾಡಿಸಲಾಗುತ್ತಿದೆ. ಹರಟೆ, ಮಾತು–ಕತೆ, ಭಜನೆಗಳ ಮೂಲಕ ಅವರ ಮನದ ದುಗುಡ ಇಳಿಸುತ್ತಿದೆ. ಇಂಥ ಚಟುವಟಿಕೆಗಳು ಹಿರಿಯರಲ್ಲಿ ಮಂದಹಾಸ ಮೂಡಿಸುತ್ತಿದೆ. ಇದಕ್ಕಾಗಿ ಪ್ರತಿ ಕೇಂದ್ರಕ್ಕೆ ಒಬ್ಬರಂತೆ ‘ಪ್ರೇರಕ’ರನ್ನು ನಿಯೋಜಿಸಿದೆ.

‘ಮೊದಲ ಹಂತದಲ್ಲಿ 60 ಪಂಚಾಯಿತಿಗಳಲ್ಲಿ ‘ಸ್ಪಂದನ’ ಶುರುವಾಗಿದೆ. ನಿತ್ಯ ಸರಾಸರಿ ಸಾವಿರಕ್ಕೂ ಹೆಚ್ಚು ಮಂದಿ ಚಟುವಟಿಕೆಗಳಲ್ಲಿ ತೊಡಗುತ್ತಿದ್ದಾರೆ. 2ನೇ ಹಂತದಲ್ಲಿ ಮಾರ್ಚ್ ಹೊತ್ತಿಗೆ ಇನ್ನೂ 240 ಪಂಚಾಯಿತಿಗಳಲ್ಲಿ ‘ಸ್ಪಂದನ’ ಆರಂಭಿಸುವ ಸಿದ್ಧತೆ ನಡೆದಿದೆ. ಮುಂದಿನ ಹಂತದಲ್ಲಿ ನಮ್ಮ ಸಂಸ್ಥೆ ಹಾಗೂ ಆರ್‌ಡಿಪಿಆರ್ ಸಹಯೋಗದಲ್ಲಿ ಇನ್ನೂ 300 ಅರಿವು ಕೇಂದ್ರಗಳ ಮೇಲ್ವಿಚಾರಕರನ್ನು ‘ಸ್ಪಂದನ’ಗಳ ನಿರ್ವಹಣೆಗೆ ಸಜ್ಜುಗೊಳಿಸುವ ಗುರಿಯಿದೆ’ ಎನ್ನುತ್ತಾರೆ ಕಲಬುರಗಿ, ಯಾದಗಿರಿ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ‘ಸ್ಪಂದನ’ ಅನುಷ್ಠಾನದ ಹೊಣೆ ಹೊತ್ತ ಕಲಿಕೆ ಸಂಸ್ಥೆಯ ಕಾರ್ಯಕ್ರಮ ಅಧಿಕಾರಿ ಸಾಯಿಬಾಬು.

ಶಿಸ್ತಿನಿಂದ ಬಣ್ಣ ತುಂಬಿದ ವೃದ್ಧೆ

ಗ್ರಾ.ಪಂ ಕಚೇರಿಯಲ್ಲಿ ಆಕ್ಷೇಪಣೆ ಸ್ವೀಕರಿಸಿ

ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್: 'ಹೊಂದಾಣಿಕೆ' ಆಗದ ಮತದಾರರ ಹೆಸರು ಪ್ರಕಟಿಸಲು ಸುಪ್ರೀಂ ಕೋರ್ಟ್ ಸೂಚನೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಭಾಗವಾಗಿ ಪಟ್ಟಿ ಮಾಡಿರುವ 'ಹೊಂದಾಣಿಕೆ' ಆಗದ ಮತದಾರರ ಹೆಸರುಗಳನ್ನು ಎಲ್ಲ ಗ್ರಾಮ ಪಂಚಾಯಿತಿ ಭವನಗಳು ಮತ್ತು ಬ್ಲಾಕ್ ಕಚೇರಿಗಳಲ್ಲಿ ಪ್ರಕಟಿಸಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದೆ.

ಎಸ್‌ಐಆರ್ ಪ್ರಕ್ರಿಯೆಯು ಪಾರದರ್ಶಕವಾಗಿರಬೇಕು ಮತ್ತು ಯಾರಿಗೂ ಅನನುಕೂಲ ಆಗದಂತೆ ಎಚ್ಚರವಹಿಸಬೇಕು ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತಾ ಹಾಗೂ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು ಹೇಳಿತು.

ಎಸ್‌ಐಆರ್‌ಗೆ ಭಾಗವಾಗಿ 2002ರ ಮತ್ತು 2025ರ ಮತದಾರರ ಪಟ್ಟಿಯನ್ನು ಹೋಲಿಕೆ ಮಾಡುವಾಗ ಕೆಲವರ ವಿವರಗಳು ತಾಳೆಯಾಗಿಲ್ಲ. ಪೋಷಕರ ಹೆಸರಿನಲ್ಲಿ ಹೊಂದಿಕೆಯಾಗದೆ ಇರುವುದು ಮತ್ತು ಮತದಾರರ ಹಾಗೂ ಅವರ ಪೋಷಕರ ನಡುವಿನ ವಯಸ್ಸಿನ ಅಂತರವು 15 ವರ್ಷಕ್ಕಿಂತ ಕಡಿಮೆ ಅಥವಾ 50 ವರ್ಷಗಳಿಗಿಂತ ಹೆಚ್ಚು ಇರುವುದು ಕಂಡುಬಂದಿದೆ. ಅಂತಹ ಮತದಾರರ ಹೆಸರನ್ನು 'ಹೊಂದಾಣಿಕೆ' ಆಗದ ಪಟ್ಟಿಯಲ್ಲಿ ಸೇರಿಸಲಾಗಿದೆ.

ರಾಜ್ಯದಲ್ಲಿ 1.25 ಕೋಟಿ ಮತದಾರರು 'ಹೊಂದಾಣಿಕೆ' ಆಗದ ಪಟ್ಟಿಯಲ್ಲಿದ್ದಾರೆ ಎಂಬುದನ್ನು ಗಮನಿಸಿದ ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ, 'ಅಂತಹ ಮತದಾರರಿಗೆ ಪಂಚಾಯಿತಿ ಭವನಗಳು ಅಥವಾ ಬ್ಲಾಕ್ ಕಚೇರಿಗಳಲ್ಲಿ ದಾಖಲೆಗಳು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ವ್ಯವಸ್ಥೆ ಮಾಡಬೇಕು. ಅದಕ್ಕಾಗಿ ಸಾಕಷ್ಟು ಸಿಬ್ಬಂದಿಯನ್ನು ಚುನಾವಣಾ ಆಯೋಗಕ್ಕೆ ಒದಗಿಸಬೇಕು' ಎಂದು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸೂಚಿಸಿತು.

ಕಾನೂನು ಮತ್ತು ಸುವ್ಯವಸ್ಥೆಗೆ ಯಾವುದೇ ಧಕ್ಕೆಯಾಗದಂತೆ ನೋಡಿಕೊಳ್ಳುವ ಮತ್ತು ಎಸ್‌ಐಆರ್‌ನ ಸಂಪೂರ್ಣ ಪ್ರಕ್ರಿಯೆ ಸುಗಮವಾಗಿ ಪೂರ್ಣಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು ಪಶ್ಚಿಮ ಬಂಗಾಳ ಡಿಜಿಪಿ ಅವರ ಜವಾಬ್ದಾರಿ ಎಂದು ಪೀಠವು ಹೇಳಿತು.

ಎಸ್‌ಐಆರ್ ಭಾಗವಾಗಿ ಚುನಾವಣಾ ಆಯೋಗದಿಂದ ನೋಟಿಸ್ ಪಡೆದವರು ಪಶ್ಚಿಮ ಬಂಗಾಳದ ಬೀರ್‌ಭೂಮ್ ಜಿಲ್ಲೆಯಲ್ಲಿ ಅಹವಾಲು ಸಲ್ಲಿಕೆಗೆ ಸೋಮವಾರ ಹಾಜರಾದರು –ಪಿಟಿಐ ಚಿತ್ರ

'ಅಕ್ಷರ ದೋಷ ಇದ್ದರೂ ನೋಟಿಸ್'

ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, ಮತದಾರರ ಹೆಸರಿನಲ್ಲಿ ಅಕ್ಷರ ದೋಷ ಕಂಡುಬಂದರೂ ಅವರಿಗೆ ನೋಟಿಸ್ ಕಳುಹಿಸುವ ಚುನಾವಣಾ ಆಯೋಗದ ಕ್ರಮವನ್ನು ಪ್ರಶ್ನಿಸಿದರು. 'ಗಂಗೂಲಿ', 'ದತ್ತಾ' ಮುಂತಾದ ಹೆಸರುಗಳನ್ನು ಭಿನ್ನ ರೀತಿಯಲ್ಲಿ ಉಚ್ಚರಿಸಬಹುದು. ಹೆಸರು ಬರೆಯುವಾಗ ಅಕ್ಷರ ದೋಷ ಇರುವುದನ್ನು ಕೂಡಾ ನೋಟಿಸ್‌ಗೆ ಕಾರಣವಾಗಿ ಉಲ್ಲೇಖಿಸಲಾಗಿದೆ ಎಂದರು.

ಕೆಲವು ಪ್ರಕರಣಗಳಲ್ಲಿ ಮತದಾರರ ಹಾಗೂ ಅವರ ಪೋಷಕರ ನಡುವಿನ ವಯಸ್ಸಿನ ಅಂತರವು 15 ವರ್ಷಕ್ಕಿಂತ ಕಡಿಮೆ ಇದೆ ಎಂಬ ಕಾರಣಕ್ಕೆ ನೋಟಿಸ್ ಕಳುಹಿಸಲಾಗಿದೆ ಎಂದು ಹೇಳಿದರು.

'ಹೆಸರಿನಲ್ಲಿರುವ ಅಕ್ಷರ ದೋಷಗಳನ್ನು ಉಲ್ಲೇಖಿಸಿ ನೋಟಿಸ್ ಕಳುಹಿಸದಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದು ಚುನಾವಣಾ ಆಯೋಗದ ಪರ ಹಾಜರಾದ ಹಿರಿಯ ವಕೀಲ ರಾಕೇಶ್ ದ್ವಿವೇದಿ ಪೀಠಕ್ಕೆ ತಿಳಿಸಿದರು.

ತಮಿಳುನಾಡು ಆಕ್ಷೇಪಣೆ ಅವಧಿ ವಿಸ್ತರಣೆ

ಚೆನ್ನೈ: ರಾಜಕೀಯ ಪಕ್ಷಗಳ ಒತ್ತಡಕ್ಕೆ ಮಣಿದ ಕೇಂದ್ರ ಚುನಾವಣಾ ಆಯೋಗ, ತಮಿಳುನಾಡಿನಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿಯನ್ನು ಜನವರಿ 30ರವರೆಗೂ ವಿಸ್ತರಿಸಿದೆ.

ಅಂತಿಮ ಮತದಾರರ ಪಟ್ಟಿಯನ್ನು ಫೆ.17ರಂದೇ ಪ್ರಕಟಿಸಲಾಗುವುದು. ಈ ದಿನಾಂಕದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ ಎಂದು ತಮಿಳುನಾಡಿನ ಮುಖ್ಯ ಚುನಾವಣಾಧಿಕಾರಿ ತಿಳಿಸಿದ್ದಾರೆ.

2026ರ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ತಮಿಳುನಾಡು ವಿಧಾನ ಸಭೆಗೆ ಚುನಾವಣೆ ನಡೆಯಲಿದೆ.

> **ಎಸ್‌ಐಆರ್ ಪ್ರಕ್ರಿಯೆಯಿಂದ ತೊಂದರೆ ಅನುಭವಿಸುವ ಸಾಧ್ಯತೆ ಇರುವ ಎಲ್ಲರಿಗೂ ತಮ್ಮ ದಾಖಲೆಗಳು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಬೇಕು**
> **ಸುಪ್ರೀಂ ಕೋರ್ಟ್ ಪೀಠ**

'ನಮ್ಮ ಮತದಾರರನ್ನು ಪಟ್ಟಿಯಿಂದ ಅಳಿಸಲು ಬಿಜೆಪಿ ಯತ್ನ'

ನವದೆಹಲಿ (ಪಿಟಿಐ): 'ಎಸ್‌ಐಆರ್ ಮೂಲಕ ರಾಜಸ್ಥಾನದಲ್ಲಿ ವಿರೋಧ ಪಕ್ಷಗಳ ಮತದಾರರನ್ನು ಪಟ್ಟಿಯಿಂದ ದೊಡ್ಡ ಮಟ್ಟದಲ್ಲಿ ಅಳಿಸಿ ಹಾಕಲು ಬಿಜೆಪಿ ಯತ್ನಿಸುತ್ತಿದೆ. ಮೃತಪಟ್ಟಿದ್ದಾರೆ, ಮನೆಯಲ್ಲಿ ಇರಲಿಲ್ಲ ಅಥವಾ ಶಾಶ್ವತವಾಗಿ ಸ್ಥಳಾಂತರಗೊಂಡಿದ್ದಾರೆ ಎಂದು ಹೇಳಿ 45 ಲಕ್ಷ ಜನರ ಹೆಸರುಗಳನ್ನು ತೆಗೆದು ಹಾಕಲಾಗಿದೆ' ಎಂದು ಕಾಂಗ್ರೆಸ್ ಆರೋಪಿಸಿದೆ.

'2025ರ ಡಿ.17ರಿಂದ 2026ರ ಜ.14ವರೆಗೆ, ಬಿಜೆಪಿಯು 937 ಬೂತ್ ಮಟ್ಟದ ಏಜೆಂಟರ ಮೂಲಕ ಮತದಾರರ ಪಟ್ಟಿಗೆ 211 ಹೆಸರು ಸೇರಿಸಲು ಮತ್ತು 5,694 ಜನರ ಹೆಸರನ್ನು ಪಟ್ಟಿಯಿಂದ ಕೈಬಿಡಲು ಅರ್ಜಿ ಸಲ್ಲಿಸಿದೆ' ಎಂದು ರಾಜಸ್ಥಾನದ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ಸಿಂಗ್ ಡೋಟಾಸರ ದೂರಿದರು.

'ಇದೇ ವೇಳೆ ಕಾಂಗ್ರೆಸ್ 110 ಬೂತ್ ಮಟ್ಟದ ಏಜೆಂಟರ ಮೂಲಕ 185 ಜನರ ಹೆಸರನ್ನು ಪಟ್ಟಿಗೆ ಸೇರಿಸಲು ಮತ್ತು ಇಬ್ಬರನ್ನು ಪಟ್ಟಿಯಿಂದ ಕೈಬಿಡಲು ಅರ್ಜಿ ಸಲ್ಲಿಸಿತ್ತು. ಈ ಎಲ್ಲ ಮಾಹಿತಿಗಳನ್ನು ಚುನಾವಣಾ ಆಯೋಗದ ವೆಬ್‌ಸೈಟ್‌ನಿಂದಲೇ ಪಡೆದುಕೊಂಡಿದ್ದೇವೆ' ಎಂದು ಹೇಳಿದರು.

'ಜ.3ರವರೆಗೆ ಎಸ್‌ಐಆರ್ ಪ್ರಕ್ರಿಯೆ ಸುಸೂತ್ರವಾಗಿಯೇ ಇತ್ತು. ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರು ರಾಜ್ಯಕ್ಕೆ ಭೇಟಿ ನೀಡಿ, ಸಭೆಗಳನ್ನು ನಡೆಸಿದರು. ಈ ಬಳಿಕ, ಅಕ್ರಮವಾಗಿ ಪಟ್ಟಿಯಿಂದ ಸೇರಿಸುವುದು, ಪಟ್ಟಿಯಿಂದ ಅಳಿಸುವುದು ಆರಂಭವಾಯಿತು' ಎಂದು ಆರೋಪಿಸಿದರು.

> **ಅಮಿತ್ ಶಾ ಅವರು ಜ.13ರಂದು ರಾಜ್ಯಕ್ಕೆ ಭೇಟಿ ನೀಡಿ, ಸಿ.ಎಂ ನಿವಾಸದಲ್ಲಿ ತಂಗಿದ್ದರು. ಜ.3ರಿಂದ ಜ.13ರವರೆಗೆ ರಹಸ್ಯ ಕಾರ್ಯಾಚರಣೆಯೊಂದು ನಡೆದಿದೆ**
> **ಗೋವಿಂದ ಸಿಂಗ್ ಡೋಟಾಸರ,** ರಾಜಸ್ಥಾನ ಕಾಂಗ್ರೆಸ್ ಅಧ್ಯಕ್ಷ

ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಎಸ್‌ಐಆರ್‌ನಲ್ಲಿ 'ಹೊಂದಾಣಿಕೆ' ಆಗದ ಮತದಾರರ ಪಟ್ಟಿ ಸೇರಿದಂತೆ ಒಟ್ಟಾರೆ ಪ್ರಕ್ರಿಯೆಯಲ್ಲಿ ಲೋಪಗಳು ಇವೆ ಎಂದು ಆರೋಪಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

ಅವಧಿ ವಿಸ್ತರಣೆಗೆ ಮನವಿ (ಕೋಲ್ಕತ್ತ ವರದಿ): ಕರಡು ಪಟ್ಟಿಯಲ್ಲಿ ಸ್ಥಾನ ಪಡೆಯದ ಮತದಾರರಿಗೆ ಫಾರ್ಮ್ 7 ಮತ್ತು ಅಗತ್ಯ ದಾಖಲೆಗಳೊಂದಿಗೆ ತಮ್ಮ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿಯನ್ನು ಕನಿಷ್ಠ ಒಂದು ವಾರ ವಿಸ್ತರಿಸಬೇಕು ಎಂದು ಬಿಜೆಪಿ, ಚುನಾವಣಾ ಆಯೋಗಕ್ಕೆ ಒತ್ತಾಯಿಸಿದೆ. ನಿಗದಿತ ವೇಳಾಪಟ್ಟಿಯಂತೆ ಫಾರ್ಮ್ 7 ಸಲ್ಲಿಕೆ ಅವಧಿ ಜನವರಿಗೆ 19ಕ್ಕೆ ಕೊನೆಗೊಂಡಿದೆ.

ಗುಜರಾತ್‌ನಲ್ಲಿ ತಯಾರಿಸಿದ ಸೂಕ್ಷ್ಮ ಕೆತ್ತನೆಗಳಿರುವ ಮರದ ಜೋಕಾಲಿಯನ್ನು ಪ್ರಧಾನಿ ಮೋದಿ ಅವರು ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರಿಗೆ ಉಡುಗೊರೆಯಾಗಿ ನೀಡಿದರು –ಪಿಟಿಐ ಚಿತ್ರ

₹18.17 ಲಕ್ಷ ಕೋಟಿ ವ್ಯಾಪಾರ ಭಾರತ– ಯುಎಇ ಗುರಿ

ನವದೆಹಲಿ (ಪಿಟಿಐ): ಭಾರತ ಮತ್ತು ಯುಎಇ 2032ರವರೆಗೆ ಪ್ರತಿ ವರ್ಷವೂ ಸುಮಾರು ₹18.17 ಲಕ್ಷ ಕೋಟಿ (200 ಬಿಲಿಯನ್ ಡಾಲರ್) ವ್ಯಾಪಾರ ನಡೆಸುವ ಗುರಿ ನಿಗದಿಪಡಿಸಿವೆ.

ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಮೂರೂವರೆ ಗಂಟೆಗಳಿಗಾಗಿ ಭಾರತಕ್ಕೆ ಸೋಮವಾರ ಭೇಟಿ ನೀಡಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರು ಯುಎಇ ಅಧ್ಯಕ್ಷರನ್ನು ವಿಮಾನ ನಿಲ್ದಾಣದಲ್ಲಿಯೇ ಬರ ಮಾಡಿಕೊಂಡು, ತಬ್ಬಿಕೊಂಡರು.

ಇವರೊಂದಿಗೆ ಅಧ್ಯಕ್ಷರ ತಾಯಿ ಶೇಖ್ ಫಾತಿಮಾ ಬಿಂತ್ ಮುಬಾರಕ್ ಅಲ್ ಕೆತ್ಬಿ ಅವರೂ ಆಗಮಿಸಿದ್ದರು. ಇಬ್ಬರನ್ನೂ ಪ್ರಧಾನಿ ನಮ್ಮ ನಿವಾಸಕ್ಕೆ ಕರೆದೊಯ್ದು ಸತ್ಕರಿಸಿದರು. ಇಬ್ಬರಿಗೂ ಉಡುಗೊರೆಗಳನ್ನೂ ನೀಡಿದರು. ತಾಯಿ ಫಾತಿಮಾ ಅವರಿಗೆ ಕಾಶ್ಮೀರದ ಪಶ್ಮೀನಾ ಶಾಲನ್ನು ಮತ್ತು ಕಾಶ್ಮೀರ ಕಣಿವೆಯಲ್ಲಿ ಬೆಳೆದ ಕೇಸರಿಯನ್ನು ತೆಲಂಗಾಣದಲ್ಲಿ ತಯಾರಿಸಿದ ಬೆಳ್ಳಿ ಬಾಕ್ಸ್‌ಗಳಲ್ಲಿ ಇರಿಸಿ ಪ್ರಧಾನಿ ಮೋದಿ ಉಡುಗೊರೆ ನೀಡಿದರು.

ಪ್ರಧಾನಿ ನಿವಾಸದಲ್ಲಿಯೇ ಇಬ್ಬರು ನಾಯಕರು ಹಲವು ವಿಚಾರಗಳ ಕುರಿತು ಮಾತುಕತೆ ನಡೆಸಿದರು.

ಇಂಧನ, ಬಾಹ್ಯಾಕಾಶ ಮತ್ತು ನಾಗರಿಕ ಪರಮಾಣು ವಲಯದಲ್ಲಿ ಪರಸ್ಪರ ಸಹಕಾರ ನೀಡುವ ಬಗ್ಗೆ ಚರ್ಚಿಸಲಾಯಿತು. ಈ ಬಗ್ಗೆ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ತ್ರಿ ಮಾಹಿತಿ ನೀಡಿದರು. ಪ್ರತಿ ವರ್ಷವೂ 5 ಲಕ್ಷ ಟನ್‌ನಷ್ಟು ದ್ರವೀಕೃತ ನೈಸರ್ಗಿಕ ಅನಿಲವನ್ನು (ಎಲ್‌ಎನ್‌ಜಿ) ಭಾರತಕ್ಕೆ ಪೂರೈಕೆ ಮಾಡುವ ದೀರ್ಘಾವಧಿ ಒಪ್ಪಂದ ಮಾಡಿಕೊಳ್ಳಲಾಯಿತು.

ಜೈಪುರ ಸಾಹಿತ್ಯ ಉತ್ಸವದ 19ನೇ ಆವೃತ್ತಿಗೆ ಸಂಭ್ರಮದ ತೆರೆ • ಗೋಷ್ಠಿಗಳಲ್ಲಿ ಜನವೋ ಜನ

ಸಾಹಿತ್ಯ, ಅಭಿರುಚಿ, ವ್ಯಾಪಾರದ ಉತ್ಸವ

• ಬಿ.ವಿ.ಶ್ರೀನಾಥ್

ಜೈಪುರ: ಪುರಾಣದಲ್ಲಿ ಮಹಿಳೆಯರು, ಜೆನ್ ಝೀ, ಬ್ರಿಟಿಷ್ ಸಾಮ್ರಾಜ್ಯದ ವಸಾಹಾತುಶಾಹಿ ಸೃಷ್ಟಿಸಿದ ಹಿಂಸೆ... ಮುಂತಾದ ಹಲವು ಗಂಭೀರ ವಿಚಾರಗಳ ಚಿಂತನ ಮಂಥನದೊಂದಿಗೆ ಜೈಪುರ ಸಾಹಿತ್ಯ ಉತ್ಸವದ (ಜೆಎಲ್‌ಎಫ್) 19ನೇ ಆವೃತ್ತಿಯು ಸೋಮವಾರ ಸಂಪನ್ನಗೊಂಡಿತು.

ವಾರಾಂತ್ಯದ ಎರಡು ದಿನ ಉತ್ಸವದಲ್ಲಿ ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರು. ಕ್ಲಾರ್ಕ್ಸ್ ಆಮೆರ್ ಹೋಟೆಲ್ ಆವರಣದಲ್ಲಿ ಕಾಲಿಡಲೂ ಜಾಗವಿಲ್ಲದಂತಾಗಿತ್ತು.

ಉತ್ಸವದಲ್ಲಿ ನಡೆದ ವಿವಿಧ ಗೋಷ್ಠಿಗಳಲ್ಲಿ ಜಗತ್ತಿನ ವಿವಿಧೆಡೆ ನಡೆಯುತ್ತಿರುವ ಯುದ್ಧ, ಹಿಂಸಾಚಾರಗಳ ಬಗ್ಗೆ ಗಂಭೀರ ಚರ್ಚೆಗಳು ನಡೆದವು.

ಗಾಜಾಗೆ ಸಂಬಂಧಿಸಿದ ಗೋಷ್ಠಿಯಲ್ಲಿ ಅವಿ ಶ್ಲೈಮ್, ನೊಅ ಅವಿಶಗ್ಯನಲ್, ರಮೀಟಾ ನವ್ಯೆ ಮತ್ತು ಲೀನಾ ಖಾಲಿಫ್ ಭಾಗವಹಿಸಿದ್ದರು. ಇಸ್ರೇಲ್ ಗಾಜಾದಲ್ಲಿ ಜನಾಂಗೀಯ ಹತ್ಯೆ ನಡೆಸುತ್ತಿದೆ ಎಂದ ಅವರು, ಅಲ್ಲಿನ ಪರಿಸ್ಥಿತಿಯ ಬಗ್ಗೆ ತಮ್ಮ ಅನುಭವಗಳ ಮೂಲಕ ವಿವರಿಸಿದ್ದು ಕೇಳುಗರ ಮನ ಮಿಡಿಯಿತು. ಗೋಷ್ಠಿ ಮುಗಿದಾಗ ಎಲ್ಲರೂ ಎದ್ದುನಿಂತು ಚಪ್ಪಾಳೆ ತಟ್ಟಿದ್ದು ವಿಶೇಷವಾಗಿತ್ತು.

ಸಾಹಿತ್ಯ ಕೃತಿಯ ಬಗ್ಗೆ ಚರ್ಚೆ, ಅವುಗಳ ಬಿಡುಗಡೆ ನಡುವೆ, ಪುರಾತತ್ವ ಆಧಾರಗಳು, ಚಿತ್ರಗಳನ್ನು ಪರದೆ ಮೇಲೆ ಪ್ರದರ್ಶಿಸಿ ಅವುಗಳ ಮೂಲಕ ಬುದ್ಧನ ಕಾಲಘಟ್ಟ, ಆಗಿನ ಆಗಿನ ಆಚರಣೆಗಳ ಬಗ್ಗೆ ಸಂಶೋಧಕರಾದ ರಾಬರ್ಟ್ ಎ ಕೊನಿಂಗ್ ಹ್ಯಾಮ್, ನಮನ್ ಅಹುಜಾ, ಸೊನ್ಯಾ ರಿಮೆಸ್ ವಿವರಿಸಿದ್ದು ಈ ಬಾರಿಯ ಉತ್ಸವದ ವಿಶೇಷ.

ಪ್ರತಿದಿನ ಸಂಗೀತ ಕಾರ್ಯಕ್ರಮದೊಂದಿಗೆ ಉತ್ಸವ ಆರಂಭವಾಗುತ್ತಿತ್ತು. ಐಶ್ವರ್ಯಾ ವಿದ್ಯಾ ರಘುನಾಥ್, ರಿತ್ವಿಕಾ ರಾಜಾ ಅವರಂಥ ಶಾಸ್ತ್ರೀಯ ಸಂಗೀತಗಾರರ ಜತೆಗೆ ಭನ್ವಾರಿ ದೇವಿ ಅವರಂಥ ಜನಪದ ಗಾಯಕರಿಗೂ ವೇದಿಕೆ ಕಲ್ಪಿಸಲಾಗಿತ್ತು.

ಸಾಹಿತ್ಯಾಸಕ್ತರ ಮೆಚ್ಚುಗೆ: ಜೆಎಲ್‌ಎಫ್‌ನ ಸ್ವರೂಪ, ಆಶಯ ಮತ್ತು ವ್ಯವಸ್ಥೆ ಈ ಬಾರಿಯೂ ಸಾಹಿತ್ಯಾಸಕ್ತರ ಮೆಚ್ಚುಗೆಗೆ ಪಾತ್ರವಾಯಿತು.

'ಜೆಎಲ್‌ಎಫ್‌ನವರು ಭಾರತವಷ್ಟೇ ಅಲ್ಲದೆ ಅಮೆರಿಕದ ಹಲವು ರಾಜ್ಯಗಳು, ಸ್ಪೇನ್, ಲಂಡನ್, ಚೀನಾ ಹೀಗೆ ವರ್ಷ ಪೂರ್ತಿ ಒಂದಿಲ್ಲೊಂದು ಕಡೆ ಸಾಹಿತ್ಯ, ಕಲೆ, ಸಂಗೀತಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಮಾಡುತ್ತಲೇ ಇರುತ್ತಾರೆ. ಇವರ ಪಾಲಿಗೆ ಇದು ಆಸಕ್ತಿ, ಅಭಿರುಚಿ, ವ್ಯಾಪಾರ ಎಲ್ಲವೂ ಆಗಿದೆ' ಎನ್ನುವುದು ದೆಹಲಿಯಿಂದ ಬಂದಿದ್ದ ಗುರುಚರಣ್ ಅಭಿಪ್ರಾಯ.

ಈ ಬಾರಿಯ ಉತ್ಸವದಲ್ಲೂ ವಿದೇಶಿಯರು ಗಮನಾರ್ಹ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಹೆಸರಿನಲ್ಲಿ ಸಾಹಿತ್ಯ ಉತ್ಸವ ಎಂದಿದ್ದರೂ, ಅಲ್ಲಿ ಸಂಗೀತ, ಕಲೆ, ಊಟ ಎಲ್ಲವೂ ಇತ್ತು. ಗೋಷ್ಠಿಗಳಲ್ಲಿ ಗಹನವಾದ ಚರ್ಚೆ ನಡೆದಂತೆ ಹೊರಗೆ ಪುಸ್ತಕಗಳ ವ್ಯಾಪಾರ ಜೋರಾಗಿತ್ತು.

'ಯಾವುದೇ ನಿರ್ದಿಷ್ಟ ಸಿದ್ಧಾಂತಕ್ಕೆ ಕಟ್ಟುಬೀಳದೇ ನಿರ್ವಹಿಸುವುದು ಮತ್ತು ಸಾಹಿತ್ಯ ಉತ್ಸವಕ್ಕೆ ಕಾರ್ಪೊರೇಟ್ ಸ್ಪರ್ಶ ನೀಡಿರುವುದು ಜೆಎಲ್‌ಎಫ್‌ನ ಯಶಸ್ಸಿಗೆ ಕಾರಣ' ಎಂಬುದು ಪುಣೆಯಿಂದ ಬಂದಿದ್ದ ಅಮಿತ್ ಅವರ ವಿಶ್ಲೇಷಣೆ.

ಜೈಪುರ ಸಾಹಿತ್ಯ ಉತ್ಸವದ ಗೋಷ್ಠಿಯೊಂದರಲ್ಲಿ ದೊಡ್ಡ ಸಂಖ್ಯೆಯಲ್ಲಿ ಸಾಹಿತ್ಯಾಸಕ್ತರು ಭಾಗವಹಿಸಿದ್ದರು

ವಿದ್ಯಾರ್ಥಿ ಸ್ವಯಂಸೇವಕರು

ಬೆಳಗಾವಿಯವರಾಗಿದ್ದು, ಇಂದೋರ್ ಐಐಟಿಯಲ್ಲಿ ಇಂಗ್ಲಿಷ್ ಸಾಹಿತ್ಯ ಅಧ್ಯಯನ ಮಾಡುತ್ತಿರುವ ಇಂದ್ರಜಾ ಬಹದ್ದೂರ್ ದೇಸಾಯಿ ಉತ್ಸವದಲ್ಲಿ ಸ್ವಯಂ ಸೇವಕರಾಗಿ ಭಾಗವಹಿಸಿದ್ದರು. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳುವ ಮೂಲಕ ಹೀಗೆ ಜೈಪುರ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಬಂದಿದ್ದ 300 ಸ್ವಯಂಸೇವಕರು ಈ ಬಾರಿ ಇದ್ದರು. ಈ ಪೈಕಿ ಬಹುತೇಕರು ವಿದ್ಯಾರ್ಥಿಗಳಾಗಿದ್ದು, ಉತ್ಸವಕ್ಕೆ ಬರುವ ಖ್ಯಾತನಾಮರನ್ನು ನೋಡಲು, ಅವರ ಮಾತು ಕೇಳಲು, ಉತ್ಸವದ ಅನುಭವ ಪಡೆಯಲು ಬರುತ್ತಾರೆ.

> **ನಾನು ಗಂಡನೊಂದಿಗೆ ಈ ಬಾರಿ ಜೈಪುರಕ್ಕೆ ಬಂದಿದ್ದೇನೆ. ಗೋಷ್ಠಿಗಳಲ್ಲಿ ಭಾಗವಹಿಸುವುದಕ್ಕಿಂತ ನಮಗೆ ಜನರ ನೋಡುವುದು, ಓಡಾಡುವುದು, ಊಟ ಮಾಡುವುದು ಇಷ್ಟ**
> **ಎಮ್ಮಿ,** ಲಂಡನ್‌ನಿಂದ ಉತ್ಸವಕ್ಕೆ ಬಂದಿದ್ದವರು

ಹಿಮಾಲಯದಲ್ಲೂ ನಾಯಿಗಳು

ಲೇಖಕರಾದ ಅನುರಾಧ ರಾಯ್ ಹಿಮಾಲಯದ ರಾಣಿಕೇತ್ ನಲ್ಲಿ ಮತ್ತು ಸ್ಟೀಫನ್ ಆಲ್ಟರ್ ಅವರು ಮಸ್ಸೂರಿಯಲ್ಲಿ ನೆಲಸಿ ಕೃತಿ ರಚನೆ ಮಾಡಿದ ಅನುಭವ ಹಂಚಿಕೊಂಡದ್ದು ಆಸಕ್ತಿಕರವಾಗಿತ್ತು.

'ಹಿಮಾಲಯದಲ್ಲಿ ಕುಳಿತು ಕಾದಂಬರಿ ಬರೆಯುವುದು ಅಷ್ಟೇನೂ ಸುಖದ ಅನುಭವವಲ್ಲ. ಅಲ್ಲಿನ ಸ್ಥಳೀಯ ನಿವಾಸಿಗಳಲ್ಲಿ ತೀವ್ರ ಬಡತನ ಇದೆ. ಹಿಮಾಲಯದಲ್ಲೂ ಹೆಚ್ಚು ಸಂಖ್ಯೆಯಲ್ಲಿ ನಾಯಿಗಳಿವೆ ಎಂದು ಅನುರಾಧ ರಾಯ್ ಹೇಳಿದಾಗ ಗೋಷ್ಠಿ ನಗೆಗಡಲಲ್ಲಿ ತೇಲಿತು.

₹27 ಕೋಟಿ ಮೌಲ್ಯದ ಮೆಫೆಡ್ರೋನ್ ವಶ

ಠಾಣೆ, ಮಹಾರಾಷ್ಟ್ರ (ಪಿಟಿಐ): ನಗರದ ಹೊರವಲಯದಲ್ಲಿ ಅಂತರರಾಜ್ಯ ಮಾದಕ ಪದಾರ್ಥಗಳ ಮಾರಾಟ ಜಾಲವನ್ನು ಭೇದಿಸಿರುವ ಮುಂಬ್ರಾ ಪೊಲೀಸರು ₹27 ಕೋಟಿ ಮೌಲ್ಯದ 13.6 ಕೆ.ಜಿ ಮೆಫೆಡ್ರೋನ್ ವಶಕ್ಕೆ ಪಡೆದಿದ್ದಾರೆ.

ಠಾಣೆ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ನಡೆದ ಅತೀ ದೊಡ್ಡ ಡ್ರಗ್ಸ್ ಪತ್ತೆ ಕಾರ್ಯ ಇದಾಗಿದೆ.

ಕೇಂದ್ರದ ಅನುದಾನ ದುರುಪಯೋಗ: ಪಿ.ರಾಜೀವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ 15ನೇ ಹಣಕಾಸು ಆಯೋಗದ ಅನುದಾನ ದುರ್ಬಳಕೆ ಆಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಆರೋಪಿಸಿದರು.

'15ನೇ ಹಣಕಾಸು ಆಯೋಗದ ಹಣವನ್ನು ದುರ್ಬಳಕೆ ಮಾಡಿಕೊಂಡಿರುವುದು ಕೇಂದ್ರ ಸರ್ಕಾರದ ಗಮನಕ್ಕೆ ಬಂದರೆ ಮುಂದೆ ಒಂದು ರೂಪಾಯಿ ಅನುದಾನವೂ ಸಿಗುವುದಿಲ್ಲ. ಇವರು ಮಾಡಿದ ತಪ್ಪಿಗೆ ರಾಜ್ಯ ಅನುದಾನ ಕಳೆದುಕೊಳ್ಳುತ್ತದೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹಣಕಾಸು ಆಯೋಗದಿಂದ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಯಾದ ಅನುದಾನ ಹಂಚಿಕೆಯ ಪಟ್ಟಿಯನ್ನು ಬದಲಿಸಲು ಅವಕಾಶವಿಲ್ಲ. ಆದರೆ ಇಲ್ಲಿ ಬೇಕಾಬಿಟ್ಟಿ ಬದಲಿಸಲಾಗಿದೆ. ಕಾಂಗ್ರೆಸ್ ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಹೈಮಾಸ್ಟ್ ದೀಪ ಹಾಕಿಸಿಕೊಳ್ಳಲು ಕಮಿಷನ್ ಆಧಾರದಲ್ಲಿ ಅನುದಾನ ಹಂಚಿಕೆ ಮಾಡಿದ್ದಾರೆ. ಇದರಲ್ಲಿ ಸಾವಿರಾರು ಕೋಟಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿದರು.

ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕೊಂದರಲ್ಲೇ ಬೇರೆ ಗ್ರಾಮ ಪಂಚಾಯಿತಿಗೆ ಹೋಗಬೇಕಾದ ಕೇಂದ್ರದ ಅನುದಾನವನ್ನು 24 ಗ್ರಾಮ ಪಂಚಾಯಿತಿಗಳಿಗೆ ಮಾತ್ರ ಹಂಚಿಕೆ ಮಾಡಿದ್ದಾರೆ. ಈ ಗ್ರಾಮ ಪಂಚಾಯಿತಿಗಳು ಕಾಂಗ್ರೆಸ್ ಶಾಸಕರ ಕ್ಷೇತ್ರಕ್ಕೆ ಸೇರಿದವು ಎಂಬ ಕಾರಣಕ್ಕೆ ಈ ರೀತಿ ವಿತರಿಸಲಾಗಿದೆ ಎಂದು ಅವರು ದೂರಿದರು.

ರಾಯಭಾಗ ತಾಲ್ಲೂಕಿನ ಒಂದೇ ಗ್ರಾಮ ಪಂಚಾಯಿತಿಯಲ್ಲಿ 52 ಕಾಮಗಾರಿಗಳ ಹೆಸರಿನಲ್ಲಿ ₹10 ಕೋಟಿಯಿಂದ ₹12 ಕೋಟಿಯಷ್ಟು ಹಗರಣ ನಡೆದಿದೆ. ವಾಸ್ತವದಲ್ಲಿ ಕಾಮಗಾರಿ ನಡೆಸದೇ ಹಣ ಪಡೆಯಲಾಗಿದೆ ಎಂದು ಹೇಳಿದರು.

ಯುವ ಘಟಕದಿಂದ ಅಧ್ಯಕ್ಷ ಸ್ಥಾನದತ್ತ

ಬಿಜೆಪಿ ಅಧ್ಯಕ್ಷ ಹುದ್ದೆ ಅಲಂಕರಿಸಲಿರುವ ಕಿರಿಯ ನಾಯಕ

ನವದೆಹಲಿ (ಪಿಟಿಐ): ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿರುವ ನಿತಿನ್ ನಬೀನ್ (45) ಅವರು, ಈ ಹುದ್ದೆ ಅಲಂಕರಿಸಲಿರುವ ಅತಿ ಚಿಕ್ಕ ವಯಸ್ಸಿನ ನಾಯಕ ಎನಿಸಿಕೊಳ್ಳಲಿದ್ದಾರೆ.

ತನ್ನ 26ನೇ ವಯಸ್ಸಿನಲ್ಲಿಯೇ ಶಾಸಕರಾಗಿ ಆಯ್ಕೆಯಾದ ಅವರು ಅಲ್ಪ ಅವಧಿಯಲ್ಲೇ ಏಳಿಗೆ ಸಾಧಿಸಿ ರಾಷ್ಟ್ರೀಯ ನಾಯಕರ ಗಮನ ಸೆಳೆದಿದ್ದಾರೆ. ಇದೀಗ ಬಿಜೆಪಿಯ ಅತ್ಯುನ್ನತ ಹುದ್ದೆ ಅಲಂಕರಿಸಲೂ ಅವರಿಗೆ ವೇದಿಕೆ ಸಜ್ಜಾಗಿದೆ.

ಮುಂದಿನ ಪೀಳಿಗೆಗೆ ನಾಯಕತ್ವ ಹಸ್ತಾಂತರಿಸುವ ಮೂಲಕ ರಾಷ್ಟ್ರ ಮಟ್ಟದಲ್ಲಿ ತನ್ನ ರಾಜಕೀಯ ಹಿಡಿತವನ್ನು ಮತ್ತಷ್ಟು ಬಲಪಡಿಸಿಕೊಳ್ಳಲು ಬಿಜೆಪಿ ಎದುರುನೋಡುತ್ತಿದೆ.

ಬಿಹಾರದಲ್ಲಿ ಐದು ಬಾರಿ ಶಾಸಕರಾಗಿ ಆಯ್ಕೆಯಾದ ಅವರು ಅಲ್ಲಿನ ಲೋಕೋಪಯೋಗಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅವರನ್ನು 2025ರ ಡಿಸೆಂಬರ್ 14ರಂದು ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿ ಅಧ್ಯಕ್ಷರನ್ನಾಗಿ ನೇಮಿಸಲಾಯಿತು.

ನಿತಿನ್ ಅವರ ತಂದೆ ನವೀನ್ ಕಿಶೋರ್ ಸಿನ್ಹಾ ಅವರು ಆರ್‌ಎಸ್‌ಎಸ್ ಜತೆಗೆ ನಿಕಟ ಸಂಬಂಧ ಹೊಂದಿದ್ದರು. ತಂದೆಯ ನಿಧನದ ಬಳಿಕ 2006ರಲ್ಲಿ ಪಟ್ನಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಮೂಲಕ ಅವರು ರಾಜಕೀಯ ಪ್ರವೇಶಿಸಿದರು. ಆಗ ಅವರು ಮೊದಲ ಬಾರಿಗೆ ಶಾಸಕರಾದರು.

ಕಾಯಸ್ಥ ಜಾತಿಗೆ ಸೇರಿದ ಅವರು, ಬಂಕಿಪುರ ವಿಧಾನಸಭಾ ಕ್ಷೇತ್ರದಿಂದ ಸತತ ನಾಲ್ಕು ಚುನಾವಣೆಗಳಲ್ಲಿ ಗೆಲುವು ಸಾಧಿಸಿದರು.

2023ರ ನವೆಂಬರ್‌ನಲ್ಲಿ ನಡೆದ ಛತ್ತೀಸಗಢ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸಹ ಉಸ್ತುವಾರಿಯಾಗಿ, ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಶ್ರಮಿಸಿದರು. ರಾಜ್ಯದಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲೂ ಅವರ ಯಶಸ್ಸಿನ ಸೂತ್ರ ಪುನರಾವರ್ತನೆಯಾಯಿತು. ಇದರ ಪರಿಣಾಮ ರಾಜ್ಯದ 11 ಸ್ಥಾನಗಳಲ್ಲಿ ಬಿಜೆಪಿಗೆ 10 ಸ್ಥಾನಗಳು ದೊರೆತವು.

ಜಾರ್ಖಂಡ್‌ನ ರಾಂಚಿಯಲ್ಲಿ ಜನಿಸಿದ ನಿತಿನ್ ಅವರ ಪತ್ನಿ ದೀಪ ಮಾಲಾ ಶ್ರೀವಾಸ್ತವ. ಈ ದಂಪತಿ ಒಬ್ಬ ಮಗ ಮತ್ತು ಮಗಳನ್ನು ಹೊಂದಿದ್ದಾರೆ.

ನಿತಿನ್ ಮುಂದಿರುವ ಸವಾಲುಗಳು

ಅಧಿಕಾರ ಸ್ವೀಕರಿಸುತ್ತಿದ್ದಂತೆಯೇ ನಿತಿನ್ ಅವರಿಗೆ ಹಲವು ಸವಾಲುಗಳು ಎದುರಾಗಲಿವೆ. ಅವುಗಳಲ್ಲಿ ಏಪ್ರಿಲ್‌ನಲ್ಲಿ ನಡೆಯಲಿರುವ ತಮಿಳುನಾಡು, ಕೇರಳ ಮತ್ತು ಅಸ್ಸಾಂ ಸೇರಿದಂತೆ ಹಲವು ಚುನಾವಣೆಗಳು ಪ್ರಮುಖವಾಗಿವೆ. ಇಲ್ಲಿ ಅವರು ಪಕ್ಷವನ್ನು ಸಮರ್ಥವಾಗಿ ಮುನ್ನಡೆಸಿ ಸಾಮರ್ಥ್ಯವನ್ನು ಸಾಬೀತುಪಡಿಸಬೇಕಿದೆ.

'ಹಿರಿಯರು ಹೊಸ ತಲೆಮಾರಿನವರಿಗೆ ದಾರಿ ಬಿಡಲಿ'

ಪ್ರಜಾವಾಣಿ ವಾರ್ತೆ

ನಿತಿನ್ ಗಡ್ಕರಿ

ಮುಂಬೈ: 'ಯಾವುದೇ ವ್ಯವಸ್ಥೆಯು ಸುಗಮವಾಗಿ ನಡೆಯಲು ಪ್ರಾರಂಭಿಸಿದಾಗ, ಹಳೆಯ ಪೀಳಿಗೆಯವರು ಪಕ್ಕಕ್ಕೆ ಸರಿದು ಹೊಸ ತಲೆಮಾರಿ ನವರಿಗೆ ದಾರಿ ಮಾಡಿಕೊಡಬೇಕು' ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪೀಳಿಗೆಗಳು ಕ್ರಮೇಣ ಬದಲಾಗ ಬೇಕು ಎಂದು ನಾನು ನಂಬುತ್ತೇನೆ. ಈಗ ನಾವು ನಿಧಾನವಾಗಿ ನಿವೃತ್ತಿ ಹೊಂದಿ ಹೊಸ ತಲೆಮಾರಿಗೆ ಜವಾಬ್ದಾರಿ ನೀಡಬೇಕು. ಒಮ್ಮೆ ವ್ಯವಸ್ಥೆ ಅಥವಾ ಕೆಲಸವು ಸುಗಮ ವಾಗಿ ಸಾಗಲು ಪ್ರಾರಂಭಿಸಿ ದಾಗ, ನಾವು ಅದರಿಂದ ಹಿಂದೆ ಸರಿದು ಬೇರೆ ಯಾವುದಾದರೂ ಕೆಲಸವನ್ನು ಮಾಡಿಕೊಂಡು ಇರಬೇಕು' ಎಂದು ಅಭಿಪ್ರಾಯಪಟ್ಟಿದ್ದಾರೆ.

ಪಾಲಿಕೆ: ಇವಿಎಂ ಬದಲು ಮತಪತ್ರ

ಒಂದನೇ ಪುಟದಿಂದ...

'ರಾಜ್ಯ ಚುನಾವಣಾ ಆಯೋಗ ಸ್ವಾಯತ್ತ ಸಂಸ್ಥೆಯಾಗಿದ್ದು, ಯಾರ ಅಧೀನಕ್ಕೂ ಬರುವುದಿಲ್ಲ. ಕಾಯ್ದೆಯಲ್ಲಿರುವಂತೆ ಮತಪತ್ರ ಬಳಸಲಾಗುತ್ತದೆ. ಸರ್ಕಾರದ ಯಾವ ಸೂಚನೆಯೂ ಇಲ್ಲ. ಇದು ಸಂಪೂರ್ಣವಾಗಿ ಚುನಾವಣಾ ಆಯೋಗದ ನಿರ್ಧಾರ' ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ಸುಪ್ರೀಂ ಕೋರ್ಟ್‌ನ ಯಾವುದೇ ತೀರ್ಪಿನಲ್ಲಾಗಲಿ ಅಥವಾ ದೇಶದ ಯಾವುದೇ ಕಾನೂನಿನಲ್ಲಾಗಲಿ ಮತಪತ್ರ ಬಳಕೆಯನ್ನು ನಿಷೇಧಿಸಲಾಗಿದೆ ಎಂಬ ಪ್ರಸ್ತಾಪವಿಲ್ಲ. ನಿಯಮಗಳ ಚೌಕಟ್ಟಿನಲ್ಲೇ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ವಿಶ್ವದ ಅನೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಇಂದಿಗೂ ಮತಪತ್ರದ ಮೂಲಕವೇ ಪಾರದರ್ಶಕವಾಗಿ ಚುನಾವಣೆ ನಡೆಸಲಾಗುತ್ತಿದೆ. ಹೀಗಿರುವಾಗ ನಾವು ಮತಪತ್ರ ಬಳಸಿದರೆ ಅದು ಹಿನ್ನಡೆ ಎಂದು ಭಾವಿಸುವುದು ಸರಿಯಲ್ಲ' ಎಂದು ಅವರು ಪ್ರತಿಪಾದಿಸಿದರು.

'ಆಧುನಿಕ ತಂತ್ರಜ್ಞಾನಕ್ಕಿಂತಲೂ ನಂಬಿಕೆ ಮತ್ತು ಕಾನೂನಿನ ಅನುಷ್ಠಾನ ಮುಖ್ಯವಾಗಿರುತ್ತದೆ. ಚುನಾವಣಾ ಆಯೋಗವು ಯಾವುದೇ ನಿರ್ದಿಷ್ಟ ರಾಜಕೀಯ ಪಕ್ಷದ ಪರವಾಗಿ ಅಥವಾ ಯಾರದ್ದೋ ಹೆದರಿಕೆಗೆ ಮಣಿದು ಈ ತೀರ್ಮಾನ ಕೈಗೊಂಡಿಲ್ಲ. ರಾಜ್ಯ ಚುನಾವಣಾ ಆಯೋಗವು ಒಂದು ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿದ್ದು, ಅದಕ್ಕೆ ತನ್ನದೇ ಆದ ಅಧಿಕಾರವಿದೆ. ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳನ್ನು ಭಾರತೀಯ ಚುನಾವಣಾ ಆಯೋಗ ನಡೆಸುತ್ತದೆ. ಆದರೆ, ಸ್ಥಳೀಯ ಸಂಸ್ಥೆಗಳ ಚುನಾವಣೆಯ ಜವಾಬ್ದಾರಿ ನಮ್ಮದಾಗಿದ್ದು, ಇಲ್ಲಿ ಮತಪತ್ರ ಬಳಸುವ ಅಧಿಕಾರ ಆಯೋಗಕ್ಕಿದೆ' ಎಂದರು.

'ಮುಂಬರುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲೂ ಮತಪತ್ರ ಬಳಸಲಾಗುತ್ತದೆ. ಇವಿಎಂ ಕೊರತೆ ಅಥವಾ ತಾಂತ್ರಿಕ ಮಿತಿಗಳ ನಡುವೆ, ಮತಪತ್ರದ ಮೂಲಕ ಸುಗಮ ಮತ್ತು ವಿಶ್ವಾಸಾರ್ಹ ಚುನಾವಣೆ ನಡೆಸುವುದು ಆಯೋಗದ ಪ್ರಮುಖ ಗುರಿಯಾಗಿದೆ. ಇದಕ್ಕಾಗಿ ಅಗತ್ಯ ಸಿಬ್ಬಂದಿಯನ್ನೂ ನೇಮಿಸಲಾಗುವುದು' ಎಂದರು.

ತೆಲಂಗಾಣ ರಾಜಕೀಯದಲ್ಲಿ ಕೋಲಾಹಲ–ಸಿಬಿಐ ತನಿಖೆಗೆ ಆಗ್ರಹ

'ಕಲ್ಲಿದ್ದಲು ಗಣಿ ಟೆಂಡರ್: ಸಚಿವರು, ಮಾಧ್ಯಮಗಳು ಭಾಗಿ'

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಸರ್ಕಾರಿ ಸ್ವಾಮ್ಯದ ಸಿಂಗರೇಣಿ ಕೊಲಿರೀಸ್ ಕಂಪನಿ ಲಿಮಿಟೆಡ್ (ಎಸ್‌ಸಿಸಿಎಲ್) ಬಳಿ ಕಲ್ಲಿದ್ದಲು ಗಣಿ ಗುತ್ತಿಗೆಗೆ ಸಂಬಂಧಿಸಿದ ವಿಷಯ ಕಾಂಗ್ರೆಸ್‌ನ ಇಬ್ಬರು ಸಚಿವರ ನಡುವೆಯೇ ಸಂಘರ್ಷಕ್ಕೆ ಕಾರಣವಾಗಿದೆ ಎಂದು ವರದಿಯಾಗಿದೆ.

ಈ ಬೆಳವಣಿಗೆಯ ಬೆನ್ನಲ್ಲೇ, ಒಡಿಶಾದ ಅಂಗುಲ್ ಜಿಲ್ಲೆಯಲ್ಲಿರುವ ನೈನಿ ಕಲ್ಲಿದ್ದಲು ಬ್ಲಾಕ್ ಗಣಿಗಾರಿಕೆ ಟೆಂಡರ್ ರದ್ದುಪಡಿಸಬೇಕು ಎಂದು ತೆಲಂಗಾಣದ ಹಣಕಾಸು, ಇಂಧನ ಸಚಿವರಾಗಿರುವ ಉಪ ಮುಖ್ಯ ಮಂತ್ರಿ ಭಟ್ಟಿ ವಿಕ್ರಮಾರ್ಕ ಅವರು ಎಸ್‌ಸಿಸಿಎಲ್‌ಗೆ ಸೂಚನೆ ನೀಡಿದ್ದಾರೆ.

ಸಚಿವರೊಬ್ಬರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಸುದ್ದಿ ವಾಹಿನಿ ಯೊಂದರ ಮಾಲೀಕರೊಂದಿಗೆ ಸೇರಿ ಮತ್ತೊಬ್ಬ ಸಚಿವರಿಗೆ ಗುತ್ತಿಗೆ ಸಿಗದಂತೆ ತಡೆಯುವ ಯತ್ನ ನಡೆದಿದೆ ಎಂದು ಮತ್ತೊಂದು ತೆಲುಗು ಸುದ್ದಿ ವಾಹಿನಿಯೊಂದು ಆರೋಪ ಮಾಡಿತ್ತು. ಇದರ ಬೆನ್ನಲ್ಲೇ ಟೆಂಡರ್ ರದ್ದುಗೊಳಿಸಲಾಗಿದೆ.

ಮಹಿಳಾ ಅಧಿಕಾರಿಯ ತೇಜೋವಧೆಗೆ ಯತ್ನಿಸಿದ ವಿಚಾರ ತೆಲಂಗಾಣ ಐಎಎಸ್ ಹಾಗೂ ಐಪಿಎಸ್ ಅಧಿಕಾರಿ ವಲಯದಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿತ್ತು. ಇದರ ಬೆನ್ನಲ್ಲೇ, ಪೊಲೀಸರು ದೂರು ದಾಖಲಿಸಿ ಸುದ್ದಿ ಪ್ರಸಾರ ಮಾಡಿದ ಸುದ್ದಿವಾಹಿನಿಯ ಪತ್ರಕರ್ತರನ್ನು ಬಂಧಿಸಿದ್ದರು. ನಂತರ, ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು.

ಸ್ಪಷ್ಟನೆ: ಈ ಬೆಳವಣಿಗೆ ಬಳಿಕ ಭಾನುವಾರ ಪತ್ರಿಕಾಗೋಷ್ಠಿ ನಡೆಸಿ ಉಪ ಮುಖ್ಯಮಂತ್ರಿ ಭಟ್ಟಿ ವಿಕ್ರಮಾರ್ಕ ಸ್ಪಷ್ಟನೆ ನೀಡಿದರು.

'ಸಾರ್ವಜನಿಕರನ್ನು ದಾರಿ ತಪ್ಪಿಸಲು ಕಪೋಲಕಲ್ಪಿತ ಕಥೆಗಳನ್ನು ಹೆಣೆಯಲಾಗಿದೆ. ಇಂತಹ ವರದಿಗಳಿಗೆ ನಾನು ಹೆದರುವುದಿಲ್ಲ. ಎಸ್‌ಎಸ್‌ಸಿಎಲ್ ಸಂಸ್ಥೆಯು ನಿಯಾಮವಳಿ ಪ್ರಕಾರ ಟೆಂಡರ್ ಆಹ್ವಾನಿಸಿದ್ದು, ಇದುವರೆಗೂ ಯಾವುದೇ ಬಿಡ್‌ಗಳನ್ನು ಸ್ವೀಕರಿಸಿಲ್ಲ' ಎಂದು ಸ್ಪಷ್ಟನೆ ನೀಡಿದರು.

'ಸಾರ್ವಜನಿಕ ಸ್ವಾಮ್ಯದ ಸಂಸ್ಥೆಯಲ್ಲಿ ಕೇಂದ್ರ ಸರ್ಕಾರದ ನಿಯಾಮವಳಿ ಅನ್ವಯ ಹೊಸತಾಗಿ ಟೆಂಡರ್ ಆಹ್ವಾನಿಸುವಂತೆ ಕಂಪನಿಗೆ ಸೂಚನೆ ನೀಡಲಾಗಿದೆ' ಎಂದು ಹೇಳಿದರು.

ಸರ್ಕಾರಿ ಸ್ವಾಮ್ಯದ ಎಸ್‌ಎಸ್‌ಸಿಎಲ್‌ಗೆ ಒಡಿಶಾದ ನೈನಿ ಕಲ್ಲಿದ್ದಲು ಬ್ಲಾಕ್ ಹಂಚಿಕೆ ಮಾಡಲಾಗಿತ್ತು. ಇದು ರಾಜ್ಯದ ಹೊರಗಿನ ಮೊದಲ ಯೋಜನೆಯಾಗಿದೆ. 2025ರ ಏಪ್ರಿಲ್ ತಿಂಗಳಿನಿಂದಲೇ ಇದು ಕಾರ್ಯಾಚರಣೆ ಆರಂಭಿಸಿದ್ದು, ಇಲ್ಲಿಂದ ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲು ಪೂರೈಸಲಾಗುತ್ತಿದೆ.

ಆರೋಪ ಏನು?

'ಉಪಮುಖ್ಯಮಂತ್ರಿ ವಿಕ್ರಮಾರ್ಕ ಹಾಗೂ ಸುದ್ದಿ ವಾಹಿನಿಯೊಂದರ ಮಾಲೀಕರು ಕಲ್ಲಿದ್ದಲ್ಲು ಗಣಿ ಗುತ್ತಿಗೆ ಪಡೆಯಲು ಆಸಕ್ತಿ ಹೊಂದಿದ್ದರು. ಈ ಗಣಿ ಗುತ್ತಿಗೆ ಪಡೆಯಲು ಆಸಕ್ತಿ ವಹಿಸಿದ ಸಂಪುಟದ ಮತ್ತೊಬ್ಬ ಸಚಿವರ ಜೊತೆ ಮಹಿಳಾ ಅಧಿಕಾರಿಗೆ ಸಂಬಂಧ ಇದೆ ಎಂದು ಸುದ್ದಿ ಪ್ರಸಾರ ಮಾಡಿ, ತೇಜೋವಧೆಗೆ ಯತ್ನಿಸಿದ್ದರು' ಎಂದು ತೆಲುಗಿನ ಮತ್ತೊಂದು ಸುದ್ದಿ ವಾಹಿನಿ ವರದಿ ಮಾಡಿದೆ.

ಸಿಬಿಐ ತನಿಖೆಗೆ ಆಗ್ರಹ: ಟೆಂಡರ್ ರದ್ದತಿ ಕುರಿತಂತೆ ಕೂಡಲೇ ಸಿಬಿಐ ತನಿಖೆ ನಡೆಸಬೇಕು ಎಂದು ವಿರೋಧ ಪಕ್ಷ ಬಿಆರ್‌ಎಸ್ ಒತ್ತಾಯಿಸಿದೆ.

ಡಿಜಿಪಿ ರಾವ್ ವಿಡಿಯೊ ಬಯಲು?

ಒಂದನೇ ಪುಟದಿಂದ...

ರಾಮಚಂದ್ರರಾವ್ ಅವರು ಪೊಲೀಸ್ ಸಮವಸ್ತ್ರದಲ್ಲಿ ಕಚೇರಿಯ ಕುರ್ಚಿಯಲ್ಲಿ ಕುಳಿತು ಮಹಿಳೆಯನ್ನು ಅಪ್ಪಿಕೊಳ್ಳುತ್ತಿರುವ ಹಾಗೂ ಮುತ್ತಿಡುತ್ತಿರುವ ದೃಶ್ಯವು ವಿಡಿಯೊದಲ್ಲಿ ದಾಖಲಾಗಿದೆ. ಚೇಂಬರ್‌ನಲ್ಲಿರುವ ರಾಷ್ಟ್ರಧ್ವಜ ಹಾಗೂ ರಾಜ್ಯ ಪೊಲೀಸ್ ಧ್ವಜ ಸಹ ವಿಡಿಯೊದಲ್ಲಿ ಸೆರೆಯಾಗಿದೆ.

ಬೇರೆ ಬೇರೆ ಸಂದರ್ಭದಲ್ಲಿ ತೆಗೆದು ಮೂರು ವಿಡಿಯೊಗಳನ್ನು ಒಟ್ಟಾಗಿ ಸೇರಿಸಿರುವ ವಿಡಿಯೊ ತುಣುಕೊಂದು ಹರಿದಾಡುತ್ತಿದೆ. ಮಾಧ್ಯಮದಲ್ಲಿ ಈ ವಿಡಿಯೊ ತುಣುಕು ಪ್ರಸಾರ ಆಗುತ್ತಿದ್ದಂತೆಯೇ, ರಾಮಚಂದ್ರರಾವ್ ಅವರು ಗೃಹ ಸಚಿವ ಜಿ.ಪರಮೇಶ್ವರ ಅವರನ್ನು ಭೇಟಿ ಮಾಡಲು ಸದಾಶಿವ ನಗರದ ಸಚಿವರ ನಿವಾಸದ ಬಳಿ ಬಂದಿದ್ದರು. ಆದರೆ, ಅವರನ್ನು ಭೇಟಿ ಮಾಡಲು ಸಾಧ್ಯವಾಗದೇ ವಾಪಸ್ ಹೋದರು.

ರನ್ಯಾ ರಾವ್ ಪ್ರಕರಣದಲ್ಲೂ ತಳಕು: ನಟಿ ರನ್ಯಾ ರಾವ್ ಅವರು ಭಾಗಿಯಾಗಿರುವ ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ಶಿಷ್ಟಾಚಾರ ಉಲ್ಲಂಘನೆ ಆರೋಪದಡಿ ಕೆ.ರಾಮಚಂದ್ರ ರಾವ್ ಅವರನ್ನು ಕಡ್ಡಾಯ ರಜೆಯ ಮೇಲೆ ಕಳುಹಿಸಿದ್ದ ರಾಜ್ಯ ಸರ್ಕಾರ, ತನಿಖೆಗೆ ಆದೇಶಿಸಿತ್ತು. ರನ್ಯಾ ರಾವ್ ಅವರ ಮಲತಂದೆ ಕೆ.ರಾಮಚಂದ್ರ ರಾವ್. ಮಲತಂದೆಯ ಹೆಸರು ಬಳಸಿಕೊಂಡು ರನ್ಯಾ ಅವರು ವಿಮಾನ ನಿಲ್ದಾಣದಿಂದ ಹೊರಕ್ಕೆ ಬರುತ್ತಿದ್ದರು ಎಂಬ ಆರೋಪವಿತ್ತು. ಕಡ್ಡಾಯ ರಜೆಯ ಆದೇಶವನ್ನು ರಾಜ್ಯ ಸರ್ಕಾರವು ಇತ್ತೀಚೆಗೆ ವಾಪಸ್ ಪಡೆದು ಡಿಸಿಆರ್‌ಇ ಡಿಜಿಪಿ ಹುದ್ದೆಗೆ ನೇಮಕ ಮಾಡಿತ್ತು.

ಕಡ್ಡಾಯ ರಜೆಗೂ ಮುನ್ನ ರಾವ್ ಅವರು ರಾಜ್ಯ ಪೊಲೀಸ್ ಗೃಹ ನಿರ್ಮಾಣ ಮತ್ತು ಮೂಲಸೌಕರ್ಯ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು.

ರಜೆಯ ಮೇಲೆ ತೆರಳಿದ ಅಧಿಕಾರಿ?

ವಿಡಿಯೊ ಬಹಿರಂಗವಾದ ಬೆನ್ನಲ್ಲೇ ಕೆ.ರಾಮಚಂದ್ರ ರಾವ್ ಅವರು ಹತ್ತು ದಿನ ರಜೆಯ ಮೇಲೆ ತೆರಳಲು ನಿರ್ಧರಿಸಿದ್ದಾರೆ ಎಂದು ಹೇಳಲಾಗಿದೆ. ವಿಡಿಯೊ ಹರಿದಾಡಿದ ಬಳಿಕ ಸೋಮವಾರ ಸಂಜೆಯ ವೇಳೆಗೆ ಎರಡು ಆಡಿಯೊ ಕ್ಲಿಪ್‌ಗಳು ಹರಿದಾಡಿದವು. ಅದರಲ್ಲಿ ಮಹಿಳೆ, ಪುರುಷ ಲೋಕಾಭಿರಾಮವಾಗಿ ಮಾತನಾಡಿರುವುದು ದಾಖಲಾಗಿದೆ. 'ಸೋ ಸ್ವೀಟ್, ಲವ್ ಯೂ ಬಂಗಾರಿ...' ಎನ್ನುವ ಸಂಭಾಷಣೆಗಳಿವೆ ಎಂದು ಮೂಲಗಳು ಹೇಳಿವೆ. ಯಾರು ಯಾರೊಂದಿಗೆ ಮಾತನಾಡಿದ್ದಾರೆ ಎಂಬುದು ಸ್ಪಷ್ಟವಾಗಿಲ್ಲ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಇತರರನ್ನು ಗೌರವಿಸುವುದನ್ನು ಕಲಿಯದಿದ್ದರೆ ನಾವೆಂದೂ ದೊಡ್ಡವರಾಗಲಾರೆವು.

–ವಲ್ಲಭಭಾಯಿ ಪಟೇಲ್

ಸಂಪಾದಕೀಯ

ಸರ್ಕಾರಿ ನೌಕರರ ಹೀನಾಯ ನಿಂದನೆ ಪುಂಡ ನಡವಳಿಕೆಗೆ ಕಡಿವಾಣ ಬೇಕು

ರಾಜ್ಯದಲ್ಲಿ ಇತ್ತೀಚೆಗೆ ನಡೆದ ಕೆಲವು ಘಟನೆಗಳನ್ನು ಗಮನಿಸಿದರೆ ಪ್ರಾಮಾಣಿಕ, ದಕ್ಷ ಅಧಿಕಾರಿಗಳು ನಿರ್ಭಯವಾಗಿ ಕೆಲಸ ಮಾಡುವಂತಹ ವ್ಯವಸ್ಥೆ ದಿನೇ ದಿನೇ ಕುಸಿಯುತ್ತಿದೆ ಎಂಬ ಸಂಶಯ ಮೂಡುತ್ತದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ನಗರಸಭೆಯ ಪೌರಾಯುಕ್ತೆ ಅಮೃತಾ ಗೌಡ ಅವರನ್ನು ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವಾಚ್ಯ ಶಬ್ದಗಳಿಂದ ಬೈದಿರುವುದಲ್ಲದೇ, ಕಚೇರಿಗೆ ಬೆಂಕಿ ಹಾಕುವ ಬೆದರಿಕೆ ಒಡ್ಡಿದ್ದರು. ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಅವರ ಮಗ ಝೈದ್ ಖಾನ್ ನಟನೆಯ 'ಕಲ್ಟ್' ಸಿನಿಮಾದ ಪ್ರಚಾರಕ್ಕೆ ಹಾಕಿದ್ದ ಅನಧಿಕೃತ ಬ್ಯಾನರ್ ತೆರವುಗೊಳಿಸಿದ್ದಕ್ಕೆ ಅಮೃತಾ ಗೌಡ ನಿಂದನೆಗೆ ಒಳಗಾಗಬೇಕಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ಮೈಸೂರು ಜಿಲ್ಲೆಯ ವರುಣ ವಿಧಾನಸಭಾ ಕ್ಷೇತ್ರದ ಗುಡುಮಾದನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿದ್ದ ವ್ಯಕ್ತಿಯೊಬ್ಬರು ಅಡಿಕೆ ತೋಟ ಮಾಡಿದ್ದರು. ಇದರ ಪರಿಶೀಲನೆಗೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಜಿ. ಭವ್ಯಾ ಅವರು ಗ್ರಾಮ ಸಹಾಯಕರಾದ ಪವನ್‌ಕುಮಾರ್ ಜತೆ ಹೋಗಿದ್ದರು. ಅಲ್ಲಿಗೆ ಧಾವಿಸಿದ್ದ ಒತ್ತುವರಿದಾರ, ಜೆಡಿಎಸ್ ನಾಯಕರ ಒಡನಾಟ ಇರುವ ಪುಟ್ಟಸ್ವಾಮಿ, 'ಮೊದಲು ನಿಮ್ಮ ಹೆಣ ಬೀಳುತ್ತದೆ' ಎಂದು ಬೆದರಿಕೆ ಹಾಕಿದ್ದರು.

ರಾಮನಗರ ಜಿಲ್ಲೆ ಮಾಗಡಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಚ್.ಸಿ. ಬಾಲಕೃಷ್ಣ ಅವರು ಮಾಗಡಿ ತಹಶೀಲ್ದಾರ್ ಶರತ್ ಕುಮಾರ್ ಅವರಿಗೆ ಒಮ್ಮೆ 'ನಿಮ್ಮ ಮುಖಕ್ಕೆ ಗುದ್ದುವೆ' ಎಂದರೆ, ಮತ್ತೊಮ್ಮೆ, 'ಚಪ್ಪಲಿಯಲ್ಲಿ ಹೊಡೆಸಬೇಕಾಗುತ್ತದೆ' ಎಂದು ಧಮಕಿ ಹಾಕಿದ್ದರು. ಹಿಂದೆಯೂ ಕರ್ನಾಟಕದಲ್ಲಿ ಇಂತಹ ಘಟನೆಗಳು ನಡೆದಿವೆ. ಸಿದ್ದರಾಮಯ್ಯ ಅವರು ಹಿಂದಿನ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದಾಗ, ಅವರ ಆಪ್ತ ಮರೀಗೌಡ ಅವರು ಅಂದಿನ ಜಿಲ್ಲಾಧಿಕಾರಿ ಸಿ. ಶಿಖಾ ಅವರಿಗೆ ಬೆದರಿಕೆ ಹಾಕಿದ್ದರು. ಬಳಿಕ ಮರೀಗೌಡರನ್ನು ದೂರ ಇಟ್ಟಿದ್ದ ಸಿದ್ದರಾಮಯ್ಯ ಎರಡನೇ ಅವಧಿಯಲ್ಲಿ ಅವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧ್ಯಕ್ಷ ಸ್ಥಾನ ದಯಪಾಲಿಸಿದರು. ಅಧಿಕಾರಿಗಳ ಹಿತ ಕಾಯಬೇಕಾದ, ರಾಜ್ಯದಲ್ಲಿ ನಿರ್ಭೀತ ಸುರಕ್ಷಿತ ವಾತಾವರಣ ಇದೆ ಎಂದು ಭರವಸೆ ಮೂಡಿಸಬೇಕಾದ ಸಿದ್ದರಾಮಯ್ಯ ಈ ಅವಧಿಯಲ್ಲಿಯೂ ಎರಡು ಬಾರಿ ಎಡವಿದರು. ವಿಜಯನಗರ ಜಿಲ್ಲೆಯ ಬಂಡಿಹಳ್ಳಿ ಗ್ರಾಮದಲ್ಲಿ ಸರ್ಕಾರದ ಸಾಮೂಹಿಕ ಮದುವೆ ಸಮಾರಂಭದ ವೇದಿಕೆಯಲ್ಲಿ ಸ್ವಾಮೀಜಿಯವರ ಜತೆ ಅಲ್ಲಿನ ಜಿಲ್ಲಾಧಿಕಾರಿ ದಿವಾಕರ್ ಆಸೀನರಾಗಿದ್ದರು. ಇದನ್ನು ಗಮನಿಸಿದ ಸಿದ್ದರಾಮಯ್ಯ ಅವರು ವೇದಿಕೆಯಲ್ಲಿಯೇ ಜಿಲ್ಲಾಧಿಕಾರಿಗೆ ಗದರಿದ್ದರು. ಬೆಳಗಾವಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರು ಭಾಷಣ ಮಾಡುವಾಗ ಬಿಜೆಪಿಯವರು ಪ್ರತಿಭಟನೆ ಮಾಡಿದರು. ಅಲ್ಲಿನ ಭದ್ರತೆಯ ಉಸ್ತುವಾರಿಯಲ್ಲಿದ್ದ ಎಎಸ್‌ಪಿ ನಾರಾಯಣ ಭರಮನಿ ಅವರ ಮೇಲೆ ಮುಖ್ಯಮಂತ್ರಿಯವರು ಕೈ ಎತ್ತಿದ್ದ ಪ್ರಕರಣವೂ ವರದಿಯಾಗಿತ್ತು. ವರ್ಷದ ಹಿಂದೆ ಬೆಳಗಾವಿಯಲ್ಲಿ ನಡೆದ ಅಧಿವೇಶನದ ವೇಳೆ ವಿಧಾನಪರಿಷತ್ತಿನಲ್ಲೇ ಬಿಜೆಪಿ ಸದಸ್ಯ ಸಿ.ಟಿ. ರವಿ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ವಿರುದ್ಧ ಅವಾಚ್ಯ ಶಬ್ದ ಬಳಸಿದರೆಂಬ ಗಂಭೀರ ಆರೋಪ, ಸಂಸದೀಯ ವ್ಯವಸ್ಥೆಗೆ ಕಪ್ಪುಚುಕ್ಕೆಯಾಗಿತ್ತು. ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಅವರು ಕಲಬುರಗಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಅಲ್ಲಿನ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರನ್ನು ಟೀಕಿಸುವ ಸಿಟ್ಟಿನಲ್ಲಿ 'ಪಾಕಿಸ್ತಾನ' ಪದ ಬಳಸಿ, ವಿವಾದಕ್ಕೆ ಗುರಿಯಾಗಿದ್ದರು. ಇಂತಹ ಘಟನೆಗಳು ನಮ್ಮ ವ್ಯವಸ್ಥೆ ದಿನದಿಂದ ದಿನಕ್ಕೆ ಕೆಟ್ಟ ಹಾದಿಯ ಕಡೆಗೆ ಸಾಗುತ್ತಿರುವುದರ ಸಂಕೇತ.



ಜನಪರವಾಗಿ ಕೆಲಸ ಮಾಡುವ ಅಧಿಕಾರಿಗಳನ್ನು ನಿಂದಿಸುವ ಹಾಗೂ ಬೆದರಿಕೆ ಹಾಕುವ ರಾಜಕಾರಣಿಗಳ ಚಾಳಿಯನ್ನು ಸರ್ಕಾರ ಸಹಿಸಿಕೊಳ್ಳಬಾರದು.

ದಕ್ಷತೆಯಿಂದ ಕೆಲಸ ಮಾಡಿ, ಜನಪರವಾಗಿರುವ ಅಧಿಕಾರಿಗಳಲ್ಲಿ ಸುರಕ್ಷತೆಯ ಭಾವನೆ ಮೂಡಿಸಬೇಕಾದವರೇ ಸಂಯಮ ಕಳೆದುಕೊಂಡು ಅಧಿಕಾರಿಗಳನ್ನು ಹೀನಾಯವಾಗಿ ನಿಂದಿಸುತ್ತಿರುವುದು ಸರಿಯಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ ಬೀದಿಬದಿ ಪುಢಾರಿಗಳು ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ದೊಣ್ಣೆ ಹಿಡಿಯುವ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಇಂತಹ ಘಟನೆಗಳು ತಮ್ಮ ಸಮೂಹದ ಅಧಿಕಾರಿಗಳ ಮೇಲೆ ನಡೆದಾಗ ಐಎಎಸ್ ಅಥವಾ ಕೆಎಎಸ್ ಅಧಿಕಾರಿಗಳ ಸಂಘ ಪ್ರತಿಭಟನಾತ್ಮಕ ಪತ್ರವನ್ನು ಸರ್ಕಾರದ ಮುಖ್ಯಸ್ಥರಿಗೆ ನೀಡಿದ್ದುಂಟು. ಸರ್ಕಾರಿ ನೌಕರರ ಸಂಘ ಪ್ರತಿಭಟನೆಗೆ ಇಳಿದ ಪೂರ್ವ ನಿದರ್ಶನಗಳಿವೆ. ಅಂತಹ ಪ್ರತಿಭಟನೆಯ ಸ್ವರ ಈಗ ಎದ್ದಿಲ್ಲ. ಹಾಗೆಂದು, ಈ ವಿಷಯದಲ್ಲಿ ಮುಖ್ಯಮಂತ್ರಿ ಮೌನ ವಹಿಸಬಾರದು. ದಕ್ಷ ಅಧಿಕಾರಿ–ಸಿಬ್ಬಂದಿಯ ರಕ್ಷಣೆಗೆ ನಿಲ್ಲಬೇಕಾದುದು ಅವರ ತಕ್ಷಣದ ಕರ್ತವ್ಯ. ಅಧಿಕಾರಿ, ಸಿಬ್ಬಂದಿಗೆ ರಾಜ್ಯದಲ್ಲಿ ಸುರಕ್ಷಿತ ವಾತಾವರಣ ಕಲ್ಪಿಸುವ ಬಗ್ಗೆ ರಾಜ್ಯ ಮುಖ್ಯಕಾರ್ಯದರ್ಶಿಗೆ, ಪೊಲೀಸ್ ಮಹಾನಿರ್ದೇಶಕರಿಗೆ ಸೂಕ್ತ ನಿರ್ದೇಶನ ನೀಡಿ, ತಪ್ಪಿತಸ್ಥರ ಮೇಲೆ ಕಠಿಣ ಕ್ರಮವಾಗುವಂತೆ ನೋಡಿಕೊಳ್ಳಬೇಕು.

ಚಾಟಿ

ಮುಂದಾಲೋಚನೆ ಕೊರತೆ



ನಮ್ಮಲ್ಲಿ ಕಾಮಿಡಿ ಕಿಲಾಡಿ, ಬಿಗ್‌ಬಾಸ್ ಇವಕ್ಕೇ ಹೆಚ್ಚು ಪ್ರೋತ್ಸಾಹ. ಸಭ್ಯ ಸಮಾಜದ ಕಟ್ಟುವಿಕೆಗೆ ಬೇಕಾಗುವ, ಸಾಂಸ್ಕೃತಿಕ ವಾತಾವರಣ ಸೃಷ್ಟಿಸುವ ದಿಕ್ಕಿನಲ್ಲಿ ಸರ್ಕಾರಗಳಾಗಲೀ ಚಿತ್ರರಂಗವಾಗಲೀ ಎಂದೂ ಮುಂದಾಲೋಚನೆ ಮಾಡಲಿಲ್ಲ.

ರೇಣುಕಾ ಮಂಜುನಾಥ್, ಲೇಖಕಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಮನರೇಗಾ ಹೆಸರಿನಲ್ಲಿ ಬಡವರ ದುಡ್ಡು ಲೂಟಿ ಹೊಡೆಯುತ್ತಿದ್ದ ದಾರಿಗಳು 'ವಿಬಿ–ಜಿ ರಾಮ್ ಜಿ' ಯೋಜನೆಯಿಂದ ಬಂದ್ ಆಗುತ್ತಿವೆ. ಇದಕ್ಕಾಗಿಯೇ ಕಾಂಗ್ರೆಸ್ ಪಕ್ಷವು ಈ ಯೋಜನೆಯನ್ನು ವಿರೋಧಿಸುತ್ತಿದೆ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 20-1-2001

- **ತಂತ್ರಜ್ಞಾನ ಶಿಕ್ಷಣ: ಶೀಘ್ರ ರಾಷ್ಟ್ರೀಯ ಕಾರ್ಯಕ್ರಮ**

ಬೆಂಗಳೂರು, ಜ. 19– ಮಾಹಿತಿ ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ನಿರ್ವಹಣೆ ಕ್ಷೇತ್ರದಲ್ಲಿ ಪರಿಣತರ ಸಂಖ್ಯೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಶೀಘ್ರದಲ್ಲೇ ತಂತ್ರಜ್ಞಾನ ಶಿಕ್ಷಣದ ರಾಷ್ಟ್ರೀಯ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಿದೆ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಇಂದು ಘೋಷಿಸಿದರು.

ಎಲೆಕ್ಟ್ರಾನಿಕ್ ಸಿಟಿಯ ಇನ್‌ಫೋಸಿಸ್ ಸಂಸ್ಥೆಗೆ ಭೇಟಿ ನೀಡಿದ್ದ ಅವರು, ವಿಶ್ವಮಟ್ಟದ ಸೌಲಭ್ಯ, ಮೂಲಭೂತ ಸೌಕರ್ಯ ಮತ್ತು ನಿರ್ವಹಣೆಯನ್ನು ನೀಡಿದರೆ ಭಾರತದ ಸಿಲಿಕಾನ್ ಕಣಿವೆಯ ಐಟಿ ಕಂಪನಿಗಳು ಮಾಡಿರುವ ಜಾದೂವನ್ನು ದೇಶದ ಇತರೆ ಸಂಸ್ಥೆಗಳು ಸಹ ಮಾಡುತ್ತವೆ ಎಂದರು.

- **ಕೋರ್ಟ್‌ನಲ್ಲಿ ಹಿಂದೂಜಾ ಸೋದರರ ಹಾಜರಿ**

ನವದೆಹಲಿ, ಜ. 19 (ಯುಎನ್‌ಐ, ಪಿಟಿಐ)– ಬೊಫೋರ್ಸ್ ಫಿರಂಗಿ ಖರೀದಿ ಲಂಚ ಹಗರಣಕ್ಕೆ ಸಂಬಂಧಿಸಿದಂತೆ ಇಂದು ನಡೆದ ಪ್ರಮುಖ ಬೆಳವಣಿಗೆಯೊಂದರಲ್ಲಿ ಶ್ರೀಮಂತ ಮತ್ತು ಪ್ರಭಾವಿ ಹಿಂದೂಜಾ ಸಹೋದರರಿಗೆ ವಿಶೇಷ ನ್ಯಾಯಾಲಯವು ಜಾಮೀನು ನೀಡಿತು.

75 ವರ್ಷಗಳ ಹಿಂದೆ

ಶನಿವಾರ, 20-1-1951

- **ಥಕ್ಕರ್ ಬಾಪಾ ನಿಧನ**

ಭಾವನಗರ, ಜ. 19– ಪ್ರಖ್ಯಾತ ಸಮಾಜ ಸೇವಕ ಎ.ವಿ. ಥಕ್ಕರರು (ಥಕ್ಕರ್ ಬಾಪಾ) ಈ ದಿನ ರಾತ್ರಿ 8.20 ಗಂಟೆಗೆ ಇಲ್ಲಿ ನಿಧನರಾದರು. ಅವರ ಕೊನೆಯ ಗಳಿಗೆ ಶಾಂತಿಯುತವಾಗಿತ್ತು.

ಅಮೃತ್ ಲಾಲ್ ವಿ. ಥಕ್ಕರ್ ರವರು ಭಾವನಗರದಲ್ಲಿ 1869ರಲ್ಲಿ ಜನಿಸಿದರು. ಮೊದಲು ಇಂಜಿನಿಯರ್ ಆಗಿ ಅನೇಕ ಕಡೆ ಕೆಲಸ ಮಾಡಿದರು. ಬೊಂಬಾಯಿಯಲ್ಲಿ ಇಂಜಿನಿಯರಾಗಿದ್ದು, 1948ರಲ್ಲಿ ಆ ಹುದ್ದೆಗೆ ರಾಜೀನಾಮೆ ಇತ್ತರು. ಪೂನಾದ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಗೆ ಆಜೀವ ಸದಸ್ಯರಾಗಿ ಸೇರಿದರು.

ಆನಂತರ ಸಾಮಾಜಿಕ ಸೇವೆಯೇ ಅವರ ಜೀವನದ ಗುರಿಯಾಯಿತು. ಅಂದಿನಿಂದ ಹರಿಜನರು ಮತ್ತು ಹಿಂದುಳಿದವರ ಉದ್ಧಾರ ಕಾರ್ಯ ಆರಂಭಿಸಿ, ಭಿಲ್ಲರ ಸೇವಾಮಂಡಳವನ್ನು ಆರಂಭಿಸಿ ಭಾರತದಾದ್ಯಂತ ತಮ್ಮ ಕಾರ್ಯವನ್ನು ವಿಸ್ತರಿಸಿದರು.

ಬೆಳಕಿಗೆ ಬೇಕೆ ಕತ್ತಲ ಸೆಳೆತ?

ವಿಶ್ಲೇಷಣೆ

ಸಬಿತಾ ಬನ್ನಾಡಿ

> ಧಾರ್ಮಿಕ ರಾಷ್ಟ್ರದ ಮಾತುಗಳನ್ನಾಡುವವರು ಇರಾನಿನ ವರ್ತಮಾನವನ್ನು ಗಮನಿಸಬೇಕು. ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದ ದೇಶದ ನಾಗರಿಕರು ಸ್ವಾತಂತ್ರ್ಯ ಹಾಗೂ ನೆಮ್ಮದಿ ಎರಡನ್ನೂ ಕಳೆದುಕೊಂಡು ದಿಕ್ಕೆಟ್ಟಿದ್ದಾರೆ. ಆ ದಿಕ್ಕಿನಲ್ಲಿ ನಾವೂ ಸಾಗುತ್ತಿದ್ದೇವೆಯೆ? ಆ ಸ್ಥಿತಿ ನಮಗೆ ಬೇಕೆ?

ಧಾರ್ಮಿಕ ರಾಷ್ಟ್ರಗಳು ಜಗತ್ತಿನ ಕೆಲವೆಡೆ ಇವೆ. ಭಾರತದಲ್ಲಿ ಇತ್ತೀಚೆಗೆ ಹಿಂದೂ ರಾಷ್ಟ್ರದ ಮಾತುಗಳು ಆಗಾಗ ಮೇಲಕ್ಕೆ ಬಂದು, ಕಾಲಕ್ಕೆ ಕಾದು ಕುಳಿತಂತೆ ಅಡಗುತ್ತಿರುತ್ತವೆ. ಇರಾನ್‌ನಲ್ಲಿ ಪ್ರತಿಭಟನೆಯ ಸುದ್ದಿ ಮುನ್ನೆಲೆಗೆ ಬರುತ್ತಿರುವಾಗ ಈ ಧಾರ್ಮಿಕ ರಾಷ್ಟ್ರಗಳ ಕಥೆ ಮತ್ತು ವ್ಯಥೆಯೆಡೆಗೆ ತಿರುಗಿ ನೋಡಬೇಕೆನಿಸುತ್ತಿದೆ. ಯಾಕೆಂದರೆ, ನಮ್ಮಲ್ಲೂ ಕಿವಿಗೆ ಬೀಳುತ್ತಿರುವ ಎಷ್ಟೋ ಪದಗಳು ಇಸ್ಲಾಮಿಕ್ ರಾಷ್ಟ್ರಗಳಲ್ಲಿ ಚಲಾವಣೆಯಲ್ಲಿ ಇರುವಂತೆಯೇ ಇವೆ. ಇದು ಯೋಚಿಸಬೇಕಾದ ಸಂಗತಿ.

ಇರಾನ್‌ನಲ್ಲಿ ಸರ್ಕಾರದ ವಿರುದ್ಧ ಮಾತಾಡಿದವರನ್ನೆಲ್ಲ 'ಕಮ್ಯುನಿಸ್ಟರು' ಎಂದು ಬ್ರಾಂಡ್ ಮಾಡಲಾಯಿತು. ಬುದ್ಧಿಜೀವಿಗಳು, ಪ್ರಗತಿಪರರು, ಆಧುನಿಕತೆ ಪರ ಇರುವವರನ್ನು 'ದೈವ ವಿರೋಧಿಗಳು' ಎಂದು ದೂಷಿಸಿ ತನಿಖೆಯ ನೆಪದಲ್ಲಿ ಸೆರೆಮನೆಗೆ ತಳ್ಳಿ ಕೊಲ್ಲಲಾಯಿತು. ದೇಶದ್ರೋಹಿಗಳು ಎಂದು ಆಪಾದಿಸಲಾಯಿತು. ನೈತಿಕ ಪೊಲೀಸ್‌ಗಿರಿಯ ಹೆಸರಲ್ಲಿ ಧಾರ್ಮಿಕ ಗೂಂಡಾಗಳಿಗೆ ಬೆಂಬಲ, ಅಧಿಕಾರ ನೀಡಲಾಯಿತು. ನಮ್ಮಲ್ಲೂ 'ನಗರ ನಕ್ಸಲರು' ಎಂಬ ಪದ ಹುಟ್ಟುಹಾಕಿ ಬೇಕಾಬಿಟ್ಟಿ ಬಳಸಲಾಗುತ್ತಿದೆ. ಆಡಳಿತದ ನಿಲುವುಗಳನ್ನು ವಿರೋಧಿಸುವವರನ್ನು ತುಚ್ಛೀಕರಿಸಿ ಗೂಂಡಾಗಿರಿ ಮಾಡುವವನೂ ಲೇವಡಿ ಮಾಡುವ ಮಟ್ಟಕ್ಕೆ ಕುಮ್ಮಕ್ಕು ಕೊಡಲಾಗುತ್ತಿದೆ. ಕಮ್ಯುನಿಸ್ಟ್ ದ್ವೇಷವನ್ನು ಬೆಳೆಸಲಾಗುತ್ತಿದೆ.

ತಮಾಷೆಯ ಸಂಗತಿ ಎಂದರೆ, ಭ್ರಷ್ಟವಾಗಿದ್ದ ರಾಜಪ್ರಭುತ್ವವನ್ನು ವಿರೋಧಿಸಿ ಬದಲಾವಣೆಗಾಗಿ ನಿರಂತರ ಹೋರಾಡಿದ ಮೊಹಮ್ಮದ್ ರೆಜಾ ಪೆಹ್ಲವಿಯನ್ನು ಇಳಿಸುವಲ್ಲಿ ಕಮ್ಯುನಿಸ್ಟರು ಮತ್ತು ಉದಾರವಾದಿಗಳೇ ಮುಂಚೂಣಿಯಲ್ಲಿದ್ದರು. ಶಾ ಆಡಳಿತದಲ್ಲಿನ ಗುಪ್ತಚರ ಸಂಸ್ಥೆ ಸವಾಕ್ ಅಸಂಖ್ಯ ಜನರನ್ನು ಹತ್ಯೆ ಮಾಡಿತು. ಹತ್ತು ವರ್ಷದ ಹುಡುಗನೂ 'ನನ್ನಪ್ಪ ಕೊಲೆಗಾರನಲ್ಲ, ಅವರು ಕೊಂದಿದ್ದು ಕಮ್ಯುನಿಸ್ಟರನ್ನು, ಅವರು ದುಷ್ಟರು' ಎನ್ನುವಂತಾಗುವುದು ಮಿದುಳನ್ನು ತಿದ್ದಿ ಹತ್ಯೆಗೆ ಆಳುವವರು ಸಮ್ಮತಿ ಪಡೆಯುವುದರ ಪ್ರತೀಕ. ಶಾ ಇಳಿದ ನಂತರ ಸಾವಿರಾರು ಹೋರಾಟಗಾರರು ಬಿಡುಗಡೆಗೊಂಡರು. ಆದರೆ, ಅವರೆಲ್ಲರ ಖುಷಿ ಹೆಚ್ಚು ಕಾಲ ಉಳಿಯಲಿಲ್ಲ. ಇರಾನ್ ಮೂಲಭೂತವಾದಿಗಳ ಕೈವಶವಾಯಿತು. ಅದುವರೆಗೂ ವಿದೇಶದಲ್ಲಿದ್ದ ರುಹೊಲ್ಲಾ ಖೊಮೇನಿ ಇರಾನ್‌ಗೆ ಆಗಮಿಸಿ ದೇಶವನ್ನು ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಆಗಿಸಿದ. ನೆಪಮಾತ್ರಕ್ಕೆ ಅಧ್ಯಕ್ಷರ ಆಯ್ಕೆ ನಡೆದರೂ ತಾನೇ ಸರ್ವೋಚ್ಚ ನಾಯಕನೆನಿಸಿದ.

ಮೊದಲು ಜನ ಏನೋ ಬದಲಾವಣೆ ಆಗುತ್ತದೆ ಅಂದುಕೊಂಡರು. ಕೆಲವರು ಆಧುನಿಕತೆಯಿಂದಾಗಿ ಇರಾನಿ ಸಂಸ್ಕೃತಿ ನಶಿಸುತ್ತಿದ್ದು, ದೇಸಿ ಸಂಸ್ಕೃತಿಯ ದ್ಯೋತಕವಾಗಿ ಮೂಲಭೂತವಾದಿಗಳನ್ನು ಬೆಂಬಲಿಸಿದರು. ಆಧುನಿಕ ಶೈಲಿಯಲ್ಲಿ ಬದುಕುತ್ತಿದ್ದ, ಹಿಜಾಬ್ ಇತ್ಯಾದಿಗಳನ್ನು ಎಂದೂ ಧರಿಸದಿದ್ದ ಮಹಿಳೆಯರಿಗೆ ಹೊಸ ಆಡಳಿತ ಹಿಜಾಬ್ ಕಡ್ಡಾಯಗೊಳಿಸಿ ಕಣ್ಗಾವಲಿಗೆ ಒಳಪಡಿಸಿತು. ಪರ, ವಿರೋಧವಾಗಿ ಜನ ಇಬ್ಭಾಗವಾದರು. ಖೊಮೇನಿ ಪ್ರಭುತ್ವ ಹಂತ ಹಂತವಾಗಿ ಹೋರಾಟಗಾರರನ್ನು ನಿರ್ನಾಮ ಮಾಡಿತು. ಇವೆಲ್ಲವೂ ಶುರುವಾಗಿದ್ದು 1979ರಲ್ಲಿ. ನಂತರದ 46 ವರ್ಷಗಳಲ್ಲಿ ಇರಾನ್ ಜನತೆ ಧಾರ್ಮಿಕ ರಾಷ್ಟ್ರದ ಪರಿಣಾಮವನ್ನು ಅನುಭವಿಸುತ್ತಲೇ ಬದಲಾವಣೆ ಮಾಡಲಾರದೆ ಹೈರಾಣಾಗಿದ್ದಾರೆ. ಮೊದಲು ಬೆಂಬಲಿಸಿದವರು ಈಗ ಹತಾಶರಾಗಿದ್ದಾರೆ. ನೆಪಕ್ಕಷ್ಟೇ ನಡೆಯುವ ಚುನಾವಣೆಯಿಂದ ಏನನ್ನೂ ಮಾಡಲಾಗದು. ಇದರೊಂದಿಗೆ ಇಂಗ್ಲೆಂಡ್, ಅಮೆರಿಕ, ಇಸ್ರೇಲ್ ಅಲ್ಲಿನ ತೈಲ ಬಾವಿಯ ಮೇಲೆ ಕಣ್ಣಿಟ್ಟು ಆಡುತ್ತಿರುವ ಆಟದಿಂದಾಗಿ ಹುಟ್ಟಿಕೊಳ್ಳುವ ಯುದ್ಧ ಅಥವಾ ಯುದ್ಧಸ್ಥಿತಿಗಳು ಇರಾನಿಯರನ್ನು ಜರ್ಜರಗೊಳಿಸಿವೆ. ಈಗಲೂ ಅಲ್ಲಿಯ ಜನ ಬೀದಿಗಿಳಿದು ಹೋರಾಡುತ್ತಿದ್ದರೆ, ಅವರಿಗೆ ಬೆಂಬಲ ನೀಡುವ ಮಾತಾಡುತ್ತಾ, ತಮ್ಮ ನಿಯಂತ್ರಣಕ್ಕೆ ಸಿಕ್ಕುವ ಅಥವಾ ಇರಾನ್‌ನ ತೈಲ ಕಂಪನಿಗಳ ರಾಷ್ಟ್ರೀಕರಣವನ್ನು ತೆರವುಗೊಳಿಸಲು ಒಪ್ಪಿಕೊಳ್ಳುವ ನಾಯಕನನ್ನು ಅಲ್ಲಿ ಪ್ರತಿಷ್ಠಾಪಿಸಲು ಅಮೆರಿಕ ಸಂಚು ಹೂಡುತ್ತಿದೆ. ವಿದೇಶಿ ಕೈವಾಡ ಜನರಿಗೂ ಇಷ್ಟವಿಲ್ಲದ ಸಂದರ್ಭದಲ್ಲಿ ಅವರು ದೇಶಕ್ಕಾಗಿ ತಮ್ಮ ಸರ್ಕಾರವನ್ನೇ ಬೆಂಬಲಿಸುತ್ತಾರೆ. ಬಹುಶಃ ಅವರು ತಮ್ಮ ಸ್ವಾತಂತ್ರ್ಯವನ್ನು ತಮ್ಮ ದೇಶದಲ್ಲಿ ತೈಲ ಸಿಕ್ಕಿದಂದೇ ಕಳೆದುಕೊಂಡಿದ್ದಾರೆ.

ಕ್ರಾಂತಿ ನಡೆದಾಗ ಮಾರ್ಜಾನ್ ಸತ್ರಪಿ ಎಂಬ ಹುಡುಗಿ ಹತ್ತು ವರ್ಷದವಳಾಗಿದ್ದಳು. ಪ್ರಭುತ್ವದ ವಿರುದ್ಧದ ಹೋರಾಟದಲ್ಲಿ ಅವಳ ತಂದೆ, ತಾಯಿಯರೂ ಇದ್ದರು. ತಾನು ಕಂಡುಂಡ ದಾರುಣ ಬೆಳವಣಿಗೆಯನ್ನು ಆಧರಿಸಿ ಆಕೆ 'ಪರ್ಸೆಪೊಲಿಸ್' ಎಂಬ ಗ್ರಾಫಿಕ್ ಕಾದಂಬರಿಯನ್ನು ಬರೆದಿದ್ದಾಳೆ. ಜಗತ್ತಿನಾದ್ಯಂತ ಪ್ರಸಿದ್ಧವಾಗಿರುವ ಈ ಕೃತಿಯನ್ನು ಪ್ರೀತಿ ನಾಗರಾಜ ಕನ್ನಡಕ್ಕೆ ಅನುವಾದಿಸಿದ್ದು, ಛಂದ ಪ್ರಕಾಶನ ಪ್ರಕಟಿಸಿದೆ. ಸಿನಿಮಾವಾಗಿಯೂ ಇದು ಪ್ರಸಿದ್ಧವಾಗಿದೆ. ಪರ್ಸೆಪೊಲಿಸ್ ಎಂದರೆ 'ಪರ್ಷಿಯನ್ನರ ನಗರ' ಎಂದರ್ಥ. ಈ ಕೃತಿಯಲ್ಲಿ 'ಕುರಿಗಳು' ಎಂಬ ಅಧ್ಯಾಯ ಇದೆ. ಅದರಲ್ಲಿ ಶಾ ಆಡಳಿತದಲ್ಲಿ 9 ವರ್ಷ ಜೈಲಿನಲ್ಲಿದ್ದು ಬಿಡುಗಡೆಗೊಂಡ ಆಕೆಯ ಚಿಕ್ಕಪ್ಪ ಹೀಗನ್ನುತ್ತಾನೆ: 'ಏನ್ ವಿಚಿತ್ರ, ಈ ಎಡಪಂಥೀಯ ಕ್ರಾಂತಿಯನ್ನ ಸರ್ಕಾರ ಇಸ್ಲಾಮಿಕ್ ಕ್ರಾಂತಿ ಅಂತ ಕರೀಬೇಕು ಅನ್ನುತ್ತೆ'. ಆಗ ಆಕೆಯ ಅಪ್ಪ, 'ಅದೆಲ್ಲಾ ಅನಿವಾರ್ಯ. ಅನಕ್ಷರಸ್ಥರೇ ಹೆಚ್ಚಿರುವಲ್ಲಿ ಜನರಿಗೆ ಕಾರ್ಲ್ ಮಾರ್ಕ್ಸ್ ಅರ್ಥ ಆಗಲ್ಲ. ದೇಶ ಅಥವಾ ಧರ್ಮ ಅಂದರೆ ಮಾತ್ರ ಒಂದಾಗ್ತಾರೆ. ನಂತರ ಎಲ್ಲ ಸರಿ ಹೋಗುತ್ತೆ' ಎನ್ನುತ್ತಾರೆ. ಆಗ ಹೆಚ್ಚಿನವರು ಹಾಗೇ ತಿಳಿದಿದ್ದರು. ಆದರೆ, 'ಮುಲ್ಲಾಗಳಿಗೆ ಆಡಳಿತ ಗೊತ್ತಿಲ್ಲ, ಕಾರ್ಮಿಕರೇ ಆಳಬೇಕು' ಎಂದು ಚಿಕ್ಕಪ್ಪ ಹೇಳುತ್ತಾರೆ. ಅವರಂದಂತೆ ಎಲ್ಲವೂ ಬಿಗಡಾಯಿಸುತ್ತದೆ. ಆಕೆಯ ಚಿಕ್ಕಪ್ಪನನ್ನೂ ಸೇರಿಸಿ ಹಲವರ ಮೇಲೆ ಸುಳ್ಳು ಕೇಸು ಹಾಕಿ ಜೈಲಿನಲ್ಲಿ ಕೊಲ್ಲಲಾಗುತ್ತದೆ. ನೈತಿಕ ಪೊಲೀಸ್‌ಗಿರಿಯ ಹೆಸರಿನಲ್ಲಿ ಹಿಂಸೆ ಮಿತಿ ಮೀರುತ್ತದೆ.

ಒಂದು ಕಾಲದಲ್ಲಿ ಇರಾನ್ ಪ್ರವಾಸಿಗರಿಗೆ ವಿದೇಶಗಳಲ್ಲಿ ಇದ್ದ ಗೌರವ ಕಡಿಮೆಯಾಗಿ ಭಯೋತ್ಪಾದಕ ಪಟ್ಟ ಬಂದಿದ್ದನ್ನು ಲೇಖಕಿ ವಿಷಾದದಿಂದ ದಾಖಲಿಸುತ್ತಾರೆ. ಇರಾಕ್ ಜೊತೆಗಿನ ಹತ್ತು ವರ್ಷಗಳ ಪೊಳ್ಳು ಪ್ರತಿಷ್ಠೆಯ ಯುದ್ಧದಲ್ಲಿ ಶ್ರೀಮಂತ ಇರಾನ್ ನಲುಗಿತ್ತು. ಧರ್ಮದ ನಶೆ ಏರಿತ್ತು. ಹರೆಯದ ಹುಡುಗರನ್ನು ಮಿಲಿಟರಿಗೆ ಸೇರಲು ಪ್ರಚೋದಿಸಲಾಗುತ್ತಿತ್ತು. ಸಾವಿನ ನಂತರದ ಜಗತ್ತು ಡಿಸ್ನಿಲ್ಯಾಂಡ್‌ಗಿಂತ ರಮ್ಯವಾಗಿರುತ್ತದೆ ಎಂದು ನಂಬಿಸಲಾಗುತ್ತಿತ್ತಂತೆ! ಯುದ್ಧದ ಸರಿಯಾದ ತರಬೇತಿಯೂ ಇಲ್ಲದ ಮಕ್ಕಳ ಮಾರಣಹೋಮವೇ ನಡೆದುಹೋಗುತ್ತಿತ್ತಂತೆ. ತಮ್ಮ ಮಕ್ಕಳು ಸ್ವರ್ಗದಲ್ಲಿ ಎಲ್ಲ ಸುಖಗಳಲ್ಲಿ ಬದುಕಿದ್ದಾರೆ ಎಂದೇ ತಾಯಂದಿರು ನಂಬುತ್ತಿದ್ದರಂತೆ! ಎಂತಹ ವಿಚಿತ್ರ. ಯಾವ ಪಾಶ್ಚಾತ್ಯ ಬದುಕನ್ನು ನಿರಾಕರಿಸಲು ಬದುಕಿರುವವರಿಗೆ ಹೇಳಲಾಗುತ್ತಿತ್ತೋ, ಅವರಿಗೆ ಸಾಯಲು ಆಮಿಷವಾಗಿ ತೋರಿಸುತ್ತಿದ್ದುದು ಅದೇ ಪಾಶ್ಚಾತ್ಯ ಲೋಕವನ್ನು. ಧರ್ಮದ ಹೆಸರಿನಲ್ಲಿ ಎಲ್ಲವನ್ನೂ ನಂಬುವುದು, ಇಲ್ಲವೇ ಹೆದರಿ ಬಾಯಿ ಮುಚ್ಚಿಕೊಳ್ಳುವುದು ಸಾಮಾನ್ಯವಾಯಿತು. ಆಗಾಗ ತಲೆಯೆತ್ತಿದ ಪ್ರತಿರೋಧವನ್ನು ಕ್ರೂರವಾಗಿ ಹತ್ತಿಕ್ಕುವ ಮೂಲಕ, ನಕಲಿ ಮತದಾನದ ಮೂಲಕ ಇದನ್ನೆಲ್ಲ ದಕ್ಕಿಸಿಕೊಳ್ಳಲಾಗಿದೆ. ಆದರೂ ಹೆಂಗಸರ ನಿರಂತರ ಪ್ರತಿರೋಧದಿಂದಾಗಿ ಕಳೆದ ವರ್ಷ ತಲೆಕೂದಲು ಕಾಣಿಸಬಾರದೆಂಬ ಉಡುಗೆ ಪೊಲೀಸಿಂಗ್‌ಗೆ ತುಸು ರಿಯಾಯಿತಿ ನೀಡಿ, ತಂತ್ರಜ್ಞಾನದ ಕಾವಲು ಹಾಕಲಾಗಿದೆ.

ದಿಟ್ಟವಾಗಿ ಮಾತಾಡುವ ಬಾಲಕಿ ಮಾರ್ಜಾನ್ ಸತ್ರಪಿಯ ಸ್ವಭಾವವು ಒಂದು ಕಾಲದಲ್ಲಿ ಹೋರಾಟಗಾರ್ತಿಯಾಗಿದ್ದ ಅವಳ ತಾಯಿಗೆ ಆತಂಕ ಉಂಟು ಮಾಡುತ್ತದೆ. ಪಕ್ಕದ ಮನೆಯವರನ್ನೂ ನಂಬಲಾಗದ ಸ್ಥಿತಿಯಲ್ಲಿ ಮಗಳನ್ನು ವಿದೇಶಕ್ಕೆ ಓದಲು ಕಳಿಸುವ ನಿರ್ಧಾರ ಮಾಡುತ್ತಾರೆ. ಹದಿನಾಲ್ಕು ವರ್ಷದ ಆಕೆಯೊಬ್ಬಳನ್ನೇ ಆಸ್ಟ್ರಿಯಾಕ್ಕೆ ಕಳಿಸುತ್ತಾರೆ. ಸತ್ರಪಿ ಅಲ್ಲಿ ನಾಲ್ಕು ವರ್ಷ ಇದ್ದಳಾದರೂ ಖಿನ್ನತೆಗೆ ಒಳಗಾಗಿ, ತವರಿಗೆ ವಾಪಾಸಾಗುತ್ತಾಳೆ. ಹಾಗೆ ಮರಳಿದಾಗ ಅವಳಿಗೆ ವಿಚಿತ್ರ ಅನುಭವವಾಗುತ್ತದೆ. ತನ್ನ ಗೆಳತಿಯರು ಈಗ ಬೌದ್ಧಿಕವಾಗಿ ಯೋಚಿಸುವುದನ್ನೇ ನಿಲ್ಲಿಸಿದ್ದಾರೆ. ಅವರೊಂದಿಗೆ ಮಾತಾಡಲು ಆಕೆಗೆ ವಿಷಯವೇ ಸಿಗುವುದಿಲ್ಲ. ಅಮೆರಿಕದ ಟೀವಿ ಸೀರಿಯಲ್ ನಾಯಕಿಯರ ಅನುಕರಣೆ, ಮೇಕಪ್, ಮದುವೆ, ನೈಟ್‌ಕ್ಲಬ್ ಧ್ಯಾನ ಬಿಟ್ಟರೆ ಅವರಿಗೆ ಕನಸುಗಳೇ ಇರಲಿಲ್ಲ. ಬುದ್ಧಿವಂತರಾಗಿ ಎಂದು ಅವರಿಗೆ ಹೇಳುವವರೂ ಇರಲಿಲ್ಲ. ಬುರ್ಕಾದೊಳಗಿನ ತುಂಡುಡುಗೆಯ ಇವರಿಗೂ, ಹೊರಗೆ ಕಾಣಿಸುವ ಇವರಿಗೂ ಸಂಬಂಧವೇ ಇರಲಿಲ್ಲ. ಯಾವುದನ್ನಾದರೂ ನಿಷೇಧಿಸಿದಾಗ ಅದರ ಬಗ್ಗೆ ತೀರಾ ಹಟ ಹುಟ್ಟುತ್ತದೆ ಎಂದು ಸತ್ರಪಿಗೆ ಅನ್ನಿಸುತ್ತದೆ. ಹಾಗೆ ಪ್ರತಿರೋಧವನ್ನು ಬೇರೆ ಬೇರೆ ಬಗೆಯಲ್ಲಿ ತೋರುವವರ ಸಂಖ್ಯೆ ಬಹಳ ಇದ್ದದ್ದು ಅವಳ ಗಮನಕ್ಕೆ ಬರುತ್ತದೆ. ಆದರೆ, ಛಿದ್ರಗೊಂಡ ಈ ಬದುಕೂ ಕಷ್ಟವಾಗಿ ಆಕೆ ಕೊನೆಗೆ ಫ್ರಾನ್ಸ್‌ಗೆ ವಲಸೆ ಹೋದಳು. ಆದ್ದರಿಂದಲೇ ಅವಳಿಗೆ ಈ ಆತ್ಮಕಥಾನಕ ಕಾದಂಬರಿಯನ್ನು ಬರೆಯಲು ಸಾಧ್ಯವಾಯಿತು.

ನಮ್ಮನ್ನು ಸದಾ ಎಚ್ಚರಿಸಬೇಕಾದ ಅಲಾರಾಂನಂತೆ ಮನ ಮನದೊಳಗೂ ಇರಬೇಕಾದ ಕಾದಂಬರಿ ಇದು. ಪ್ರಾಚೀನ ನಾಗರಿಕತೆಯ, ಸಾಂಸ್ಕೃತಿಕವಾಗಿಯೂ ಶ್ರೀಮಂತವಾಗಿದ್ದ ಇರಾನ್ ಇಸ್ಲಾಮಿಕ್ ರಾಷ್ಟ್ರವಾಗಿರದೇ ಇದ್ದರೆ ಮಾದರಿ ರಾಷ್ಟ್ರವಾಗಬಹುದಿತ್ತು. ನಮ್ಮಲ್ಲೂ ಮರ್ಯಾದೆಗೇಡು ಹತ್ಯೆ, ನೈತಿಕ ಪೊಲೀಸ್‌ಗಿರಿ, ಧಾರ್ಮಿಕ ಗೂಂಡಾಗಿರಿ, ಮೂರು ಹೆತ್ತು ಒಂದನ್ನು ಸೈನ್ಯಕ್ಕೆ ಕೊಡಿ, ಬೊಟ್ಟಿಟ್ಕೋ ಎಂಬ ಅಪ್ಪಣೆಗಳು, ಅತ್ಯಾಚಾರಿಗಳಿಗೆ ಜಾಮೀನು, ವಿರೋಧಿಸಿದವರಿಗೆ ನಾನಾ ರೀತಿಯ ತನಿಖೆ, ಕೈ ಜೋಡಿಸುವ ಭ್ರಷ್ಟರಿಗೆ ಹುದ್ದೆ, ಪರಿಸರ ಹೋರಾಟಗಾರರಿಗೆ ಜೈಲು ಮತ್ತು ಇವೆಲ್ಲವನ್ನೂ ಸಮರ್ಥಿಸುವ ಮನಃಸ್ಥಿತಿ, ವಿರೋಧ ಮತ್ತು ವಿರೋಧ ಪಕ್ಷಗಳ ದಮನಕ್ಕೆ ಅಟ್ಟಹಾಸದ ಬೆಂಬಲ – ಯಾಕೋ ಇಸ್ಲಾಮಿಕ್ ರಾಷ್ಟ್ರದ ಅನುಕರಣೆ ಕಾಣುತ್ತಿದೆಯಲ್ಲ?

ವಾಚಕರ ವಾಣಿ

ಸಂಗಾತಿ ಆಯ್ಕೆ: ಮಸೂದೆ ದುರ್ಬಳಕೆ ಬೇಡ

ಮರ್ಯಾದೆಗೇಡು ಹತ್ಯೆ ತಡೆಯಲು ರಾಜ್ಯ ಸರ್ಕಾರ ಮಸೂದೆ ರೂಪಿಸಿರುವುದು ಸ್ವಾಗತಾರ್ಹ. ಆದರೆ, ಇದರ ದುರುಪಯೋಗ ತಡೆಯುವ ಕಡೆಗೂ ಗಮನ ಹರಿಸಬೇಕಿದೆ. 18 ವರ್ಷಕ್ಕೆ ಪ್ರಬುದ್ಧತೆ ಗಳಿಸಬಹುದಾಗಿದ್ದರೂ, ಆ ವಯಸ್ಸಿನ ಪ್ರೀತಿಯ ಉದ್ವೇಗದಲ್ಲಿ ಮಕ್ಕಳು ದುಡುಕಿನ ನಿರ್ಧಾರ ತೆಗೆದುಕೊಳ್ಳಬಹುದು. ಹೆಣ್ಣಿನ ಅಥವಾ ಗಂಡಿನ ಪೋಷಕರ ಆಸ್ತಿಯ ಮೇಲೆ ಕಣ್ಣಿಟ್ಟು ದುರುದ್ದೇಶದಿಂದ ಈ ವಯಸ್ಸಿನ ತುಮುಲಗಳನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಯೂ ಇದೆ. ಮಸೂದೆಯಲ್ಲಿ ಪ್ರಸ್ತಾಪಿಸಿರುವ ಜಿಲ್ಲಾ ವಿಶೇಷ ಘಟಕದಲ್ಲಿ ಸೂಕ್ತ ಸಂಗಾತಿಯ ಆಯ್ಕೆ ಮಾಡಿಕೊಳ್ಳುವಲ್ಲಿ ವಿಫಲರಾಗುವ ಹದಿಹರೆಯದವರಿಗೆ ತಿಳಿವಳಿಕೆಯ ಜೊತೆಗೆ ಪೋಷಕರು ಅಜ್ಞಾನದಿಂದಾಗಿ ಅಥವಾ ನಿಂದಕರಿಂದಾಗಿ ಕುಗ್ಗಿಹೋಗಿದ್ದರೆ ಅವರಲ್ಲಿ ಧೈರ್ಯ, ಜಾಗೃತಿ ಉಂಟು ಮಾಡುವ ಕೆಲಸವನ್ನೂ ಮಾಡಬೇಕಿದೆ.

ಕೆ.ಎಂ. ನಾಗರಾಜು, ಮೈಸೂರು

ಬಿಗ್‌ಬಾಸ್: ಮಕ್ಕಳಿಗೆ ಜಗಳವೇ ರಂಜನೆ!

'ಬಿಗ್‌ಬಾಸ್' ಫಿನಾಲೆಯಲ್ಲಿ ನಿರೂಪಕ ಸುದೀಪ್ ಅವರು ಕೆಲವು ಪುಟಾಣಿಗಳನ್ನು ವೇದಿಕೆಗೆ ಕರೆದು ಮಾತಾಡಿಸಿದರು. ಈ ರಿಯಾಲಿಟಿ ಶೋ ಏಕಿಷ್ಟ ಎಂದು ಕೇಳಿದರು. ಆಘಾತಕಾರಿ ಸಂಗತಿ ಎಂದರೆ ಮಕ್ಕಳು, ಈ ಕಾರ್ಯಕ್ರಮದಲ್ಲಿ ನಡೆಯುವ ಜಗಳವೇ ನಮಗಿಷ್ಟ ಎಂದರು! ಜಗಳದಲ್ಲಿ ಆಡುವ ಅಣಿಮುತ್ತುಗಳನ್ನೂ ಉದುರಿಸಿದರು. ಮನರಂಜನೆ ಯಾವ ಮಟ್ಟಕ್ಕೆ ಬಂದಿದೆ? ಅದೂ ಪುಟ್ಟಮಕ್ಕಳ ಪಾಲಿಗೆ? ನಮ್ಮ ಮಟ್ಟಕ್ಕೆ ಸರಿಯಾಗಿ ಮನರಂಜನೆ ಕಾರ್ಯಕ್ರಮಗಳಿವೆಯೋ ಅಥವಾ ಮನರಂಜನೆ ಕೊಡುವವರ ಮಟ್ಟಕ್ಕೆ ನಾವಿದ್ದೇವೆಯೋ?

ಮಧುಸೂದನ್ ಬಿ.ಎಸ್., ಬೆಂಗಳೂರು

ಪಂಚಾಯಿತಿ ಚುನಾವಣೆ ವಿಳಂಬ ಬೇಡ

ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಚುನಾವಣೆಗೆ ಕೊನೆಗೂ ಕಾಲ ಕೂಡಿಬಂದಂತಿದೆ. ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು 'ಒಂದು ಗ್ರಾಮ ಒಂದು ಚುನಾವಣೆ' ಸೂತ್ರದಡಿ ಚುನಾವಣೆ ನಡೆಸಲು ತಯಾರಿ ನಡೆಸಿರುವುದಾಗಿ ಹೇಳಿದ್ದಾರೆ. ಈ ಮಾದರಿಯಲ್ಲಿ ಚುನಾವಣೆ ನಡೆದರೆ ಸಾರ್ವಜನಿಕ ಹಣ ಮತ್ತು ಸಮಯ ವ್ಯರ್ಥವಾಗದಂತೆ ತಡೆಯಬಹುದು.

ಮೂರು ಸ್ಥಳೀಯ ಸಂಸ್ಥೆಗಳಿಗೆ ಪ್ರತ್ಯೇಕವಾಗಿ ಚುನಾವಣೆ ನಡೆಸಿದರೆ ಒಂದೂವರೆ ವರ್ಷ ಚುನಾವಣಾ ಪ್ರಕ್ರಿಯೆಯಲ್ಲಿಯೇ ಕಳೆದುಹೋಗುತ್ತದೆ. ಇದರಿಂದ ಅಭಿವೃದ್ಧಿ ಕೆಲಸಗಳೇ ಆಗುವುದಿಲ್ಲ. ಸಕಾಲದಲ್ಲಿ ಚುನಾವಣೆ ನಡೆಸಲು ಸರ್ಕಾರ ಮುಂದಾಗಬೇಕು. ವಿಳಂಬ ಮಾಡಿದರೆ ಅಧಿಕಾರ ವಿಕೇಂದ್ರೀಕರಣದ ಆಶಯಕ್ಕೆ ಧಕ್ಕೆಯಾಗಲಿದೆ.

ನಾಗಾರ್ಜುನ ಹೊಸಮನಿ, ಕಲಬುರಗಿ

ಮಾದಕವಸ್ತು ಮಾರಾಟ: ಕಡಿವಾಣ ಹಾಕಿ

ಆಧುನಿಕ ಜಗತ್ತಿನಲ್ಲಿ ಸಮಾಜವನ್ನು ಗೆದ್ದಲಿನಂತೆ ತಿನ್ನುತ್ತಿರುವ ಬಹುದೊಡ್ಡ ಸಮಸ್ಯೆ ಮಾದಕ ವ್ಯಸನ. ದೇಶದ ಭವಿಷ್ಯವಾಗಬೇಕಾದ ಯುವಶಕ್ತಿ ಅಮಲಿಗೆ ಸಿಲುಕಿ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಇತ್ತೀಚಿನ ದಿನಗಳಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳಿಂದ ಹಿಡಿದು ಐ.ಟಿ ಉದ್ಯೋಗಿಗಳವರೆಗೆ ಈ ವಿಷಜಾಲ ಹಬ್ಬಿದೆ. ಮಾದಕ ವಸ್ತುಗಳ ಸೇವನೆಯು ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ವ್ಯಸನಿಗಳು ಖಿನ್ನತೆಯಿಂದ ಬಳಲಿ ಅಕಾಲಿಕ ಮರಣಕ್ಕೆ ತುತ್ತಾಗುವ ಸಂಭವ ಉಂಟು. ಇದರಿಂದ ಇಡೀ ಕುಟುಂಬ ಮಾನಸಿಕ ಯಾತನೆ ಅನುಭವಿಸಬೇಕಾಗುತ್ತದೆ. ಮಾದಕವಸ್ತುಗಳ ಜಾಲದ ವಿರುದ್ಧ ಪೊಲೀಸರು ಕಠಿಣ ಕ್ರಮ ಜರುಗಿಸಬೇಕಿದೆ.

ವಿನಾಯಕ ಡಿ.ಎಲ್., ಚಿತ್ರದುರ್ಗ

ನಾಟಕೋತ್ಸವ: ಸರ್ಕಾರದ ನಡೆ ಪ್ರಶ್ನಾರ್ಹ

ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರ 'ಕರ್ವಾಲೊ' ಕಾದಂಬರಿಯನ್ನು ನಾನು ನಾಟಕರೂಪಕ್ಕೆ ತಂದಿದ್ದು, ಆ ಕೃತಿ ಈವರೆಗೆ ನಾಲ್ಕು ಮುದ್ರಣ ಕಂಡಿದೆ. ಗಣರಾಜ್ಯೋತ್ಸವದ ಫಲಪುಷ್ಪ ಪ್ರದರ್ಶನದ ಅಂಗವಾಗಿ ತೋಟಗಾರಿಕೆ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ತೇಜಸ್ವಿ ಪ್ರತಿಷ್ಠಾನದಿಂದ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಭಾನುವಾರ ತೇಜಸ್ವಿ ನಾಟಕೋತ್ಸವ ನಡೆದಿದೆ. ನಾನು ಬರೆದ 'ಕರ್ವಾಲೊ' ನಾಟಕವೂ ಅಲ್ಲಿ ಪ್ರದರ್ಶನ ಕಂಡಿದೆ. ಆದರೆ, ಈ ಕುರಿತು ನನಗೆ ಮಾಹಿತಿಯಾಗಲಿ, ಆಹ್ವಾನವಾಗಲಿ ನೀಡಿಲ್ಲ. ಸರ್ಕಾರದ ಕಾರ್ಯಕ್ರಮದಲ್ಲಿ ಹೀಗೆ ಅಸಡ್ಡೆಯಿಂದ ನಡೆದುಕೊಳ್ಳುವುದು ಸರಿಯೆ? ಬಹುಶಃ ಇಂಥ ನಡವಳಿಕೆಯನ್ನು ಸ್ವತಃ ತೇಜಸ್ವಿಯವರೂ ಒಪ್ಪುತ್ತಿರಲಿಲ್ಲ.

ಅ.ನಾ. ರಾವ್ ಜಾದವ್, ಬೆಂಗಳೂರು

ಡೊನಾಲ್ಡ್ ಟ್ರಂಪ್‌ರ ಕುಚೋದ್ಯದ ನಡೆ

ಜಾಗತಿಕ ಮಟ್ಟದಲ್ಲಿ ಹಲವು ಯುದ್ಧಗಳನ್ನು ನಿಲ್ಲಿಸಿರುವ ತನಗೇ ನೊಬೆಲ್ ಶಾಂತಿ ಪುರಸ್ಕಾರ ನೀಡಬೇಕೆಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಲವತ್ತುಕೊಂಡಿದ್ದರು. ಆದರೆ, ನಾರ್ವೆಯ ನೊಬೆಲ್ ಸಮಿತಿಯು ವೆನೆಜುವೆಲಾದ ವಿಪಕ್ಷದ ನಾಯಕಿ ಮಾರಿಯಾ ಕೊರಿನಾ ಮಚಾದೊ ಅವರಿಗೆ ಶಾಂತಿ ಪುರಸ್ಕಾರ ನೀಡಿತು. ಈ ಹಿಂದೆ ಟ್ರಂಪ್ ಅವರು, ಮಾರಿಯಾ ಅವರನ್ನು ಹಿಗ್ಗಾಮುಗ್ಗ ಬೈದಿದ್ದರು. ಆದರೆ, ಆಕೆ ತಮಗೆ ಲಭಿಸಿದ ಪುರಸ್ಕಾರವನ್ನು ಟ್ರಂಪ್‌ಗೆ ಹಸ್ತಾಂತರಿಸಿರುವುದು ಬಾಲಿಶ ನಡೆ. ಇದು ಒಂದು ರೀತಿಯಲ್ಲಿ ಚಿಕ್ಕಮಕ್ಕಳು ಹಟ ಮಾಡಿದಾಗ ಅದು ಸುಲಭಕ್ಕೆ ಸಿಗದಿದ್ದರೆ ಅದರ ಬದಲಿಗೆ ಇನ್ನೇನನ್ನೋ ಕೊಟ್ಟು ಸಮಾಧಾನಪಡಿಸುವ ಹಾಗಿದೆ. ಮತ್ತೊಂದೆಡೆ, ಮರಿಯಾ ಅವರನ್ನು ಒಬ್ಬ ಅದ್ಭುತವಾದ ಮಹಿಳೆಯೆಂದು ಟ್ರಂಪ್ ಹೊಗಳಿರುವುದು ಕೂಡ ತಮಾಷೆಯಾಗಿದೆ. ಈ ಪ್ರಶಸ್ತಿ ಪ್ರಹಸನದಲ್ಲಿ ನೊಬೆಲ್ ಶಾಂತಿ ಪುರಸ್ಕಾರದ ಘನತೆಗೆ ಕುಂದುಬಂದಂತಾಗಿದೆ.

ರವಿಕಿರಣ್ ಶೇಖರ್, ಬೆಂಗಳೂರು

ಚುರುಮುರಿ



ಬಿಗ್‌ಬ್ಯಾಶ್ ಕಥೆ

• ಲಿಂಗರಾಜು ಡಿ.ಎಸ್.

ಈ ಸಾರಿ ಬಿಗ್‌ಬ್ಯಾಶ್ ಸೀಜನ್ನು ಅನಾಯಕತ್ವ ಹೆಂಗಿರತದೆ ಅಂತ ತೋರಿಸ್ತದೆ ಅಣ್ಣ. ನಾಕು ಜನ ಫೈನಲ್ಲಿಗೆ ಬಂದವ್ರೆ. ರಾಮಸಿದ್ದಯ್ಯ, ಕುಮಾರಶಿವ ಚೆನ್ನಾಗಿ ಆಡ್ತಾವ್ರೆ. ಇವರಿಗಿಂತಾ ಫ್ಯಾನುಗಳದ್ದೇ ಹವಾ ಜಾಸ್ತಿಯಾಗ್ಯದೆ. ಕಂಡುದ್ದು ಕಾಣುದ್ದನ್ನೆಲ್ಲಾ ತಾರಾಕ್ಯಂದು ಮಾತಾಡ್ತರೆ ಅಣ್ಣಾ. ಸಾವುಕಾರರು, ಪರಮಣ್ಣನೂ ಟವಲ್ ಹಾಕ್ಯವರೆ. ಇವರಿಬ್ಬರೂ ಜನಕ್ಕೆ 'ನಾವು ಆಟಕ್ಕುಂಟು ಲೆಕ್ಕಕ್ಕಿಲ್ಲ. ಆದರೂ ನಮಗೇ ವೋಟ್ ಮಾಡಿ, ಪ್ಲೀಸ್ ವೋಟ್ ಮಾಡಿ' ಅಂತ ಕೇಳಿಕ್ಯಂದ್ರಂತೆ ಅಣ್ಣಾ.

ಪೋಟಾಪೋಟಿ ತೇಜಿಯಾಯ್ತಿದ್ದಂಗೆ ರಾಮಸಿದ್ದಯ್ಯ, ಕುಮಾರಶಿವ ಅವರವರ ಹೆಸರುಬಲ ಹೇಳಿಕ್ಯಂದರು ಅಣ್ಣಾ.

ರಾಮಸಿದ್ದಯ್ಯ 'ನಾನು ಜನಕ್ಕೆ ಅವರದ್ದೇ ದುಡ್ಡಲ್ಲಿ ಅವರಿಗೇ ಗ್ಯಾರಂಟಿ ಕೊಟ್ಟುದನಿ. ಕೇರಳದಲ್ಲಿ ಆನೆ ತುಳಿದು ಸತ್ತೋರಿಗೆ ಹತ್ತು ಲಕ್ಸ, ಕೋಗಿಲುಗಳಿಗೆ ಫ್ಲಾಟು ಕೊಡ್ತಿವ್ನಿ. ಮೂಡಾಕ್ಕು ನನಗೂ ಏನೇನು ಸಂಬಂಜ ಇಲ್ಲ ಕನ್ರಿ. ನನಗೇ ಮಂಡಿನೋವದೆ. ಒಂದ್ಸಾರಿ ಚೇರಲ್ಲಿ ಕೂತ್ರೆ ಏಳಕ್ಕಾಗಿಕ್ಲಿಲ್ಲ. ನನಗೇ ವೋಟಾಕಿ ಪ್ಲೀಸ್' ಅಂತ ಕೇಳಿಕ್ಯಂದರು ಅಣ್ಣಾ.

ಕುಮಾರಶಿವ 'ನಾನು ನಿಷ್ಠೂರಾದ್ರೂ ಪರವಾಗಿಲ್ಲ. ಬೆಂಗಳೂರು ಜನಕ್ಕೆ ಒಳ್ಳೇದಾಗಬಕು, ಸುರಂಗ ಮಾಡಬಕು. ನೀರು, ಕರಂಟು ರೇಟಿಗೆ ಜನ ಭಯ ಬೀಳಬಕು. ನಾನೇ ಬಾಸ್ ಆಗಬಕು ಅಂತ ಎಷ್ಟು ತ್ಯಾಗ ಮಾಡಿ ಜೀವ ತೇದುದನಿ ಗೊತ್ತೇನ್ರಿ. ನೀವೆಲ್ಲಾ ನನಗೇ ವೋಟಾಕಿ ಗೆಲ್ಸಿ ಅಂತ ಪ್ರಾರ್ಥನೆ ಮಾಡ್ತೀನಿ' ಅಂದೋರು ಕಣ್ಣಗೆ ನೀರಾಕ್ಯಂದ್ರು ಅಣ್ಣಾ.

ರಾಮಸಿದ್ದಯ್ಯ, ಕುಮಾರಶಿವರಿಗೇ ಜಾಸ್ತಿ ವೋಟು ಬಂದವಂತೆ. 'ಊರೂರೆಲ್ಲಾ ರಿಪಬ್ಲಿಕ್ಯಾಗ್ಯವೆ. ಬಿಗ್‌ಬ್ಯಾಶಲ್ಲಿ ನಮಗೆ ಯಾರು, ಎಲ್ಲಿ–ಯಾವಾಗ ಕಡೆಗೂಟ ಇಕ್ತರೋ ಕಾಣ್ನಲ್ಲಾ' ಅಂತ ಜನ ಯದಾರು ಬೀಳ್ತಾವ್ರೆ ಅಣ್ಣಾ.

ಬಿಗ್‌ಬ್ಯಾಶ್ ಇಚಾರ ಗಾಳಿಗಂಟ್ಲು ಆಯ್ತಿರದು ಕಂಡು ದೊಡ್ಡೋರು ನಾಕೂ ಜನಕ್ಕೆ 'ನಿಮಿಗೆ ಯೇಗ–ಯೇಗ್ತೆ ಇದ್ರೆ ಬಾಸ್ ಆಯ್ತಿರ. ನೀವೀಗ ಮನೆಗೋಗಿ ನಾಳಾಕೆ ದಿಲ್ಲಿಗೆ ಬಲ್ರಿ' ಅಂತಂದು ಪಾರಿನ್ನಿಗೆ ಕಡೆದೋದ್ರಂತೆ ಅಣ್ಣಾ.

ಸಂಗತ

'ನೈಟ್‌ಹುಡ್ ಪೆಂಗ್ವಿನ್'ಗೆ ಸೇನಾ ಸಮ್ಮಾನ

ಹಿಮಖಂಡಗಳ ಕರಗುವಿಕೆಯಿಂದ ಪೆಂಗ್ವಿನ್‌ಗಳ ಆವಾಸಸ್ಥಾನಕ್ಕೆ ಧಕ್ಕೆಯಾಗಿದೆ. ಆದರೆ, ಇಲ್ಲೊಂದು ಪೆಂಗ್ವಿನ್ ಯಾವ ಆತಂಕವಿಲ್ಲದೆ 'ಅಧಿಕಾರ' ಅನುಭವಿಸುತ್ತಿದೆ.

• ಗುರುರಾಜ್ ಎಸ್. ದಾವಣಗೆರೆ

ಅದು ಸ್ಕಾಟ್ಲೆಂಡ್‌ನ ಎಡಿನ್‌ಬರ್ಗ್ ಮೃಗಾಲಯ. 160ಕ್ಕೂ ಹೆಚ್ಚು ನಾರ್ವೇಜಿಯನ್ ರಾಯಲ್ ಗಾರ್ಡ್ಸ್ ಸೈನಿಕರು ಸಾಲಾಗಿ ನಿಂತಿದ್ದಾರೆ. ಎಲ್ಲರ ಕಣ್ಣುಗಳು ಒಂದೇ ದಿಕ್ಕಿನತ್ತ ನೆಟ್ಟಿವೆ. ಅಷ್ಟರಲ್ಲಿ ಒಬ್ಬ 'ಅಧಿಕಾರಿ' ಅತ್ಯಂತ ಗಾಂಭೀರ್ಯದಿಂದ ಹೆಜ್ಜೆ ಹಾಕುತ್ತಾ ಬರುತ್ತಾನೆ. ಕಪ್ಪು–ಬಿಳಿ ಬಣ್ಣದ ಕೋಟು ಧರಿಸಿದಂತೆ ಕಾಣುವ ಆ ಅಧಿಕಾರಿ, ಸೈನಿಕರ ಸಾಲನ್ನು ತಪಾಸಣೆ ಮಾಡುತ್ತಾ ಮುಂದೆ ಸಾಗುತ್ತಾನೆ. ಸೈನಿಕರ ಗೌರವವಂದನೆ ಸ್ವೀಕರಿಸುತ್ತಾನೆ. ಆ ಅಧಿಕಾರಿ ಮನುಷ್ಯನಲ್ಲ, ಪೆಂಗ್ವಿನ್!

ಸರ್ ನಿಲ್ಸ್ ಓಲಾವ್ III ಹೆಸರಿನ ಈ ಪೆಂಗ್ವಿನ್, 'ನೈಟ್‌ಹುಡ್' ಪದವಿ ಪಡೆದ ಹಾಗೂ 'ಮೇಜರ್ ಸ್ಥಾನಕ್ಕೆ ಸಂದಿರುವ ವಿಶ್ವದ ಏಕೈಕ ಹಕ್ಕಿ. ಇದರ ಬೆಳವಣಿಗೆಯನ್ನು ಶೂನ್ಯದಿಂದ ಶಿಖರದವರೆಗಿನ ಅಸಾಮಾನ್ಯ ಪಯಣ ಎಂದು ಕೆಲವರು ವರ್ಣಿಸುತ್ತಾರೆ. 'ಈ ಭಾಗ್ಯ ನಮಗಿಲ್ಲವಲ್ಲ' ಎಂದು ಸೈನಿಕರು ಕರುಬುತ್ತಾರೆ. ಹಕ್ಕಿಯೊಂದಕ್ಕೆ ಅಸಾಮಾನ್ಯ ಗೌರವ ನೀಡಿರುವ ದೇಶ ನಮ್ಮದು ಎಂದು ದೇಶದ ಜನ ಬೀಗುತ್ತಾರೆ.

1972ರಲ್ಲಿ ನಾರ್ವೆಯ ಸೈನ್ಯವು ತನ್ನ ಮಹಾರಾಜ ಓಲಾವ್ ಅವರೊಂದಿಗೆ ಎಡಿನ್‌ಬರ್ಗ್ ಮೃಗಾಲಯಕ್ಕೆ ಭೇಟಿ ನೀಡಿತ್ತು. ಅಂದು ಸೇನಾಧಿಕಾರಿ ಮೇಜರ್ ನಿಲ್ಸ್ ಎಗೆಲಿಯನ್ ಮೃಗಾಲಯದ ಒಂದು ಕಿಂಗ್ ಪೆಂಗ್ವಿನ್ ಅನ್ನು ದತ್ತು ಪಡೆದು, ಸೈನ್ಯದ ಲಾಂಛನವನ್ನಾಗಿ ಮಾಡಿಕೊಂಡರು. ನಾರ್ವೆಯ ಸೈನ್ಯದ ಮೇಜರ್ ನಿಲ್ಸ್ ಮತ್ತು ರಾಜ ಓಲಾವ್, ಇಬ್ಬರ ಹೆಸರನ್ನೂ ಸೇರಿಸಿ ಪೆಂಗ್ವಿನ್‌ಗೆ 'ನಿಲ್ಸ್ ಓಲಾವ್' ಎಂದು ಹೆಸರಿಡಲಾಯಿತು. ಅಂದಿನಿಂದ ಇಂದಿನವರೆಗೆ ಈ ಪೆಂಗ್ವಿನ್ ಮತ್ತದರ ಸಂತತಿಯು ಸಾಧಿಸಿದ ಪ್ರಗತಿ ಊಹೆಗೂ ಮೀರಿದ್ದಾಗಿದೆ.

ಈಗ ನಾರ್ವೆಯ ಜನ ಗೌರವಿಸುತ್ತಿರುವುದು ಸರ್ ನಿಲ್ಸ್ ಓಲಾವ್ III ಅವರನ್ನು. ಅಂದರೆ ಮೂರನೆಯ ತಲೆಮಾರಿನ ಪ್ರತಿನಿಧಿಯನ್ನು. 1972ರಲ್ಲಿ ಮೊದಲ ಬಾರಿಗೆ ಪೆಂಗ್ವಿನ್‌ಗೆ ಸೈನಿಕ ಮರ್ಯಾದೆ ನೀಡಲಾಯಿತು. ಅಂದು ಪ್ರಾರಂಭವಾಗಿ ಇಂದಿನವರೆಗೆ ಮೂರು ಪೆಂಗ್ವಿನ್‌ಗಳು ಈ ಹೆಸರನ್ನು ಹೊತ್ತು ತಲೆಮಾರುಗಳವರೆಗೆ ಈ ಸಂಪ್ರದಾಯವನ್ನು ಜೀವಂತವಾಗಿರಿಸಿವೆ. ಮೊದಲನೆಯ ನಿಲ್ಸ್ ಓಲಾವ್ ಮರಣಹೊಂದಿದಾಗ, ಪದವಿ ಮತ್ತು ಗೌರವ ಅದರ ಉತ್ತರಾಧಿಕಾರಿಗೆ ವರ್ಗಾವಣೆಯಾದವು. ಇಂದು ಈ ಹಕ್ಕಿಯು ನಾರ್ವೇಜಿಯನ್ ಸೈನ್ಯದ ಅನೇಕ ಮಾನವ ಸೈನಿಕರಿಗಿಂತಲೂ ಉನ್ನತ ಪದವಿಯಲ್ಲಿದೆ.

ಸರ್ ನಿಲ್ಸ್ ಓಲಾವ್ ಜೀವನವೇ ಒಂದು ಭೌಗೋಳಿಕ ವಿಸ್ಮಯದಂತಿದೆ. ಇದರ ಪೂರ್ವಜರು ಇದ್ದದ್ದು ಅಂಟಾರ್ಕ್ಟಿಕಾದ ಶೀತಲ ದ್ವೀಪಗಳಲ್ಲಿ. ಓಲಾವ್ ಹುಟ್ಟಿದ್ದು ಸ್ಕಾಟ್ಲೆಂಡ್‌ನ ಎಡಿನ್‌ಬರ್ಗ್‌ನಲ್ಲಿ. ಜೀವಮಾನವಿಡೀ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿರುವುದು ನಾರ್ವೆ ದೇಶದ ಸೈನ್ಯಕ್ಕಾಗಿ! ಇದರ ಪೂರ್ಣ ಹೆಸರಿನಲ್ಲಿ 'ಬ್ಯಾರನ್ ಆಫ್ ದಿ ಬೌವೆಟ್ ಐಲ್ಯಾಂಡ್ಸ್' ಎಂಬ ಬಿರುದು ಸೇರಿದೆ. ಈ ಬೌವೆಟ್ ದ್ವೀಪವು ದಕ್ಷಿಣ ಅಟ್ಲಾಂಟಿಕ್ ಸಾಗರದಲ್ಲಿರುವ ನಾರ್ವೆಗೆ ಸೇರಿದ ಒಂದು ನಿರ್ಜನ ದ್ವೀಪವಾಗಿದೆ.

ಈ 'ಅಧಿಕಾರಿ' ಹಕ್ಕಿಯ ವಾಸ ಮೃಗಾಲಯದಲ್ಲಿ. ನಾರ್ವೆಗೆ ಬಂದ ಹತ್ತು ವರ್ಷಗಳ ನಂತರ 1982ರಲ್ಲಿ ಕಾರ್ಪೊರಲ್ ಆಗಿ ನೇಮಕ ಮಾಡಲಾಯಿತು. ನಂತರ 2008ರಲ್ಲಿ ನಾರ್ವೆಯ ರಾಜರಿಂದ 'ನೈಟ್‌ಹುಡ್' ಗೌರವ ಪಡೆದ ವಿಶ್ವದ ಮೊದಲ ಹಕ್ಕಿ ಎನಿಸಿಕೊಂಡಿತು. ಎಂಟು ವರ್ಷಗಳ ನಂತರ ಬ್ರಿಗೇಡಿಯರ್ ಆಗಿ, 2023ರಲ್ಲಿ ಸೈನ್ಯದ ಅತ್ಯುನ್ನತ ಪದವಿಗಳಲ್ಲಿ ಒಂದಾದ 'ಮೇಜರ್ ಜನರಲ್' ಆಗಿ ಪದೋನ್ನತಿ ಪಡೆಯಿತು.

ಓಲಾವ್ ಹೆಸರಿಗಷ್ಟೇ ಅಧಿಕಾರಿಯಲ್ಲ. ನಾರ್ವೆಯ ಸೈನಿಕರು ಮೃಗಾಲಯಕ್ಕೆ ಬಂದಾಗ ಅದು ವರ್ತಿಸುವ ರೀತಿ ಸಿನಿಮಾದ ದೃಶ್ಯದಂತಿರುತ್ತದೆ. ಕೆಂಪು ಹಾಸಿನ ಮೇಲೆ ನಡೆಯುವಾಗ ಮೃಗಾಲಯದ ಇತರ ಪೆಂಗ್ವಿನ್‌ಗಳಂತೆ ಅತ್ತಿತ್ತ ಓಡುವುದಿಲ್ಲ. ಬದಲಾಗಿ, ತಲೆ ಎತ್ತಿ ಪ್ರತಿ ಸೈನಿಕನ ಮುಖವನ್ನೊಮ್ಮೆ ದಿಟ್ಟಿಸಿ ನೋಡುತ್ತದೆ. ಇದನ್ನು ಸೈನಿಕರು 'ಸೇನಾ ತಪಾಸಣೆ' ಎಂದೇ ಕರೆಯುತ್ತಾರೆ.

ನಿಲ್ಸ್ ಓಲಾವ್ ಸೈನಿಕರ ಸಮವಸ್ತ್ರ ಮತ್ತು ಬ್ಯಾಂಡ್‌ನ ಶಬ್ದವನ್ನು ತಕ್ಷಣವೇ ಗುರುತಿಸುತ್ತದೆ. ಈ ಪೆಂಗ್ವಿನ್ ಸ್ಕಾಟ್ಲೆಂಡ್ ಮತ್ತು ನಾರ್ವೆ ನಡುವಿನ ಅನ್ಯೋನ್ಯ ರಾಜತಾಂತ್ರಿಕ ಬಾಂಧವ್ಯದ ಜೀವಂತ ಸಾಕ್ಷಿಯಾಗಿದೆ. ನಾರ್ವೆಯ ಸೈನಿಕರು ಪ್ರತಿ ವರ್ಷವೂ ನಿಲ್ಸ್‌ಗೆ ಕ್ರಿಸ್‌ಮಸ್ ಕಾರ್ಡ್‌ಗಳನ್ನು ಮತ್ತು ತಾಜಾ ಮೀನುಗಳನ್ನು ಉಡುಗೊರೆಯಾಗಿ ಕಳುಹಿಸುತ್ತಾರೆ. ಎತ್ತರದ ಹಿಮದ ಬೆಟ್ಟಗಳ ಮೇಲೆ ರಾಜನಂತೆ ಮೆರೆಯಬೇಕಿದ್ದ ಈ ಕಿಂಗ್ ಪೆಂಗ್ವಿನ್, ಪ್ರಸ್ತುತ ಪ್ರಕೃತಿ ಮತ್ತು ಮಾನವ ಸಂಸ್ಕೃತಿಯ ಅದ್ಭುತ ಸಮ್ಮಿಲನದ ಸಂಕೇತ ಎನಿಸಿದೆ.

ಓಲಾವ್‌ಗೆ ಇರುವ ರಕ್ಷಣೆ ಇತರ ಪೆಂಗ್ವಿನ್‌ಗಳಿಗೆ ಇಲ್ಲ. ವಾಯುಗುಣ ಬದಲಾವಣೆಯಿಂದಾಗಿ ಹಿಮಖಂಡಗಳು ಕರಗುತ್ತಿವೆ. ಪ್ಲಾಸ್ಟಿಕ್ ಕಸ, ತೈಲ ಸೋರಿಕೆ, ಸಾಗರ ನೀರಿನ ಬಿಸಿಏರಿಕೆ, ಹೆಲಿಕಾಪ್ಟರ್ ಹಾರಾಟ, ಅತಿಯಾದ ಮೀನುಗಾರಿಕೆಯಿಂದ ಪೆಂಗ್ವಿನ್‌ಗಳ ಆವಾಸ ಹದಗೆಡುತ್ತಿದೆ. ಇರುವ 18 ಪ್ರಭೇದಗಳಲ್ಲಿ ಐದು ವಿನಾಶದ ಭೀತಿ ಎದುರಿಸುತ್ತಿವೆ ಎಂದು 'ಅಂತರರಾಷ್ಟ್ರೀಯ ಸಂರಕ್ಷಣಾ ಒಕ್ಕೂಟ' ಹೇಳಿದೆ. ಭೂಮಿಯ ಕ್ಷೇಮಕ್ಕಾಗಿ ಪೆಂಗ್ವಿನ್‌ಗಳು ಉಳಿಯಲೇಬೇಕಿದೆ.

'ವಿಶ್ವ ಪೆಂಗ್ವಿನ್ ದಿನಾಚರಣೆ' (ಜ. 20) ಸಂದರ್ಭದಲ್ಲಿ ಓಲಾವ್ ಬಗ್ಗೆ ಹೆಮ್ಮೆಪಡುತ್ತಾ, ಪೆಂಗ್ವಿನ್‌ಗಳ ಯೋಗಕ್ಷೇಮದ ಬಗ್ಗೆ ಯೋಚಿಸಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತದ ಪ್ರಜಾಪ್ರಭುತ್ವದ ಸ್ಥಿರತೆಗೆ ಕಾರಣಗಳು

• ಕೆ.ಎನ್.ಹರಿಕುಮಾರ್

ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಭಾರತ ದೇಶವು ಪ್ರಜಾಪ್ರಭುತ್ವವಾಗಿ ರೂಪುಗೊಂಡ ಮೂಲಗಳನ್ನು– ಅದರ ಅಸ್ಮಿತೆ, ಅದರ ಒಗ್ಗಟ್ಟು, ಅದರ ಕಾರ್ಯಸೂಚಿ– ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧದ ಸ್ವಾತಂತ್ರ್ಯ ಹೋರಾಟದ ಸಂಕಷ್ಟಗಳನ್ನು ಪರಿಶೀಲನೆಗೆ ಒಳಪಡಿಸಬೇಕಿದೆ. ಭಾರತದ ಬಡತನ, ಭಾರತದ ಸಂಪತ್ತು ಬ್ರಿಟನ್‌ಗೆ ಹರಿದಿರುವುದು, ಬ್ರಿಟಿಷ್ ಕೈಗಾರಿಕೆಗಳ ಒಳಿತಿಗಾಗಿ ಭಾರತದ ಕೈಗಾರಿಕೀಕರಣಕ್ಕೆ ತಡೆ ಮತ್ತು ಒಟ್ಟಾರೆ ಆರ್ಥಿಕ ಹಿಂದುಳಿದಿರುವಿಕೆಗೆ ಆಗಿನ ಆಡಳಿತವೇ ಕಾರಣ ಎಂದು 19ನೇ ಶತಮಾನ ಮತ್ತು 20ನೇ ಶತಮಾನದ ಆರಂಭಿಕ ವರ್ಷಗಳಲ್ಲಿ ರಾಷ್ಟ್ರೀಯವಾದಿಗಳು ಹೇಳುತ್ತಿದ್ದರು. ಆರಂಭದಲ್ಲಿ ಬ್ರಿಟಿಷ್ ಆಳ್ವಿಕೆಯ ಚೌಕಟ್ಟಿನ ಒಳಗೆಯೇ ಪ್ರಜಾಸತ್ತಾತ್ಮಕ ಪ್ರಾತಿನಿಧ್ಯ ಸಂಸ್ಥೆಗಳ ಮೂಲಕ ತಮಗೆ ಪ್ರಾತಿನಿಧ್ಯ ಒದಗಿಸಬೇಕು ಎಂದು ಅವರು ಚರ್ಚಿಸಿದರು, ಮನವಿ ಸಲ್ಲಿಸಿದರು ಮತ್ತು ಚಳವಳಿಯನ್ನೂ ಮಾಡಿದರು. 1920ರ ದಶಕದ ನಂತರದಲ್ಲಿ ಈ ಚಳವಳಿಗೆ ಸಾಮೂಹಿಕ ಬೆಂಬಲ ಲಭ್ಯವಾಯಿತು ಮತ್ತು ಸಂಪೂರ್ಣ ಸ್ವಾತಂತ್ರ್ಯದ ಕ್ರಾಂತಿಕಾರಿ ಕಾರ್ಯಸೂಚಿಯೂ ಸಿಕ್ಕಿತು. ಹೋರಾಟದ ಯಶಸ್ಸಿಗೆ ರಾಷ್ಟ್ರೀಯ ಒಗ್ಗಟ್ಟು ಅಗತ್ಯ ಎಂದು ಕಂಡುಬಂದ ಕಾರಣ ಜಾತಿಗಳು, ವರ್ಗಗಳು, ಧರ್ಮಗಳು, ಬುಡಕಟ್ಟುಗಳು ಮುಂತಾದ ಎಲ್ಲ ಸಾಮಾಜಿಕ ಗುಂಪುಗಳನ್ನು ಸೇರಿಸಿಕೊಳ್ಳಲು ಚಳವಳಿ ಮುಂದಾಯಿತು. ಸ್ವಾತಂತ್ರ್ಯ ಬಂದ ಬಳಿಕ ರಾಷ್ಟ್ರೀಯ ನಾಯಕರು, ಅವರ ಸಿದ್ಧಾಂತ, ಪದ್ಧತಿಗಳು ಮತ್ತು ಕಾರ್ಯಸೂಚಿಯೇ ಸಮಾಜದಲ್ಲಿ ಪ್ರಾಬಲ್ಯ ಪಡೆಯಿತು. ಅವರೇ ಮುಖ್ಯವಾಹಿನಿಯಾದರು ಮತ್ತು ಸಮಾಜದ ವಿವೇಕವಾದರು. ಅವರಿಗೆ ಅಪಾರವಾದ ಜನಬೆಂಬಲ ಇತ್ತು ಮತ್ತು ಜನರು ಅವರ ಮೇಲೆ ಅಷ್ಟೇ ವಿಶ್ವಾಸವನ್ನೂ ಇರಿಸಿದ್ದರು. ಸಂವಿಧಾನದಲ್ಲಿರುವ ಉದಾರವಾದಿ ಸಾಮಾಜಿಕ–ಪ್ರಜಾಸತ್ತಾತ್ಮಕ ಮುನ್ನೋಟ, ಅದರ ಸಂಸ್ಥೆಗಳು ಮತ್ತು ಪ್ರಕ್ರಿಯೆಗಳು ಮತ್ತು ಸರ್ಕಾರದ ನೀತಿಗಳು ಮತ್ತು ಕ್ರಿಯೆಗಳೆಲ್ಲವೂ ಜಾರಿಗೆ ಬಂದವು. ಸಾರ್ವಜನಿಕ ಅಭಿಮತ ಮತ್ತು ನಾಗರಿಕ ಸಮಾಜಕ್ಕೆ ಅವರ ಸಿದ್ಧಾಂತವೇ ನೆಲಗಟ್ಟಾಯಿತು.

ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಯ ಮುನ್ನೋಟವನ್ನು ಮುಖ್ಯ ಭೂಮಿಕೆಯಾಗಿ ಇರಿಸಿಕೊಂಡದ್ದು ಮತ್ತು ಚುನಾವಣಾ ಪ್ರಚಾರದ ಘೋಷವಾಕ್ಯವಾಗಿ ವಿಕಾಸ ಅಥವಾ ಅಭಿವೃದ್ಧಿ, ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್, ಅಚ್ಛೇದಿನ್ ಅಥವಾ ಸಮೃದ್ಧಿಯನ್ನು ಇರಿಸಿಕೊಂಡದ್ದೇ 2014ರ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿ ಅವರ ಅದ್ಭುತ ಗೆಲುವಿನ ಮುಖ್ಯ ಕಾರಣವಾಗಿತ್ತು. ಅಂದರೆ, ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ರಾಷ್ಟ್ರೀಯ ನಾಯಕರ ವೇಷವನ್ನು ಮೋದಿ ಅವರು ಧರಿಸಿದರು. ಹೊಸ ಕಾರ್ಯಸೂಚಿಯನ್ನು ಬಿಜೆಪಿ ಅಳವಡಿಸಿಕೊಳ್ಳುವಂತೆ ಮಾಡುವುದಕ್ಕಾಗಿ ಮೋದಿ ಅವರು ಆವರೆಗೆ ಬಿಜೆಪಿಯ ಕಾರ್ಯಸೂಚಿಯ ಮೂರು ಮುಖ್ಯ ಸ್ತಂಭಗಳಾಗಿದ್ದ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ, ಜಮ್ಮು–ಕಾಶ್ಮೀರಕ್ಕೆ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನ ರದ್ದತಿ ಮತ್ತು ಏಕರೂಪ ನಾಗರಿಕ ಸಂಹಿತೆಯನ್ನು ಹಿಂದಕ್ಕೆ ಸರಿಸುವುದಕ್ಕಾಗಿ ಹಿರಿಯ ನಾಯಕರ ಜೊತೆ ಹೋರಾಡಬೇಕಿತ್ತು. ಈವರೆಗೂ ಕೇಂದ್ರ ಮತ್ತು ರಾಜ್ಯಗಳ ಬಿಜೆಪಿ ಸರ್ಕಾರಗಳು ಉತ್ತಮ ಆಡಳಿತ ಮತ್ತು ಅಭಿವೃದ್ಧಿಯ ಒಟ್ಟಾರೆ ಭರವಸೆ ನೀಡಿ, ತಮ್ಮ ಹಿಂದಿನ ಹಿಂದುತ್ವವಾದಿ ಕಾರ್ಯಸೂಚಿಯನ್ನು ಜಾರಿಗೊಳಿಸಿವೆ. ಬಿಹಾರ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ಈ ಘೋಷಣೆಗಳ ಅಡಿಯಲ್ಲಿಯೇ ಎನ್‌ಡಿಎ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದ್ದರು ಎಂದು ವರದಿಯಾಗಿದೆ.

ಅಧಿಕಾರದಲ್ಲಿರುವ ಮೋದಿ ಅವರು ದೇಶೀಯ ಮತ್ತು ಅಂತರರಾಷ್ಟ್ರೀಯ ಎರಡರಲ್ಲೂ ಈ ಹಿಂದಿನ ಸರ್ಕಾರಗಳ ಕಾರ್ಯಸೂಚಿಯನ್ನು ಮುಂದಕ್ಕೆ ಒಯ್ಯುವುದನ್ನು ಮುಂದುವರಿಸಿದ್ದಾರೆ. ಆರ್ಥಿಕ ಕ್ಷೇತ್ರದಲ್ಲಿ, 1991ರ ಸುಧಾರಣೆಗಳ ಮೂಲಕ ಪರಿಷ್ಕೃತಗೊಂಡ ರಾಷ್ಟ್ರೀಯವಾದಿ ಕಾರ್ಯಸೂಚಿಯ ನೆಹರೂ ವ್ಯಾಖ್ಯಾನವು ಬಹುಪಾಲು ಈಗಲೂ ಮುಂದುವರಿದಿದೆ. ಈ ಸುಧಾರಣೆ ಖಾಸಗಿ ವಲಯದತ್ತ ಹೆಚ್ಚು ವಾಲಿಕೊಂಡಿದೆ, ಸ್ವಾವಲಂಬನೆಯ ಮೇಲಿನ ಒತ್ತನ್ನು ಕಡಿಮೆ ಮಾಡಿದೆ, ವಿದೇಶಿ

> ಮೋದಿ ಅವರು ಪ್ರಧಾನಿ ಹುದ್ದೆಗೇರಿದ ಆರಂಭದ ದಿನಗಳಲ್ಲಿ, ಇನ್ನೊಂದು ತುರ್ತುಸ್ಥಿತಿ ಬರುವುದೇ ಇಲ್ಲ ಎಂದು ತಾವು ಭಾವಿಸುವುದಿಲ್ಲ, ಏಕೆಂದರೆ, ಅಧಿಕಾರದಲ್ಲಿ ಇರುವವರಿಗೆ (ಅಂದರೆ, ಮೋದಿ) ಪ್ರಜಾಪ್ರಭುತ್ವದ ಮೇಲೆ ಬದ್ಧತೆಯ ಕೊರತೆ ಇದೆ ಎಂದು ಬಿಜೆಪಿಯ ಅತ್ಯಂತ ಹಿರಿಯ ನಾಯಕರಲ್ಲಿ ಒಬ್ಬರಾದ ಎಲ್.ಕೆ. ಅಡ್ವಾಣಿ ಹೇಳಿದ್ದರು. ಆದರೆ ಆ ರೀತಿಯಲ್ಲಿ ಏನೂ ಆಗಿಲ್ಲ. ಇದು ಈಗ ಎಂತಹ ಅದ್ಭುತ ಬದಲಾವಣೆ. ಆದರೆ, ಪ್ರಶ್ನೆ ಇರುವುದು ಇದಕ್ಕೆ ಕಾರಣಗಳು ಏನು?

ಬಂಡವಾಳ ಮತ್ತು ವ್ಯಾಪಾರದ ಮೇಲಿನ ಅವಲಂಬನೆ ಹೆಚ್ಚಿಸಿದೆ, ಶ್ರೀಮಂತರ ಆದಾಯ ಮತ್ತು ಆಸ್ತಿಯನ್ನು ಕಡಿಮೆಗೊಳಿಸಿ ಆರ್ಥಿಕ ಅಸಮಾನತೆಯನ್ನು ಕಡಿಮೆಗೊಳಿಸುವ ನೀತಿಗಳನ್ನು ಕೈಬಿಟ್ಟಿದೆ. ಪ್ರಧಾನಿಗಳ ಪೈಕಿ ಮೋದಿ ಅವರೇ ಹೆಚ್ಚು ವ್ಯಾಪಾರಸ್ನೇಹಿ ಎಂದು ಆರಂಭದಲ್ಲಿ ಪರಿಗಣಿಸಲಾಗಿತ್ತಾದರೂ ಕ್ರಮೇಣ ಅವರು ನೆಹರೂ ನೀತಿಗಳ ಕಡೆಗೆ ಸಾಗಿದ್ದಾರೆ. ಸರ್ಕಾರದ ಹಸ್ತಕ್ಷೇಪ ಹೆಚ್ಚಳ, ಸಾರ್ವಜನಿಕ ರಂಗ ಬಲಪಡಿಸುವಿಕೆ, ಮೂಲ ಸೌಕರ್ಯಕ್ಕೆ ಭಾರಿ ಹೂಡಿಕೆ, ಸ್ವಾವಲಂಬನೆಗೆ ಒತ್ತು ಮತ್ತು ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ವೆಚ್ಚ ಇವೇ ನೆಹರೂ ನೀತಿಯಾಗಿದ್ದವು. ವಾಜಪೇಯಿ ಸರ್ಕಾರದ ಅವಧಿಯಲ್ಲಿ ಪ್ರತಿಷ್ಠಿತ ಅರುಣ್ ಶೌರಿ ಸಚಿವರಾಗಿದ್ದ ‘ಹೂಡಿಕೆ ಹಿಂದೆಗೆತ’ ಎಂಬ ಪ್ರತ್ಯೇಕ ಸಚಿವಾಲಯದ ಹೆಸರೇ ಈಗ ಕೇಳಿ ಬರುತ್ತಿಲ್ಲ. ಈ ಹಿಂದಿನಂತೆಯೇ ಆದ್ಯತೆಗಳ ಪಟ್ಟಿಯಲ್ಲಿ ಕೃಷಿ ಕೆಳಭಾಗದಲ್ಲಿಯೇ ಇದೆ. ಆದರೆ, ರಾಜಕೀಯ ಕ್ಷೇತ್ರದಲ್ಲಿ ರೈತರ ಶಕ್ತಿಯಿಂದಾಗಿ ಭೂಸ್ವಾಧೀನ ಕಾನೂನಿಗೆ ಮಾಡಿದ ತಿದ್ದುಪಡಿಗಳು ಮತ್ತು ಕೃಷಿ ಸುಧಾರಣಾ ಕಾಯ್ದೆಗಳನ್ನು ಕೈಬಿಡಬೇಕಾಯಿತು. ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುತ್ತದೆ ಎಂದು ವ್ಯಾಖ್ಯಾನಿಸಲಾಗುವ ಸಮಾಜವಾದವು 1991ರ ಸುಧಾಣೆಗಳ ನಂತರ ಕಾರ್ಯಸೂಚಿಯಿಂದ ಕಣ್ಮರೆಯಾಗಿದೆ.

ಸಾಮಾಜಿಕ ಅಭಿವೃದ್ಧಿಗೆ ಸಂಬಂಧಿಸಿ, ಜನರಿಗೆ ನೇರವಾಗಿ ಸೇವೆಗಳು/ಸೌಲಭ್ಯಗಳನ್ನು ನೀಡುವುದನ್ನು ಮೋದಿ ಅವರು ‘ರೇವ್ಡಿ’ ಎಂದು ಲೇವಡಿ ಮಾಡಿದ್ದರು; ಆದರೆ, ಚುನಾವಣಾ ಪೈಪೋಟಿಯ ಮುಂದೆ ಮೋದಿ ಅವರು ಮಣಿಯಬೇಕಾಯಿತು. ಕೇಂದ್ರ ಮತ್ತು ರಾಜ್ಯಗಳ ಎನ್‌ಡಿಎ ಮತ್ತು ಬಿಜೆಪಿ ಸರ್ಕಾರಗಳು ಈ ಉಚಿತ ಕೊಡುಗೆಗಳನ್ನು ನೀಡುವುದರಲ್ಲಿ ತಮ್ಮ ಪ್ರತಿಸ್ಪರ್ಧಿ ಪಕ್ಷಗಳನ್ನು ಮೀರಿಸಿವೆ. ಆರ್ಥಿಕ ಪ್ರಗತಿ ಮತ್ತು ಅದರಿಂದಾದ ಆದಾಯ ಹೆಚ್ಚಳದಿಂದ ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚು ಅನುದಾನ ನೀಡಲು ಸಾಧ್ಯವಾದುದರ ಪರಿಣಾಮವಾಗಿ ಬಿಜೆಪಿ ಸರ್ಕಾರಗಳು ಮತ್ತು ಅದರ ಪ್ರತಿಸ್ಪರ್ಧಿ ಪಕ್ಷಗಳ ಸರ್ಕಾರಗಳು ಆಡಳಿತ ಪರ ಅಲೆಯ ಪ್ರಯೋಜನವನ್ನು ಇತ್ತೀಚಿನ ದಶಕಗಳಲ್ಲಿ ಪಡೆದಿವೆ. ಜಾತಿ ಆಧಾರಿತ ಮೀಸಲಾತಿಗೆ ಬಿಜೆಪಿ–ಆರ್‌ಎಸ್‌ಎಸ್ ಬೆಂಬಲ ನೀಡಲು ಚುನಾವಣಾ ಪರಿಗಣನೆಗಳೂ ಕಾರಣ. ಜಾತಿ ಸಮೀಕ್ಷೆ ಮತ್ತು ಜನಗಣತಿಯಲ್ಲಿ ಜಾತಿ ಉಲ್ಲೇಖದ ವಿಚಾರದಲ್ಲಿಯೂ ಮೋದಿ ಅವರು ಇತ್ತೀಚೆಗೆ ತಮ್ಮ ನಿಲುವನ್ನು ತದ್ವಿರುದ್ಧವಾಗಿ ಬದಲಾಯಿಸಿಕೊಂಡರು. ಕೆಲವು ವಿಚಾರಗಳಲ್ಲಿ ಮೋದಿ ಅವರು ಬಿಜೆಪಿ–ಆರ್‌ಎಸ್‌ಎಸ್ ಕಾರ್ಯಸೂಚಿಯನ್ನು ಮುನ್ನೆಲೆಗೆ ತಂದು ಜಾತಿ ಆಧಾರಿತ ಮಾನದಂಡವನ್ನು ನಿರ್ಲಕ್ಷಿಸಿದ್ದಾರೆ. ಉದಾಹರಣೆಗೆ, ಪ್ರಬಲ ಜಾತಿಗಳಿಗೆ ಸೇರಿದ ಬಡವರಿಗೆ ಮೀಸಲಾತಿ ನೀಡಿಕೆಯಲ್ಲಿ ಆರ್ಥಿಕ ಸ್ಥಿತಿಯ ಮಾನದಂಡದ ಬಳಕೆಯಾಗಿದೆ ಮತ್ತು ದೀರ್ಘಾವಧಿಯಲ್ಲಿ ಜಾತಿಯ ಮಾನದಂಡವನ್ನು ಇದು ಅಳಿಸಿ ಹಾಕಲೂಬಹುದು. ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿಯನ್ನು ಮೋದಿ ಬೆಂಬಲಿಸಿದ್ದಾರೆ. ಮೀಸಲಾತಿಯ ವ್ಯಾಪ್ತಿಯಲ್ಲಿ ಬರುವ ಸಮುದಾಯಗಳ ಒಗ್ಗಟ್ಟನ್ನು ಇದು ಒಡೆಯಬಹುದು ಮತ್ತು ಮೀಸಲಾತಿಯನ್ನೇ ದುರ್ಬಲಗೊಳಿಸಬಹುದು ಎಂಬುದು ಇದಕ್ಕೆ ಕಾರಣವಾಗಿರಬಹುದು. ಚುನಾವಣಾ ಫಲಿತಾಂಶ ನಿರ್ಧರಿಸುವಲ್ಲಿ ಮಹಿಳೆಯು ವಿಶಿಷ್ಟ ಮತ್ತು ಪ್ರಭಾವಿ ಘಟಕವಾಗಿ ಹೊರಹೊಮ್ಮಿರುವುದರಿಂದ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವುದಕ್ಕಾಗಿ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಮುನ್ನೆಲೆಗೆ ತಂದು ಮೋದಿ ಅವರು ಅದನ್ನು ಅಂಗೀಕರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಇದರ ಅನುಷ್ಠಾನವನ್ನು ಹಲವು ವರ್ಷಗಳಿಗೆ ಯಾವುದೇ ಕಾರಣ ಕೊಡದೆ ಮುಂದೂಡಲಾಗಿದ್ದರೂ ಸುದೀರ್ಘ ವಿಳಂಬದ ಬಳಿಕ ಅದು ಕಾಯ್ದೆಯಾಗಿ ಅಂಗೀಕಾರಗೊಂಡಿದೆ.

ಭಾಗ 2

ವಿದೇಶಾಂಗ ನೀತಿಗೆ ಸಂಬಂಧಿಸಿ, ಯಾವುದೇ ಮೈತ್ರಿಕೂಟ ಅಥವಾ ಗುಂಪು ಸೇರದೇ ಇರುವುದರ ಮೂಲ ಇರುವುದು ಜವಾಹರಲಾಲ್ ನೆಹರೂ ಅವರಲ್ಲಿ ಮತ್ತು ಆಗಿನಿಂದಲೂ ಈ ನೀತಿಯು ದೃಢವಾಗಿ ನಿಂತಿದೆ. 1991ರ ನಂತರದಲ್ಲಿ, ಆರ್ಥಿಕ ಸುಧಾರಣೆಗಳಿಗೆ ಪೂರಕವಾಗಿ, ಪಶ್ಚಿಮದ ಶ್ರೀಮಂತ ದೇಶಗಳ ಜೊತೆಗೆ ಗುರುತಿಸುವಿಕೆಯತ್ತ ಪಲ್ಲಟ ಕಂಡು ಬಂದಿತಾದರೂ ‘ರಕ್ಷಣಾ ಸ್ವಾಯತ್ತೆ’ಯನ್ನು ಕಾಯ್ದುಕೊಳ್ಳಲಾಯಿತು. ಹಾಗಿದ್ದರೂ ದಕ್ಷಿಣ ಜಗತ್ತಿನ ಬಡ ಮತ್ತು ಅಭಿವೃದ್ಧಿ ಹೊಂದಿಲ್ಲದ ದೇಶಗಳ ಜೊತೆಗಿನ ಒಗ್ಗಟ್ಟು ಮತ್ತು ಅಲಿಪ್ತ ಚಳವಳಿ, ಜಿ–7 ಮತ್ತು ನ್ಯೂ ಇಂಟರ್‌ನ್ಯಾಷನಲ್ ಎಕನಾಮಿಕ್ ಆರ್ಡರ್‌ನಂತಹ ಸಂಘಟನೆಗಳಲ್ಲಿ ವ್ಯಕ್ತಪಡಿಸಿದಂತಹ ನ್ಯಾಯಯುತ ಅಂತರರಾಷ್ಟ್ರೀಯ ವ್ಯವಸ್ಥೆಗಾಗಿರುವ ಶೋಧವನ್ನು ಕೈಬಿಡಲಾಯಿತು. ದೇಶೀಯವಾಗಿ ಆರ್ಥಿಕ ಅಸಮಾನತೆಯನ್ನು ಕಡಿಮೆಗೊಳಿಸುವ ನೀತಿ ಮತ್ತು ಸಮಾಜವಾದವನ್ನು ಕೈಬಿಟ್ಟಿರುವುದಕ್ಕೆ ಅನುಗುಣವಾಗಿ ಇದು ಇದೆ. ಆದರೆ, ಉಕ್ರೇನ್ ಮೇಲೆ ದಾಳಿ ನಡೆಸಿದ ಬಳಿಕ ರಷ್ಯಾದ ಸೊತ್ತುಗಳನ್ನು ಪಶ್ಚಿಮದ ದೇಶಗಳು ಜಪ್ತಿ ಮಾಡಿ, ಟ್ರಂಪ್ ಅವರು ಸುಂಕ ಹೇರಿಕೆಯನ್ನು ಜಾರಿಗೊಳಿಸಿದ ನಂತರದಲ್ಲಿ ಹೆಚ್ಚು ದೃಢವಾಗಿ ದಕ್ಷಿಣ ಜಗತ್ತಿನ ಜೊತೆಗಿನ ಒಗ್ಗಟ್ಟಿನ ನೆಹರೂ ಕಾರ್ಯಸೂಚಿಗೆ ಮರಳಲಾಗಿದೆ. ಜೊತೆಗೆ, ಸ್ವಾವಲಂಬನೆಯೂ ಕಾರ್ಯಸೂಚಿಯಲ್ಲಿ ಸ್ಥಾನ ಪಡೆದಿದೆ. ಭಾರತ–ಅಮೆರಿಕ ವ್ಯಾಪಾರ ಒಪ್ಪಂದವು ಕೊನೆಯಿಲ್ಲದ ವಿಳಂಬಕ್ಕೆ ಒಳಗಾದ ಬಳಿಕ ವೆನೆಜುವೆಲಾ ಮೇಲಿನ ದಾಳಿ ಈಗ ಮುಖ್ಯ ಕಾರಣವಾದಾಗ ಇನ್ನೂ ಹೆಚ್ಚು ತುರ್ತಾಗಿ ಒತ್ತು ನೀಡಲಾಗಿದೆ. ಹಾಗಿದ್ದರೂ ಬದಲಾಗದೇ ಇರುವ ಒಂದು ವಿಚಾರ ಇದೆ; ಪಾಕಿಸ್ತಾನದ ವಿರುದ್ಧ ಪ್ರತೀಕಾರದ ವಾಗ್ದಾಳಿ ಮುಂದುವರಿದಿದೆ ಮತ್ತು ಇದು ದೇಶೀಯವಾಗಿ ಮುಸ್ಲಿಮರ ಕುರಿತು ಇರುವ ವರ್ತನೆಗೆ ಅನುಗುಣವಾಗಿಯೇ ಇದೆ. ಆರ್‌ಎಸ್‌ಎಸ್ ಕಾರ್ಯಸೂಚಿಯಾದ ಅಖಂಡ ಭಾರತದ ಬಗ್ಗೆ ಏನೂ ಕೇಳಿಬಂದಿಲ್ಲ. ಸಿಂಧ್ ಒಂದು ದಿನ ಭಾರತದ ಭಾಗವಾಗಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇತ್ತೀಚೆಗೆ ಹೇಳಿದ್ದು ಮಾತ್ರ ಒಂದು ಅಪವಾದ.

ದೇಶೀ ರಾಜಕೀಯ ಮತ್ತು ಸಂವಿಧಾನಕ್ಕೆ ಸಂಬಂಧಿಸಿ, 370ನೇ ವಿಧಿ ಅಡಿಯಲ್ಲಿ ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನದ ರದ್ದತಿಯು ಅತ್ಯಂತ ವಿವಾದಾತ್ಮಕ ವಿಚಾರ. ಆದರೆ, ಎ.ಜಿ. ನೂರಾನಿಯವರಂತಹ ವಿದ್ವಾಂಸರ ಪ್ರಕಾರ, ಜವಾಹರಲಾಲ್ ನೆಹರೂ ಅವರ ಕಾಲದಿಂದಲೇ ಈ ಕಾಯ್ದೆಯನ್ನು ನಿರಂತರವಾಗಿ ನಿಸ್ಸತ್ವಗೊಳಿಸುತ್ತಾ ಬರಲಾಗಿದೆ. ಖಾಲಿ ಚಿಪ್ಪನ್ನಷ್ಟೇ ಮೋದಿ ಸರ್ಕಾರ ರದ್ದುಪಡಿಸಿದೆ. ಕೇಂದ್ರ–ರಾಜ್ಯ ಸಂಬಂಧಗಳ ಕುರಿತು, ಕೇಂದ್ರೀಕರಣದ ಕಡೆಗೆ ತಳ್ಳುವಿಕೆಯು ಸಂವಿಧಾನದಲ್ಲಿಯೇ ಇದ್ದು, ಹಿಂದಿನ ಸರ್ಕಾರಗಳೂ ಅದನ್ನು ಮಾಡಿವೆ ಮತ್ತು ಅದು ಈಗ ತೀವ್ರಗೊಂಡಿದೆ. ಎನ್‌ಡಿಎಯೇತರ ಪಕ್ಷಗಳ ಸರ್ಕಾರಗಳಿರುವ ರಾಜ್ಯಗಳ ರಾಜ್ಯಪಾಲರು ಸರ್ಕಾರದ ಮೇಲೆ ತಮ್ಮ ಅಧಿಕಾರ ಚಲಾಯಿಸಲು ಹೋದಾಗ ಆಗಾಗ ಅದು ಸಂಘರ್ಷಕ್ಕೆ ಕಾರಣವಾಗಿದೆ. ಇದಲ್ಲದೆ, ಎನ್‌ಡಿಎ ಸರ್ಕಾರ ಇರುವ ರಾಜ್ಯಗಳಿಗೆ ಕೇಂದ್ರದ ಹೆಚ್ಚಿನ ಹೂಡಿಕೆ ಮತ್ತು ಯೋಜನೆಗಳು, ಭಾರತ ಹಾಗೂ ವಿದೇಶಿ ನಂಟಿನ ಖಾಸಗಿ ಕ್ಷೇತ್ರದ ಯೋಜನೆಗಳನ್ನು ನೀಡುವ ಮೂಲಕ ಪಕ್ಷಪಾತ ಮಾಡಲಾಗಿದೆ. ಅಷ್ಟಲ್ಲದೆ, ಕೇಂದ್ರದ ಕಾಯ್ದೆ, ನ್ಯಾಯಾಲಯದ ಆದೇಶಗಳು, ರಾಜ್ಯಪಾಲರ ಪಕ್ಷಪಾತಿ ನಡೆಗಳು ಮತ್ತು ಕೇಂದ್ರ ತನಿಖಾ ಸಂಸ್ಥೆಗಳ ತನಿಖೆಗಳ ಮೂಲಕ ರಾಜ್ಯಗಳ ಅಧಿಕಾರವನ್ನು ಮೊಟಕುಗೊಳಿಸಲಾಗಿದೆ ಮತ್ತು ಉಲ್ಲಂಘಿಸಲಾಗಿದೆ. ರಾಷ್ಟ್ರ ರಾಜಧಾನಿಯಲ್ಲಿನ ಎಎಪಿ ಸರ್ಕಾರದ ಪ್ರಕರಣವನ್ನು ಇಲ್ಲಿ ಗಮನಿಸಬಹುದು; ಮೋದಿ ಅವರು ಪ್ರಧಾನಿಯಾದ ಆರಂಭಿಕ ದಿನಗಳಲ್ಲಿ ಬಿಜೆಪಿಯ ಅತ್ಯಂತ ಹೀನಾಯವಾದ ಸೋಲಿಗೆ ಕಾರಣವಾದ, ರಾಜಕೀಯಕ್ಕೆ ಹೊಸಬರಾಗಿದ್ದವರು ಕಟ್ಟಿದ್ದ ಪಕ್ಷವನ್ನು ಅಧಿಕಾರದಿಂದ ಇಳಿಸುವುದಕ್ಕಾಗಿ ವಿರೋಧ ಪಕ್ಷ ಬಿಜೆಪಿಯೂ ಸೇರಿ ಹಲವು ಸಂಸ್ಥೆಗಳನ್ನು ಭಾಗಿಯಾಗಿಸಿ ಸಂಕೀರ್ಣವಾದ, ಹಲವು ಆಯಾಮಗಳ, ಅತ್ಯಂತ ಸಂಯೋಜಿತ ಬಹುವಾರ್ಷಿಕ ಯೋಜನೆಯನ್ನು ರೂಪಿಸಲಾಯಿತು. ಈ ಎಲ್ಲದರಿಂದಾಗಿ 356ನೇ ವಿಧಿಯನ್ನು ಬಳಸಿ ರಾಜ್ಯ ಸರ್ಕಾರವನ್ನು ಉರುಳಿಸುವ ಅಗತ್ಯವೇ ಇಲ್ಲದಂತಾಯಿತು. ಈ ಎಲ್ಲದರಲ್ಲಿಯೂ ಮೋದಿ ಸರ್ಕಾರವು ತನ್ನ ಪೂರ್ವಜರ ಹೆಜ್ಜೆ ಗುರುತುಗಳನ್ನೇ ಅನುಸರಿಸಿದೆ.

ಸಂವಿಧಾನ, ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಬಹಳ ಮುಖ್ಯವಾಗಿ ಮಹಾತ್ಮ ಗಾಂಧಿ, ಒಬಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಈ ಹಿಂದಿನ ನಾಯಕರು, ರಾಷ್ಟ್ರ ಗೀತೆ ಮತ್ತು ಧ್ವಜವು ಪವಿತ್ರ ಎಂದು ಪರಿಗಣಿಸುವಲ್ಲಿ ಬಿಜೆಪಿ– ಆರ್‌ಎಸ್‌ಎಸ್‌ನ ಹಿಂದಿನ ಇತರ ಎಲ್ಲ ನಾಯಕರಿಗಿಂತ ಮೋದಿ ಭಿನ್ನವಾದರು. ಇತ್ತೀಚೆಗೆ, ತಮಗೆ ಅಪಥ್ಯ ಎನಿಸುವ ಜವಾಹರಲಾಲ್ ನೆಹರೂ ಅವರ ಜನ್ಮದಿನದಂದು ಸ್ವಾತಂತ್ರ್ಯ ಹೋರಾಟಗಾರರಾಗಿ ಮತ್ತು ಮೊದಲ ಪ್ರಧಾನಿಯಾಗಿ ಅವರ ಕೊಡುಗೆಯನ್ನು ಕೊಂಡಾಡಿದರು. ಅದೂ ಅಲ್ಲದೆ, ಹಿಂದೂ ರಾಷ್ಟ್ರ ಸಂವಿಧಾನ ವಿಚಾರವನ್ನು ಮುನ್ನೆಲೆಗೆ ತರುವುದು ಬಿಡಿ, ವಾಜಪೇಯಿ ಕಾಲದಲ್ಲಿ ರಚಿತವಾಗಿದ್ದ ಸಂವಿಧಾನ ಕಾರ್ಯನಿರ್ವಹಣೆಯ ರಾಷ್ಟ್ರೀಯ ಪರಿಶೀಲನಾ ಆಯೋಗವನ್ನು ಪುನಶ್ಚೇತನಗೊಳಿಸುವ ವಿಚಾರವನ್ನು ಉಲ್ಲೇಖ ಕೂಡ ಮಾಡಿಲ್ಲ. ಸಂವಿಧಾನಕ್ಕೆ ಏನೇನು ತಿದ್ದುಪಡಿ ಮಾಡಬಹುದು ಎಂಬುದರ ಕುರಿತು ಶಿಫಾರಸುಗಳನ್ನು ಮಾಡಲು ಆಯೋಗಕ್ಕೆ ಮುಕ್ತ ಅವಕಾಶ ಕೊಡಲಾಗಿತ್ತು. ಸಂಘ ಪರಿವಾರದ ನಾಯಕರು, ಬಿಜೆಪಿ ಸಚಿವರು, ಶಾಸಕರ ಹೇಳಿಕೆಗಳು ಮತ್ತು ನಡವಳಿಕೆಗಳಿಗೆ ಸಾರ್ವಜನಿಕವಾಗಿ ಟೀಕೆಗಳು ವ್ಯಕ್ತವಾದಾಗ ಅವುಗಳನ್ನು ಹಿಂದಕ್ಕೆ ಪಡೆಯಲಾಗಿದೆ; ಒಳಭಾಗದಲ್ಲಿ ಏನೇ ಇರಲಿ ಅದನ್ನು ಈಗ ಬಹಿರಂಗವಾಗಿ ಹೇಳುವಂತಿಲ್ಲ ಎಂಬುದನ್ನು ಉದ್ದೇಶಪೂರ್ವಕವಾಗಿಯೋ ಅಲ್ಲದೆಯೋ ಸೂಚಿಸಲಾಗುತ್ತಿದೆ. ಇತ್ತೀಚಿನ ಉದಾಹರಣೆಗಳೆಂದರೆ, ಮಧ್ಯ ಪ್ರದೇಶದ ಬಿಜೆಪಿ ಸಚಿವರೊಬ್ಬರು ಸಮಾಜ ಸುಧಾರಕ ರಾಜಾರಾಮ್ ಮೋಹನ ರಾಯ್ ಅವರು ‘ಬ್ರಿಟಿಷ್ ಏಜೆಂಟ್’ ಮತ್ತು ಧಾರ್ಮಿಕ ಮತಾಂತರ ನಡೆಸಲು ಮಿಷನರಿಗಳಿಗೆ ನೆರವಾದರು ಎಂದರು. ಬಾಬರಿ ಮಸೀದಿ ಧ್ವಂಸಗೊಳಿಸಲಾದ ಡಿಸೆಂಬರ್ 6 ಅನ್ನು ‘ಶೌರ್ಯ ದಿನ’ ಎಂದು ಶಾಲೆಗಳಲ್ಲಿ ಆಚರಿಸುವ ನಿರ್ಧಾರವನ್ನು ರಾಜಸ್ಥಾನ ಸರ್ಕಾರ ಕೈಗೊಂಡಿತು.

ಹಲವು ದಶಕಗಳಲ್ಲಿ ಪ್ರತಿಸ್ಪರ್ಧಿ ಪಕ್ಷಗಳು ಮತ್ತು ಭಿನ್ನ ಸಿದ್ಧಾಂತಗಳ ಮೈತ್ರಿಕೂಟಗಳು ಮತ್ತು ಕಾರ್ಯಕ್ರಮಗಳ ಹಲವು ಸರ್ಕಾರಗಳಿಗೆ ಈ ಮುಂದುವರಿಕೆ ಹೇಗೆ ಸಾಧ್ಯವಾಯಿತು? ದೇಶೀಯವಾಗಿ ಮತ್ತು ಅಂತರರಾಷ್ಟ್ರೀಯವಾಗಿ ತ್ವರಿತವಾಗಿ ರೂಪುಗೊಳ್ಳುವ ಸನ್ನಿವೇಶಗಳಿಗೆ ತಕ್ಕಂತೆ ದೇಶದ ಕಾರ್ಯಸೂಚಿಯ ಬದಲಾವಣೆಯ ನಿರ್ವಹಣೆ ಮಾಡುವವರು ಯಾರು? ರಾಷ್ಟ್ರೀಯ ಸಹಮತಕ್ಕೆ ಸವಾಲೆಸೆದು ಅಡ್ಡಿಪಡಿಸಲು ಹಾಗೂ ಮುಖ್ಯವಾಹಿನಿಯನ್ನು ಮುರಿದು ಬೇರೆಡೆ ಹೋಗಲು ಬಯಸುವವರಿಗೆ ತಡೆಗಳನ್ನು ಒಡ್ಡುವವರು ಯಾರು?

ನ್ಯಾಯಾಂಗದ ಜೊತೆ ಸೇರಿದ ಅಧಿಕಾರಶಾಹಿಯು ಈ ಪಾತ್ರವನ್ನು ನಿರ್ವಹಿಸುತ್ತದೆ ಎಂಬುದು ನನ್ನ ಪ್ರತಿಪಾದನೆ. ಸ್ವಾತಂತ್ರ್ಯ ಸಿಕ್ಕಾಗಿನಿಂದಲೇ ಜವಾಹರಲಾಲ್ ನೆಹರೂ ಮತ್ತು ಸರ್ದಾರ್ ಪಟೇಲ್ ಅವರನ್ನೂ ಒಳಗೊಂಡ ರಾಷ್ಟ್ರೀಯ ನಾಯಕತ್ವವು ಬ್ರಿಟಿಷರು ಬಿಟ್ಟುಹೋದ ಅಧಿಕಾರಶಾಹಿ ಮತ್ತು ನ್ಯಾಯಾಧೀಶರ ಮೇಲೆ ಅವಲಂಬಿತವಾಗಿತ್ತು. ರಾಷ್ಟ್ರೀಯ ಕಾರ್ಯಸೂಚಿ ಮತ್ತು ಹಿತಾಸಕ್ತಿಗಳಿಗೆ ಅನುಗುಣವಾಗಿ ಕೆಲಸ ಮಾಡಲು ಅವರನ್ನು ತರಬೇತುಗೊಳಿಸಲಾಗಿದೆ. ಸಂವಿಧಾನದ ಕರಡು ರಚನೆಯಿಂದ (ಬೆನೆಗಲ್ ನರಸಿಂಗ ರಾವ್) ದೇಶೀಯ ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿದ್ದ ದೇಶವನ್ನು ಒಗ್ಗೂಡಿಸುವವರೆಗೆ (ವಿ.ಪಿ. ಮೆನನ್), ಅಧಿಕಾರಶಾಹಿಯ ಕೌಶಲಗಳು ಮತ್ತು ಸಾಮರ್ಥ್ಯಗಳು ಅನಿವಾರ್ಯವೇ ಆಗಿವೆ. ಆಡಳಿತ ನಡೆಸಲು, ಕೇಂದ್ರದ ಸಚಿವಾಲಯಗಳಲ್ಲಿದ್ದ ತಮ್ಮ ಪಕ್ಷದ ಸಹೋದ್ಯೋಗಿಗಳು ಮತ್ತು ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದ್ದವರಿಗಿಂತ ಪ್ರಧಾನಿಯಾಗಿ ನೆಹರೂ ಅವರು ಅಧಿಕಾರಶಾಹಿಯ ಆಯ್ದ ಕೆಲವರ ಮೇಲೆ ಮಾತ್ರ ಅವಲಂಬಿತರಾಗಿದ್ದರು. ಬಳಿಕ, ಇಂದಿರಾ ಗಾಂಧಿ ಅವರ ಅವಧಿಯಲ್ಲಿ ಪ್ರಧಾನ ಮಂತ್ರಿಯವರ ಕಚೇರಿ (ಪಿಎಂಒ) ನಿರ್ಧಾರ ಕೈಗೊಳ್ಳುವಿಕೆ ಹಾಗೂ ನೀತಿ ಅನುಷ್ಠಾನದ ಅಧಿಕಾರ ಕೇಂದ್ರವಾಗಿ ಹೆಚ್ಚಿನ ಮಹತ್ವ ಪಡೆದುಕೊಂಡಿತು. ತಮ್ಮ ರಾಜಕೀಯ ಕಾರ್ಯತಂತ್ರವನ್ನು ರೂಪಿಸಲು ಮತ್ತು ಜಾರಿಗೊಳಿಸಲು ಅವರು ಬಹುಮುಖ್ಯವಾಗಿ ಅವಲಂಬಿತವಾಗಿದ್ದದ್ದು ಪಿ.ಎನ್. ಹಸ್ಕರ್ ಅವರ ಮೇಲೆ. ಹೆಚ್ಚುವರಿಯಾಗಿ, ಹಲವು ನಿವೃತ್ತ ಅಧಿಕಾರಿಗಳು, ಹಿರಿಯ ನ್ಯಾಯಮೂರ್ತಿಗಳು ಮತ್ತು ಸಶಸ್ತ್ರ ಪಡೆಯ ಅಧಿಕಾರಿಗಳನ್ನು ವಿವಿಧ ರಾಜ್ಯಗಳ ರಾಜ್ಯಪಾಲರನ್ನಾಗಿ ನೇಮಕ ಮಾಡಲಾಗಿತ್ತು.

ಮೋದಿ ಅವರ ಆಳ್ವಿಕೆಯಲ್ಲಿ ಪಿಎಂಒ ಗಾತ್ರ ಮತ್ತು ಮಹತ್ವವು ಬಹುವಾಗಿ ಹಿಗ್ಗಿದ್ದಲ್ಲದೆ ಅಧಿಕಾರಶಾಹಿಯ ಅಧಿಕಾರವು ಹೊಸ ಎತ್ತರಕ್ಕೆ ಏರಿತು. ಕಳೆದ ವರ್ಷಗಳಲ್ಲಿ ನಿವೃತ್ತ ಅಧಿಕಾರಿಗಳನ್ನು ತಮ್ಮ ಅವರ ಸರ್ಕಾರದ ಸಚಿವ ಸಂಪುಟದ ಪ್ರಮುಖ ಹುದ್ದೆಗಳಿಗೆ ಅಭೂತಪೂರ್ವ ಸಂಖ್ಯೆಯಲ್ಲಿ ನೇಮಿಸಲಾಗಿದೆ. ತಮ್ಮ ಸರ್ಕಾರದ ಉತ್ತಮ ಆಡಳಿತ, ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಬಲಯುತವಾಗಿ ಜಾರಿಗೊಳಿಸಿದ್ದು ಮೋದಿ ಅವರ ಮಹತ್ವದ ಕೊಡುಗೆಯಾಗಿದ್ದು, ಅಧಿಕಾರಶಾಹಿ ಕೂಡ ಇದನ್ನೇ ಬಯಸಿರಬಹುದು. ಬಹುಶಃ ಸ್ವಲ್ಪ ಮಟ್ಟಿಗೆ, ಎಡಪಕ್ಷಗಳನ್ನು ಹೊರತುಪಡಿಸಿದರೆ ರಾಜ್ಯ ಸರ್ಕಾರಗಳಿಗೂ ಅಧಿಕಾರಶಾಹಿಯ ಮಹತ್ವದ ಪಾತ್ರ ವಿಸ್ತರಣೆಯಾಗಿದೆ. ಹೆಚ್ಚು ಸಾಮಾನ್ಯವಾಗಿರುವ ಈ ಪ್ರವೃತ್ತಿಯ ಪ್ರಮುಖ ಉದಾಹರಣೆಯೆಂದರೆ, ಒಡಿಶಾ ಮುಖ್ಯಮಂತ್ರಿಯಾಗಿದ್ದ ನವೀನ್ ಪಟ್ನಾಯಕ್ ಅವಧಿಯಲ್ಲಿ ವಿ.ಕೆ.ಪಾಂಡ್ಯನ್ ಅವರ ಪಾತ್ರ.

ಅಧಿಕಾರದಲ್ಲಿರುವ ರಾಜಕಾರಣಿಗಳಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಾ ಸದಾ ಅವರ ಹಿತಾಸಕ್ತಿಗಳನ್ನು ಕಾಯ್ದುಕೊಂಡು, ಅವರಿಗೆ ರಾಜಕೀಯವಾಗಿ ಎಂದೂ ಬೆದರಿಕೆಯಾಗದೆ ನೇಪಥ್ಯದಲ್ಲಿಯೇ ಉಳಿಯುವುದು ಆಡಳಿತದಲ್ಲಿ ಅಧಿಕಾರಶಾಹಿಯ ಮಹತ್ವದ ಪಾತ್ರವು ಅಪಾರ ಯಶಸ್ಸು ಪಡೆಯಲು ಕಾರಣ. ರಾಜಕೀಯ ಆಡಳಿತದಲ್ಲಿ ಅವರಿಗೆ ಇರುವ ಸುದೀರ್ಘ ಅನುಭವ, ವೃಂದವಾಗಿ ಇರುವ ಸುಸಂಬದ್ಧತೆ, ಸಾರ್ವಜನಿಕ ವ್ಯವಹಾರಗಳಲ್ಲಿ ಇರುವ ಜ್ಞಾನ ಮತ್ತು ಪರಿಣತಿ, ಮುರಿಯದಂತೆ ಬಾಗಿಸುವ ಚಾತುರ್ಯವು ದೇಶೀ ಮತ್ತು ಅಂತರರಾಷ್ಟ್ರೀಯ ನೀತಿಗಳಲ್ಲಿ ನಿರಂತರತೆ ಮತ್ತು ಒಟ್ಟಾರೆ ಸ್ಥಿರತೆ ಹಾಗೂ ರಾಷ್ಟ್ರದ ಕಾರ್ಯಸೂಚಿಯನ್ನು ರೂಪಿಸಿ ಅನುಷ್ಠಾನಗೊಳಿಸಲು ನೆರವಾಗುತ್ತವೆ. ಇದು ಒಂದು ರೀತಿ ‘ಯೆಸ್ ಮಿನಿಸ್ಟರ್ ಅಂಡ್ ಯೆಸ್ ಪ್ರೈಮ್ ಮಿನಿಸ್ಟರ್’ ಎಂಬ ಬ್ರಿಟಿಷ್ ವಿಡಂಬನಾ ಧಾರಾವಾಹಿ ಮಾಲಿಕೆಯಲ್ಲಿ ಕಂಡುಬರುವಂತಹದ್ದು. ಆದರೆ, ಆಡಳಿತದಲ್ಲಿ ರಾಜಕಾರಣಿಗಳ ವೈಫಲ್ಯವು ಅಧಿಕಾರಶಾಹಿಗೆ ವ್ಯಾಪಕ ಮತ್ತು ವಿಸ್ತೃತವಾದ ಅಧಿಕಾರಗಳನ್ನು ಕೊಟ್ಟಿದೆ.

(ಮುಂದುವರಿಯುವುದು)

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಜಮ್ಮು ಮತ್ತು ಕಾಶ್ಮೀರದ ನೌಶೆರಾ ವಲಯದಲ್ಲಿ ಭಾರತೀಯ ಸೇನೆಯು ಇತ್ತೀಚೆಗೆ ಪಾಕಿಸ್ತಾನದ ಡ್ರೋನ್‌ಗಳತ್ತ ಗುಂಡು ಹಾರಿಸಿದೆ ಎಂದು ಪ್ರತಿಪಾದಿಸುತ್ತಾ ಇನ್‌ಸ್ಟಾಗ್ರಾಂ ಬಳಕೆದಾರರೊಬ್ಬರು (smoooth_editx) ವಿಡಿಯೊ ತುಣುಕೊಂದನ್ನು ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ssbcrackofficial ಎಂಬ ಇನ್‌ಸ್ಟಾಗ್ರಾಂ ಬಳಕೆದಾರರು ಕಳೆದ ವರ್ಷದ ಮೇ 8ರಂದು ಇದೇ ವಿಡಿಯೊವನ್ನು ಪೋಸ್ಟ್ ಮಾಡಿರುವುದು ತಿಳಿದು ಬಂತು. ‘ಜಮ್ಮು ಮತ್ತು ಪಂಜಾಬ್‌ನಲ್ಲಿರುವ ಭಾರತದ ಪ್ರಮುಖ ಸೇನಾ ಘಟಕಗಳು ಮತ್ತು ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಪಾಕಿಸ್ತಾನ ಡ್ರೋನ್ ದಾಳಿ ನಡೆಸಿದೆ’ ಎಂಬ ಶೀರ್ಷಿಕೆಯನ್ನು ವಿಡಿಯೊಕ್ಕೆ ನೀಡಲಾಗಿತ್ತು. ಇದರ ಆಧಾರದಲ್ಲಿ ಗೂಗಲ್‌ನಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಿದಾಗ ಎನ್‌ಡಿಟಿವಿಯಲ್ಲಿ ಮೇ 8ರಂದು ಪ್ರಕಟವಾದ ವರದಿ ಸಿಕ್ಕಿತು. ಇತ್ತೀಚಿನ ಪೋಸ್ಟ್‌ನಲ್ಲಿ ಇದ್ದ ವಿಡಿಯೊವೇ ಎನ್‌ಡಿಟಿವಿಯ ವರದಿಯಲ್ಲೂ ಇತ್ತು. ಪಾಕಿಸ್ತಾನವು ಪಠಾಣ್‌ಕೋಟ್, ಜೈಸಲ್ಮೇರ್ ಮತ್ತು ಜಮ್ಮು ಮೇಲೆ ಡ್ರೋನ್ ದಾಳಿ ನಡೆಸಿದ್ದು, ಭಾರತವು ಎಲ್ಲ ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದು ವರದಿಯಲ್ಲಿ ಹೇಳಲಾಗಿತ್ತು. ಮೇ 9ರಂದು ಹಿಂದೂಸ್ತಾನ್ ಟೈಮ್ಸ್‌ನಲ್ಲಿ ಪ್ರಕಟವಾದ ವರದಿಯಲ್ಲೂ ಇದೇ ವಿಡಿಯೊವನ್ನು ಪೋಸ್ಟ್ ಮಾಡಲಾಗಿತ್ತು. ಜನವರಿ 11ರಂದು ಪಾಕಿಸ್ತಾನದ ಡ್ರೋನ್‌ಗಳು ಸಾಂಬಾ, ರಜೌರಿ ಮತ್ತು ಪೂಂಛ್ ಜಿಲ್ಲೆಗಳಲ್ಲಿ ಎಲ್‌ಒಸಿ ದಾಟಿ ಭಾರತದ ಆಗಸದಲ್ಲಿ ಹಾರಾಡಿದ್ದವು. ನಂತರ ಅವು ವಾಪಸ್ ಹೋಗಿದ್ದವು ಎಂದು ಪಿಟಿಐ ವರದಿ ಮಾಡಿತ್ತು. ಕಳೆದ ವರ್ಷದ ಹಳೆಯ ವಿಡಿಯೊವನ್ನು ಈಗ ಇತ್ತೀಚಿನ ವಿಡಿಯೊ ಎಂದು ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ತಿಳಿಸಿದೆ.

ಪ್ರತಿಯೊಂದು ದನಿಯೂ ಮುಖ್ಯ

ನುಡಿ ಬೆಳಗು

ದೀಪಾ ಹಿರೇಗುತ್ತಿ

ದಟ್ಟ ಕಾಡೊಂದರಲ್ಲಿ ಹಲವಾರು ಪ್ರಾಣಿಗಳು ವಾಸವಾಗಿದ್ದವು. ಸಿಂಹ, ಆನೆ, ಜಿಂಕೆ, ಕೋತಿ, ಚಿರತೆ, ಹಕ್ಕಿ, ಇರುವೆಗಳು ಹೀಗೆ ಪ್ರತಿಯೊಂದು ಜೀವಿಯೂ ಇದ್ದ ವೈವಿಧ್ಯಮಯ ಕಾಡು ಅದು.

ಕಾಡಿನ ರಾಜ ಸಿಂಹ ತನ್ನ ಗರ್ಜನೆಯಿಂದಲೇ ಕಾಡಿನ ರಕ್ಷಣೆಯಾಗುತ್ತಿದೆ ಎಂದು ನಂಬಿಕೊಂಡಿತ್ತು ಮತ್ತು ಹಾಗೆಯೇ ಹೇಳುತ್ತಿತ್ತು. ಸಿಂಹದ ಮಾತನ್ನು ಆನೆ ಅನುಮೋದಿಸುತ್ತಿತ್ತು. ಆನೆ ಕೂಡ ಗಾತ್ರವೇ ಪ್ರಮುಖವಾದದ್ದು ಎಂದು ತಿಳಿದಿತ್ತು. ಕಾಡಿನ ಅಭಿವೃದ್ಧಿಯ ಕುರಿತ ಸಭೆಗಳಿಗೆ ಚಿಕ್ಕ ಗಾತ್ರದ ಪ್ರಾಣಿಗಳನ್ನು ಯಾವಾಗಲೂ ಕರೆಯುತ್ತಿರಲಿಲ್ಲ. ಅಷ್ಟು ಮಾತ್ರವಲ್ಲ, ಇರುವೆಗಳಿಗೆ ಮೊಲಗಳಿಗೆ ಕಾಡಿನ ಬಗ್ಗೆ ಏನು ಗೊತ್ತಿದೆ ಎಂದು ಸಿಂಹ ಗಹಗಹಿಸಿ ನಗುತ್ತ ಹೇಳುತ್ತಿತ್ತು.

ಒಂದು ಮಳೆಗಾಲ ಮುಗಿದು, ಅದರ ಹಿಂದೆ ಚಳಿಗಾಲ ಕಳೆದು ಬೇಸಿಗೆ ಕಾಡಿನಲ್ಲಿ ಕಾಲಿಟ್ಟಿತು. ಈ ಬಾರಿ ಬಿರುಬೇಸಿಗೆಯ ಬಿಸಿ ಕಾಡಿಗೂ ತಟ್ಟದೇ ಬಿಡಲಿಲ್ಲ. ನೀರು ಆಹಾರ ಸಿಕ್ಕದೇ ಪ್ರಾಣಿಗಳಲ್ಲಿ ಹಾಹಾಕಾರ ಉಂಟಾಯಿತು. ಸಿಂಹ ತುರ್ತು ಸಭೆ ಕರೆಯಿತು. ಮಾಮೂಲಿಯಂತೆ ದೊಡ್ಡ ಗಾತ್ರದ ಪ್ರಾಣಿಗಳು ಮಾತ್ರ ಆಹ್ವಾನಿಸಲ್ಪಟ್ಟವು. ವಾದ ಪ್ರತಿವಾದಗಳಾದವು. ಆದರೆ ಪರಿಹಾರ ಸಿಗಲಿಲ್ಲ.

ಅಲ್ಲೇ ಪಕ್ಕದ ಪೊದೆಯಲ್ಲಿ ಓಡಾಡಿಕೊಂಡಿದ್ದ ಮೊಲವೊಂದಕ್ಕೆ ಈ ಪ್ರಾಣಿಗಳ ಮಾತು ಕೇಳಿಸಿತು. ಅದು ಹೋಗಿ ಅಳಿಲುಗಳು, ಹಕ್ಕಿಗಳು, ಇರುವೆ ಮುಂತಾದ ಪುಟ್ಟ ಜೀವಿಗಳನ್ನು ಸೇರಿಸಿತು. ನಾವು ಸಣ್ಣ ದೇಹದವರಿರಬಹುದು. ಆದರೆ ನಾವೂ ಈ ಕಾಡಿನಲ್ಲಿ ಬದುಕುತ್ತೇವೆ. ನಾವೂ ಈ ಸಮಸ್ಯೆಯ ಕುರಿತು ಯೋಚಿಸೋಣ ಅಂದಿತು. ಹಕ್ಕಿಗಳು ಹಾರಿ ಹೋಗಿ ಬೆಟ್ಟದ ತಪ್ಪಲಿನಲ್ಲಿ ನೀರಿನ ಗುಪ್ತ ಝರಿಯೊಂದನ್ನು ಪತ್ತೆ ಮಾಡಿದವು. ಇರುವೆಗಳು ನೆಲದಲ್ಲಿರುವ ಒದ್ದೆಯನ್ನು ಕಂಡುಹಿಡಿದು ಅಲ್ಲಿ ನೀರಿರಬಹುದೆಂದು ಊಹಿಸಿದವು. ಹಣ್ಣುಗಳನ್ನು ಬಿಡುವ ಬೃಹತ್ ಮರಗಳಿರುವ ಜಾಗವನ್ನು ಅಳಿಲುಗಳು ಕಂಡುಹಿಡಿದವು.

ಮೊಲ ಹೋಗಿ ಸಿಂಹಕ್ಕೆ ಈ ವಿಷಯ ಹೇಳಿದಾಗ ಸಿಂಹ ತಮಾಷೆ ಮಾಡಿತು. ‘ದೊಡ್ಡ ದೊಡ್ಡ ಸಮಸ್ಯೆಗಳಿಗೆ ದೊಡ್ಡ ದೊಡ್ಡ ಚಿಂತಕರು ಬೇಕು, ಸರಿ ಬದಿಗೆ’ ಅಂದಿತು. ಮೊಲ ಮತ್ತೊಮ್ಮೆ ಹೇಳಿದಾಗ ಈಗಾಗಲೇ ಆಹಾರ ನೀರು ಸಿಗದೇ ಒದ್ದಾಡುತ್ತಿದ್ದ ಸಿಂಹ ಒಪ್ಪಿತು. ಹಕ್ಕಿಗಳನ್ನು ಹಿಂಬಾಲಿಸಿ ಪ್ರಾಣಿಗಳು ನಡೆದವು. ಸಿಕ್ಕ ನೀರನ್ನು ಜಾಗರೂಕತೆಯಿಂದ ಸಂಗ್ರಹಿಸಿದವು. ಹಣ್ಣುಗಳನ್ನು ಹಂಚಿಕೊಂಡವು. ಪುಟ್ಟ ಪುಟ್ಟ ನೀರಿನ ಕೊಳಗಳಲ್ಲಿ ಮೀನುಗಳೂ ಸಿಕ್ಕವು. ಕೆಲ ದಿನಗಳಲ್ಲೇ ಮಳೆ ಬಂದು ಕಾಡು ಹಸಿರಾಯಿತು. ತೊರೆಗಳು ನಿಧಾನಕ್ಕೆ ಮೈದುಂಬಿದವು.

ಒಂದು ದಿನ ಸಂಜೆ ಸಿಂಹ ಸಭೆ ಕರೆಯಿತು. ವಿಶಾಲ ಆಲದ ಮರದ ಕೆಳಗೆ ಪ್ರಾಣಿಗಳೆಲ್ಲ ಸೇರಿದವು. ಈ ಬಾರಿ ಆಹ್ವಾನ ಎಲ್ಲರಿಗೂ ಹೋಗಿತ್ತು. ಸಿಂಹ ಹೇಳಿತು, ‘ನಾನು ಶಕ್ತಿಯೇ ಮುಖ್ಯ ಗಾತ್ರವೇ ಮುಖ್ಯ ಅಂದುಕೊಂಡಿದ್ದೆ. ಇವತ್ತು ಈ ಕಾಡಿನಲ್ಲಿ ನಾವೆಲ್ಲ ಕ್ಷೇಮವಾಗಿರಲು ಪ್ರತೀ ಪ್ರಾಣಿಯೂ ಕಾರಣ’ ಎಂದು ಹೇಳಿ ಮೊಲಕ್ಕೆ ಕೃತಜ್ಞತೆಯಿಂದ ವಂದಿಸಿತು. ಎಲ್ಲ ಪ್ರಾಣಿಗಳೂ ಚಪ್ಪಾಳೆ ತಟ್ಟಿದವು. ಅಂದಿನಿಂದ ಕಾಡಿನ ತೀರ್ಮಾನಗಳನ್ನು ಎಲ್ಲರೂ ಸೇರಿ ತೆಗೆದುಕೊಳ್ಳಲಾರಂಭಿಸಿದರು.

ಸಾಮರ್ಥ್ಯ ಎಂಬುದು ಗಾತ್ರ, ಶಕ್ತಿಯ ಮೇಲೆ ನಿರ್ಧಾರವಾಗುವುದಿಲ್ಲ. ಸಮಾಜದ ಪ್ರತಿಯೊಂದು ಧ್ವನಿಯೂ ಮುಖ್ಯವೇ. ನಿಜವಾದ ನಾಯಕತ್ವ ಎಂದರೆ ಅತ್ಯಂತ ಸಣ್ಣ ಧ್ವನಿಯೂ ಮುಖ್ಯ ಎಂದು ಗುರುತಿಸುವುದು ಕೂಡ ಹೌದು. ❖

ಪದಬಂಧ 6290

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಮರ್ಯಾದೆಯಿರುವ ಹುಟ್ಟುಗುಣ (4)
3. ಇದು ಎಣ್ಣೆಯ ಮಜ್ಜನ (4)
5.ಕಸ್ತೂರಿ ಕಂಪಿನ ಭಾಷೆ (3)
6.ಹರಿಯುವಂಥ ವಸ್ತು (2)
8.ವಿಶೇಷವಾದ ದ್ರೋಹ (3)
10.ಋತುಗಳ ರಾಜನ ತಿಂಗಳು (3)
11.ಹೊಲಗದ್ದೆಗಳಲ್ಲಿ ಹೆಂಟೆಯನ್ನು ಒಡೆಯುವ ಸಾಧನ (3)
12.ಈ ರೀತಿ ಸಂತೈಸು (3)
15.ರಸನದಲ್ಲಿರುವ ದ್ರವ (2)
17.ಪಕ್ಷದೊಳಗಿದ್ದು ದೃಷ್ಟಿಗೆ ದೂರವಾಗಿರುವುದು (3)
18.ಯಾಗದ ಸಮಾಪ್ತಿ (4)
19.ನಿಸ್ಸಾರವಾದುದು ಇದು (4)

ಮೇಲಿಂದ ಕೆಳಕ್ಕೆ

1.ಗಾಳಿ ಸುಳಿದಾಡಲು ಮಾಡಿರುವ ಕಿಂಡಿ (3)
2.ಪರಿಷ್ಕೃತವಾಗದಿರುವ ಪ್ರತಿ (3)
3.ಅಡಗಿಕೊಳ್ಳಲು ಸೂಕ್ತವೆನಿಸಿದ ಜಾಗ (3)
7.ಬೇರೆ ಬೇರೆ ಬಣ್ಣಗಳ ಬೆರಕೆ (5)
9.ಮೋಸಗಾರ ಇಲ್ಲಿದ್ದಾನೆ (5)
13.ಒಳ್ಳೆಯ ದಾರಿಯಿದು (3)
14.ನಾಶವಿಲ್ಲದ ವರ್ಣ (3)
16.ದನವಿರುವ ಮನೆ (3)

6289ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಋತ್ವಿಕ್ಕು 4.ಸಂಭವ
6.ಕುಟಿಲೋಪಾಯ 7.ನಭ
9.ನವ 10.ಶಿಷ್ಯ
11.ಸುತ 13.ಮನೆವಾಳ್ತನ
16.ಮೆದುಳು 17.ನೆನಪು

ಮೇಲಿಂದ ಕೆಳಕ್ಕೆ:
1.ಋತುಮಾನ 2.ಕ್ಕುಮ್ಮಕ್ಕು
3.ನಚಲೋ 4.ಸಂಶಯ
5.ವಜ್ರೋತ್ಸವ 8.ಭವಿಷ್ಯ
9.ನನಸು 10.ಶಿರೋನಾಮೆ
12.ತಲೆಗಾಪು 13.ಮರಳು
14.ವಾಹಕ 15.ನಮೂನೆ

ಸುಡೊಕು 6674

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

1		3	5		6		4	7
				4				
7		4	9			5		3
9	1							8
		7		9			1	
5	2							4
8		1					6	
	5		1		4	8		9
4		9		6			5	

6673 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

20 ಜನವರಿ 2026 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ದ್ವಿತೀಯ ಗಂ 26-43 ನಕ್ಷತ್ರ: ಶ್ರವಣ 13-07 ಯೋಗ: ಸಿದ್ಧಿ (ಆಸ್ರಿಕ್) ಗಂ. 20-01 ಕರಣ: ಬಾಲವ ಗಂ. 14-32 ಮಕರ ಮಾಸದ 06 ನೇ ದಿನ. ಮಳೆ ನಕ್ಷತ್ರ : ಉತ್ತರಾಷಾಢ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 -04-30, ಸೂರ್ಯೋದಯ : 07-01 ಸೂರ್ಯಾಸ್ತ : 06-21, ಮುಸ್ಲಿಂ ದಿನಾಂಕ : 30 ರಜಬ್, ಅದೃಷ್ಟ ಸಂಖ್ಯೆ : 8, 5

ಮೇಷ: ಮುಖಂಡತ್ವದ ಸಾಮಾಜಿಕ ಕಾರ್ಯಕ್ಕೆ ಗ್ರಾಮಸ್ಥರಿಂದ ನಿರೀಕ್ಷೆಗೂ ಮೀರಿದ ಸಹಾಯ ದೊರೆಯಲಿದೆ. ಸರ್ಕಾರಿ ಗುತ್ತಿಗೆ ಕೆಲಸದ ವಿಪುಲ ಅವಕಾಶಗಳು ಒದಗಿ ಬರಲಿವೆ.

ವೃಷಭ: ವಿದೇಶದಲ್ಲಿ ಇರುವವರು ಸ್ವದೇಶದ ಬಂಧುಗಳನ್ನು ಭೇಟಿಯಾಗಲು ಬರಲಿದ್ದಾರೆ. ಪದೇ ಪದೇ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಗಿ ಬಳಲುವಂತೆ ಆಗುವುದು. ಪರಿಸರವೂ ಇದಕ್ಕೆ ಪೂರಕವಾಗಿರುವುದು.

ಮಿಥುನ: ಬಿಡುವು ಸಿಕ್ಕ ವೇಳೆಯಲ್ಲಿ ಮಾಡಬೇಕಾದ ಕೆಲಸಗಳನ್ನು ಇಟ್ಟುಕೊಂಡಿದ್ದರೂ ಅವುಗಳನ್ನು ಮಾಡದೆ ಕಾಲಹರಣ ಮಾಡುವ ಸಾಧ್ಯತೆ ಇದೆ. ಉದ್ಯಮಗಳಲ್ಲಿ ಸ್ವಂತ ಶ್ರಮ ಅಗತ್ಯ.

ಕರ್ಕಾಟಕ: ಮನೆಯಲ್ಲಿ ಸಹೋದರರಿದ್ದರೂ ನೀವೇ ಕೆಲವು ಕೆಲಸವನ್ನು ಮಾಡಬೇಕಾದ ಪರಿಸ್ಥಿತಿಯಿಂದ ಕುಪಿತರಾಗುವಿರಿ. ಎತ್ತರದಲ್ಲಿ ನಿಂತು ಕೆಲಸ ಮಾಡುವವರು, ಸಾಹಸಿ ಪ್ರವೃತ್ತಿಯವರು ಜಾಗ್ರತರಾಗಿರಿ.

ಸಿಂಹ: ವೃತ್ತಿರಂಗದಲ್ಲಿ ಅನವಶ್ಯಕವಾಗಿ ಕೋಪಕ್ಕೆ ಗುರಿಯಾಗುವುದನ್ನು ಸ್ನೇಹಿತರು ತಪ್ಪಿಸುವರು. ಶುಭ ಸಮಾರಂಭದ ಸಡಗರದಲ್ಲಿ ವಸ್ತ್ರಾಭರಣ ಖರೀದಿಗೆ ಹೆಚ್ಚಿನ ಹಣ ವಿನಿಯೋಗ ಮಾಡುವಿರಿ.

ಕನ್ಯಾ: ದೇವಸ್ಥಾನದಲ್ಲಿನ ವಿಶೇಷ ಕಾರ್ಯಕ್ರಮಗಳಿಗೆ ಸಹಾಯ ಅಪೇಕ್ಷಿಸುವವರ ವಿಚಾರದಲ್ಲಿ ಮುಂಜಾಗ್ರತೆ ಇರಲಿ. ಪತಿ ಪತ್ನಿಯರ ಮುಸುಕಿನ ಗುದ್ದಾಟ ಮೂರನೆ ವ್ಯಕ್ತಿಯ ಸಹಾಯದಿಂದ ನಿವಾರಣೆಯಾಗುತ್ತದೆ. \

ತುಲಾ: ಒಬ್ಬ ವ್ಯಕ್ತಿಯನ್ನು ಇನ್ನೊಬ್ಬ ವ್ಯಕ್ತಿಯ ಜೊತೆಯಲ್ಲಿ ತುಲನೆ ಮಾಡುವುದನ್ನು ನಿಲ್ಲಿಸಿ. ರಕ್ಷಣಾ ವೃತ್ತಿಗೆ ಸಂಬಂಧಿಸಿದವರು ಎಚ್ಚರದಿಂದ ಕಾರ್ಯನಿರ್ವಹಿಸಿ. ಪುಸ್ತಕ ವ್ಯಾಪಾರಿಗಳಿಗೆ ಉತ್ತಮ ಲಾಭವಾಗುವುದು.

ವೃಶ್ಚಿಕ: ಬಹುದಿನಗಳ ನಿರೀಕ್ಷೆಯ ವಿಚಾರಗಳು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದಲ್ಲಿ ಲಾಭ ಕಾಣುವಿರಿ. ಕಾರ್ಯವನ್ನು ಜನರ ಎದುರು ಸಮರ್ಥಿಸಿಕೊಳ್ಳಲು ಸಾಕಷ್ಟು ಕಾರಣ ಸಿಗಲಿವೆ. ಸಿನಿಮಾ ವ್ಯವಹಾರಗಳಿಂದ ಭರ್ಜರಿ ಲಾಭ.

ಧನು: ಬದುಕಿನಲ್ಲಿ ಸಕಾರಾತ್ಮಕವಾಗಿ ಯೋಚಿಸುವುದನ್ನು ಅಭ್ಯಾಸ ಮಾಡಿ. ತಾತ್ಕಾಲಿಕ ಉದ್ಯೋಗ ದೊರೆತು ಅಲ್ಪ ಪ್ರಮಾಣದ ಸಮಾಧಾನವಾಗುವುದು. ಮನೆಯಲ್ಲಿ ಮಂಗಳ ಕಾರ್ಯದ ತಯಾರಿ ನಡೆಯುವುದು.

ಮಕರ: ಜವಾಬ್ದಾರಿಯನ್ನು ಕಳೆದುಕೊಳ್ಳಲು ತೆಗೆದುಕೊಂಡ ನಿರ್ಧಾರಗಳು ನಿಮ್ಮ ಗೌರವವನ್ನು ಕಡಿಮೆಗೊಳಿಸಬಹುದು. ವ್ಯವಸಾಯಕ್ಕೆ ಸಂಬಂಧಿಸಿದ ಕೆಲಸವನ್ನು ಸಂತೋಷದಿಂದ ಹಾಗೂ ಶ್ರದ್ಧೆಯಿಂದ ಮಾಡುವಿರಿ.

ಕುಂಭ: ಉತ್ತಮ ಒಡನಾಟ ಹೊಂದಿರುವ ವ್ಯಕ್ತಿಗಳೊಂದಿಗೆ ವ್ಯಾವಹಾರಿಕವಾಗಿ ಲಾಭ ತರುವ ಆಲೋಚನೆಯನ್ನು ಹಂಚಿಕೊಳ್ಳುವುದರಿಂದ ವಿವಿಧ ರೀತಿಯಲ್ಲಿ ನಷ್ಟ ಆಗುವುದು. ಆಸ್ತಿ ವಿಷಯಗಳು ಬಗೆಹರಿಯಲಿವೆ.

ಮೀನ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿದ್ದ ನಿಮಗೆ, ಅತಿ ಹೆಚ್ಚಿನ ವರಮಾನದ ಮಾರ್ಗವನ್ನು ಆಪ್ತ ಸ್ನೇಹಿತರೊಬ್ಬರು ತೋರುವರು. ಪರಿವಾರದವರೊಡನೆ ಸಂಚಾರ ಮಾಡುವಂತಹ ಸಾಧ್ಯತೆ ಇದೆ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,694
ಇಂದಿನ ಅಂತ್ಯ: 25,585
ದಿನದ ಗರಿಷ್ಠ: 25,494
108

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹550; 12 ಕ್ಕೆ ₹75
ಮೈಸೂರು: 100 ಕ್ಕೆ ₹550

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)
ಆರ್‌ಎಸ್‌ಎಸ್-4 ₹186.50
ಆರ್‌ಎಸ್‌ಎಸ್-5 ₹181
ಗುಡ್ ಲಾಟ್ ₹169.50

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಪ್ರ.ಕೆ.ಜಿ) ₹385-760
ದ್ವಿತಳಿ (ಪ್ರ.ಕೆ.ಜಿ) ₹289-902

ಮುದ್ರೆಮನೆ ಕಾಫಿ
ಎಪಿ ₹26250
ಎಸಿ ₹14420
ಆರ್‌ಪಿ ₹17200
ಆರ್‌ಸಿ ₹10260

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ)
ಶೇಂಗಾ (ರಿಫೈನ್ಡ್) ₹1630 (1630)
ಸೋಯಾ (ರಿಫೈನ್ಡ್) ₹1350 (1345)
ಸೂರ್ಯಕಾಂತಿ (ರಿಫೈನ್ಡ್) ₹1600 (1595)
ಪಾಮೋಲಿನ್ ₹1290 (1285)

ಭಾರತ: 2030ಕ್ಕೆ ಮೇಲ್ಮಧ್ಯಮ ಆದಾಯ

ಭಾರತದ ತಲಾವಾರು ಒಟ್ಟು ರಾಷ್ಟ್ರೀಯ ಆದಾಯದ ಬಗ್ಗೆ ಎಸ್‌ಬಿಐ ಅಂದಾಜು

ನವದೆಹಲಿ (ಪಿಟಿಐ): ಇನ್ನು ನಾಲ್ಕು ವರ್ಷಗಳಲ್ಲಿ ಭಾರತವು ಮೇಲ್ಮಧ್ಯಮ ವರ್ಗದ ಆದಾಯ ಹೊಂದಿರುವ ದೇಶವಾಗಿ ಪರಿವರ್ತನೆ ಕಾಣಲಿದೆ, ಆ ಮೂಲಕ ಚೀನಾ ಮತ್ತು ಇಂಡೊನೇಷ್ಯಾ ದೇಶಗಳ ಸಾಲಿಗೆ ಸೇರಲಿದೆ ಎಂದು ಎಸ್‌ಬಿಐ ರಿಸರ್ಚ್‌ನ ವರದಿಯು ಅಂದಾಜು ಮಾಡಿದೆ.

ಅಷ್ಟೇ ಅಲ್ಲ, 2028ರ ಸುಮಾರಿಗೆ ಭಾರತವು ಜರ್ಮನಿಯನ್ನು ಹಿಂದಿಕ್ಕಿ ವಿಶ್ವದ ಮೂರನೆಯ ಅತಿದೊಡ್ಡ ಅರ್ಥ ವ್ಯವಸ್ಥೆಯಾಗಿ ಬೆಳೆಯಲಿದೆ ಎಂದೂ ಹೇಳಿದೆ. ಮೊದಲ ಸ್ಥಾನದಲ್ಲಿ ಅಮೆರಿಕ, ಎರಡನೆಯ ಸ್ಥಾನದಲ್ಲಿ ಚೀನಾ ಇರಲಿವೆ. 1990ರಲ್ಲಿ 14ನೇ ಸ್ಥಾನದಲ್ಲಿದ್ದ ಭಾರತದ ಅರ್ಥ ವ್ಯವಸ್ಥೆಯ ಗಾತ್ರವು 2025ರಲ್ಲಿ ನಾಲ್ಕನೆಯ ಸ್ಥಾನಕ್ಕೆ ಏರಿಕೆ ಕಂಡಿದೆ.

ತಲಾವಾರು ಒಟ್ಟು ರಾಷ್ಟ್ರೀಯ ಆದಾಯವನ್ನು ಅಮೆರಿಕದ ಡಾಲರ್ ಲೆಕ್ಕದಲ್ಲಿ ಅಂದಾಜಿಸಿ ದೇಶಗಳನ್ನು ಕಡಿಮೆ ಆದಾಯ, ಕೆಳ ಮಧ್ಯಮ ಆದಾಯ, ಮೇಲ್ಮಧ್ಯಮ ಆದಾಯ, ಹೆಚ್ಚಿನ ಆದಾಯದ ರಾಷ್ಟ್ರಗಳು ಎಂದು ವಿಶ್ವ ಬ್ಯಾಂಕ್ ವರ್ಗೀಕರಿಸಿದೆ.



1990ರಲ್ಲಿ ವಿಶ್ವ ಬ್ಯಾಂಕ್ ಒಟ್ಟು 218 ದೇಶಗಳನ್ನು ಹೀಗೆ ವರ್ಗೀಕರಿಸಿತ್ತು. 51 ದೇಶಗಳು ಕಡಿಮೆ ಆದಾಯದ ವರ್ಗದಲ್ಲಿ ಇದ್ದವು. 56 ದೇಶಗಳು ಕೆಳ ಮಧ್ಯಮ ಆದಾಯದ ವರ್ಗದಲ್ಲಿ, 29 ದೇಶಗಳು ಮೇಲ್ಮಧ್ಯಮ ಆದಾಯದ ವರ್ಗದಲ್ಲಿ ಹಾಗೂ 39 ದೇಶಗಳು ಹೆಚ್ಚಿನ ಆದಾಯದ ವರ್ಗದಲ್ಲಿ ಇದ್ದವು.

2024ರಲ್ಲಿ ಪ್ರಕಟವಾಗಿರುವ ಅಂಕಿ–ಅಂಶಗಳ ಪ್ರಕಾರ 26 ದೇಶಗಳು ಮಾತ್ರವೇ ಕಡಿಮೆ ಆದಾಯದ ವರ್ಗದಲ್ಲಿವೆ. 87 ದೇಶಗಳು ಹೆಚ್ಚಿನ ಆದಾಯದ ವರ್ಗಕ್ಕೆ ಬಂದಿವೆ.

ಕಡಿಮೆ ಆದಾಯದ ವರ್ಗದಲ್ಲಿ ಇದ್ದ ಭಾರತವು ಕೆಳ ಮಧ್ಯಮ ಆದಾಯ ವರ್ಗಕ್ಕೆ ಬರಲು 60 ವರ್ಷ ತೆಗೆದುಕೊಂಡಿತು. 1962ರಲ್ಲಿ 90 ಡಾಲರ್‌ನಷ್ಟು ಇದ್ದ ಭಾರತದ ತಲಾವಾರು ಒಟ್ಟು ರಾಷ್ಟ್ರೀಯ ಆದಾಯವು 2007ರಲ್ಲಿ 910 ಡಾಲರ್‌ಗೆ ಹೆಚ್ಚಾಗಿದೆ. ಅದು ವಾರ್ಷಿಕವಾಗಿ ಶೇ 5.3ರಷ್ಟು ಬೆಳವಣಿಗೆ ಕಂಡಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

'ವಿಕಸಿತ ಭಾರತ ಗುರಿಯ ಪ್ರಕಾರ 2047ರ ವೇಳೆಗೆ ದೇಶದ ತಲಾವಾರು ಒಟ್ಟು ರಾಷ್ಟ್ರೀಯ ಆದಾಯವನ್ನು 13,936 ಡಾಲರ್‌ಗೆ ಹೆಚ್ಚಿಸಬೇಕು ಎಂದಾದರೆ, ದೇಶದ ತಲಾವಾರು ಒಟ್ಟು ರಾಷ್ಟ್ರೀಯ ಆದಾಯವು ಶೇ 7.5ರಷ್ಟು ಸಂಯುಕ್ತ ವಾರ್ಷಿಕ ಬೆಳವಣಿಗೆ ದರವನ್ನು (ಸಿಎಜಿಆರ್) ದಾಖಲಿಸಬೇಕು. ಈ ಗುರಿಯನ್ನು ಸಾಧಿಸಲು ಸಾಧ್ಯವಿದೆ ಎಂಬಂತೆ ಕಾಣುತ್ತಿದೆ. ಏಕೆಂದರೆ 2001ರಿಂದ 2024ರವರೆಗೆ ಅದು ಶೇ 8.3ರಷ್ಟು ಸಿಎಜಿಆರ್ ದರದಲ್ಲಿ ಬೆಳೆದಿದೆ' ಎಂದು ವರದಿ ವಿವರಿಸಿದೆ.

ಜಿಡಿಪಿ ಅಂದಾಜು ಪರಿಷ್ಕರಿಸಿದ ಐಎಂಎಫ್

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ, ಭಾರತದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರದ ಅಂದಾಜನ್ನು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಪರಿಷ್ಕರಿಸಿದೆ. ಈ ಬಾರಿ ಬೆಳವಣಿಗೆ ದರವು ಶೇ 7.3ರಷ್ಟು ಇರಲಿದೆ ಎಂದು ಅದು ಹೇಳಿದೆ. ಇದು ಈ ಮೊದಲಿನ ಅಂದಾಜಿಗಿಂತ ಶೇ 0.7ರಷ್ಟು ಹೆಚ್ಚು.

ಅರ್ಥ ವ್ಯವಸ್ಥೆಯ ಸ್ಥಿತಿಯು ನಿರೀಕ್ಷೆಗಿಂತ ಹೆಚ್ಚು ಉತ್ತಮವಾಗಿದೆ. ಇದು ಅಂದಾಜನ್ನು ಪರಿಷ್ಕರಿಸಿರುವುದಕ್ಕೆ ಕಾರಣ ಎಂದು ಐಎಂಎಫ್ ಹೇಳಿದೆ.

2026–27ರಲ್ಲಿ ಜಿಡಿಪಿ ಬೆಳವಣಿಗೆ ದರವು ಶೇ 6.4ರಷ್ಟು ಇರಲಿದೆ ಎಂದು ಕೂಡ ಐಎಂಎಫ್ ಅಂದಾಜು ಮಾಡಿದೆ. ಐಎಂಎಫ್‌ನ ಈ ಮೊದಲಿನ ಅಂದಾಜಿನಲ್ಲಿ 2026–27ರಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರವು ಶೇ 6.2ರಷ್ಟು ಇರಲಿದೆ ಎಂದು ಹೇಳಿತ್ತು.

ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯ ಸಿದ್ಧಪಡಿಸಿರುವ ಮೊದಲ ಮುಂಗಡ ಅಂದಾಜಿನ ಪ್ರಕಾರ, ಈ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರವು ಶೇ 7.4ರಷ್ಟು ಇರಲಿದೆ.

ಚುಟುಕೆ ಸುದ್ದಿ

5 ಲಕ್ಷ ಟನ್ ಗೋಧಿ ಹಿಟ್ಟು ರಫ್ತಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): 5 ಲಕ್ಷ ಟನ್‌ನಷ್ಟು ಗೋಧಿ ಹಿಟ್ಟು ಮತ್ತು ಸಂಬಂಧಿತ ಉತ್ಪನ್ನಗಳನ್ನು ರಫ್ತು ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ.

2022ರಲ್ಲಿ ಕೇಂದ್ರ ಸರ್ಕಾರವು ಗೋಧಿ ರಫ್ತನ್ನು ನಿರ್ಬಂಧಿಸಿತ್ತು. ಇದೀಗ ರಫ್ತು ಮೇಲಿನ ನಿರ್ಬಂಧಗಳನ್ನು ಭಾಗಶಃ ತೆಗೆದಿದೆ.

'ಗೋಧಿ ಹಿಟ್ಟು ಮತ್ತು ಸಂಬಂಧಿತ ಉತ್ಪನ್ನಗಳ ರಫ್ತು ನಿಷೇಧ ಮುಂದುವರಿಯುತ್ತದೆ. ಆದರೆ, ಈಗ 5 ಲಕ್ಷ ಟನ್‌ವರೆಗೆ ಗೋಧಿ ಹಿಟ್ಟು ಮತ್ತು ಸಂಬಂಧಿತ ಉತ್ಪನ್ನಗಳ ರಫ್ತಿಗೆ ಅನುಮತಿ ನೀಡಲಾಗಿದೆ' ಎಂದು ವಿದೇಶ ವ್ಯಾಪಾರಗಳ ಮಹಾನಿರ್ದೇಶನಾಲಯ (ಡಿಜಿಎಫ್‌ಟಿ) ಜನವರಿ 16ರ ಅಧಿಸೂಚನೆಯಲ್ಲಿ ತಿಳಿಸಿದೆ.

ಈ ಉತ್ಪನ್ನಗಳನ್ನು ರಫ್ತು ಮಾಡುವ ರಫ್ತುದಾರರು ಡಿಜಿಎಫ್‌ಟಿನಿಂದ ಅನುಮತಿ ಪಡೆಯಬೇಕಿರುತ್ತದೆ ಎಂದು ತಿಳಿಸಿದೆ.

ಕಾಬೂಲ್‌ನಲ್ಲಿ ಸ್ಫೋಟ: 7 ಜನ ಸಾವು

ಕಾಬೂಲ್ / ಅಫ್ಗಾನಿಸ್ತಾನ (ಎಪಿ): ನಗರದ ಮಧ್ಯಭಾಗದಲ್ಲಿ ಸೋಮವಾರ ಭಾರಿ ಸ್ಫೋಟ ಸಂಭವಿಸಿ, ಏಳು ಮಂದಿ ಮೃತಪಟ್ಟಿದ್ದು, 20ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ನಗರದಲ್ಲಿ ಶಸ್ತ್ರಚಿಕಿತ್ಸಾ ಸೌಲಭ್ಯ ನೀಡುತ್ತಿರುವ ಇಟಲಿಯ ವೈದ್ಯಕೀಯ ದತ್ತಿ ಸಂಸ್ಥೆ ತಿಳಿಸಿದೆ.

ರಾಜಧಾನಿ ಶಹರ್–ಇ–ನೌ ಜಿಲ್ಲೆಯಲ್ಲಿರುವ ರೆಸ್ಟೋರೆಂಟ್‌ನಲ್ಲಿ ಈ ಸ್ಫೋಟ ಸಂಭವಿಸಿದೆ. ಸ್ಫೋಟಕ್ಕೆ ಕಾರಣ ತಿಳಿದುಬಂದಿಲ್ಲ.

'ಸ್ಫೋಟದಲ್ಲಿ 20ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಏಳು ಮಂದಿ ಈಗಾಗಲೇ ಮೃತಪಟ್ಟಿದ್ದಾರೆ, ಗಾಯಗೊಂಡವರ ಸಂಖ್ಯೆ ಏರಿಕೆಯಾಗುವ ಸಾಧ್ಯತೆಯಿದೆ' ಎಂದು ಇಟಲಿಯ ಎನ್‌ಜಿಒ 'ಎಮರ್ಜೆನ್ಸಿ' ತಿಳಿಸಿದೆ.

ಮೃತರಲ್ಲಿ ನಾಲ್ವರು ಮಹಿಳೆಯರು ಹಾಗೂ ಮಗು ಕೂಡ ಸೇರಿದೆ ಎಂದು ಸಂಸ್ಥೆಯ ಅಫ್ಗಾನ್ ನಿರ್ದೇಶಕ ಡೆಜನ್ ಪಾನಿಕ್ ತಿಳಿಸಿದ್ದಾರೆ.

ಕೆಫೆ ಕಾಫಿ ಡೇ: ನೋಟಿಸ್‌ಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾರಿಷಸ್‌ನ ವಿವಿಧ ಕಂಪನಿಗಳಿಂದ ಪಡೆದಿರುವ ₹960 ಕೋಟಿ ಹೂಡಿಕೆ ಮೊತ್ತವನ್ನು ಭಾರತದ ಕಂಪನಿಗಳಲ್ಲಿ ಷೇರು ಖರೀದಿಸಲು ವಿನಿಯೋಗಿಸಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ 'ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್'ನ (ಸಿಡಿಇಎಲ್) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಾಳವಿಕಾ ಹೆಗ್ಡೆ ಅವರಿಗೆ ಜಾರಿ ನಿರ್ದೇಶನಾಲಯ ನೀಡಿರುವ ಷೋಕಾಸ್ ನೋಟಿಸ್‌ಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ನೋಟಿಸ್ ರದ್ದುಪಡಿಸುವಂತೆ ಕೋರಿ ಮಾಳವಿಕಾ ಹೆಗ್ಡೆ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ. ಶ್ಯಾಮ್‌ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ವಿಚಾರಣೆ ವೇಳೆ ಮಾಳವಿಕಾ ಪರ ಪದಾಂಕಿತ ಹಿರಿಯ ವಕೀಲ ಸಜನ್ ಪೂವಯ್ಯ, 'ಅಕ್ರಮ ನಡೆದಿದೆ ಎನ್ನಲಾದ ಆರೋಪದ ಸಂದರ್ಭದಲ್ಲಿ ಸಿದ್ಧಾರ್ಥ ಅವರು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿದ್ದರು. ಫೆಮಾ ಕಾಯ್ದೆ ಕಲಂ 43ರ ಅಡಿ ಸಿದ್ಧಾರ್ಥ ಅವರ ವಿರುದ್ಧ ಕ್ರಮ ಜರುಗಿಸಬಹುದಿತ್ತು. ಆದರೆ, ಸಿದ್ಧಾರ್ಥ ಅವರು 2019ರಲ್ಲೇ ನಿಧನರಾಗಿದ್ದು, ಅವರ ವಿರುದ್ಧ ನ್ಯಾಯಿಕ ಪ್ರಕ್ರಿಯೆ ನಡೆಸಲಾಗದು' ಎಂದು ಪ್ರತಿಪಾದಿಸಿದರು.

ಪ್ರಕರಣವೇನು?: ಮಾರಿಷಸ್‌ನ 'ಸ್ಟ್ಯಾಂಡರ್ಡ್ ಚಾರ್ಟರ್ಡ್ ಪ್ರೈವಟ್ ಈಕ್ವಿಟಿ', 'ಕೆಕೆಆರ್ ಮಾರಿಷಸ್ ಪಿಇ ಇನ್‌ವೆಸ್ಟ್‌ಮೆಂಟ್', 'ಅರ್ಡುನಿಯೊ ಹೋಲ್ಡಿಂಗ್ಸ್ ಲಿಮಿಟೆಡ್' ಮತ್ತು 'ಎನ್‌ಎಸ್‌ಆರ್ ಪಿಇ ಮಾರಿಷಸ್ ಎಲ್‌ಎಲ್‌ಸಿ'ಯಿಂದ ಒಟ್ಟಾರೆ ₹960 ಕೋಟಿ ವಿದೇಶಿ ನೇರ ಹೂಡಿಕೆಯನ್ನು ಸಿಡಿಇಎಲ್ 2010ರ ಫೆಬ್ರುವರಿ ಮತ್ತು ಮಾರ್ಚ್‌ನಲ್ಲಿ ಪಡೆದಿತ್ತು. ಇದನ್ನು ಭಾರತದ ಬೇರೆ ಕಂಪನಿಗಳಲ್ಲಿ ಷೇರು ಖರೀದಿಸಲು ಬಳಕೆ ಮಾಡಲಾಗಿದೆ ಎಂಬುದು ಜಾರಿ ನಿರ್ದೇನಾಲಯದ ಆರೋಪ. ಈ ಸಂಬಂಧ ಮಾಳವಿಕಾ ಅವರಿಗೆ ಫೆಮಾ ಕಾಯ್ದೆಯ ಕಲಂ 16ರ ಅಡಿ 2022ರ ನವೆಂಬರ್ 23ರಂದು ಷೋಕಾಸ್ ನೋಟಿಸ್ ಜಾರಿ ಮಾಡಲಾಗಿದೆ.

₹3 ಲಕ್ಷ ದಾಟಿದ ಬೆಳ್ಳಿ ದರ

ಒಂದನೇ ಪುಟದಿಂದ...

'ಚೀನಾವು ಜಗತ್ತಿನಲ್ಲಿ ಅತಿ ಹೆಚ್ಚು ಬೆಳ್ಳಿ ಉತ್ಪಾದಿಸುವ ರಾಷ್ಟ್ರಗಳ ಪೈಕಿ ಒಂದಾಗಿದ್ದು, ಬೆಳ್ಳಿ ರಫ್ತು ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸಿದೆ. ವಿದ್ಯುತ್ ಚಾಲಿತ ವಾಹನಗಳ ತಯಾರಿಕೆಯಲ್ಲಿ ಬೆಳ್ಳಿಗೆ ಬೇಡಿಕೆ ಹೆಚ್ಚುತ್ತಿದೆ, ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಗಳಿಂದಾಗಿ ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ತಮ್ಮ ಬಳಿ ಇರುವ ಕರೆನ್ಸಿಯನ್ನು ಮಾರಾಟ ಮಾಡಿ, ಚಿನ್ನ ಮತ್ತು ಬೆಳ್ಳಿ ಖರೀದಿಸಲು ಮುಂದಾಗುತ್ತಿವೆ. ಇವೆಲ್ಲವೂ ದರ ಏರಿಕೆಗೆ ಕಾರಣವಾಗಿವೆ. ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಬೆಳ್ಳಿ ಪೂರೈಕೆಯಲ್ಲಿ ಸದ್ಯಕ್ಕೆ ಕೊರತೆ ಉಂಟಾಗಿಲ್ಲ' ಎಂದು ತಿಳಿಸಿದರು.

'ಹೆಚ್ಚುತ್ತಿರುವ ಬೇಡಿಕೆಗೆ ತಕ್ಕಂತೆ ಬೆಳ್ಳಿ ಉತ್ಪಾದನೆ ಇಲ್ಲ. ಇದು ಬೆಳ್ಳಿ ಧಾರಣೆ ಹೆಚ್ಚಳಕ್ಕೆ ಪ್ರಮುಖ ಕಾರಣ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ (ಸರಕು) ವಿಭಾಗದ ಮುಖ್ಯಸ್ಥ ಹರೀಶ್ ವಿ. ತಿಳಿಸಿದರು.

ಬೆಳ್ಳಿ ಗಣಿಗಳಲ್ಲಿ ಉತ್ಪಾದನೆ ಹೆಚ್ಚಾಗಿಲ್ಲ. ಬೆಳ್ಳಿಯ ಮರುಬಳಕೆ ಪ್ರಮಾಣ ಕಡಿಮೆ ಇದೆ. ಹಬ್ಬ ಮತ್ತು ಮದುವೆ ಋತು ಅಂಗವಾಗಿ ಬೇಡಿಕೆ ಹೆಚ್ಚಾಗಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಆಗುತ್ತಿರುವುದರಿಂದ ಆಮದು ಮೌಲ್ಯ ದುಬಾರಿಯಾಗುತ್ತಿದೆ. ಇದು ಬೆಳ್ಳಿ ಬೆಲೆಯನ್ನು ದಾಖಲೆಯ ಗರಿಷ್ಠ ಮಟ್ಟಕ್ಕೆ ತಲುಪಿಸಿದೆ ಎಂದರು.

'ವಿದ್ಯುತ್ ಚಾಲಿತ ವಾಹನಗಳು, ಸೌರಫಲಕಗಳು, ಸುಧಾರಿತ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಕ್ಷೇತ್ರಗಳಲ್ಲಿ ಬೆಳ್ಳಿ ಬಳಕೆ ಹೆಚ್ಚಿದೆ. ಅಲ್ಲದೆ, ಬೆಳ್ಳಿಗೆ ಕೈಗಾರಿಕೆಗಳಲ್ಲಿ ಬೇಡಿಕೆ ಹೆಚ್ಚಾಗಿರುವುದು, ವಿವಿಧ ದೇಶಗಳಲ್ಲಿ ನಡೆಯುತ್ತಿರುವ ಯುದ್ಧಗಳ ಕಾರಣಕ್ಕೆ ಸೃಷ್ಟಿಯಾಗಿರುವ ಬಿಕ್ಕಟ್ಟಿನಿಂದ ಮುಂದಿನ ದಿನಗಳಲ್ಲಿ ಬೆಲೆ ಇನ್ನಷ್ಟು ಹೆಚ್ಚಳವಾಗಬಹುದು ಎಂದು ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಬೆಳ್ಳಿ ಖರೀದಿಗೆ ಮುಂದಾಗಿದ್ದಾರೆ. ಇದು ಬೆಲೆ ಏರಿಕೆಗೆ ಕಾರಣ' ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ಜತಿನ್ ತ್ರಿವೇದಿ ತಿಳಿಸಿದರು.

ಜಾಗತಿಕ ಮಟ್ಟದ ರಾಜಕೀಯ ವಿದ್ಯಮಾನಗಳು, ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಸೇರಿದಂತೆ ವಿವಿಧ ಕಾರಣಗಳು ಚಿನ್ನದ ದರದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತಿವೆ ಎಂದು ಬೆಂಗಳೂರಿನ ಜ್ಯುವೆಲರ್ಸ್ ಅಸೋಸಿಯೇಷನ್‌ನ ಕಾರ್ಯದರ್ಶಿ ಆರ್. ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.



ಟ್ರಂಪ್ ಸುಂಕ ಎಚ್ಚರಿಕೆ: ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್, ಎಟರ್ನಲ್ ಮತ್ತು ಐಸಿಐಸಿಐ ಬ್ಯಾಂಕ್‌ನ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದ ರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 324 ಅಂಶ ಇಳಿಕೆಯಾಗಿ, 83,246ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 108 ಅಂಶ ಕಡಿಮೆಯಾಗಿ, 25,585ಕ್ಕೆ ಕೊನೆಗೊಂಡಿದೆ.

'ಐರೋಪ್ಯ ಒಕ್ಕೂಟದ ಕೆಲವು ದೇಶಗಳ ಮೇಲೆ ಹೆಚ್ಚುವರಿ ಸುಂಕ ಹೇರುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ್ದಾರೆ. ಇದು ಅಮೆರಿಕ ಮತ್ತು ಐರೋಪ್ಯ ಒಕ್ಕೂಟದ ನಡುವಿನ ವ್ಯಾಪಾರಕ್ಕೆ ಸಂಬಂಧಿಸಿದಂತೆ ಆತಂಕ ಸೃಷ್ಟಿಸಿದೆ. ಇದರಿಂದ ಜಗತ್ತಿನ ವಿವಿಧ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸ್ಪೇನ್: ರೈಲು ಅಪಘಾತದಲ್ಲಿ 39 ಮಂದಿ ಸಾವು

ಅಡಮುಜ್ (ಎಪಿ): ಸ್ಪೇನ್‌ನ ಅಡಮುಜ್ ನಗರದ ಬಳಿ ಎರಡು ರೈಲುಗಳು ಡಿಕ್ಕಿಯಾಗಿ, 39 ಜನರು ಸಾವಿಗೀಡಾಗಿದ್ದಾರೆ. ಭಾನುವಾರ ರಾತ್ರಿ ಅಪಘಾತ ಸಂಭವಿಸಿದ್ದು, ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಲಾಗದಿಂದ ಮ್ಯಾಡ್ರಿಡ್‌ಗೆ ತೆರಳುತ್ತಿದ್ದ ರೈಲಿನಲ್ಲಿ 300 ಜನ ಪ್ರಯಾಣಿಕರಿದ್ದರು. ಈ ರೈಲು ರಾತ್ರಿ 7.45ಕ್ಕೆ ಹಳಿ ತಪ್ಪಿತು. ಈ ವೇಳೆ ಮ್ಯಾಡ್ರಿಡ್‌ನಿಂದ ಹುಯೆಲ್ವಾಗೆ ಸಂಚರಿಸುತ್ತಿದ್ದ ಇನ್ನೊಂದು ರೈಲು, ಹಳಿ ತಪ್ಪಿದ ರೈಲಿಗೆ ಡಿಕ್ಕಿಯಾಗಿದೆ. ಇದರಲ್ಲಿ 200 ಮಂದಿ ಪ್ರಯಾಣಿಕರಿದ್ದರು. ಘಟನೆಯಲ್ಲಿ 159 ಜನರು ಗಾಯಗೊಂಡಿದ್ದು, ಈ ಪೈಕಿ 29 ಮಂದಿಯ ಸ್ಥಿತಿ ಗಂಭೀರವಾಗಿದೆ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಪಿಎನ್‌ಬಿ ಲಾಭ ಶೇ 13ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ (ಪಿಎನ್‌ಬಿ) ನಿವ್ವಳ ಲಾಭ ಶೇ 13ರಷ್ಟು ಹೆಚ್ಚಳ ಕಂಡಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹4,508 ಕೋಟಿ ಲಾಭ ಗಳಿಸಿತ್ತು. ಅದು ಈ ಬಾರಿ ₹5,100 ಕೋಟಿಗೆ ಹೆಚ್ಚಳವಾಗಿದೆ. ವಸೂಲಾಗದ ಸಾಲದ ಪ್ರಮಾಣ ಕಡಿಮೆ ಆಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಸೋಮವಾರ ತಿಳಿಸಿದೆ.

ಬ್ಯಾಂಕ್‌ನ ಒಟ್ಟು ವರಮಾನವು ₹34,752 ಕೋಟಿಯಿಂದ ₹37,253 ಕೋಟಿಗೆ ಹೆಚ್ಚಳವಾಗಿದೆ. ಬಡ್ಡಿ ವರಮಾನವು ₹32,231 ಕೋಟಿಯಷ್ಟಾಗಿದೆ. ಒಟ್ಟು ವಸೂಲಾಗದ ಸಾಲದ ಪ್ರಮಾಣ (ಜಿಎನ್‌ಪಿಎ) ಶೇ 4.09ರಿಂದ ಶೇ 3.19ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.41ರಿಂದ ಶೇ 0.32ಕ್ಕೆ ಕಡಿಮೆ ಆಗಿದೆ.

ಪ್ರಾವಿಜನ್ ಕವರೇಜ್ ರೇಷಿಯೊ (ಪಿಸಿಆರ್) ಶೇ 96.99ರಷ್ಟಾಗಿದೆ. ಬ್ಯಾಂಕ್‌ನ ಒಟ್ಟು ವ್ಯವಹಾರ ಶೇ 9.5ರಷ್ಟು ಬೆಳವಣಿಗೆ ದಾಖಲಿಸಿದ್ದು, ₹28.91 ಲಕ್ಷ ಕೋಟಿಯಾಗಿದೆ. ಠೇವಣಿಯು ಶೇ 8.5ರಷ್ಟು ಏರಿಕೆಯಾಗಿದ್ದು, ₹16.60 ಲಕ್ಷ ಕೋಟಿಯಾಗಿದೆ. ಬ್ಯಾಂಕ್‌ನ ನೀಡಿದ ಸಾಲದ ಪ್ರಮಾಣದಲ್ಲಿ ಶೇ 10.9ರಷ್ಟು ಹೆಚ್ಚಳವಾಗಿದ್ದು, ₹12.31 ಲಕ್ಷ ಕೋಟಿಯಾಗಿದೆ.

ಬ್ಯಾಂಕ್‌ನ ಬಂಡವಾಳ ಮೀಸಲು ಅನುಪಾತ (ಸಿಎಆರ್) ಶೇ 15.41ರಿಂದ ಶೇ 16.77ಕ್ಕೆ ಹೆಚ್ಚಳವಾಗಿದೆ ಎಂದು ಬ್ಯಾಂಕ್ ತಿಳಿಸಿದೆ. ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ಬ್ಯಾಂಕ್ ₹11,679 ಕೋಟಿ ಲಾಭ ಗಳಿಸಿದೆ.

ಸೌತ್ ಇಂಡಿಯನ್ ಬ್ಯಾಂಕ್‌ಗೆ ₹374 ಕೋಟಿ ಲಾಭ

ಬೆಂಗಳೂರು: ಡಿಸೆಂಬರ್ ತ್ರೈಮಾಸಿಕದಲ್ಲಿ ಸೌತ್ ಇಂಡಿಯನ್ ಬ್ಯಾಂಕ್ ₹374.32 ಕೋಟಿ ನಿವ್ವಳ ಲಾಭ ಗಳಿಸಿದೆ. ಇದು ಸೌತ್ ಇಂಡಿಯನ್ ಬ್ಯಾಂಕ್ ಇದುವರೆಗೆ ತ್ರೈಮಾಸಿಕವೊಂದರಲ್ಲಿ ಕಂಡಿರುವ ಅತ್ಯಧಿಕ ಲಾಭ.

ಬ್ಯಾಂಕ್ ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹341.87 ಕೋಟಿ ಲಾಭ ಕಂಡಿತ್ತು. ಈ ಬಾರಿ ಲಾಭವು ಶೇ 9ರಷ್ಟು ಬೆಳವಣಿಗೆ ಕಂಡಿದೆ ಎಂದು ಪ್ರಕಟಣೆ ತಿಳಿಸಿದೆ.

ಬ್ಯಾಂಕ್‌ನ ಒಟ್ಟು ವಸೂಲಾಗದ ಸಾಲ (ಎನ್‌ಪಿಎ) ವಾರ್ಷಿಕ ಆಧಾರದ ಮೇಲೆ ಶೇ 1.63ರಷ್ಟು ಇಳಿಕೆಯಾಗಿದ್ದು, ಶೇ 4.30 ಇದ್ದಿದ್ದು ಶೇ 2.67ಕ್ಕೆ ತಲುಪಿದೆ. ನಿವ್ವಳ ಎನ್‌ಪಿಎ ಶೇ 0.80ರಷ್ಟು ಕಡಿಮೆ ಆಗಿದ್ದು, ಶೇ 1.25ರ ಮಟ್ಟದಿಂದ ಶೇ 0.45ಕ್ಕೆ ಇಳಿಕೆಯಾಗಿದೆ.

ಒಟ್ಟು ಸಾಲ ನೀಡಿಕೆಯು ವಾರ್ಷಿಕ ಆಧಾರದಲ್ಲಿ ₹9,798 ಕೋಟಿ ಹೆಚ್ಚಳವಾಗಿದೆ. ಕಾರ್ಪೊರೇಟ್ ವಲಯಕ್ಕೆ ನೀಡಿರುವ ಸಾಲದ ಮೊತ್ತವು ₹34,956 ಕೋಟಿಯಿಂದ ₹38,353 ಕೋಟಿಗೆ ಏರಿದೆ.

ಅಡಿಕೆ ಧಾರಣೆ

ಚಿತ್ರದುರ್ಗ	
ಆಪಿ	52559-52989
ಬೆಟ್ಟೆ	37629-38079
ಕೆಂಪುಗೋಟು	32109-32510
ರಾಶಿ	52039-52469
ಕುಮಟಾ	
ಚಾಲಿ	44569-49299
ಚಿಪ್ಪು	30189-36089
ಕೋಕ	12099-31869
ಫ್ಯಾಕ್ಟರಿ	9069-24829
ಹೊಸಚಾಲಿ	40599-44701
ಪುತ್ತೂರು	
ಕೋಕ	23000-28000
ಹೊಸತು	26000-46000
ಹಳತು	41500-53500
ಸಾಗರ	
ಬಿಳಿಗೋಟು	17869-35666
ಚಾಲಿ	21129-45599
ಕೋಕ	18989-32989
ಕೆಂಪುಗೋಟು	17229-42331
ರಾಶಿ	39399-58710
ಸಿಪ್ಪೆಗೋಟು	8399-24585
ಶಿವಮೊಗ್ಗ	
ಬೆಟ್ಟೆ	54000-66500
ಗೊರಬಲು	19020-41669
ರಾಶಿ	46499-56900
ಸರಕು	65109-90800
ಸಿದ್ದಾಪುರ	
ಬಿಳಿಗೋಟು	26299-37819
ಚಾಲಿ	46839-49444
ಕೋಕ	22899-28769
ಹೊಸಚಾಲಿ	37299-44299
ಕೆಂಪುಗೋಟು	28119-34889
ರಾಶಿ	48199-54489
ತಟ್ಟಿಬೆಟ್ಟೆ	36219-43699
ಶಿರಸಿ	
ಬೆಟ್ಟೆ	30599-52066
ಬಿಳಿಗೋಟು	21099-43160
ಚಾಲಿ	47299-51799
ಕೆಂಪುಗೋಟು	27019-39518
ರಾಶಿ	51809-57109

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಿಸಿ
90083 66666
support@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
https://bit.ly/40dPCqy

ರಾಜ್ಯದಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಏಕಕಾಲಕ್ಕೆ ನಡೆಸುವುದು ಸೂಕ್ತವೇ?

● ಹೌದು ● ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹20000-20000
ದಾವಣಗೆರೆ	₹12000-12000
ಪುತ್ತೂರು	₹6000-22500
ತಿಪಟೂರು	₹27000-28554
ತುರುವೇಕೆರೆ	₹27000-28400

ಮುಂಬೈ ಧಾರಣೆ (ಶೇಂಗಾ)

19-01-2026	
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8000-8100
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಪಾಮ್ ವಾರದ ಡೆಲಿವರಿ	1288 (1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	1510 (1505)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,43,300 (1,41,150)
ಬೆಳ್ಳಿ ಕೆ.ಜಿಗೆ	2,93,500 (2,81,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆ ಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಬೆಂಗಳೂರಿನ ಮನೆಗಳಲ್ಲಿ ಚಿಕ್ಕಮಕ್ಕಳನ್ನು / ವಯಸ್ಕರನ್ನು ನೋಡಿಕೊಳ್ಳಲು / ಮನೆಕೆಲಸ ಮಾಡಲು ಮಹಿಳೆಯರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ 13000-20000 ಉಚಿತ ಆಹಾರ, ವಸತಿ ನೀಡಲಾಗುತ್ತದೆ. 8197566700, 7259450815.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land

Out-Station

ಮಾರಾಟಕ್ಕಿದೆ ಕೊಡಗು ಜಿಲ್ಲೆ ಸೋಮವಾರಪೇಟೆ ಮುಖ್ಯರಸ್ತೆ ಎಂಜಿರೋಡಿನಲ್ಲಿ 14 ಸೆಂಟ್ ವಿಸ್ತೀರ್ಣದಲ್ಲಿನ ವಾಣಿಜ್ಯ ಮಳಿಗೆ ಮಾರಾಟಕ್ಕಿದೆ. ಆಸಕ್ತರುಸಂಪರ್ಕಿಸಿ: 9448143837, 8277083837

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಗಾಜಾ ಶಾಂತಿ ಮಂಡಳಿ: ರಷ್ಯಾಕ್ಕೆ ಆಹ್ವಾನ

ಮಾಸ್ಕೊ (ಪಿಟಿಐ): ಹಮಾಸ್ ಬಂಡುಕೋರರು ಮತ್ತು ಇಸ್ರೇಲ್ ಮಧ್ಯದ ಯುದ್ಧ ಅಂತ್ಯಗೊಳಿಸುವ ನಿಟ್ಟಿನಲ್ಲಿ ಅಮೆರಿಕದ ಪ್ರಸ್ತಾವಿತ ಕದನ ವಿರಾಮ ಒಪ್ಪಂದದ 2ನೇ ಹಂತದ ಅನ್ವಯ ರೂಪಿಸಲಾಗಿರುವ 'ಗಾಜಾ ಶಾಂತಿ ಮಂಡಳಿ' ಸೇರಲು ರಷ್ಯಾಕ್ಕೆ ಅಮೆರಿಕವು ಸೋಮವಾರ ಆಮಂತ್ರಣ ನೀಡಿದೆ.

'ಶಾಂತಿ ಮಂಡಳಿಯನ್ನು ಸೇರಿಕೊಳ್ಳುವಂತೆ ವ್ಲಾದಿಮಿರ್ ಪುಟಿನ್ ಅವರಿಗೆ ಆಮಂತ್ರಣ ಬಂದಿದೆ. ಇದರಲ್ಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗುವುದು. ಆ ಬಳಿಕ ಅಮೆರಿಕದೊಂದಿಗೆ ಮಾತುಕತೆ ನಡೆಸಿ, ಸ್ಪಷ್ಟತೆ ಪಡೆದುಕೊಳ್ಳಲಾಗುವುದು' ಎಂದು ರಷ್ಯಾ ಪ್ರತಿಕ್ರಿಯಿಸಿದೆ.

ಭಾರತದ ಪ್ರಧಾನಿ ನರೇಂದ್ರ ಮೋದಿ, ಪಾಕಿಸ್ತಾನದ ಪ್ರಧಾನಿ ಶಹಬಾಜ್ ಶರೀಫ್ ಅವರನ್ನೂ ಅಮೆರಿಕ ಆಹ್ವಾನಿಸಿದೆ. 'ಈ ಮಂಡಳಿಯ ಮೂಲಕ ವಿಶ್ವ ಸಂಸ್ಥೆಗಿಂತಲೂ ವಿಶಾಲ ವ್ಯಾಪ್ತಿ ಹೊಂದಿರುವ ಅಂತರರಾಷ್ಟ್ರೀಯ ಸಂಸ್ಥೆಯೊಂದನ್ನು ಹುಟ್ಟುಹಾಕಲು ಅಮೆರಿಕ ಯತ್ನಿಸುತ್ತಿದೆ' ಎಂದು ರಷ್ಯಾದ ಸುದ್ದಿ ವಾಹಿನಿಯೊಂದು ವಿಶ್ಲೇಷಿಸಿದೆ.

ಈ ಮಂಡಳಿಯು ಗಾಜಾದಲ್ಲಿ ಸ್ಥಿರತೆ ತರುವ ಉದ್ದೇಶ ಹೊಂದಿದ್ದರೂ, ಜಗತ್ತಿನ ಇತರ ಸಂಘರ್ಷ ನಿಲ್ಲಿಸುವಲ್ಲಿಯೂ ಈ ಮಂಡಳಿ ಕಾರ್ಯನಿರ್ವಹಿಸಲಿದೆ ಎನ್ನುವಂತೆ ಅಮೆರಿಕವು ಬಿಂಬಿಸುತ್ತಿದೆ ಎನ್ನಲಾಗಿದೆ.

'ಶಾಂತಿ ಬಗ್ಗೆ ಮಾತ್ರ ಯೋಚಿಸುವುದಿಲ್ಲ'

ಅಮೆರಿಕಕ್ಕೆ ಒಳಿತಾಗುವುದರತ್ತ ಗಮನ: ಟ್ರಂಪ್

ಓಸ್ಲೊ (ಎಎಫ್‌ಪಿ): ನೊಬೆಲ್ ಶಾಂತಿ ಪ್ರಶಸ್ತಿ ಗೆಲ್ಲಲು ವಿಫಲನಾಗಿರುವುದರಿಂದ ತಾನು ಇನ್ನು ಮುಂದೆ 'ಶಾಂತಿಯ ಬಗ್ಗೆ ಮಾತ್ರ ಯೋಚಿಸುವ' ಅಗತ್ಯವಿಲ್ಲ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನಾರ್ವೆ ಪ್ರಧಾನಿಗೆ ತಿಳಿಸಿದ್ದಾರೆ.

ಡೊನಾಲ್ಡ್ ಟ್ರಂಪ್

'ಎಂಟಕ್ಕೂ ಹೆಚ್ಚು ಯುದ್ಧಗಳನ್ನು ನಿಲ್ಲಿಸಿದ್ದರೂ ನಿಮ್ಮ ದೇಶವು ನನಗೆ ನೊಬೆಲ್ ಶಾಂತಿ ಪ್ರಶಸ್ತಿಯನ್ನು ನೀಡದಿರಲು ನಿರ್ಧರಿಸಿದೆ. ನಾನು ಇನ್ನು ಮುಂದೆ ಶಾಂತಿಯ ಬಗ್ಗೆ ಮಾತ್ರ ಯೋಚಿಸುವ ಜವಾಬ್ದಾರಿಯನ್ನು ಹೊರುವುದಿಲ್ಲ' ಎಂದು ಟ್ರಂಪ್ ಅವರು ನಾರ್ವೆ ಪ್ರಧಾನಿ ಯೋನಸ್ ಗಾರ್ ಸ್ಟೋರ್ ಅವರಿಗೆ ಸೋಮವಾರ ಕಳುಹಿಸಿದ ಸಂದೇಶದಲ್ಲಿ ತಿಳಿಸಿದ್ದಾರೆ.

'ಜಗತ್ತಿನಲ್ಲಿ ಶಾಂತಿ ನೆಲಸಬೇಕು ಎಂಬುದು ನನಗೆ ಆದ್ಯತೆಯಾಗಿದ್ದರೂ, ಯಾವುದರಿಂದ ಅಮೆರಿಕಕ್ಕೆ ಒಳಿತಾಗುವುದೋ ಅದರತ್ತ ಹೆಚ್ಚು ಗಮನಹರಿಸುತ್ತೇನೆ' ಎಂದಿದ್ದಾರೆ.

ಎಂಟು ಯುದ್ಧಗಳನ್ನು ನಿಲ್ಲಿಸಿರುವ ಕಾರಣ ನೊಬೆಲ್ ಶಾಂತಿ ಪ್ರಶಸ್ತಿಯನ್ನು ತನಗೇ ನೀಡಬೇಕು ಎಂದು ಟ್ರಂಪ್ ಕಳೆದ ವರ್ಷ ಹಲವು ಸಲ ಹೇಳಿದ್ದರು. ಆದರೆ ಪ್ರಶಸ್ತಿಯು ವೆನೆಜುವೆಲಾದ ವಿರೋಧ ಪಕ್ಷದ ನಾಯಕಿ ಮಾರಿಯಾ ಕೊರಿನಾ ಮಚಾದೊ ಅವರ ಪಾಲಾಗಿತ್ತು. ಮಚಾದೊ ಅವರು ತಮಗೆ ದೊರಕಿದ್ದ ನೊಬೆಲ್ ಶಾಂತಿ ಪುರಸ್ಕಾರವನ್ನು ಈಚೆಗೆ ಟ್ರಂಪ್ ಅವರಿಗೆ ಸಮರ್ಪಿಸಿದ್ದಾರೆ.

ಗ್ರೀನ್‌ಲ್ಯಾಂಡ್ ವಶ–ಪುನರುಚ್ಚಾರ: ವಿಶ್ವದ ಶಾಂತಿಯ ಹಿತದೃಷ್ಟಿಯಿಂದ ಸ್ವಾಯತ್ತ ಗ್ರೀನ್‌ಲ್ಯಾಂಡ್ ಅನ್ನು ಅಮೆರಿಕವು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕೆಂಬ ಬಯಕೆಯನ್ನು ಟ್ರಂಪ್ ಅವರು ಪುನರುಚ್ಚರಿಸಿದರು.

'ಗ್ರೀನ್‌ಲ್ಯಾಂಡ್ ಪ್ರದೇಶವು ರಷ್ಯಾ ಅಥವಾ ಚೀನಾದ ಕೈವಶವಾಗುವುದನ್ನು ತಪ್ಪಿಸಲು ಡೆನ್ಮಾರ್ಕ್‌ಗೆ ಸಾಧ್ಯವಿಲ್ಲ. ಗ್ರೀನ್‌ಲ್ಯಾಂಡ್ ಮೇಲೆ ನಾವು ಸಂಪೂರ್ಣ ನಿಯಂತ್ರಣ ಸಾಧಿಸುವವರೆಗೂ ಜಗತ್ತು ಸುರಕ್ಷಿತವಾಗಿರುವುದಿಲ್ಲ' ಎಂದು ಹೇಳಿದ್ದಾರೆ.

'ನಾರ್ವೆ ಸರ್ಕಾರ ನೀಡಿಲ್ಲ'

ಟ್ರಂಪ್ ಸಂದೇಶಕ್ಕೆ ಪ್ರತಿಕ್ರಿಯಿಸಿರುವ ನಾರ್ವೆ ಪ್ರಧಾನಿ, ನೊಬೆಲ್ ಶಾಂತಿ ಪ್ರಶಸ್ತಿಯನ್ನು ನಾರ್ವೆ ಸರ್ಕಾರ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

'ನೊಬೆಲ್ ಪ್ರಶಸ್ತಿ ವಿಜೇತರನ್ನು ಸ್ವತಂತ್ರ ನೊಬೆಲ್ ಸಮಿತಿಯು ಆಯ್ಕೆ ಮಾಡುತ್ತದೆ ಎಂಬುದನ್ನು ಟ್ರಂಪ್ ಒಳಗೊಂಡಂತೆ ಎಲ್ಲರಿಗೂ ಸ್ಪಷ್ಟವಾಗಿ ಹೇಳುತ್ತೇನೆ' ಎಂದಿದ್ದಾರೆ.

ಚೀನಾದ ಜನನ ಪ್ರಮಾಣದಲ್ಲಿ ಭಾರಿ ಇಳಿಕೆ

ಬ್ಯಾಂಕಾಕ್ (ಎಪಿ): ಚೀನಾವು ಜಗತ್ತಿನ ದೊಡ್ಡಣ್ಣನಾಗುವ ಯತ್ನದಲ್ಲಿದೆ. ಆದರೆ, ಇದನ್ನು ಸಾಧಿಸಲು ಬೇಕಿರುವ ಕಾರ್ಮಿಕ ವರ್ಗದ ಕೊರತೆ ದೊಡ್ಡ ಮಟ್ಟದಲ್ಲಿದೆ. ದಶಕದಿಂದ ರೂಢಿಸಿಕೊಂಡಿರುವ ಕುಟುಂಬಕ್ಕೊಂದು ಮಗುವಿನ ಮಿತಿಯೇ ಇದಕ್ಕೆ ಮುಖ್ಯ ಕಾರಣ. ಈ ಮಿತಿಗೆ ಒಗ್ಗಿಕೊಂಡಿರುವ ಎರಡು ತಲೆಮಾರು, ಹೆಚ್ಚು ಮಕ್ಕಳು ಹೊಂದಲು ಮುಂದಾಗುತ್ತಿಲ್ಲ. ಇದು ಸರ್ಕಾರವನ್ನು ಚಿಂತೆಗೀಡು ಮಾಡಿದೆ.

ದೇಶದ ಜನಸಂಖ್ಯೆಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸರ್ಕಾರವು ಸೋಮವಾರ ಬಿಡುಗಡೆ ಮಾಡಿದೆ. ಚೀನಾದ ಒಟ್ಟು ಜನಸಂಖ್ಯೆಯ ಶೇಕಡ 23ರಷ್ಟು ಜನರು 60 ವರ್ಷ ಮೇಲ್ಪಟ್ಟ ವೃದ್ಧರೇ ಆಗಿದ್ದಾರೆ. 1949ರಿಂದ ಇಲ್ಲಿಯವರೆಗಿನ ಲೆಕ್ಕಾಚಾರದಲ್ಲಿ ಚೀನಾದ ಜನನ ಪ್ರಮಾಣವು 2025ರಲ್ಲಿ ತೀವ್ರವಾಗಿ ಕುಸಿದಿದೆ. ಸದ್ಯ ಈಗ ಪ್ರತಿ ಸಾವಿರ ಜನರಿಗೆ ಜನನ ಪ್ರಮಾಣ ಶೇ 5.63ರಷ್ಟಿದೆ.

ಜನರ ಮೇಲೆ ಶಸ್ತ್ರಾಸ್ತ್ರ ಪ್ರಯೋಗಿಸಬೇಡಿ ಎಂಬ ಹೇಳಿಕೆಯ ವಿಡಿಯೊ ಪ್ರಸಾರ

ಇರಾನ್ ದೂರದರ್ಶನ ಸ್ಥಗಿತಗೊಳಿಸಿದ ಹ್ಯಾಕರ್‌ಗಳು

ದುಬೈ (ಎಪಿ): ಇರಾನ್ ಸರ್ಕಾರಿ ಸ್ವಾಮ್ಯದ ದೂರದರ್ಶನದ ಪ್ರಸಾರವನ್ನು ಸ್ಥಗಿತಗೊಳಿಸಿದ ಹ್ಯಾಕರ್‌ಗಳು, 'ದೇಶದಿಂದ ಗಡಿಪಾರಾಗಿರುವ ರಾಜ ರೆಜಾ ಪಹ್ಲವಿ ಅವರನ್ನು ಬೆಂಬಲಿಸುವ ಹಾಗೂ ಜನರ ಮೇಲೆ ಭದ್ರತಾ ಪಡೆಗಳು ಶಸ್ತ್ರಾಸ್ತ್ರ ಪ್ರಯೋಗಿಸಬಾರದು' ಎಂದು ಹೇಳಿರುವ ವಿಡಿಯೊ ತುಣುಕುಗಳನ್ನು ಪ್ರಸಾರ ಮಾಡಿದ್ದಾರೆ.

'ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಬ್ರಾಡ್‌ಕಾಸ್ಟಿಂಗ್' ವಾಹಿನಿಯು ಭಾನುವಾರ ರಾತ್ರಿ ವಿಡಿಯೊವೊಂದನ್ನು ಪ್ರಸಾರ ಮಾಡಿದೆ. ಇದರಲ್ಲಿ ರೆಜಾ ಪಹ್ಲವಿ ಅವರ ಎರಡು ತುಣುಕುಗಳನ್ನು ತೋರಿಸಲಾಗಿದೆ. ನಂತರ, ಇರಾನ್ ಪೊಲೀಸರ ಸಮವಸ್ತ್ರದಲ್ಲಿದ್ದ ಭದ್ರತಾ ಪಡೆಗಳ ಮತ್ತು ಇತರರ ದೃಶ್ಯಗಳನ್ನು ಪ್ರಸಾರ ಮಾಡಲಾಗಿದೆ. ಇತರರು ತಮ್ಮ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟಿದ್ದಾರೆ ಮತ್ತು ಜನರಿಗೆ ನಿಷ್ಠರಾಗಿರುವುದಾಗಿ ಪ್ರಮಾಣ ಮಾಡಿದ್ದಾರೆ' ಎಂದು ಹೇಳಿರುವ ವಿಡಿಯೊ ಪ್ರಸಾರ ಮಾಡಲಾಗಿದೆ. ಆದರೆ, ಇದಕ್ಕೆ ಯಾವುದೇ ಸಾಕ್ಷ್ಯಗಳನ್ನು ನೀಡಿಲ್ಲ.



ಇರಾನ್ ಜನರಿಗೆ ಬೆಂಬಲ ಸೂಚಿಸಿ ಇರಾನಿಯನ್ ಸಮುದಾಯದ ಸದಸ್ಯರು ಕ್ಯಾಲಿಫೋರ್ನಿಯಾದ ಲಾಸ್ ಏಂಜಲೀಸ್‌ನಲ್ಲಿ ಪ್ರತಿಭಟಿಸಿದರು —ಎಎಫ್‌ಪಿ ಚಿತ್ರ

'ಇದು ಸೇನೆ ಮತ್ತು ಭದ್ರತಾ ಪಡೆಗಳಿಗೆ ಒಂದು ಸಂದೇಶ' ಎಂದು ಗ್ರಾಫಿಕ್ಸ್‌ನಲ್ಲಿ ಬರೆಯಲಾಗಿದೆ. 'ನಿಮ್ಮ ಶಸ್ತ್ರಾಸ್ತ್ರಗಳನ್ನು ಜನರ ಕಡೆಗೆ ಗುರಿಯಾಗಿಸಬೇಡಿ. ಸ್ವಾತಂತ್ರ್ಯಕ್ಕಾಗಿ ಇರಾನ್‌ನೊಂದಿಗೆ ಕೈಜೋಡಿಸಿ' ಎಂದು ಸಲಹೆ ನೀಡಲಾಗಿದೆ.

'ಪ್ರತಿಭಟನೆಗಳನ್ನು ಹತ್ತಿಕ್ಕಲು ಸರ್ಕಾರ ನಡೆಸುತ್ತಿರುವ ಕಾರ್ಯಾಚರಣೆಯಿಂದ ಕನಿಷ್ಠ 3,919 ಮಂದಿ ಮೃತಪಟ್ಟಿದ್ದಾರೆ. ಇದರ ನಡುವೆಯೇ ಈ ಹ್ಯಾಕಿಂಗ್ ನಡೆದಿದೆ. ಸರ್ಕಾರವು ಇಂಟರ್ನೆಟ್ ಸ್ಥಗಿತಗೊಳಿಸಿದ್ದರೂ ಮಾಹಿತಿ ಸೋರಿಕೆಯಾಗಿರುವುದರಿಂದ ಜನರ ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗಬಹುದು' ಎಂದು ಕಾರ್ಯಕರ್ತರು ಆತಂಕ ವ್ಯಕ್ತಪಡಿಸಿದ್ದಾರೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ವಿರುದ್ಧ ಸೇನಾ ಕಾರ್ಯಾಚರಣೆ ನಡೆಸುವ ಎಚ್ಚರಿಕೆ ನೀಡಿದ ಬಳಿಕ, ಅಮೆರಿಕ ಮತ್ತು ಇರಾನ್ ನಡುವೆ ಸಂಘರ್ಷ ಹೆಚ್ಚಾಗಿದೆ. ಕೆಲ ದಿನಗಳ ಹಿಂದಷ್ಟೇ ದಕ್ಷಿಣ ಚೀನಾ ಸಮುದ್ರದಲ್ಲಿದ್ದ ಅಮೆರಿಕದ ಯುದ್ಧನೌಕೆಯು ರಾತ್ರೋರಾತ್ರಿ ಸಿಂಗಪುರವನ್ನು ದಾಟಿ ಮಲಕ್ಕಾ ಜಲಸಂಧಿಯನ್ನು ಪ್ರವೇಶಿಸಿದೆ. ಈ ಮಾರ್ಗವು ಮಧ್ಯಪ್ರಾಚ್ಯದತ್ತ ಸಾಗುತ್ತದೆ.

ರಾಜ್ಯಕ್ಕೆ ಚಿಕ್ಕಾಸು; ಮಿತ್ರರಿಗೆ ನಿಧಿ

ಒಂದನೇ ಪುಟದಿಂದ...

ಆಂಧ್ರ ಪ್ರದೇಶದಲ್ಲಿ 2025ರ ಜನವರಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, '2024ರ ಜೂನ್‌ನಿಂದ ಇಲ್ಲಿಯವರೆಗೆ ಆಂಧ್ರ ಪ್ರದೇಶಕ್ಕೆ ಕೇಂದ್ರ ಸರ್ಕಾರವು ₹3 ಲಕ್ಷ ಕೋಟಿ ಆರ್ಥಿಕ ಸಹಾಯ ನೀಡಿದೆ' ಎಂದು ಹೇಳಿಕೊಂಡಿದ್ದರು. ಸಚಿವರ ಈ ಮಾತೇ ನೆರೆ ರಾಜ್ಯದ ಮೇಲಿನ ಪ್ರೀತಿಗೆ ಸಾಕ್ಷಿ. ಇದರಲ್ಲಿ ತೆರಿಗೆ ಪಾಲು, ಸಹಾಯಾನುದಾನ ಹಾಗೂ ಕೇಂದ್ರದ ಪ್ರಾಯೋಜಿತ ಯೋಜನೆಗಳು ಸೇರಿಲ್ಲ. ಮತ್ತೊಂದೆಡೆ, ಕೇಂದ್ರ ಸರ್ಕಾರದ ಮಧ್ಯಸ್ಥಿಕೆ ಹಾಗೂ ಚಂದ್ರಬಾಬು ನಾಯ್ಡು ಅವರ ಚತುರ ನಡೆಯಿಂದಾಗಿ ಗೂಗಲ್‌ನ ಎಐ ಡೇಟಾ ಸೆಂಟರ್ ವಿಶಾಖಪಟ್ಟಣದಲ್ಲಿ ಸ್ಥಾಪನೆಯಾಗಲಿದೆ. ₹87,250 ಕೋಟಿ ಮೊತ್ತದ ಈ ಕೇಂದ್ರ ಸ್ಥಾಪನೆಗಾಗಿ ಇತ್ತೀಚೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಕರ್ನಾಟಕದ 24 ಇಲಾಖೆಗಳ ಪ್ರಸ್ತಾವಗಳು ಅನುದಾನಕ್ಕಾಗಿ ಹಾಗೂ ಅನುಮೋದನೆಗಾಗಿ ವರ್ಷಗಳಿಂದ ಕೇಂದ್ರದ ವಿವಿಧ ಸಚಿವಾಲಯಗಳ ಮುಂದೆ ಇವೆ. ಈ ಪ್ರಸ್ತಾವಗಳಿಗೆ ಸಚಿವಾಲಯಗಳು ನೂರಾರು ಬಾರಿ ತಕರಾರುಗಳನ್ನು ಎತ್ತಿವೆ. ರಾಜ್ಯದ ಇಲಾಖೆಗಳು ಉತ್ತರವನ್ನೂ ಕೊಟ್ಟಿವೆ. ಇವುಗಳಲ್ಲಿ ಒಂದೇ ಒಂದು ಪ್ರಸ್ತಾವಕ್ಕೂ ಇತ್ತೀಚೆಗೆ ಅನುಮೋದನೆ ಸಿಕ್ಕಿಲ್ಲ. ವಿಶೇಷವೆಂದರೆ, ಎನ್‌ಡಿಎ ಮೈತ್ರಿಕೂಟದಲ್ಲಿ ಆಂಧ್ರದ ಟಿಡಿಪಿ, ಬಿಹಾರದ ಜೆಡಿಯು ಹಾಗೂ ಕರ್ನಾಟಕದ ಜೆಡಿಎಸ್ ಪಾಲುದಾರರು.

ಕೇಂದ್ರದ ಮುಂದಿರುವ ರಾಜ್ಯದ ಪ್ರಸ್ತಾವಗಳು

ಜಲಶಕ್ತಿ	6	ಅಲ್ಪಸಂಖ್ಯಾತ	1
ರೈಲ್ವೆ	2	ಮೀನುಗಾರಿಕೆ	4
ಬಂದರು	36	ಅಂಕಿ ಅಂಶ ಮತ್ತು ಯೋಜನೆ ಅನುಷ್ಠಾನ	2
ಆರೋಗ್ಯ	1	ಪ್ರವಾಸೋದ್ಯಮ	3
ಗೃಹ	2	ಕಾರ್ಮಿಕ	5
ನಾಗರಿಕ ವಿಮಾನಯಾನ	4	ಕೃಷಿ	2
ಹೆದ್ದಾರಿ	19	ಗಣಿ	8
ಹಣಕಾಸು	1	ವಸತಿ	3
ಗ್ರಾಮೀಣಾಭಿವೃದ್ಧಿ	7	ದೂರಸಂಪರ್ಕ	1
ಯುವ ಸಬಲೀಕರಣ	31	ಐಟಿ	1
ಸಮಾಜ ಕಲ್ಯಾಣ	3	ಆಹಾರ	6
ಕಾನೂನು	3		
ಪರಿಸರ	1		

(*ಇದರಲ್ಲಿ ಕೆಲವು ಪ್ರಸ್ತಾವಗಳಲ್ಲಿ ಕೇಂದ್ರದ ಅನುದಾನ ಕೋರಲಾಗಿದ್ದರೆ, ಇನ್ನೂ ಹಲವು ಪ್ರಸ್ತಾವಗಳಲ್ಲಿ ಕೇಂದ್ರದ ಅನುಮೋದನೆ ಕೇಳಲಾಗಿದೆ)

ಕ್ರಾಂತಿ–ಹೋರಾಟದ ಲ್ಯಾಂಡ್‌ಲಾರ್ಡ್

'ಕಾಟೇರ' ಸಿನಿಮಾದ ಕಥೆಗಾರ ಜಡೇಶ ಕೆ. ಹಂಪಿ ನಿರ್ದೇಶನದ, ದುನಿಯಾ ವಿಜಯ್ ನಟನೆಯ ಸಿನಿಮಾ 'ಲ್ಯಾಂಡ್‌ಲಾರ್ಡ್' ಜ.23ರಂದು ತೆರೆಕಾಣುತ್ತಿದೆ. ದುನಿಯಾ ವಿಜಯ್ ಜನ್ಮದಿನದ (ಜ.20) ಹೊಸ್ತಿಲಲ್ಲಿ ಸಿನಿಮಾದ ಟ್ರೇಲರ್ ರಿಲೀಸ್ ಆಗಿದ್ದು, ಮತ್ತೊಂದು ಗಟ್ಟಿಯಾದ ಕಥೆಯೊಂದಿಗೆ ಜಡೇಶ ತೆರೆ ಮೇಲೆ ಬರುವ ಸೂಚನೆ ನೀಡಿದ್ದಾರೆ.

'ಜಂಟಲ್‌ಮ್ಯಾನ್', 'ಗುರುಶಿಷ್ಯರು' ಚಿತ್ರಗಳ ನಿರ್ದೇಶಕ ಜಡೇಶ, ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಹಾಗೂ 'ಚೋಮನ ದುಡಿ' ಕೃತಿಗಳ ಸ್ಫೂರ್ತಿಯಿಂದ ಈ ಕಥೆ ಹೆಣೆದಿದ್ದಾರೆ. ಮಾಡಿದ ಕೂಲಿಗೆ ಕಾಸು, ಅಸಮಾನತೆ, ದಬ್ಬಾಳಿಕೆ, ಕ್ರಾಂತಿ–ಹೋರಾಟದ ಕಥೆಯುಳ್ಳ ಸಿನಿಮಾ ಇದಾಗಿದೆ ಎನ್ನುವುದು ಟ್ರೇಲರ್ ಮೂಲಕ ಸ್ಪಷ್ಟ. ಈ ಸಿನಿಮಾದಲ್ಲಿ ನಾಯಕನಾಗಿ ವಿಜಯ್ ನಟಿಸಿದ್ದು, ಇದು ಅವರ 29ನೇ ಸಿನಿಮಾ. ಹಿಂದೆಂದೂ ಕಾಣಿಸಿಕೊಳ್ಳದ ಪಾತ್ರ ಹಾಗೂ ಶೈಲಿಯಲ್ಲಿ ವಿಜಯ್ ಕಾಣಿಸಿಕೊಂಡಿದ್ದಾರೆ. ಖಳನಾಯಕನಾಗಿ ರಾಜ್ ಬಿ.ಶೆಟ್ಟಿ ಬಣ್ಣಹಚ್ಚಿದ್ದಾರೆ. ಹಳ್ಳಿ ಹಿನ್ನೆಲೆಯ ಈ ಕಥೆ 80–90ರ ದಶಕದಲ್ಲಿರುವಂತೆ ಚಿತ್ರೀಕರಣಗೊಂಡಿದೆ. ಅಸ್ಪೃಶ್ಯತೆ ಹೋರಾಟವನ್ನು ಕೋಲಾರ ಭಾಗದ ಕನ್ನಡದಲ್ಲೇ ಸೆರೆಹಿಡಿಯಲಾಗಿದೆ. ಸ್ವಾವಲಂಬಿಯಾಗಬೇಕು ಎನ್ನುವ ನಾಯಕನ ಯೋಚನೆ ಹೇಗೆ ಕ್ರಾಂತಿಯಾಗುತ್ತದೆ ಎನ್ನುವ ಕಥಾಹಂದರ ಹೊಂದಿರುವ ಚಿತ್ರದಲ್ಲಿ ರಚಿತಾ ರಾಮ್ 18 ವರ್ಷದ ಮಗಳಿರುವ ಹಳ್ಳಿಯ ಹೆಣ್ಣಾಗಿ ಕಾಣಿಸಿಕೊಂಡಿದ್ದಾರೆ.

ಉಮಾಶ್ರೀ, ರಾಕೇಶ್ ಅಡಿಗ, ರಿತನ್ಯಾ, ಶಿಶಿರ್ ಬೈಕಾಡಿ, ಅಚ್ಯುತ್ ಕುಮಾರ್, ಮಿತ್ರ, ಅಭಿಷೇಕ್ ದಾಸ್ ಹೀಗೆ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ. ಸಾರಥಿ ಫಿಲಂಸ್ ಲಾಂಛನದಲ್ಲಿ ಕೆ.ವಿ. ಸತ್ಯಪ್ರಕಾಶ್ ಹಾಗೂ ಹೇಮಂತ್ ಗೌಡ ಕೆ.ಎಸ್ ನಿರ್ಮಿಸಿರುವ ಈ ಸಿನಿಮಾಗೆ ಸ್ವಾಮಿ ಜೆ. ಗೌಡ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನವಿದೆ.

ಹಾಟ್‌ಸ್ಟಾರ್‌ನಲ್ಲಿ ಜ.23ಕ್ಕೆ ಮಾರ್ಕ್

ಸುದೀಪ್

ನಟ ಸುದೀಪ್ ನಟನೆಯ, ಸತ್ಯಜ್ಯೋತಿ ಫಿಲ್ಮ್ಸ್ ಹಾಗೂ ಕಿಚ್ಚ ಕ್ರಿಯೇಷನ್ಸ್ ನಿರ್ಮಾಣದ 'ಮಾರ್ಕ್' ಸಿನಿಮಾ ಜ.23ರಂದು ಜಿಯೊಹಾಟ್‌ಸ್ಟಾರ್‌ನಲ್ಲಿ ಸ್ಟ್ರೀಮ್ ಆಗಲಿದೆ.

ಅದೇ ದಿನದಂದು ಜೀ5ನಲ್ಲಿ '45' ಕೂಡಾ ಸ್ಟ್ರೀಮ್ ಆಗಲಿದೆ. ಒಂದೇ ದಿನ (ಡಿ.25) ತೆರೆಗೆ ಬಂದ ಈ ಸಿನಿಮಾಗಳು ಜ.23ರಂದೇ ಒಟಿಟಿಯಲ್ಲೂ ಸ್ಟ್ರೀಮ್ ಆಗಲಿವೆ. ವಿಜಯ್ ಕಾರ್ತಿಕೇಯ ನಿರ್ದೇಶನದ 'ಮಾರ್ಕ್' ಸಿನಿಮಾದಲ್ಲಿ ನವೀನ್ ಚಂದ್ರ, ಶೈನ್ ಟಾಮ್ ಚಾಕೋ, ಗುರು ಸೋಮಸುಂದರಮ್, ಗೋಪಾಲಕೃಷ್ಣ ದೇಶಪಾಂಡೆ, ಯೋಗಿ ಬಾಬು, ರೋಶನಿ ಪ್ರಕಾಶ್ ಮತ್ತಿತರರು ನಟಿಸಿದ್ದಾರೆ. 'ಮ್ಯಾಕ್ಸ್'ನಲ್ಲಿರುವಂತೆ 'ಮಾರ್ಕ್'ನಲ್ಲಿಯೂ ಸುದೀಪ್ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದು, ಅಜಯ್ ಮಾರ್ಕಂಡೇಯ(ಮಾರ್ಕ್)ಆಗಿ ಬಣ್ಣಹಚ್ಚಿದ್ದಾರೆ.

ಮಾದಕವಸ್ತು, ಮಕ್ಕಳ ಅಪಹರಣ, ರಾಜಕೀಯದಲ್ಲಿನ ತಲ್ಲಣಗಳು ಚಿತ್ರದ ಕಥಾವಸ್ತುವಾಗಿದ್ದು, 36 ಗಂಟೆಗಳಲ್ಲಿ ಇವುಗಳನ್ನೆಲ್ಲಾ 'ಮಾರ್ಕ್' ಹೇಗೆ ಎದುರಿಸುತ್ತಾನೆ ಎನ್ನುವುದೇ ಸಿನಿಮಾ ಕಥೆಯಾಗಿದೆ. ಚಿತ್ರಕ್ಕೆ ಅಜನೀಶ್ ಲೋಕನಾಥ್ ಸಂಗೀತ, ಶೇಖರ್ ಚಂದ್ರ ಛಾಯಾಚಿತ್ರಗ್ರಹಣವಿದೆ.

ಲಕ್ಷ್ಮೀಪುತ್ರನ ಆಗಮನ

ನಟ ಚಿಕ್ಕಣ್ಣ ನಾಯಕರಾಗಿ ನಟಿಸಿರುವ ಎರಡನೇ ಸಿನಿಮಾ 'ಲಕ್ಷ್ಮೀಪುತ್ರ'ನ ಫಸ್ಟ್‌ಲುಕ್ ಇತ್ತೀಚೆಗೆ ರಿಲೀಸ್ ಆಗಿದೆ.

ಸಿನಿಮಾವನ್ನು ನಿರ್ದೇಶಕ ಎ.ಪಿ.ಅರ್ಜುನ್ ಪತ್ನಿ ಅನ್ನಪೂರ್ಣ ಅರ್ಜುನ್ ನಿರ್ಮಾಣ ಮಾಡಿದ್ದು, ವಿಜಯ್ ಎಸ್.ಸ್ವಾಮಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಚಿತ್ರದಲ್ಲಿ ಚಿಕ್ಕಣ್ಣಗೆ ಜೋಡಿಯಾಗಿ ವಂದಿತಾ ನಟಿಸಿದ್ದಾರೆ. ತಾರಾ ಚಿಕ್ಕಣ್ಣನ ತಾಯಿಯಾಗಿ ಅಭಿನಯಿಸಿದ್ದಾರೆ. ಚಿತ್ರದಲ್ಲಿ ಕುರಿ ಪ್ರತಾಪ್, ಧರ್ಮಣ್ಣ ಸೇರಿದಂತೆ ದೊಡ್ಡ ತಾರಾಗಣವಿದೆ. ಅರ್ಜುನ್ ಜನ್ಯ ಸಂಗೀತ ಚಿತ್ರಕ್ಕಿದ್ದು, ಎ.ಪಿ.ಅರ್ಜುನ್ ಸಾಹಿತ್ಯ ಬರೆದಿದ್ದಾರೆ. ತಾಯಿ ಮಗನ ಬಾಂಧವ್ಯದ ಕಥೆ ಚಿತ್ರದಲ್ಲಿದೆ. ಚಿತ್ರದ ಆ್ಯಕ್ಷನ್ ಸನ್ನಿವೇಶಗಳನ್ನು ಮಾಸ್ ಮಾದ ನಿರ್ದೇಶನ ಮಾಡಿದ್ದಾರೆ. ಗಿರೀಶ್ ಆರ್. ಗೌಡ ಛಾಯಾಚಿತ್ರಗ್ರಹಣ ಸಿನಿಮಾಗಿದೆ.

ಚಿಕ್ಕಣ್ಣ

'ತೆನಾಲಿ ಡಿಎ, LL.B'ಯಲ್ಲಿ ಕೋಮಲ್

ತಮ್ಮ ಸಿನಿ ಜೀವನದ ಸೆಕೆಂಡ್ ಇನಿಂಗ್ಸ್ ಆರಂಭಿಸಿರುವ ನಟ ಕೋಮಲ್ ಸಾಲು ಸಾಲು ಸಿನಿಮಾಗಳಲ್ಲಿ ತೊಡಗಿಸಿಕೊಂಡಿದ್ದಾರೆ. 'ಯಲಾಕುನ್ನಿ', 'ಕೋಣ' ಬಳಿಕ 'ತೆನಾಲಿ ಡಿಎ, ಎಲ್‌ಎಲ್.ಬಿ' ಮೂಲಕ ಪ್ರೇಕ್ಷಕರನ್ನು ನಗಿಸಲು ಮತ್ತೊಮ್ಮೆ ಬರುತ್ತಿದ್ದಾರೆ.

ಸಿದ್ದುವ್(ಸಿದ್ದು) ಈ ಸಿನಿಮಾ ನಿರ್ದೇಶಿಸುತ್ತಿದ್ದು, ಶೀರ್ಷಿಕೆಯೇ ಹೇಳುವಂತೆ ಕೋಮಲ್ ಲಾಯರ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಓದಿನಲ್ಲಿ ಜಸ್ಟ್ ಪಾಸ್ ಆಗಿರುವ ತೆನಾಲಿಯ ವಕೀಲ ವೃತ್ತಿಯಲ್ಲಿನ ಕಥೆ ಇದಾಗಿದೆ. ಈ ಹಿಂದೆ ವಿಜಯ ರಾಘವೇಂದ್ರ ನಟನೆಯ 'ಮರೀಚಿ' ಸಿನಿಮಾವನ್ನು ಸಿದ್ದು ನಿರ್ದೇಶಿಸಿದ್ದರು. ಇದೀಗ ಕೋಮಲ್‌ಗಾಗಿ ಅವರು ವಿಭಿನ್ನವಾದ ಹಾಗೂ ಈಗಿನ ಕಾಲಘಟ್ಟಕ್ಕೆ ಸರಿಹೊಂದುವ ಕಥೆಯನ್ನು ಬರೆದಿದ್ದಾರೆ ಎಂದಿದೆ ಚಿತ್ರತಂಡ. ವಿಚ್ಛೇದನ ಕೊಡಿಸುವ ಲಾಯರ್ ಜೀವನದಲ್ಲೇ ವಿಚ್ಛೇದನದ ಸ್ಥಿತಿ ಬಂದಾಗ ಏನಾಗುತ್ತದೆ ಎನ್ನುವ ಕಥೆ ಸಿನಿಮಾದಲ್ಲಿರಲಿದೆ ಎನ್ನಲಾಗಿದೆ.

ಸದ್ಯ ಪೋಸ್ಟರ್ ಬಿಡುಗಡೆ ಮಾಡಿರುವ ಚಿತ್ರತಂಡ ಮೇ ತಿಂಗಳಲ್ಲಿ ಚಿತ್ರೀಕರಣಕ್ಕೆ ಇಳಿಯಲಿದೆ. ಇದೇ ಮೊದಲ ಬಾರಿಗೆ ಲಾಯರ್ ಆಗಿ ಅಭಿನಯ ಮಾಡಲಿರುವ ಕೋಮಲ್ ನಿಜ ಜೀವನದಲ್ಲಿಯೂ ಎಲ್‌ಎಲ್.ಬಿ ಓದಿದ್ದಾರೆ. ಚಿತ್ರಕ್ಕೆ ಸಿದ್ದು ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ಸಿದ್ದು ಜೊತೆಗೆ ಸಂತೋಷ್ ಮಾಯಪ್ಪ, ಪ್ರದೀಪ್ ಕುಮಾರ್ ಮಹಾಲಿಂಗಯ್ಯ, ರೇಣುಕಾಪ್ರಸಾದ್ ಬಂಡವಾಳ ಹಾಕಿದ್ದಾರೆ. ರಿತ್ವಿಕ್ ಮುರಳೀಧರನ್ ಸಂಗೀತ ನಿರ್ದೇಶನ, ಉದಯ್ ಲೀಲಾ ಛಾಯಾಚಿತ್ರಗ್ರಹಣ ಚಿತ್ರಕ್ಕಿರಲಿದೆ.

ಈ ಸಿನಿಮಾ ಜೊತೆಗೆ 'ಸಂಗೀತಾ ಬಾರ್ ಆ್ಯಂಡ್ ರೆಸ್ಟೋರೆಂಟ್', 'ರೋಲೆಕ್ಸ್' ಸಿನಿಮಾಗಳು ಕೋಮಲ್ ಕೈಯಲ್ಲಿದ್ದು, 'ವಾರೆವ್ಹಾ-2' ಸಿನಿಮಾ ಮಾಡುವ ಯೋಚನೆಯಲ್ಲೂ ಅವರು ಇದ್ದಾರೆ.

ಕೋಮಲ್

ಗ್ರಾಮೀಣರ 'ಕೆಲಸದ ಹಕ್ಕು' ಕಳವು: ಆರೋಪ

ಕೇಂದ್ರ ನಿರ್ಧರಿಸಿದಂತೆ 'ರೇವಡಿ' ಆಗಲಿದೆ ವಿಬಿ– ಜಿ ರಾಮ್ ಜಿ: ಖರ್ಗೆ, ರಾಹುಲ್

ನವದೆಹಲಿ (ಪಿಟಿಐ): 'ದೇಶದ ಗ್ರಾಮೀಣ ಜನರಿಗೆ ಕೆಲಸವು ಇನ್ನು ಮುಂದೆ ಹಕ್ಕಾಗಿ ಉಳಿಯುವುದಿಲ್ಲ. ಬದಲಿಗೆ ಮೋದಿ ಸರ್ಕಾರ ನಿರ್ಧರಿಸಿದಂತೆ ವಿತರಿಸಬೇಕಾದ 'ರೇವಡಿ' (ಉಚಿತ ಕೊಡುಗೆಗಳು) ಆಗಿ ಬದಲಾಗಲಿದೆ' ಎಂದು ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಟೀಕಿಸಿದ್ದಾರೆ.

'ವಿಕಸಿತ ಭಾರತ– ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ' (ವಿಬಿ– ಜಿ ರಾಮ್ ಜಿ) ಕಾಯ್ದೆ ಮೂಲಕ ರಾಜ್ಯಗಳಿಗೆ ಆರ್ಥಿಕ ಹೊರೆಯಾಗುವ ಜತೆಗೆ, ಜನರ ಕೆಲಸದ ಹಕ್ಕನ್ನೂ ಕದಿಯಲಾಗುತ್ತದೆ' ಎಂದು ಅವರು ಗ್ರಾಮೀಣ ಜನರಿಗಾಗಿ ಬರೆದಿರುವ ಪತ್ರದಲ್ಲಿ ಆರೋಪಿಸಿದ್ದಾರೆ.

'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' (ನರೇಗಾ) ಕಾಯ್ದೆ ಮರುಸ್ಥಾಪಿಸುವಂತೆ ಒತ್ತಾಯಿಸಿ ಕಾಂಗ್ರೆಸ್ ದೇಶದಾದ್ಯಂತ ಕೈಗೊಂಡಿರುವ 'ನರೇಗಾ ಬಚಾವೊ ಸಂಗ್ರಾಮ'ದ ಭಾಗವಾಗಿ ಈ ಪತ್ರ ಬರೆಯಲಾಗಿದೆ. ಈ ಅಭಿಯಾನ ಜನವರಿ 10ರಿಂದ ಆರಂಭವಾಗಿದ್ದು, ಫೆಬ್ರುವರಿ 25ರವರೆಗೆ ನಡೆಯಲಿದೆ.

ಮಲ್ಲಿಕಾರ್ಜುನ ಖರ್ಗೆ

ರಾಹುಲ್ ಗಾಂಧಿ

ಈ ಪತ್ರವನ್ನು ಎಲ್ಲ ಸ್ಥಳೀಯ ಭಾಷೆಗಳಿಗೆ ಅನುವಾದಿಸಿ ಗ್ರಾಮೀಣರಿಗೆ ತಲುಪಿಸುವಂತೆ ಕಾಂಗ್ರೆಸ್ ತನ್ನ ರಾಜ್ಯ ಘಟಕಗಳ ಅಧ್ಯಕ್ಷರಿಗೆ ಸೂಚಿಸಿದೆ.

'20 ವರ್ಷಗಳ ಹಿಂದೆ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದ ಕಾಂಗ್ರೆಸ್ ಸರ್ಕಾರವು ನರೇಗಾ ಕಾಯ್ದೆ ಜಾರಿಗೆ ತರುವ ಮೂಲಕ ಕೆಲಸ ಮಾಡುವ ಸಾಂವಿಧಾನಿಕ ಹಕ್ಕಿಗೆ ಜೀವ ತುಂಬಿತ್ತು. ಅಂದಿನಿಂದ ನರೇಗಾ 180 ಕೋಟಿಗೂ ಹೆಚ್ಚು ದಿನಗಳ ಕೆಲಸವನ್ನು ಸೃಜಿಸಿದೆ. ಗ್ರಾಮ ಪಂಚಾಯಿತಿಗಳಿಗೆ ಅಧಿಕಾರ ನೀಡುವ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಪಡಿಸಿದೆ' ಎಂದು ಪತ್ರದಲ್ಲಿ ಹೇಳಲಾಗಿದೆ.

'ಮೋದಿ ಸರ್ಕಾರ ನರೇಗಾದ ಆತ್ಮವನ್ನು ನಾಲ್ಕು ರೀತಿಯಲ್ಲಿ ನಾಶ ಮಾಡಲು ಮುಂದಾಗಿದೆ. ನಿಮ್ಮ ಕೆಲಸದ ಹಕ್ಕನ್ನು ಕದಿಯಲಾಗುತ್ತದೆ. ದೇಶದಾದ್ಯಂತ ಪ್ರತಿಯೊಂದು ಗ್ರಾಮೀಣ ಕುಟುಂಬಕ್ಕೂ ಕೆಲಸವು ಕಾನೂನುಬದ್ಧ ಖಾತರಿಯಾಗಿತ್ತು. ಯಾವುದೇ ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಬಯಸುವ ಕುಟುಂಬಕ್ಕೆ 15 ದಿನಗಳಲ್ಲಿ ಕೆಲಸ ಒದಗಿಸಬೇಕಾಗಿತ್ತು. ಆದರೆ, ಕೆಲಸವು ಇನ್ನು ಮುಂದೆ ಹಕ್ಕಾಗಿರುವುದಿಲ್ಲ. ಈ ಯೋಜನೆಯಡಿ ಯಾವ ಗ್ರಾಮ ಪಂಚಾಯಿತಿಗೆ ಕೆಲಸ ನೀಡಬೇಕು ಎಂಬುದನ್ನು ಮೋದಿ ಸರ್ಕಾರ ನಿರ್ಧರಿಸುತ್ತದೆ. ವೇತನದ ಹಕ್ಕನ್ನು ಕಸಿದುಕೊಳ್ಳಲಾಗುತ್ತದೆ' ಎಂದು ಆರೋಪಿಸಲಾಗಿದೆ.

'ಸುಳ್ಳು ಸುದ್ದಿ ಹರಡುತ್ತಿರುವ ಕಾಂಗ್ರೆಸ್'

'ವಿಬಿ–ಜಿ ರಾಮ್ ಜಿ ಯೋಜನೆ ಬಗ್ಗೆ ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಸುಳ್ಳು ಸುದ್ದಿ ಹರಡುತ್ತಿದ್ದಾರೆ' ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಆರೋಪಿಸಿದ್ದಾರೆ.

'ಈ ಯೋಜನೆಯಡಿ ಕೆಲವು ಪಂಚಾಯಿತಿಗಳಲ್ಲಿ ಮಾತ್ರ ಉದ್ಯೋಗ ಕಲ್ಪಿಸಲಾಗುತ್ತದೆ ಎಂದು ವಿರೋಧ ಪಕ್ಷಗಳು ಸುಳ್ಳು ಹೇಳುತ್ತಿವೆ. ಈ ಹೊಸ ಕಾಯ್ದೆಯು ಜನರ ಕೆಲಸದ ಹಕ್ಕನ್ನು ಬಲಪಡಿಸುತ್ತದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದ್ದಾರೆ.

'ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಬಲಪಡಿಸುತ್ತಿಲ್ಲ, ಬದಲಿಗೆ ದುರ್ಬಲಗೊಳಿಸುತ್ತಿದ್ದಾರೆ. ಕಾಂಗ್ರೆಸ್ ತನ್ನ ವಿಚಾರ, ಸಿದ್ಧಾಂತ ಮತ್ತು ಆದರ್ಶಗಳನ್ನು ಕೈಬಿಟ್ಟಿದೆ' ಎಂದು ದೂರಿದ್ದಾರೆ.

ಶಿವರಾಜ್ ಸಿಂಗ್

'ವಿಬಿ–ಜಿ, ರಾಮ್ ಜಿ ಎಂದರೆ ಹಳ್ಳಿಗಳ ಅಭಿವೃದ್ಧಿ. ನಾವು ಮನರೇಗಾ ಯೋಜನೆಯನ್ನು ಉತ್ತಮಗೊಳಿಸಲು ಪ್ರಯತ್ನಿಸುತ್ತಿದ್ದೇವೆ. ನಮ್ಮ ಸರ್ಕಾರ ₹9 ಲಕ್ಷ ಕೋಟಿ ಅನುದಾನ ನೀಡಿರುವುದೇ ಇದಕ್ಕೆ ಸಾಕ್ಷಿ. ಆದರೆ, ಯುಪಿಎ ಸರ್ಕಾರ ₹2 ಲಕ್ಷ ಕೋಟಿ ಮಾತ್ರ ಅನುದಾನ ನೀಡಿತ್ತು' ಎಂದು ಅವರು ತಿಳಿಸಿದ್ದಾರೆ.

'100 ದಿನಗಳ ಬದಲು 125 ದಿನಗಳ ಕೆಲಸ ನೀಡುತ್ತಿದ್ದೇವೆ. 15 ದಿನಗಳಲ್ಲಿ ನಿರುದ್ಯೋಗ ಭತ್ಯೆ ನೀಡುವ ಅವಕಾಶ ಕಲ್ಪಿಸಲಾಗಿದೆ' ಎಂದಿದ್ದಾರೆ.

ಚಿಟಿಕೆ ಸುದ್ದಿ

2ನೇ ಬಾರಿ ವಿಜಯ್ ವಿಚಾರಣೆ

ನವದೆಹಲಿ (ಪಿಟಿಐ): ಕರೂರು ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಟಿವಿಕೆ ಪಕ್ಷದ ಮುಖ್ಯಸ್ಥ, ನಟ ವಿಜಯ್ ಅವರನ್ನು ಕೇಂದ್ರ ತನಿಖಾ ಸಂಸ್ಥೆಯು (ಸಿಬಿಐ) ಎರಡನೇ ಬಾರಿಗೆ ಆರು ಗಂಟೆಗಳ ವಿಚಾರಣೆ ನಡೆಸಿತು.

ವಿಜಯ್

ಇಲ್ಲಿನ ಲೋಧಿ ರಸ್ತೆಯಲ್ಲಿರುವ ಸಿಬಿಐನ ಕೇಂದ್ರ ಕಚೇರಿಗೆ ವಿಜಯ್ ಸೋಮವಾರ ಬೆಳಿಗ್ಗೆ 10:20ಕ್ಕೆ ವಿಚಾರಣೆಗಾಗಿ ಹಾಜರಾಗಿದ್ದರು. ಸಂಜೆ 5ಕ್ಕೆ ಇಲ್ಲಿಂದ ತೆರಳಿದರು. ಸಿಬಿಐನ ಭ್ರಷ್ಟಾಚಾರ ನಿಗ್ರಹ ಇಲಾಖೆಯಿಂದ ಆಯ್ಕೆಯಾದ ಉಪ ಸೂಪರಿಂಟೆಂಡೆಂಟ್ ದರ್ಜೆಯ ಅಧಿಕಾರಿಯೊಬ್ಬರ ನೇತೃತ್ವದ ತಂಡದ ಅಧಿಕಾರಿಗಳು ವಿಜಯ್ ಅವರನ್ನು ವಿಚಾರಣೆ ನಡೆಸಿದರು.

ರ‍್ಯಾಲಿಗೆ ಸಂಬಂಧಿಸಿದ ನಿರ್ಧಾರಗಳು, ವಿಜಯ್ ಅವರು ತಡವಾಗಿ ಆಗಮಿಸಿದ್ದಕ್ಕೆ ಕಾರಣ, ನಂತರದ ಭಾಷಣ, ಜನಸಂದಣಿ ನಿಭಾಯಿಸುವಲ್ಲಿ ಆದಂತಹ ಸಮಸ್ಯೆಗಳು ಸೇರಿದಂತೆ ವಿವಿಧ ವಿಚಾರಗಳ ಕುರಿತು ಅಧಿಕಾರಿಗಳು ವಿಜಯ್ ಅವರನ್ನು ಪ್ರಶ್ನಿಸಿದ್ದಾರೆ ಎಂದು ತಿಳಿದುಬಂದಿದೆ.

ಪ್ಯಾರಾಟ್ರೂಪರ್ ಸಾವು

ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ಕಿಶ್ತ್‌ವಾರ್ ಜಿಲ್ಲೆಯಲ್ಲಿ ಭಯೋತ್ಪಾದಕರ ಜೊತೆ ನಡೆದ ಗುಂಡಿನ ಚಕಮಕಿಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಪ್ಯಾರಾಟ್ರೂಪರ್ ಹವಾಲ್ದಾರ್ ಗಜೇಂದ್ರ ಸಿಂಗ್ ಸೋಮವಾರ ಮೃತಪಟ್ಟಿದ್ದಾರೆ.

ಸೊನ್ನಾರ್ ಗ್ರಾಮದಲ್ಲಿ ಪಾಕಿಸ್ತಾನ ಮೂಲದ ಜೈಷ್ ಎ ಮೊಹಮ್ಮದ್ (ಜೆಇಎಂ) ಭಯೋತ್ಪಾದಕರು ಅಡಗಿರುವ ಮಾಹಿತಿ ಆಧರಿಸಿ 'ಆಪರೇಷನ್ ತ್ರಾಶಿ–1' ಹೆಸರಿನಲ್ಲಿ ಕಾರ್ಯಾಚರಣೆ ನಡೆಯಿತು. ಯೋಧರು, ಪೊಲೀಸರು, ಸಿಆರ್‌ಪಿಎಫ್ ಸಿಬ್ಬಂದಿ ಪಾಲ್ಗೊಂಡಿದ್ದರು.

ಉನ್ನಾವ್ ಅತ್ಯಾಚಾರ ಸಂತ್ರಸ್ತೆ ತಂದೆಯ ಕಸ್ಟಡಿ ಸಾವು ಪ್ರಕರಣ

ಸೆಂಗರ್ ಶಿಕ್ಷೆ ಅಮಾನತಿಗೆ ನಕಾರ

ನವದೆಹಲಿ (ಪಿಟಿಐ): ಉನ್ನಾವ್ ಅತ್ಯಾಚಾರ ಸಂತ್ರಸ್ತೆಯ ತಂದೆ ಕಸ್ಟಡಿಯಲ್ಲಿ ಮೃತಪಟ್ಟ ಪ್ರಕರಣದಲ್ಲಿ ಬಿಜೆಪಿಯ ಉಚ್ಚಾಟಿತ ನಾಯಕ ಕುಲದೀಪ್ ಸಿಂಗ್ ಸೆಂಗರ್‌ಗೆ ವಿಧಿಸಿರುವ 10 ವರ್ಷಗಳ ಜೈಲು ಶಿಕ್ಷೆ ಅಮಾನತುಗೊಳಿಸಲು ದೆಹಲಿ ಹೈಕೋರ್ಟ್ ಸೋಮವಾರ ನಿರಾಕರಿಸಿದೆ.

'ಶಿಕ್ಷೆಯನ್ನು ಅಮಾನತುಗೊಳಿಸಬೇಕು ಎಂಬ ಮನವಿಯನ್ನು ಸಮರ್ಥಿಸಲು ಸಾಕಷ್ಟು ಪುರಾವೆಗಳನ್ನು ಒದಗಿಸಿಲ್ಲ. ಆದ್ದರಿಂದ ಶಿಕ್ಷೆ ಅಮಾನತುಗೊಳಿಸುವಂತೆ ಕೋರಿ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಲಾಗಿದೆ' ಎಂದು ನ್ಯಾಯಮೂರ್ತಿ ರವೀಂದರ್ ಡುಡೇಜಾ ಹೇಳಿದರು.

'ಅರ್ಜಿದಾರರು ಏಳೂವರೆ ವರ್ಷಗಳ ಸುದೀರ್ಘ ಸೆರೆವಾಸ ಅನುಭವಿಸಿದ್ದು, ಅವರು ಸಲ್ಲಿಸಿರುವ ಮೇಲ್ಮನವಿಗಳ ವಿಚಾರಣೆಯು ವಿಳಂಬವಾಗಿದೆ ಎಂಬುದರ ಅರಿವು ನ್ಯಾಯಾಲಯಕ್ಕೆ ಇದೆ. ಆದರೆ ಈ ವಿಳಂಬಕ್ಕೆ ಅರ್ಜಿದಾರರೇ ಕಾರಣ. ಏಕೆಂದರೆ, ಶಿಕ್ಷೆಗೆ ಮಧ್ಯಂತರ ತಡೆಯಾಜ್ಞೆ ನೀಡಬೇಕು, ಜಾಮೀನು ವಿಸ್ತರಣೆ ಮತ್ತು ಶಿಕ್ಷೆಯನ್ನು ಅಮಾನತುಗೊಳಿಸಬೇಕು ಎಂದು ಕೋರಿ ಅವರು ಹಲವು ಅರ್ಜಿಗಳನ್ನು ಸಲ್ಲಿಸಿದ್ದಾರೆ' ಎಂದು ಹೇಳಿದರು.

'ಮೇಲ್ಮನವಿಗಳನ್ನು ಅರ್ಹತೆಯ ಆಧಾರದ ಮೇಲೆ ತ್ವರಿತ ರೀತಿಯಲ್ಲಿ ವಿಚಾರಣೆ ನಡೆಸಿದರೆ ಉದ್ದೇಶವನ್ನು ಪೂರೈಸಲಾಗುತ್ತದೆ' ಎಂದು ಹೇಳಿ ವಿಚಾರಣೆಯನ್ನು ಫೆಬ್ರುವರಿ 3ಕ್ಕೆ ಮುಂದೂಡಿದರು.

ಉನ್ನಾವ್ ಅತ್ಯಾಚಾರ ಸಂತ್ರಸ್ತೆಯ ತಂದೆ ಕಸ್ಟಡಿಯಲ್ಲಿ ಮೃತಪಟ್ಟ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯವು 2020ರ ಮಾರ್ಚ್ 13ರಂದು ಸೆಂಗರ್‌ಗೆ 10 ವರ್ಷ ಜೈಲು ಹಾಗೂ ₹10 ಲಕ್ಷ ದಂಡ ವಿಧಿಸಿದೆ.

ಇದೇ ಪ್ರಕರಣದಲ್ಲಿ ನ್ಯಾಯಾಲಯವು ಸೆಂಗರ್ ಅವರ ಸಹೋದರ ಅತುಲ್ ಸಿಂಗ್ ಸೆಂಗರ್ ಮತ್ತು ಇತರ ಐವರಿಗೆ 10 ವರ್ಷಗಳ ಶಿಕ್ಷೆ ವಿಧಿಸಿದೆ.

'ಭಯೋತ್ಪಾದನೆ ಬೆಂಬಲಿಸದಿರಿ'

ನವದೆಹಲಿ (ಪಿಟಿಐ): ಭಯೋತ್ಪಾದನೆ ಬಗ್ಗೆ 'ಶೂನ್ಯ ಸಹಿಷ್ಣುತೆ' ಪಾಲಿಸಬೇಕು ಮತ್ತು ಭಾರತದ ನೆರೆಯ ದೇಶದಲ್ಲಿ ಭಯೋತ್ಪಾದಕ ಚಟುವಟಿಕೆಗಳ ಮೂಲಸೌಕರ್ಯದ ಉತ್ತೇಜನಕ್ಕೆ ಸಹಾಯ ಮಾಡಬಾರದು ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಪೋಲೆಂಡ್ ವಿದೇಶಾಂಗ ಸಚಿವ ರಾಡೋಸ್ಲಾವ್ ಸಿಕೋರ್‌ಸ್ಕಿ ಅವರಿಗೆ ಸೋಮವಾರ ಹೇಳಿದ್ದಾರೆ.

ಪೋಲೆಂಡ್–ಪಾಕಿಸ್ತಾನ ಅಕ್ಟೋಬರ್‌ನಲ್ಲಿ ನೀಡಿದ್ದ ಜಂಟಿ ಹೇಳಿಕೆಯಲ್ಲಿ ಕಾಶ್ಮೀರದ ಬಗ್ಗೆ ಉಲ್ಲೇಖಿಸಿದ್ದಕ್ಕೆ ಸಂಬಂಧಿಸಿ ಅವರು ಈ ಸ್ಪಷ್ಟ ಸಂದೇಶವನ್ನು ಸಿಕೋರ್‌ಸ್ಕಿ ಅವರಿಗೆ ನೀಡಿದ್ದಾರೆ.

ಕುಷ್ಠ ರೋಗದಿಂದ ಮೇಸ್ತ್ರಿ ಕೆಲಸ ತ್ಯಜಿಸಿ ಭಿಕ್ಷಾಟನೆ ನಡೆಸುತ್ತಿದ್ದ ವ್ಯಕ್ತಿ

ಭಿಕ್ಷುಕನ ಬಳಿ 3 ಮನೆ, ಕಾರು, 3 ಆಟೊ

ಇಂದೋರ್ (ಪಿಟಿಐ): ಈ ಹಿಂದೆ ಮೇಸ್ತ್ರಿಯಾಗಿದ್ದು, ಕುಷ್ಠ ರೋಗ ಬಾಧಿಸಿದ ಬಳಿಕ ಭಿಕ್ಷೆ ಬೇಡುತ್ತಿದ್ದ 50 ವರ್ಷದ ವ್ಯಕ್ತಿ ಬಳಿ ಮೂರು ಮನೆಗಳು, ಒಂದು ಕಾರು ಮತ್ತು ಬಾಡಿಗೆಗೆ ಬಿಟ್ಟ ಮೂರು ಆಟೊರಿಕ್ಷಾಗಳು ಇರುವುದು ಗೊತ್ತಾಗಿದೆ.

ಇಂದೋರ್‌ನಲ್ಲಿ ಭಿಕ್ಷಾಟನೆ ನಿರ್ಮೂಲನೆಗೆ ಕೈಗೊಂಡ ಅಭಿಯಾನ ಸಂದರ್ಭದಲ್ಲಿ ಈ ವಿಷಯ ಬಯಲಿಗೆ ಬಂದಿದೆ.

ಈ ಮಾಹಿತಿ ತಿಳಿದು ಅಧಿಕಾರಿಗಳು ದಂಗಾಗಿದ್ದಾರೆ.

ಸಾರ್ವಜನಿಕರೊಬ್ಬರು ನೀಡಿದ ಮಾಹಿತಿ ಮೇರೆಗೆ ಮಧ್ಯಪ್ರದೇಶದ ಸರಫಾ ಎಂಬ ಪ್ರದೇಶದಿಂದ ಅಧಿಕಾರಿಗಳು ಭಿಕ್ಷುಕನನ್ನು ರಕ್ಷಿಸಿದರು. 'ಇವರು ಹಲವರಿಗೆ ಚಿನಿವಾರ ಪೇಟೆಯಲ್ಲಿ ಹೂಡಿಕೆ ಮಾಡಲು ಸಾಲ ನೀಡುತ್ತಿದ್ದರು' ಎಂದು ಭಿಕ್ಷಾಟನೆ ನಿರ್ಮೂಲನೆ ಅಭಿಯಾನದ ನೋಡಲ್ ಅಧಿಕಾರಿ ದಿನೇಶ್ ಮಿಶ್ರಾ ತಿಳಿಸಿದ್ದಾರೆ.

> **ಕುಷ್ಠ ರೋಗದಿಂದ ಅವರು ಮೇಸ್ತ್ರಿ ಕೆಲಸ ಬಿಟ್ಟರು. ಬಳಿಕ, ಈ ಸಮಾಜ, ಅವರ ಕುಟುಂಬ ಇವರನ್ನು ದೂರ ಮಾಡಿತು. ಬಳಿಕ ಇವರು ರಾತ್ರಿ ವೇಳೆ ಭಿಕ್ಷೆ ಬೇಡುತ್ತಿದ್ದರು**
> **ರೂಪಾಲಿ ಜೈನ್,** ಅಧ್ಯಕ್ಷೆ, 'ಪ್ರವೇಶ್' ಎನ್‌ಜಿಒ

> **ಇಂದೋರ್, 'ಭಿಕ್ಷಾಟನೆ ಮುಕ್ತ' ನಗರವಾಗಿದೆ. ಭಿಕ್ಷುಕರಿಗೆ ಪುನರ್‌ವಸತಿ ಕಲ್ಪಿಸುತ್ತಿದ್ದೇವೆ. ಈ ವ್ಯಕ್ತಿಯ ಆಸ್ತಿಗಳ ಬಗ್ಗೆ ಪರಿಶೀಲನೆ ನಡೆಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುತ್ತೇವೆ**
> **ಶಿವಂ ವರ್ಮಾ,** ಜಿಲ್ಲಾ ಮ್ಯಾಜಿಸ್ಟ್ರೇಟ್

'ಇವರು ಮೂರು ಅಂತಸ್ತಿನ ಒಂದು ಮನೆ ಸೇರಿ ಮೂರು ಕಾಂಕ್ರೀಟ್ ಮನೆಗಳನ್ನು ಹೊಂದಿದ್ದಾರೆ. ಮೂರು ಆಟೊರಿಕ್ಷಾಗಳನ್ನು ಬಾಡಿಗೆಗೆ ನೀಡಿದ್ದಾರೆ. ಭಿಕ್ಷಾಟನೆಗೆ ಸ್ವಂತ ಕಾರಿನಲ್ಲಿ ಬರುತ್ತಿದ್ದ ಇವರು ಚಾಲಕನನ್ನೂ ನೇಮಿಸಿಕೊಂಡಿದ್ದಾರೆ. ಕಾರಿನಿಂದ ಇಳಿದು, ಚಕ್ರವಿರುವ ಹಲಗೆ ಮೇಲೆ ಭಿಕ್ಷಾಟನೆ ನಡೆಸುತ್ತಿದ್ದರು' ಎಂದು ಮಾಹಿತಿ ನೀಡಿದ್ದಾರೆ.

'2021ರಿಂದ ಇವರು ಭಿಕ್ಷಾಟನೆಯಲ್ಲಿ ತೊಡಗಿದ್ದಾರೆ. ಚಿನಿವಾರ ಪೇಟೆಯಲ್ಲಿ ವಹಿವಾಟು ನಡೆಸಲು ಹಲವರಿಗೆ ₹4 ಲಕ್ಷದಿಂದ ₹5 ಲಕ್ಷದವರೆಗೆ ಸಾಲ ನೀಡಿದ್ದಾರೆ. ಇದರಿಂದ ಇವರಿಗೆ ದಿನಕ್ಕೆ ₹1,000ರಿಂದ ₹2,200 ಬಡ್ಡಿ ಬರುತ್ತಿದೆ. ಜೊತೆಗೆ, ಭಿಕ್ಷಾಟನೆಯಿಂದ ದಿನಕ್ಕೆ ₹400ರಿಂದ ₹500 ದೊರೆಯುತ್ತಿದೆ' ಎಂದು ತಿಳಿಸಿದ್ದಾರೆ.

ಇಂದೋರ್‌ನಲ್ಲಿ ಭಿಕ್ಷಾಟನೆ ಮಾಡುವುದು ಕಾನೂನು ಪ್ರಕಾರ ಅಪರಾಧ.

'ಮಾನವೀಯ ನೆಲೆಯಿಂದ ನೋಡಿ'

'ಕುಷ್ಠ ರೋಗ ಬಾಧಿತ ಈ ವ್ಯಕ್ತಿಯ ವಿಚಾರವನ್ನು ನಾವು ಮಾನವೀಯ ನೆಲೆಯಿಂದ ನೋಡಬೇಕು. ಇಷ್ಟೆಲ್ಲಾ ಹಣ – ಆಸ್ತಿಯನ್ನು ಅವರು ಭಿಕ್ಷಾಟನೆಯಿಂದ ಗಳಿಸಿಲ್ಲ. ಕೆಲವು ವರ್ಷಗಳ ಹಿಂದೆ ಈ ವ್ಯಕ್ತಿಯು ಮೇಸ್ತ್ರಿ ಕೆಲಸ ಮಾಡುತ್ತಿದ್ದರು' ಎಂದು ಭಿಕ್ಷಾಟನೆ ನಿರ್ಮೂಲನೆಗಾಗಿ ಕೆಲಸ ಮಾಡುತ್ತಿರುವ 'ಪ್ರವೇಶ್' ಎಂಬ ಎನ್‌ಜಿಒ ಅಧ್ಯಕ್ಷೆ ರೂಪಾಲಿ ಜೈನ್ ಅಭಿಪ್ರಾಯಪಟ್ಟರು.

'ಭಿಕ್ಷಾಟನೆ ತ್ಯಜಿಸುವಂತೆ ನಾವು ಕಳೆದ ನಾಲ್ಕು ವರ್ಷದಿಂದ ಹೇಳುತ್ತಲೇ ಬಂದಿದ್ದೇವೆ. ನಾವು ಮಾತನಾಡಿ ಕೆಲವು ದಿನಗಳವರೆಗೆ ಭಿಕ್ಷಾಟನೆ ನಿಲ್ಲಿಸುತ್ತಿದ್ದರು. ಬಳಿಕ, ಮತ್ತೆ ಪ್ರಾರಂಭಿಸುತ್ತಿದ್ದರು. ಕುಷ್ಠ ರೋಗದ ಬಗ್ಗೆ ಜನರಲ್ಲಿ ಇರುವ ಮೌಢ್ಯದ ಕಾರಣ, ಇಂಥ ಜನರಿಗೆ ಪುನರ್‌ವಸತಿ ಕಲ್ಪಿಸುವುದು ಕಷ್ಟಕರ' ಎಂದರು.

ಆಸ್ಟ್ರೇಲಿಯಾ ಓಪನ್ ಟೆನಿಸ್: ಎರಡನೇ ಸುತ್ತಿಗೆ ಮೆಡ್ವೆಡೇವ್

ನೊವಾಕ್ ಜೊಕೊವಿಚ್ ಶುಭಾರಂಭ

ಮೆಲ್ಬರ್ನ್ (ಎಎಫ್‌ಪಿ): ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್ ಅವರು ಸೋಮವಾರ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಗೆಲುವಿನೊಡನೆ ಅಭಿಯಾನ ಆರಂಭಿಸಿದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಪೋಲೆಂಡ್‌ನ ಇಗಾ ಶ್ವಾಂಟೆಕ್ ಮತ್ತು ಅಮೆರಿಕದ ಕೊಕೊ ಗಾಫ್ ಅವರು ಶುಭಾರಂಭ ಮಾಡಿದರು.

ಮೆಲ್ಬರ್ನ್ ಪಾರ್ಕ್‌ನಲ್ಲಿ 11ನೇ ಕಿರೀಟ ಜಯಿಸುವ ಛಲದಲ್ಲಿರುವ ನಾಲ್ಕನೇ ಶ್ರೇಯಾಂಕದ ಜೊಕೊವಿಚ್ 6-3, 6-2, 6-2ರ ನೇರ ಸೆಟ್‌ಗಳಿಂದ ಸ್ಪೇನ್‌ನ ಪೆಡ್ರೊ ಮಾರ್ಟಿನೆಜ್ ಅವರನ್ನು ಸುಲಭವಾಗಿ ಮಣಿಸಿದರು. ಪುರುಷರ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲಿ ಅವರು ಇಟಲಿಯ ಕ್ವಾಲಿಫೈಯರ್ ಆಟಗಾರ ಫ್ರಾನ್ಸೆಸ್ಕೊ ಮಾಸ್ಟ್ರೆಲ್ಲಿ ಅವರನ್ನು ಎದುರಿಸಲಿದ್ದಾರೆ.

100ನೇ ಗೆಲುವು: 38 ವರ್ಷದ ಜೊಕೊವಿಚ್ ಅವರಿಗೆ ಆಸ್ಟ್ರೇಲಿಯಾ ಓಪನ್‌ನಲ್ಲಿ 100ನೇ ಗೆಲುವು ಇದಾಗಿತ್ತು. ಒಟ್ಟಾರೆ 81ನೇ ಗ್ರ್ಯಾನ್‌ಸ್ಲಾಮ್ ಟೂರ್ನಿ ಆಡುತ್ತಿರುವ ಅವರು, ದಿಗ್ಗಜರಾದ ರೋಜರ್ ಫೆಡರರ್, ಫೆಲಿಸಿಯಾನೊ ಲೋಪೆಜ್ ಅವರೊಂದಿಗೆ ಈ ದಾಖಲೆಯನ್ನು ಹಂಚಿಕೊಂಡರು.

ಕಳೆದ ಆವೃತ್ತಿಯಲ್ಲಿ ಸೆಮಿಫೈನಲ್ ತಲುಪಿದ್ದ ಜೊಕೊವಿಚ್ ಗಾಯದ ಕಾರಣದಿಂದ ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ವಿರುದ್ಧದ ಪಂದ್ಯದಿಂದ ಹಿಂದೆ ಸರಿದಿದ್ದರು. 2023ರಲ್ಲಿ ಅಮೆರಿಕನ್ ಓಪನ್ ಗೆದ್ದ ನಂತರ ಜೊಕೊವಿಕ್ ಅವರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಬರ ಎದುರಿಸುತ್ತಿದ್ದಾರೆ. ಅವರಿಗೆ ಮಾರ್ಗರೇಟ್ ಕೋರ್ಟ್ (24 ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿ) ದಾಖಲೆ ಮುರಿಯಲು ಒಂದು ಕಿರೀಟದ ಅಗತ್ಯವಿದೆ. ಕಳೆದ ಎರಡು ವರ್ಷಗಳಿಂದ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಮತ್ತು ಇಟಲಿಯ ಯಾನಿಕ್ ಸಿನ್ನರ್ ಅವರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಪಾರಮ್ಯ ಮೆರೆಯುತ್ತಿದ್ದಾರೆ.

ಮೆಡ್ವೆಡೇವ್ ಮುನ್ನಡೆ: ಮೂರು ಬಾರಿಯ ರನ್ನರ್ ಅಪ್, 11ನೇ ಶ್ರೇಯಾಂಕದ ಡೇನಿಯಲ್ ಮೆಡ್ವೆಡೇವ್ ಅವರು 7-5, 6-2, 7-6 (7/2)ರಿಂದ ನೆದರ್ಲೆಂಡ್ಸ್‌ನ ಜೆಸ್ಪರ್ ಡಿ ಜೊಂಗ್ ಅವರನ್ನು ಮಣಿಸಿದರು. ರಷ್ಯಾದ 29 ವರ್ಷದ ಮೆಡ್ವೆಡೇವ್ 2021, 2022 ಮತ್ತು 2024ರ ಫೈನಲ್‌ನಲ್ಲಿ ನಿರಾಸೆ ಅನುಭವಿಸಿದ್ದರು.

ಆದರೆ, ಏಳನೇ ಶ್ರೇಯಾಂಕದ ಫೆಲಿಕ್ಸ್ ಆಗರ್ ಆಘಾತ ಅನುಭವಿಸಿದರು. ಪೋರ್ಚುಗಲ್‌ನ ನುನೊ ಬೋರ್ಗೆಸ್ 3-6, 6-4, 6-4 ಮುನ್ನಡೆಯಲ್ಲಿದ್ದಾಗ ಪೋರ್ಚುಗಲ್‌ನ ಫೆಲಿಕ್ಸ್ ಸ್ಪರ್ಧೆಯಿಂದ ಹಿಂದೆ ಸರಿದರು.

ನೊವಾಕ್ ಜೊಕೊವಿಚ್ ಬ್ಯಾಕ್‌ಹ್ಯಾಂಡ್ ಹೊಡೆತದ ಪರಿ ಎಎಫ್‌ಪಿ ಚಿತ್ರ

ಶ್ವಾಂಟೆಕ್, ಗಾಫ್ ಮುನ್ನಡೆ

ಏಳನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ ಎರಡನೇ ಶ್ರೇಯಾಂಕದ ಶ್ವಾಂಟೆಕ್ 7-6 (7/5), 6-3ರಿಂದ ಚೀನಾದ ಅರ್ಹತಾ ಸುತ್ತಿನ ಆಟಗಾರ್ತಿ ಯುವಾನ್ ಯು ಅವರನ್ನು ಸೋಲಿಸಲು ಕೊಂಚ ಬೆವರು ಹರಿಸಿದರು.

24 ವರ್ಷದ ಶ್ವಾಂಟೆಕ್ ಅವರಿಗೆ ಮೆಲ್ಬರ್ನ್ ಪಾರ್ಕ್‌ನಲ್ಲಿ ಈತನಕ ಸೆಮಿಫೈನಲ್ ಹಂತ ದಾಟಲು ಸಾಧ್ಯವಾಗಲಿಲ್ಲ. 2022 ಮತ್ತು 2025ರಲ್ಲಿ ಅವರು ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿದ್ದರು.

ಮೂರನೇ ಶ್ರೇಯಾಂಕದ ಗಾಫ್ 6-2, 6-3ರಿಂದ ಉಜ್ಬೇಕಿಸ್ತಾನದ ಕಮಿಲ್ಲಾ ರಾಖಿಮೋವಾ ಅವರನ್ನು ಪ್ರಯಾಸವಿಲ್ಲದೆ ಮಣಿಸಿದರು. ಅಮೆರಿಕದ ಮತ್ತೊಬ್ಬ ಆಟಗಾರ್ತಿ, ನಾಲ್ಕನೇ ಶ್ರೇಯಾಂಕಿತ ಅಮಂಡಾ ಅನಿಸಿಮೊವಾ 6-3, 6-2ರಿಂದ ಸ್ವಿಟ್ಜರ್ಲೆಂಡ್‌ನ ಸಿಮೋನಾ ವಾಲ್ಟರ್ಟ್ ಅವರನ್ನು ಹಿಮ್ಮೆಟ್ಟಿಸಿದರು.

ಉಳಿದಂತೆ ಆರನೇ ಶ್ರೇಯಾಂಕದ ಜೆಸ್ಸಿಕಾ ಪೆಗುಲಾ (ಅಮೆರಿಕ), ಎಂಟನೇ ಶ್ರೇಯಾಂಕದ ಮಿರಾ ಆಂಡ್ರೀವಾ (ರಷ್ಯಾ) ಎರಡನೇ ಸುತ್ತು ಪ್ರವೇಶಿಸಿದರು. 2020ರ ಚಾಂಪಿಯನ್ ಸೋಫಿಯಾ ಕೆನಿನ್ (ಅಮೆರಿಕ) ಹೊರಬಿದ್ದರು. ಅವರು ಸ್ವದೇಶದ ಪೇಟನ್ ಸ್ಟಿಯರ್ನ್ಸ್ ಅವರಿಗೆ 3–6, 2–6ರಿಂದ ಶರಣಾದರು.

ಸೆನೆಗಲ್ ತಂಡ ಚಾಂಪಿಯನ್

ಮೊರೊಕ್ಕೊ ವಿರುದ್ಧ ಆಫ್ರಿಕಾ ಕಪ್ ಫೈನಲ್ ವೇಳೆ ಘರ್ಷಣೆ

ರಬಾತ್, ಮೊರೊಕ್ಕೊ (ಎಎಫ್‌ಪಿ): ನಾಟಕೀಯ ಬೆಳವಣಿಗೆಗಳಿಗೆ ಸಾಕ್ಷಿಯಾದ 'ಆಫ್ರಿಕಾ ಕಪ್ ಆಫ್ ನೇಷನ್ಸ್' ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಸೆನೆಗಲ್ ತಂಡವು 1–0 ಗೋಲಿನಿಂದ ಆತಿಥೇಯ ಮೊರೊಕ್ಕೊ ತಂಡವನ್ನು ಭಾನುವಾರ ಮಣಿಸಿ ಚಾಂಪಿಯನ್ ಆಗಿ ಹೊರಹೊಮ್ಮಿತು. ಹೆಚ್ಚುವರಿ ಅವಧಿಯಲ್ಲಿ ಪೆಪ್ ಗುಯೆ (90 + 4ನೇ ನಿಮಿಷ) ಅವರು ಸೆನೆಗಲ್ ಪರ ಗೆಲುವಿನ ಗೋಲು ಬಾರಿಸಿದರು.

ರಬಾತ್‌ನ ಪ್ರಿನ್ಸ್ ಮೌಲಾಯ್ ಅಬ್ದುಲ್ಲಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ನಿಗದಿತ ಅವಧಿ ಗೋಲುರಹಿತವಾಗಿತ್ತು. ಹೆಚ್ಚುವರಿ ಅವಧಿಯ ಆರಂಭದಲ್ಲಿ ಮೊರೊಕ್ಕೊ ತಂಡಕ್ಕೆ ನೀಡಿದ ಪೆನಾಲ್ಟಿ ವಿವಾದಕ್ಕೆ ಕಾರಣವಾಯಿತು. ವಿಎಆರ್ ಪರಿಶೀಲನೆಯ ನಂತರ ಮೊರೊಕ್ಕೊಗೆ ಪೆನಾಲ್ಟಿ ಅವಕಾಶ ನೀಡಲಾಯಿತು. ರೆಫ್ರಿ ನಿರ್ಧಾರ ಪ್ರತಿಭಟಿಸಿ ಸೆನೆಗಲ್ ಆಟಗಾರರು ಮೈದಾನದಿಂದ ಹೊರನಡೆದರು. ಈ ವೇಳೆ ಸ್ಟ್ಯಾಂಡ್‌ಗಳಲ್ಲಿಯೂ ಪರಿಸ್ಥಿತಿ ಬಿಗಡಾಯಿಸಿ, ಸೆನೆಗಲ್ ಅಭಿಮಾನಿಗಳು ಮೈದಾನಕ್ಕೆ ನುಗ್ಗಲು ಪ್ರಯತ್ನಿಸಿದರು. ಭದ್ರತಾ ಪಡೆ ಸಿಬ್ಬಂದಿಯೊಂದಿಗೆ ಜಟಾಪಟಿ ನಡೆಸಿದರು.

ಇದರಿಂದ ಸುಮಾರು 20 ನಿಮಿಷ ಪಂದ್ಯಕ್ಕೆ ಅಡ್ಡಿಯಾಯಿತು. ಮಾತುಕತೆಯ ಬಳಿಕ ಪಂದ್ಯ ಆರಂಭಗೊಂಡಾಗ ಸೆನೆಗಲ್ ಗೋಲ್‌ಕೀಪರ್ ಎಡ್ವರ್ಡ್ ಮೆಂಡಿ ಅವರು ಎದುರಾಳಿ ತಂಡದ ಪೆನಾಲ್ಟಿ ಅವಕಾಶವನ್ನು ಯಶಸ್ವಿಯಾಗಿ ತಡೆದರು. ಅದರ ಬೆನ್ನಲ್ಲೇ ಗುಯೆ ಫೀಲ್ಡ್ ಗೋಲು ಮೂಲಕ ಸೆನೆಗಲ್ ತಂಡಕ್ಕೆ ಗೆಲುವನ್ನು ತಂದಿತ್ತರು. 66,500ಕ್ಕೂ ಹೆಚ್ಚು ಪ್ರೇಕ್ಷಕರು ಪಂದ್ಯ ವೀಕ್ಷಿಸಿದರು.

ಇದು ಸೆನೆಗಲ್ ತಂಡಕ್ಕೆ ಎರಡನೇ ಆಫ್ರಿಕಾ ಕಪ್ ಗೆಲುವು. 2021ರಲ್ಲಿ ಈಜಿಪ್ಟ್ ವಿರುದ್ಧ ಪೆನಾಲ್ಟಿ ಶೂಟೌಟ್‌ನಲ್ಲಿ ಗೆದ್ದು ಮೊದಲ ಬಾರಿ ಚಾಂಪಿಯನ್ ಆಗಿತ್ತು.

ಸೆನೆಗಲ್ ತಂಡದ ಅಭಿಮಾನಿಗಳು ಮೈದಾನಕ್ಕೆ ನುಗ್ಗಲು ಯತ್ನಿಸಿದರು ಎಎಫ್‌ಪಿ ಚಿತ್ರ

'ಎದುರಾಳಿ ತಂಡಕ್ಕೆ ನೀಡಿದ ಪೆನಾಲ್ಟಿ ಅವಕಾಶದಿಂದ ನಮಗೆ ಅನ್ಯಾಯವಾಗಿದೆ ಎಂಬ ಭಾವನೆ ಮೂಡಿತ್ತು. ಆ ಪೆನಾಲ್ಟಿಗೆ ಸ್ವಲ್ಪ ಮೊದಲು ನಮಗೆ ಗೋಲು ಗಳಿಸುವ ಅವಕಾಶವಿತ್ತು. ರೆಫ್ರಿ ಅವರು ವಿಎಆರ್ ಪರಿಶೀಲನೆ ಮೊರೆ ಹೋಗಲಿಲ್ಲ' ಎಂದು ಸೆನೆಗಲ್ ತಂಡದ ಗುಯೆ ಪ್ರತಿಕ್ರಿಯಿಸಿದರು.

ಫಿಫಾ ಅಧ್ಯಕ್ಷ ಖಂಡನೆ: ಫೈನಲ್ ಪಂದ್ಯದಲ್ಲಿ ಮೊರೊಕ್ಕೊಗೆ ನೀಡಲಾದ ಪೆನಾಲ್ಟಿಯನ್ನು ಪ್ರತಿಭಟಿಸಿ ಮೈದಾನದಿಂದ ಹೊರನಡೆದ ಸೆನೆಗಲ್ ಆಟಗಾರರ ವರ್ತನೆಯನ್ನು ಫಿಫಾ ಅಧ್ಯಕ್ಷ ಗಿಯಾನಿ ಇನ್ಫಾಂಟಿನೊ ಖಂಡಿಸಿದ್ದಾರೆ. ಇದು 'ಸ್ವೀಕಾರಾರ್ಹವಲ್ಲದ ಘಟನೆ' ಎಂದು ಹೇಳಿದ್ದಾರೆ.

ಪ್ಲೇಆಫ್ ಹಂತಕ್ಕೆ ಮಂಧಾನ ಬಳಗ

ಗೌತಮಿ ಅರ್ಧಶತಕ • ಸಯಾಲಿ ಮಿಂಚು • ಆರ್‌ಸಿಬಿ ಗೆಲುವಿನ ಓಟ ಅಬಾಧಿತ

ವಡೋದರ (ಪಿಟಿಐ): ಗೌತಮಿ ನಾಯಕ್ ಅವರ ಸೊಗಸಾದ ಅರ್ಧಶತಕ ಹಾಗೂ ಬೌಲರ್‌ಗಳ ಸಾಂಘಿಕ ದಾಳಿಯ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಸೋಮವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ 61 ರನ್‌ಗಳಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು. ಅದರೊಂದಿಗೆ, ಟೂರ್ನಿಯಲ್ಲಿ ಸತತ ಐದು ಗೆಲುವಿನೊಂದಿಗೆ ಪ್ಲೇಆಫ್‌ಗೆ ಪ್ರವೇಶ ಪಡೆಯಿತು.

ಮಹಿಳಾ ಪ್ರೀಮಿಯರ್ ಲೀಗ್

ಇಲ್ಲಿನ ಕೋತಂಬಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಆರ್‌ಸಿಬಿ ತಂಡಕ್ಕೆ ಗೌತಮಿ (73; 55ಎ, 4x7, 6x1) ಆಸರೆಯಾದರು. ಅವರ ಆಟದ ಬಲದಿಂದ ಮಂಧಾನ ಬಳಗವು ನಿಗದಿತ ಓವರ್‌ಗಳಲ್ಲಿ 6 ವಿಕೆಟ್‌ಗೆ 178 ರನ್ ಗಳಿಸಿತು.

ವಡೋದರ ಲೆಗ್‌ನ ಈ ಮೊದಲ ಪಂದ್ಯದಲ್ಲಿ ಸವಾಲಿನ ಗುರಿ ಬೆನ್ನಟ್ಟಿ ಜೈಂಟ್ಸ್ ತಂಡಕ್ಕೆ ಬಲಗೈ ವೇಗಿ ಸಯಾಲಿ ಸತ್ಘರೆ (21ಕ್ಕೆ3) ಆಘಾತ ನೀಡಿದರು. ಟೂರ್ನಿಯಲ್ಲಿ ಎರಡನೇ ಪಂದ್ಯ ಆಡಿದ ಅವರು ಜೈಂಟ್ಸ್ ತಂಡದ ಪ್ರಮುಖ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಆರಂಭದಲ್ಲಿ ಬೆತ್ ಮೂನಿ (3; 4ಎ) ಹಾಗೂ ಸೋಫಿ ಡಿವೈನ್ (0; 4ಎ) ಅವರ ವಿಕೆಟ್ ಪಡೆದ ಸಯಾಲಿ, ಅರ್ಧಶತಕ ಗಳಿಸಿದ್ದ ನಾಯಕಿ ಆ್ಯಷ್ಲೆ ಗಾರ್ಡನರ್ (54;43ಎ) ಅವರಿಗೂ ಪೆವಿಲಿಯನ್ ಹಾದಿ ತೋರಿಸಿದರು.

ಜೈಂಟ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗೆ 117 ರನ್ ಗಳಿಸಿ, ಹೋರಾಟ ಮುಗಿಸಿತು.

ದಕ್ಷಿಣ ಆಫ್ರಿಕಾದ ಆಲ್‌ರೌಂಡರ್ ನದೀನ್ ಡಿ ಕ್ಲರ್ಕ್ ಎರಡು ವಿಕೆಟ್ ಪಡೆದರೆ, ಲಾರೆನ್ ಬೆಲ್, ರಾಧಾ ಯಾದವ್ ಹಾಗೂ ಶ್ರೇಯಾಂಕಾ ಪಾಟೀಲ ಅವರು ತಲಾ ಒಂದು ವಿಕೆಟ್ ಪಡೆದರು.

ಇದಕ್ಕೆ ಮೊದಲು, 2024ರ ಚಾಂಪಿಯನ್ ಬೆಂಗಳೂರು ತಂಡದ ಆರಂಭ ಉತ್ತಮವಾಗಿರಲಿಲ್ಲ. ಆರಂಭ ಆಟಗಾರ್ತಿ ಗ್ರೇಸ್ ಹ್ಯಾರಿಸ್ (1) ಮತ್ತು ಮೂರನೇ ಕ್ರಮಾಂಕದ ಜಾರ್ಜಿಯಾ ವೋಲ್ (1) ಅವರು ಕೇವಲ 9 ರನ್ ಗಳಾಗುವಷ್ಟರಲ್ಲಿ ನಿರ್ಗಮಿಸಿದ್ದರು. ನಾಯಕಿ ಸ್ಮೃತಿ ಮಂಧಾನ (26, 23 ಎಸೆತ) ಜೊತೆಗೂಡಿದ ಗೌತಮಿ ಮೂರನೇ ವಿಕೆಟ್‌ಗೆ 60 ರನ್ ಸೇರಿಸಿ ಇನಿಂಗ್ಸ್‌ಗೆ ಸ್ಥಿರತೆ ಒದಗಿಸಿದರು.

6 ಜಯ
ಕಳೆದ ಆವೃತ್ತಿಯ ಒಂದು ಪಂದ್ಯ ಸೇರಿ ಡಬ್ಲ್ಯುಪಿಎಲ್‌ನಲ್ಲಿ ಆರ್‌ಸಿಬಿ ತಂಡಕ್ಕೆ ಇದು ಸತತ ಆರನೇ ಗೆಲುವು. ಈ ಸಾಧನೆ ಮಾಡಿದ ಮೊದಲ ತಂಡ ಎನಿಸಿತು

ಗೌತಮಿ ಅವರು ರಿಚಾ ಘೋಷ್ (27; 20ಎ, 6x3) ಜೊತೆಗೂಡಿ ನಾಲ್ಕನೇ ವಿಕೆಟ್‌ಗೆ ಉಪಯುಕ್ತ 69 ರನ್ ಪೇರಿಸಿದರು. 18ನೇ ಓವರಿನಲ್ಲಿ ಗಾರ್ಡನರ್ ಬೌಲಿಂಗ್‌ನಲ್ಲಿ ಬೌಲ್ಡ್ ಆಗುವ ಮೂಲಕ ಗೌತಮಿ ಅವರ ಆಟ ಕೊನೆಗೊಂಡಿತು. ಆಲ್‌ರೌಂಡರ್ ರಾಧಾ ಯಾದವ್ (17;8ಎ) ಕೊನೆಯಲ್ಲಿ ಬಿರುಸಿನ ಆಟವಾಡಿದರು.

ಜೈಂಟ್ಸ್‌ನ 18 ವರ್ಷ ವಯಸ್ಸಿನ ಮಧ್ಯಮ ವೇಗದ ಬೌಲರ್ ಹ್ಯಾಪಿ ಕುಮಾರಿ ಅವರು ಈ ಪಂದ್ಯದ ಮೂಲಕ ಐಪಿಎಲ್‌ಗೆ ಪದಾರ್ಪಣೆ ಮಾಡಿದರು.

ಸಂಕ್ಷಿಪ್ತ ಸ್ಕೋರು: ಆರ್‌ಸಿಬಿ: 20 ಓವರುಗಳಲ್ಲಿ 6 ವಿಕೆಟ್‌ಗೆ 178 (ಸ್ಮೃತಿ ಮಂಧಾನ 26, ಗೌತಮಿ ನಾಯಕ್ 73, ರಿಚಾ ಘೋಷ್ 27, ಕಾಶ್ವಿ ಗೌತಮ್ 38ಕ್ಕೆ2, ಗಾರ್ಡನರ್ 43ಕ್ಕೆ2). ಗುಜರಾತ್ ಜೈಂಟ್ಸ್: 20 ಓವರುಗಳಲ್ಲಿ 8 ವಿಕೆಟ್‌ಗೆ 117 (ಆ್ಯಷ್ಲೆ ಗಾರ್ಡನರ್ 54; ಸಯಾಲಿ ಸತ್ಘರೆ 21ಕ್ಕೆ3, ನದೀನ್ ಡಿ ಕ್ಲರ್ಕ್ 17ಕ್ಕೆ2). ಫಲಿತಾಂಶ: ಆರ್‌ಸಿಬಿ ತಂಡಕ್ಕೆ 61 ರನ್ ಜಯ. ಪಂದ್ಯದ ಆಟಗಾರ್ತಿ: ಗೌತಮಿ ನಾಯಕ್.

ಅರ್ಧಶತಕ ಗಳಿಸಿದ ಆರ್‌ಸಿಬಿ ತಂಡದ ಗೌತಮಿ ನಾಯಕ್ 'ಎಕ್ಸ್' ಚಿತ್ರ

ಮಹಿಳಾ ಪ್ರೀಮಿಯರ್ ಲೀಗ್ ಅಂಕಪಟ್ಟಿ

	ತಂಡಗಳು	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ರಾಯಲ್ ಚಾಲೆಂಜರ್ಸ್ ಬೆಂಗಳೂರು	5	5	0	10	1.882
2	ಮುಂಬೈ ಇಂಡಿಯನ್	5	2	3	4	0.151
3	ಯುಪಿ ವಾರಿಯರ್ಸ್	5	2	3	4	-0.483
4	ಗುಜರಾತ್ ಜೈಂಟ್ಸ್	5	2	3	4	-0.864
5	ಡೆಲ್ಲಿ ಕ್ಯಾಪಿಟಲ್ಸ್	4	1	3	2	-0.856

ನಿರಾಕರಿಸಿದರೆ ಬೇರೆ ತಂಡ ಆಯ್ಕೆ: ಬಿಸಿಬಿಗೆ ಐಸಿಸಿ ಗಡುವು

'ಟಿ20 ವಿಶ್ವಕಪ್: ನಾಳೆ ಒಳಗೆ ನಿರ್ಧರಿಸಿ'

ಐಸಿಸಿ
ಪುರುಷರ ಟಿ20 ವಿಶ್ವಕಪ್ 2026

ನವದೆಹಲಿ (ಪಿಟಿಐ): 'ಭಾರತದಲ್ಲಿ ನಡೆಯುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿ ಇದೇ 21ರ ಒಳಗೆ ನಿರ್ಧಾರಕ್ಕೆ ಬರಬೇಕು. ಇಲ್ಲದೇ ಹೋದರೆ ಬದಲಿಯಾಗಿ ಬೇರೆ ತಂಡದ ಆಯ್ಕೆಗೆ ಸಿದ್ಧವಾಗಿರಿ' ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯು (ಐಸಿಸಿ) ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಗೆ ಸೂಚಿಸಿದೆ.

ಫೆಬ್ರುವರಿ 7ರಂದು ಟಿ20 ವಿಶ್ವಕಪ್ ಆರಂಭವಾಗಲಿದೆ. ಐಸಿಸಿ ಮತ್ತು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ನಡುವೆ ಶನಿವಾರ ಮಾತುಕತೆ ನಡೆದರೂ, ಕಗ್ಗಂಟಿಗೆ ಪರಿಹಾರ ದೊರೆತಿಲ್ಲ.

ಬಿಸಿಸಿಐ ಸೂಚನೆ ಮೇರೆಗೆ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಇದೇ ತಿಂಗಳ ಆರಂಭದಲ್ಲಿ ಐಪಿಎಲ್ ತಂಡದಿಂದ ಮುಸ್ತಫಿಝುರ್ ರೆಹಮಾನ್ ಅವರನ್ನು ಕೈಬಿಟ್ಟಿತ್ತು. ಇದರಿಂದ ಆಕ್ರೋಶಗೊಂಡ ಬಾಂಗ್ಲಾದೇಶ, ಭಾರತದಲ್ಲಿ ನಿಗದಿಯಾಗಿರುವ ತನ್ನ ಟಿ20 ವಿಶ್ವಕಪ್ ಪಂದ್ಯಗಳನ್ನು ಶ್ರೀಲಂಕಾಕ್ಕೆ (ಜಂಟಿ ಆತಿಥೇಯ) ಸ್ಥಳಾಂತರಿಸಬೇಕು. ಇಲ್ಲದಿದ್ದಲ್ಲಿ ವಿಶ್ವಕಪ್‌ನಲ್ಲಿ ಆಡುವುದಿಲ್ಲ ಎಂದು ಐಸಿಸಿ ಮುಂದೆ ಬೇಡಿಕೆಯಿಟ್ಟಿತ್ತು. ಹೀಗಾಗಿ ಬಿಕ್ಕಟ್ಟು ತಲೆದೋರಿತ್ತು.

'ವಿಶ್ವಕಪ್‌ನಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿ ಜನವರಿ 21ರೊಳಗೆ ತೀರ್ಮಾನಕ್ಕೆ ಬರಬೇಕೆಂದು ಬಿಸಿಬಿ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಒಂದೊಮ್ಮೆ ಭಾರತದಲ್ಲಿ ಆಡಲು ನಿರಾಕರಿಸಿದರೆ, ರ್‍ಯಾಂಕಿಂಗ್ ಆಧಾರದಲ್ಲಿ ಇನ್ನೊಂದು ತಂಡದ ಸೇರ್ಪಡೆ ಮಾಡಲಾಗುವುದು. ಇದಕ್ಕೆ ತಯಾರಾಗಿರುವಂತೆ ತಿಳಿಸಲಾಗಿದೆ' ಎಂದು ಐಸಿಸಿ ಮೂಲವೊಂದು ತಿಳಿಸಿದೆ.

ಭದ್ರತೆಯ ಕಳವಳ ವ್ಯಕ್ತಪಡಿಸಿ, ಕೋಲ್ಕತ್ತ ಮತ್ತು ಮುಂಬೈನಲ್ಲಿ ನಡೆಯುವ ಗುಂಪು ಹಂತದ ಪಂದ್ಯಗಳನ್ನು ಆಡಲು ಬಾಂಗ್ಲಾದೇಶ ಭಾರತಕ್ಕೆ ಪಯಣಿಸುವುದಿಲ್ಲ ಎಂದು ಬಿಸಿಬಿ ಘೋಷಿಸಿತ್ತು.

ಆದರೆ ವೇಳಾಪಟ್ಟಿ ಈಗಾಗಲೇ ಅಂತಿಮಗೊಂಡಿರುವ ಕಾರಣ ಬಾಂಗ್ಲಾದೇಶ ಆಡಬೇಕಾದ ಪಂದ್ಯಗಳನ್ನು ಲಂಕಾಕ್ಕೆ ಸ್ಥಳಾಂತರಿಸಲು ಐಸಿಸಿ ಹಿಂದೇಟು ಹಾಕಿತ್ತು. ಶ್ರೀಲಂಕಾ ಜಂಟಿ ಆತಿಥ್ಯ ವಹಿಸಿದ್ದು, ಪಾಕಿಸ್ತಾನ ತಂಡದ ಪಂದ್ಯಗಳು ಅಲ್ಲಿ ನಿಗದಿಯಾಗಿವೆ.

ಒಂದೊಮ್ಮೆ ಬಾಂಗ್ಲಾದೇಶ ಬಿಗಿಪಟ್ಟು ಮುಂದುವರಿಸಿದಲ್ಲಿ, ಹಾಲಿ ರ್‍ಯಾಂಕಿಂಗ್ ಪ್ರಕಾರ ಸ್ಕಾಟ್ಲೆಂಡ್ ತಂಡವನ್ನು ಸೇರ್ಪಡೆಗೊಳಿಸಬೇಕಾಗುತ್ತದೆ. ಈಗಿನ ವೇಳಾಪಟ್ಟಿಯಂತೆ ಬಾಂಗ್ಲಾದೇಶವು ಮೂರು ಲೀಗ್ ಪಂದ್ಯಗಳನ್ನು ಕೋಲ್ಕತ್ತದಲ್ಲಿ ಮತ್ತು ಒಂದು ಪಂದ್ಯವನ್ನು ಮುಂಬೈನಲ್ಲಿ ಆಡಬೇಕಾಗಿದೆ.

ತಾಣಗಳನ್ನು ಅಥವಾ ತನ್ನ ತಂಡ ಇರುವ ಗುಂಪನ್ನು ಬದಲಿಸಿ ಶ್ರೀಲಂಕಾದಲ್ಲಿ ಆಡುವ ಅವಕಾಶ ನೀಡಬೇಕು ಎಂದು ಬಿಸಿಬಿ ಬಿಗಿ ನಿಲುವು ತಾಳಿದೆ. ಬಾಂಗ್ಲಾದೇಶ ಸದ್ಯ ಸಿ ಗುಂಪಿನಲ್ಲಿದ್ದು, ಇದರಲ್ಲಿ ವೆಸ್ಟ್ ಇಂಡೀಸ್, ಇಟಲಿ, ಇಂಗ್ಲೆಂಡ್ ಮತ್ತು ನೇಪಾಳ ತಂಡಗಳಿವೆ.

'ಬಿ' ಗುಂಪಿನಲ್ಲಿರುವ ಐರ್ಲೆಂಡ್ ತಂಡವನ್ನು ಸಿ ಗುಂಪಿಗೆ ಸೇರ್ಪಡೆಗೊಳಿಸಿ, ತನ್ನನ್ನು 'ಬಿ' ಗುಂಪಿನಲ್ಲಿ ಸೇರಿಸುವಂತೆ ಶನಿವಾರ ನಡೆದ ಮಾತುಕತೆ ವೇಳೆ ಬಿಸಿಬಿ ಪ್ರಸ್ತಾವ ಮುಂದಿಟ್ಟಿತ್ತು. ಆ ಮೂಲಕ ಎಲ್ಲ ಪಂದ್ಯಗಳನ್ನು ಲಂಕಾದಲ್ಲಿ ಆಡುವ ಉದ್ದೇಶ ಹೊಂದಿತ್ತು.

ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯದಿಂದ ಭಾರತದ ಜೊತೆ ದ್ವಿಪಕ್ಷೀಯ ಸಂಬಂಧ ಈಗ ಹದಗೆಟ್ಟಿದೆ.

ಬಿಸಿಬಿಯು ಕ್ರಿಕೆಟ್ ವಿಷಯದಲ್ಲಿ ಕಠಿಣ ನಿಲುವು ತಳೆದಲ್ಲಿ ಅದರ ಪರಿಣಾಮವನ್ನು ಮುಂದಿನ 10 ವರ್ಷಗಳ ಕಾಲ ಅನುಭವಿಸಬೇಕಾದೀತು ಎಂದು ಬಾಂಗ್ಲಾದೇಶ ತಂಡದ ಮಾಜಿ ನಾಯಕ ತಮೀಮ್ ಇಕ್ಬಾಲ್ ಮತ್ತು ಹಾಲಿ ಟೆಸ್ಟ್ ತಂಡದ ನಾಯಕ ನಜ್ಮುಲ್ ಹುಸೇನ್ ಶಾಂತೊ ಅವರು ಎಚ್ಚರಿಕೆ ನೀಡಿದ್ದಾರೆ.

ಕರ್ನಾಟಕ ಒಲಿಂಪಿಕ್ಸ್: ಡ್ರ್ಯಾಗನ್ ಬೋಟ್ ಸ್ಪರ್ಧೆ

ಬೆಂಗಳೂರು ನಗರ ತಂಡಕ್ಕೆ ಚಿನ್ನ

ಪ್ರಜಾವಾಣಿ ವಾರ್ತೆ

ತುಮಕೂರು: ಬೆಂಗಳೂರು ನಗರ ತಂಡವು ಇಲ್ಲಿ ನಡೆಯುತ್ತಿರುವ ಕರ್ನಾಟಕ ಒಲಿಂಪಿಕ್ಸ್ ಕ್ರೀಡಾಕೂಟದ ಡ್ರ್ಯಾಗನ್ ಬೋಟ್ 500 ಮೀಟರ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದುಕೊಂಡಿತು.

ಅಮಾನಿಕೆರೆಯಲ್ಲಿ ಸೋಮವಾರ ನಡೆದ ಸ್ಪರ್ಧೆಯಲ್ಲಿ ಬೆಂಗಳೂರು ನಗರ ತಂಡ ಪಾರಮ್ಯ ಸಾಧಿಸಿತು. ಬೆಂಗಳೂರು ಗ್ರಾಮಾಂತರ ತಂಡ ಬೆಳ್ಳಿ, ಚಿತ್ರದುರ್ಗ ತಂಡ ಕಂಚಿನ ಪದಕ ಜಯಿಸಿತು.

ಜೂನಿಯರ್ ಕಾಲೇಜು ಮೈದಾನದಲ್ಲಿ ಭಾನುವಾರ ರಾತ್ರಿ ನಡೆದ ಪುರುಷರ ಕಬಡ್ಡಿ ಫೈನಲ್‌ನಲ್ಲಿ ತುಮಕೂರು ತಂಡವು ಶಿವಮೊಗ್ಗ ತಂಡವನ್ನು ಮಣಿಸಿ ಚಿನ್ನ ಗೆದ್ದಿತು. ಬೆಂಗಳೂರು ದಕ್ಷಿಣ ತಂಡ ಕಂಚಿನ ಪದಕ ತನ್ನದಾಗಿಸಿಕೊಂಡಿತು.

ಮಹಿಳೆಯರ ವಿಭಾಗದಲ್ಲಿ ದಕ್ಷಿಣ ಕನ್ನಡ ತಂಡವು ತುಮಕೂರು ತಂಡವನ್ನು ಸೋಲಿಸಿ ಸ್ವರ್ಣ ಪದಕ ಗೆದ್ದಿತು. ಚಿಕ್ಕಮಗಳೂರು ತಂಡವು ಮೂರನೇ ಸ್ಥಾನ ಗಳಿಸಿತು.

ಇತರ ಫಲಿತಾಂಶ: ಜುಡೊ: ಪುರುಷರು: 100 ಕೆ.ಜಿ: ಎಸ್.ರವಿಚಂದ್ರ ಡೇರ್ (ಬೆಂಗಳೂರು ನಗರ)–1, ಸಂದೀಪ್ ಪಿ.ಲಮಾಣಿ (ವಿಜಯಪುರ)–2, ಓಂಕಾರ್ ಮಿನಾಚೆ (ಬೆಳಗಾವಿ)–3. 100 ಕೆ.ಜಿ ಮೇಲ್ಪಟ್ಟವರು: ಎನ್.ವಿಕಾಸ್ ಕುಮಾರ್ (ಮೈಸೂರು)–1, ರಾಹುಲ್ ಲಂಕೆನ್ನವರ್ (ಬೆಳಗಾವಿ)– 2.

ಮಹಿಳೆಯರು: 48 ಕೆ.ಜಿ– ರಮ್ಯಾ ಎ.ಜಿರಾಲಿ (ಬೆಳಗಾವಿ)–1, ಎಸ್.ಎಸ್.ಚೈತ್ರಾ (ದಾವಣಗೆರೆ)–2, ಎ.ಸಾಧಿಯಾ (ವಿಜಯನಗರ)–3. 52 ಕೆ.ಜಿ: ಎಸ್.ಆರತಿ (ವಿಜಯಪುರ)–1, ಸ್ವಾತಿ ನಾಯಕ್ (ಶಿವಮೊಗ್ಗ)–2, ಐಶ್ವರ್ಯ (ಮಂಡ್ಯ)–3. 57 ಕೆ.ಜಿ: ವಿ.ಎಸ್. ಶ್ರೀನಿಧಿ (ದಾವಣಗೆರೆ)–1, ಎನ್.ಲಕ್ಷ್ಮಿ (ವಿಜಯನಗರ)–2, ಎ.ಪಿ.ಪೂರ್ವಿ (ಮಂಡ್ಯ)–3. 73 ಕೆ.ಜಿ: ಅಕ್ಷತಾ ಟಿ.ಸುಂಕದ (ಬೆಳಗಾವಿ)–1, ತನುಶ್ರೀ ವಿ.ಕಾಳೆ (ವಿಜಯಪುರ)–2, ಆರ್. ಜಯಲಕ್ಷ್ಮಿ (ಮೈಸೂರು)–3.

ವೇಟ್ ಲಿಫ್ಟಿಂಗ್: ಪುರುಷರು: 60 ಕೆ.ಜಿ: ಪ್ರಶಾಂತ್ ಸಿಂಗ್ (ದಕ್ಷಿಣ ಕನ್ನಡ)–1, ಕೆ.ಕವನ್ (ದಕ್ಷಿಣ ಕನ್ನಡ)–2, ಎಂ.ಕರಣ್ (ದಾವಣಗೆರೆ)–3.

ಮಹಿಳೆಯರು: 48 ಕೆ.ಜಿ: ಎಂ.ಶ್ರಾವ್ಯಾ (ದಕ್ಷಿಣ ಕನ್ನಡ)–1, ಪಿ.ಪಿ.ಹರ್ಷಿತಾ (ದಕ್ಷಿಣ ಕನ್ನಡ)–2, ಕೀರ್ತಿಕಾ ಕಾಸಿ (ಬೆಂಗಳೂರು ನಗರ)–3.

ತುಮಕೂರಿನ ಅಮಾನಿಕೆರೆಯಲ್ಲಿ ಸೋಮವಾರ ನಡೆದ ಡ್ರ್ಯಾಗನ್ ಬೋಟ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದ ಬೆಂಗಳೂರು ನಗರ ತಂಡ

ಸೌರಾಷ್ಟ್ರ ವಿರುದ್ಧ ರಣಜಿ ಆಡಲಿರುವ ಗಿಲ್

ನವದೆಹಲಿ (ಪಿಟಿಐ): ಭಾರತ ಟೆಸ್ಟ್ ಮತ್ತು ಏಕದಿನ ತಂಡದ ನಾಯಕ ಶುಭಮನ್ ಗಿಲ್ ಅವರು ವಿರಾಮ ಪಡೆಯದಿರಲು ನಿರ್ಧರಿಸಿದ್ದಾರೆ. ಸೌರಾಷ್ಟ್ರ ವಿರುದ್ಧ ರಾಜಕೋಟ್‌ನಲ್ಲಿ ಗುರುವಾರ ಆರಂಭವಾಗಲಿರುವ ರಣಜಿ ಟ್ರೋಫಿ ಪಂದ್ಯದಲ್ಲಿ ಅವರು ಪಂಜಾಬ್ ತಂಡಕ್ಕೆ ಆಡಲಿದ್ದಾರೆ.

ನ್ಯೂಜಿಲೆಂಡ್ ವಿರುದ್ಧ ಏಕದಿನ ಸರಣಿಯ ಮೂರೂ ಪಂದ್ಯಗಳಲ್ಲಿ ಗಿಲ್ ಆಡಿದ್ದರು. ಆದರೆ ಬಿಳಿ ಚೆಂಡಿನ ಕ್ರಿಕೆಟ್‌ನಿಂದ ತಕ್ಷಣ ದೀರ್ಘಾವಧಿ ಕ್ರಿಕೆಟ್‌ಗೆ ಮರಳಲು ಅವರು ಬಯಸಿದ್ದಾರೆ. 26 ವರ್ಷ ವಯಸ್ಸಿನ ಗಿಲ್ ಅವರು ಭಾರತದ ಟಿ20 ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆದಿಲ್ಲ.

ರಣಜಿ ನಾಕೌಟ್‌ಗೆ ಪ್ರವೇಶಿಸುವ ಪಂಜಾಬ್ ಹಾದಿ ಜೀವಂತವಾಗಿದ್ದರೂ, ಕಠಿಣವಾಗಿದೆ. 'ಬಿ' ಗುಂಪಿನಲ್ಲಿರುವ ಪಂಜಾಬ್ 5 ಪಂದ್ಯಗಳಿಂದ 6 ಅಂಕ ಗಳಿಸಿದ್ದು, ಸದ್ಯ ಆರನೇ ಸ್ಥಾನದಲ್ಲಿದೆ. ಇನ್ನುಳಿದ ಮೂರೂ ಪಂದ್ಯಗಳಲ್ಲಿ ಜಯಗಳಿಸಿದರೆ ಮಾತ್ರ ಪಂಜಾಬ್ ರೇಸ್‌ನಲ್ಲಿ ಉಳಿಯಲಿದೆ. ಅಸ್ಥಿರ ಆಟವಾಡುತ್ತಿರುವ ಪಂಜಾಬ್ ತಂಡಕ್ಕೆ ಅನುಭವಿ ಗಿಲ್ ಪುನರಾಗಮನ ಮಹತ್ವದ್ದಾಗಲಿದೆ.

'ಏಕದಿನ ಸರಣಿಯ ನಂತರ ವಿಶ್ರಾಂತಿ ಪಡೆಯದೇ ಇರಲು ಗಿಲ್ ನಿರ್ಧರಿಸಿದ್ದಾರೆ. ಇಂದೋರ್‌ನಿಂದ ನೇರ ವಿಮಾನವಿಲ್ಲದ ಕಾರಣ ಅವರು ಎಂಟು ಗಂಟೆಗಳ ಪಯಣ ಮಾಡಲಿದ್ದಾರೆ' ಎಂದು ಪಂಜಾಬ್ ತಂಡದ ಮೂಲವೊಂದು ಪಿಟಿಐಗೆ ತಿಳಿಸಿದೆ.

ಚೆಸ್: ಪ್ರಜ್ಞಾನಂದಗೆ ಮತ್ತೆ ಹಿನ್ನಡೆ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಹಾಲಿ ಚಾಂಪಿಯನ್ ಆರ್.ಪ್ರಜ್ಞಾನಂದ ಅವರು ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯ ಎರಡನೇ ಸುತ್ತಿನಲ್ಲೂ ಹಿನ್ನಡೆ ಕಂಡರು. ಭಾನುವಾರ ನಡೆದ ಪಂದ್ಯದಲ್ಲಿ ಅವರು ಉಜ್ಬೇಕಿಸ್ತಾನದ ಆಟಗಾರ ನೊದಿರ್ಬೆಕ್ ಅಬ್ದುಸತ್ತಾರೋವ್ ಅವರಿಗೆ 31 ನಡೆಗಳಲ್ಲಿ ಮಣಿದರು.

ವಿಶ್ವ ಚಾಂಪಿಯನ್ ಡಿ.ಗುಕೇಶ್ ಇನ್ನೊಂದು ಪಂದ್ಯದಲ್ಲಿ ಆತಿಥೇಯ ಡಚ್ ಆಟಗಾರ ಜೋರ್ಡಾನ್ ವಾನ್ ಫೋರೀಸ್ಟ್ ಅವರ ಜೊತೆ ಡ್ರಾ ಮಾಡಿಕೊಂಡರು. ಇದು ಅವರಿಗೆ ಸತತ ಎರಡನೇ ಡ್ರಾ.

11 ಸುತ್ತುಗಳ ಈ ಟೂರ್ನಿಯಲ್ಲಿ ಪ್ರಜ್ಞಾನಂದ ಅವರು ಈಗ ಅಂಕಪಟ್ಟಿಯ ತಳದಲ್ಲಿದ್ದಾರೆ. ಎರಡು ಡ್ರಾಗಳ ನಂತರ ಗುಕೇಶ್ ಬಳಿ ಒಂದು ಅಂಕ ಇದೆ.

ಶನಿವಾರ ಮೊದಲ ಸುತ್ತಿನಲ್ಲಿ ಪ್ರಜ್ಞಾನಂದ ಅವರನ್ನು ಸೋಲಿಸಿ ಉತ್ತಮ ಆರಂಭ ಮಾಡಿದ್ದ ಅಗ್ರ ಶ್ರೇಯಾಂಕದ ಅರ್ಜುನ್ ಇರಿಗೇಶಿ ಎರಡನೇ ಸುತ್ತಿನಲ್ಲಿ ಝೆಕ್ ರಿಪಬ್ಲಿಕ್‌ನ ಥಾಯ್ ದೈ ವಾನ್ ನೂಯೆನ್ ಅವರ ಮೇಲೆ ಒತ್ತಡ ಹೇರಿದರೂ ಗೆಲ್ಲಲು ಆಗದೇ ಪಾಯಿಂಟ್ ಹಂಚಿಕೊಳ್ಳಬೇಕಾಯಿತು.

ಡಿ.ಗುಕೇಶ್

ಪ್ರಜ್ಞಾನಂದ

ಅರ್ಜುನ್ ಈಗ ಒಂದೂವರೆ ಅಂಕ ಸಂಗ್ರಹಿಸಿದ್ದು, ಅಮೆರಿಕದ ಹ್ಯಾನ್ಸ್ ನೀಮನ್ ಮತ್ತು ಉಜ್ಬೇಕ್ ಆಟಗಾರ ಅಬ್ದುಸತ್ತಾರೋವ್ ಅವರೊಂದಿಗೆ ಮುನ್ನಡೆ ಹಂಚಿಕೊಂಡಿದ್ದಾರೆ.

ಭಾರತದ ಮತ್ತೊಬ್ಬ ಆಟಗಾರ ಅರವಿಂದ ಚಿದಂಬರಮ್ (1 ಅಂಕ) ಅವರು ಟರ್ಕಿಯ ಯಾಗಿಝ್ ಖಾನ್ ಎರ್ಡೊಗ್ಮಸ್ (1 ಅಂಕ) ಜೊತೆ ಡ್ರಾ ಮಾಡಿಕೊಂಡರು. ಅರವಿಂದ ಅವರಿಗೆ ಇದು ಎರಡನೇ ಡ್ರಾ.

ಇತರ ಪಂದ್ಯಗಳಲ್ಲಿ ಜರ್ಮನಿಯ ಮಥಾಯಸ್ ಬ್ಲೂಬಾಮ್ (1 ಅಂಕ) ಅವರು ಅಮೆರಿಕದ ಹ್ಯಾನ್ಸ್ ನೀಮನ್ (1.5) ಜೊತೆ, ಅನಿಶ್ ಗಿರಿ (0.5), ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ (1) ಜೊತೆ ಡ್ರಾ ಮಾಡಿಕೊಂಡರು. ಸ್ಲೊವೇನಿಯಾದ ವ್ಲಾದಿಮೀರ್ ಫೆಡೋಸೀವ್ (1) ಅವರು ಜರ್ಮನಿಯ ವಿನ್ಸೆಂಟ್ ಕೀಮರ್ (1) ಅವರನ್ನು ಸೋಲಿಸಿದರು.

ಸಂಕ್ಷಿಪ್ತ ಸುದ್ದಿ

ಅವ್ಯವಸ್ಥೆ: ಸಚಿವರ ಅಸಮಾಧಾನ

ನವದೆಹಲಿ (ಪಿಟಿಐ): ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸಂಘಟನೆಯಲ್ಲಿ ಆದ ಲೋಪಗಳ ಬಗ್ಗೆ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇಂಥ ಅವ್ಯವಸ್ಥೆ ಪುನರಾವರ್ತನೆಯಾಗದಂತೆ ತಡೆಗಟ್ಟಲು ಪರಿಹಾರಾತ್ಮಕ ಕ್ರಮಗಳ ಕುರಿತು ಭಾರತ ಕ್ರೀಡಾ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಸೋಮವಾರ ಸಮಾಲೋಚನೆ ನಡೆಸಿದರು.

ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದ ಆಡಳಿತಾಧಿಕಾರಿಗಳ ಜೊತೆ ಚರ್ಚಿಸಿದ ಸಚಿವರು, ಕಳೆದ ವಾರ ನಡೆದ ಟೂರ್ನಿಯ ವೇಳೆ ಆದ ಗೊಂದಲಗಳಿಗೆ ವಿವರಣೆ ನೀಡುವಂತೆ ಸೂಚಿಸಿದರು.

2036ರ ಒಲಿಂಪಿಕ್ಸ್ ಬಿಡ್ ಯತ್ನದಲ್ಲಿರುವ ಭಾರತಕ್ಕೆ ಟೂರ್ನಿಯಲ್ಲಿ ಆದ ಅವ್ಯವಸ್ಥೆ ಮುಜುಗರ ಉಂಟುಮಾಡಿದೆ. ಪಂದ್ಯದ ವೇಳೆ ಪಕ್ಷಿಗಳು ಹಿಕ್ಕೆ ಹಾಕಿದ ಪ್ರಕರಣ, ಕೋತಿಯೊಂದು ಪ್ರೇಕ್ಷಕರ ಗ್ಯಾಲರಿಯಲ್ಲಿ ಕಾಣಿಸಿಕೊಂಡಿರುವುದು, ನಿರ್ವಹಣೆಯಿಲ್ಲದ ಕ್ರೀಡಾ ಸಲಕರಣೆಗಳು ಮತ್ತು ಶೌಚಾಲಯಗಳ ಬಗ್ಗೆ ಆಟಗಾರರು ಬಹಿರಂಗವಾಗಿ ಆಕ್ಷೇಪ ವ್ಯಕ್ತಪಡಿಸಿದ್ದರು.

ಟೆನಿಸ್: ಸೃಷ್ಟಿಗೆ ಕಿರೀಟ

ಬೆಂಗಳೂರು: ಬೆಂಗಳೂರಿನ ಸೃಷ್ಟಿ ಕಿರಣ್ ಅವರು ಮೆಕ್ಸಿಕೊದಲ್ಲಿ ಭಾನುವಾರ ಮುಕ್ತಾಯಗೊಂಡ ಐಟಿಎಫ್ ವರ್ಲ್ಡ್ ಟೆನಿಸ್ ಟೂರ್ ಜೂನಿಯರ್ಸ್ ಜೆ30 ಟೂರ್ನಿಯಲ್ಲಿ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದರು.

13 ವರ್ಷದ ಸೃಷ್ಟಿ ಫೈನಲ್‌ನಲ್ಲಿ 6-4, 6-4ರಿಂದ ಮೆಕ್ಸಿಕೊದ 17 ವರ್ಷದ ತಮಾರಾ ಹರ್ಮನ್ ಅವರನ್ನು ಮಣಿಸಿದರು. ಭಾರತದ ಆಟಗಾರ್ತಿ ಸೆಮಿಫೈನಲ್‌ನಲ್ಲಿ 6-4, 6-0ಯಿಂದ ಸ್ಥಳೀಯ ಆಟಗಾರ್ತಿ ಮಿರಾಂದಾ ಸೋಫಿಯಾ ಅವರನ್ನು ಸೋಲಿಸಿದ್ದರು.

ಲಕ್ಷ್ಯ, ಆಯುಷ್‌ಗೆ ಕಠಿಣ ಸವಾಲು

ಜಕಾರ್ತ (ಪಿಟಿಐ): ತವರಿನ ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ನಿರಾಶಾದಾಯಕ ಪ್ರದರ್ಶನ ನೀಡಿರುವ ಭಾರತದ ಶಟ್ಲರ್‌ಗಳು ಮಂಗಳವಾರ ಆರಂಭವಾಗಲಿರುವ ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 500 ಟೂರ್ನಿಯಲ್ಲಿ ಸುಧಾರಿತ ಆಟದ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ.

ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್ ಅವರು ಟೂರ್ನಿಯಲ್ಲಿ ಏಳನೇ ಶ್ರೇಯಾಂಕ ಪಡೆದಿದ್ದಾರೆ. ಕಳೆದ ವರ್ಷ ಆಸ್ಟ್ರೇಲಿಯಾ ಓಪನ್ ಸೂಪರ್ 500 ಟೂರ್ನಿಯ ಪ್ರಶಸ್ತಿ ಗೆದ್ದಿರುವ ಅವರು ಇಲ್ಲಿ ಸಿಂಗಪುರದ ಜಿಯಾ ಹೆಂಗ್ ಜೇಸನ್ ತೇಹ್ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.

ಅನುಭವಿ ಆಟಗಾರ ಎಚ್.ಎಸ್.ಪ್ರಣಯ್ ಅವರು ಮೊದಲ ಸುತ್ತಿನಲ್ಲಿ ಮಲೇಷ್ಯಾದ ಲೀ ಜೀ ಜಿಯಾ ವಿರುದ್ಧ ಕಣಕ್ಕಿಳಿಯಲಿದ್ದಾರೆ. ಕಿದಂಬಿ ಶ್ರೀಕಾಂತ್ ಅವರು ಜಪಾನ್‌ನ ಕೊಕಿ ವತಾನಬೆ ವಿರುದ್ಧ; ತರುಣ್ ಮನ್ನೆಪಲ್ಲಿ ಜಪಾನ್‌ನ ಮತ್ತೊಬ್ಬ ಆಟಗಾರ ಯೂಶಿ ತನಾಕಾ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.

ಕನ್ನಡಿಗ ಆಯುಷ್ ಶೆಟ್ಟಿ ಅವರಿಗೆ ಮೊದಲ ಸುತ್ತಿನಲ್ಲಿ ಕಠಿಣ ಸವಾಲು ಎದುರಾಗಿದೆ. ಅವರು ಮೂರನೇ ಶ್ರೇಯಾಂಕದ ಆಟಗಾರ, ಆತಿಥೇಯ ದೇಶದ ಜೊನಾಥನ್ ಕ್ರಿಸ್ಟಿ ವಿರುದ್ಧ ಸೆಣಸಬೇಕಿದೆ. ಕ್ರಿಸ್ಟಿ ಅವರು ಇಂಡಿಯಾ ಓಪನ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದರು.

ಮಲೇಷ್ಯಾ ಓಪನ್‌ನಲ್ಲಿ ಸೆಮಿಫೈನಲ್ ತಲುಪಿದ್ದ ಅನುಭವಿ ಆಟಗಾರ್ತಿ ಪಿ.ವಿ. ಸಿಂಧು ಅವರು ಮೊದಲ ಸುತ್ತಿನಲ್ಲಿ ಜಪಾನ್‌ನ ಮನಾಮಿ ಸುಯಿಝು ಅವರನ್ನು ಎದುರಿಸಲಿದ್ದಾರೆ. ಇಂಡಿಯಾ ಓಪನ್‌ನಲ್ಲಿ ಮೊದಲ ಸುತ್ತಿನಲ್ಲಿಯೇ ನಿರ್ಗಮಿಸಿದ್ದ ಅವರು ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿದ್ದಾರೆ.

ಚಳಿಗಾಲದ ಕ್ರೀಡಾಕೂಟ ಇಂದಿನಿಂದ

ಲೇಹ್ (ಲಡಾಕ್): 2026ರ ಖೇಲೊ ಇಂಡಿಯಾ ಚಳಿಗಾಲದ ಕ್ರೀಡಾಕೂಟವು ಲಡಾಖ್‌ನ ಲೇಹ್‌ನಲ್ಲಿ ಮಂಗಳವಾರ ಆರಂಭವಾಗಲಿದ್ದು, ಒಂದು ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಸ್ಪರ್ಧಾಕಣದಲ್ಲಿದ್ದಾರೆ.

ಇಲ್ಲಿನ ನವಾಂಗ್ ದೋರ್ಜನ್ ಸ್ಟೊಬ್ದಾನ್ (ಎನ್‌ಡಿಎಸ್) ಕ್ರೀಡಾಂಗಣ, ಸೇನಾ ಮೈದಾನ ಮತ್ತು ಹೆಪ್ಪುಗಟ್ಟಿದ ಗುಪುಖ್ ಕೊಳವು ಕ್ರೀಡಾಕೂಟದ ಆಕರ್ಷಣೆಯ ಕೇಂದ್ರಗಳಾಗಿವೆ. ಇದೇ 26ರವರೆಗೆ ಕೂಟ ನಡೆಯಲಿದೆ.

ಮಂಜುಗಡ್ಡೆ ಮೇಲೆ ನಡೆಯುವ ಹಾಕಿ ಮತ್ತು ಸ್ಕೇಟಿಂಗ್ ಕ್ರೀಡೆಯಲ್ಲಿ 472 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಈ ವರ್ಷದ ಆಕರ್ಷಣೆಯೆಂದರೆ ಒಲಿಂಪಿಕ್ ಕ್ರೀಡೆ ಫಿಗರ್ ಸ್ಕೇಟಿಂಗ್ ಅನ್ನು ಪರಿಚಯಿಸಲಾಗಿದೆ.

ಕಬಡ್ಡಿ ಚಾಂಪಿಯನ್ಸ್ ಲೀಗ್ 25ರಿಂದ

ನವದೆಹಲಿ (ಪಿಟಿಐ): ಚೊಚ್ಚಲ ಆವೃತ್ತಿಯ ಕಬಡ್ಡಿ ಚಾಂಪಿಯನ್ಸ್ ಲೀಗ್ (ಕೆಸಿಎಲ್) ಇದೇ 25ರಿಂದ ಫೆ.7ರವರೆಗೆ ಹರಿಯಾಣದ ರಾಯಿ ಕ್ರೀಡಾ ವಿಶ್ವವಿದ್ಯಾಲಯದಲ್ಲಿ ನಡೆಯಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಕೆಸಿಎಲ್ ಉದ್ಘಾಟನಾ ಋತುವಿನ ಪಂದ್ಯಗಳ ವೇಳಾಪಟ್ಟಿಯನ್ನು ಸೋಮವಾರ ಪ್ರಕಟಿಸಲಾಗಿದೆ. 12 ದಿನಗಳ ಕಾಲ ನಡೆಯಲಿರುವ ಈ ಟೂರ್ನಿಯಲ್ಲಿ ಎಂಟು ಫ್ರಾಂಚೈಸಿಗಳ ತಂಡಗಳು ಪ್ರಶಸ್ತಿ ಸೆಣಸಲಿವೆ.